ಸಂವಾದ

ಏಪ್ರಿಲ್ ೨೦೦೯ ಬೆಲೆ ರೂ. ೨೦/-

ಎಸ್.ಎಸ್. ಹಿರೇಮಠ
ತಲ್ಲಣಗಳಲ್ಲೇ
ತೀರಿಕೊಂಡರು

ಮೂರುಕಾಟ್ಟೆಗೋಸ್ಕರ

ಆಸ್ಕರ್!

ವೈಚಾರಿಕ ಶೂನ್ಯ ತುಂಬುತ್ತಿರುವ ಸಂವಾದ ಕ್ಕೆ

ತುಂಬು ಹೃದಯದ
ಶುಭ ಹಾರೈಕೆಗಳು

ಶ್ರೀ ಗಂಗಯ್ಯ, ಗುತ್ತಿಗೆದಾರರು
ಕೆ.ಆರ್.ಎಸ್.

ಏಳಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಸುವವರು

ಶ್ರೀ ಪಿ.ವೀರಯ್ಯ,
ಗುತ್ತಿಗೆದಾರರು, ಕೆ.ಆರ್.ಎಸ್

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೬
ಏಪ್ರಿಲ್ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080-23480278, 9945264687
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೪
- ❑ ಅಂತರಂಗ ೦೫
- ❑ ಆರ್ಥಿಕ ಬಿಕ್ಕಟ್ಟಿನ ಪರಿಣಾಮ: ಮುಂದಿನ ದಾರಿ ಏನು?
  ○ ಮಡಿವಾಳಪ್ಪ ಎಸ್ ಕೆ ೦೬
- ❑ ಕಿಟ್, ಊಟ ಮತ್ತು ಸಾಹಿತ್ಯ ಸ್ವಾಯತ್ತತೆಯ ಪ್ರಶ್ನೆ
  ○ ಶ್ರೀಶ ಉಡುಪ ೦೮
- ❑ ಕರ್ನಾಟಕದ ತಾಲಿಬಾನ್
  ○ ನಾ. ದಿವಾಕರ ೦೯
- ❑ ಮೀಸಲಾತಿ ನೀತಿಯ ಶವಪೆಟ್ಟಿಗೆ ಮೇಲೆ ಕೊನೆಯ ಮೊಳೆ
  ○ ಮೂಲ: ಡಿ. ರಾಜಾ
  ಕನ್ನಡಕ್ಕೆ: ಸತ್ಯಪ್ರಕಾಶ್ ಎಂ ಆರ್ ೧೦

- ❑ ಮಾರುಕಟ್ಟೆಗೋಸ್ಕರ ಆಸ್ಕರ್!?
  ○ ಶಿವಸುಂದರ್ ೧೨
- ❑ ಭಯೋತ್ಪಾದನೆ ನಿಗ್ರಹ ಹೇಗೆ ಸಾಧ್ಯ?
  ○ ನಿತ್ಯಾನಂದಸ್ವಾಮಿ ೧೬
- ❑ ಬಸವಣ್ಣನ ವಚನ ಅಂಬೇಡ್ಕರ್ ಪ್ರಜ್ಞೆ
  ○ ಡಾ. ಎಸ್. ನರೇಂದ್ರ ಕುಮಾರ್ ೨೨
- ❑ ಅವರು ತಲ್ಲಣಗಳಲ್ಲೇ ತೀರಿಕೊಂಡರು
  ○ ಡಾ. ರಹಮತ್ ತರೀಕೆರೆ ೩೦
- ❑ ಮಹಿಳಾ ಶಿಕ್ಷಣ ಮತ್ತು ಸಬಲೀಕರಣ
  ○ ಡಾ. ಬಿ. ಎಂ. ಪುಟ್ಟಯ್ಯ ೩೪
- ❑ ಬೌದ್ಧ ಸೌಂದರ್ಯ ಮೀಮಾಂಸೆ – ೮ ತಿಳಿಯಬೇಕಾದ್ದು, ತಿಳಿವವನು ಮತ್ತು ತಿಳಿವು ಇವುಗಳ ಸಂಬಂಧ ಸ್ವರೂಪ
  ○ ಡಾ. ಎಸ್. ನಟರಾಜ್ ಬೂದಾಳು ೩೮
- ❑ ಧರೆ ಹತ್ತಿ ಉರಿದರೆ... ೯ ಕರ್ನಾಟಕದ ಬಜೆಟ್ಟು–ಬಡವರಿಗೆ ರವಷ್ಟು!
  ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ❑ ದಲಿತ್ ಡೈರಿ
  ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  ○ ಸಿ.ಎಚ್. ರಾಜಶೇಖರ್



ಕವನಗಳು :
- ❑ ನಾಲ್ಕು ಕೃಷಿ ಪದ್ಯಗಳು ೨೬
- ❑ ಹಕ್ಕಿಯ ಕೂಗು ೪೧
- ❑ ಸರಿದು ಹೋಯ್ತು ೪೯
- ❑ ಹುತಾತ್ಮರು ೩೩

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ನವ ಅಸ್ಪೃಶ್ಯತೆ ಮತ್ತು ಜಾತಿ ಸಂಘಟನೆಗಳ ರಾಜಕೀಯ

ಮಾನ್ಯ ಸಂಪಾದಕರೇ,

"ರಾಜಕೀಯ ಎಲ್ಲ ಕ್ಷೇತ್ರಗಳ ಬೀಗಗಳನ್ನು ತೆರೆಯ ಬಲ್ಲ ಏಕೈಕ ನಾಯಕ ಬೀಗದ ಕೈ" ಅಂಬೇಡ್ಕರರ ಈ ಪ್ರತಿಪಾದನೆಯು ಪ್ರಜಾತಂತ್ರದ ಯಶಸ್ಸಿಗೆ ಔಚಿತ್ಯಪೂರ್ಣವಾದ ವ್ಯಾಖ್ಯಾನವಾಗಿದೆ. ದಲಿತ ಮತದಾರರನ್ನು ಪ್ರತಿನಿಧಿಸುವ ದಲಿತರಿಂದಲೇ ಆಯ್ಕೆಯಾದ ಪ್ರಜಾಪ್ರತಿನಿಧಿಗಳು ಭಾರತದ ಲೋಕಸಭೆಯಲ್ಲಿ ಇರಬೇಕೆಂದು ಅವರು ವಾದಿಸಿದ್ದರು. ಆ ಕನಸು ನನಸಾದರೆ ಇಂದು ಹುಟ್ಟುತ್ತಿರುವ ಶೂದ್ರ ಸಂಘಟನೆಗಳಿಗೆ "ಜಾತಿ ಸಂಘಟನೆ"ಗಳು ಎಂಬ ಮಿಥ್ಯಾರೂಪಕ್ಕೆ ನೆಲೆ ಸಿಗುತ್ತಿರಲಿಲ್ಲ. ದಮನಿತರು ಸಂಘಟಿತರಾದೊಡನೆ ಶೋಷಕ ವರ್ಗ ಅದಕ್ಕೆ ಜಾತಿ ಬಣ್ಣ ಕಟ್ಟುವ ದುಷ್ಟ ಸಂಪ್ರದಾಯ ನಮ್ಮ ದೇಶದಲ್ಲಿ ಅನಾದಿಕಾಲದಿಂದಲೂ ಇದೆ. ಇಂಥ ದುಷ್ಟ ಆರೋಪಗಳು ಬೌದ್ಧ ಸಂಘಗಳಿಗೂ ತಪ್ಪಿರಲಿಲ್ಲ. ದಮನಕ್ಕೊಳಗಾದ ಜನ ಸಂಘಟನೆಗಳಿಗೆ ಉತ್ತರವೆಂಬಂತೆ ಶೋಷಕರು ಕೂಡ ಪ್ರತಿಸಂಘಟನೆ ಮೂಲಕ ತಮ್ಮದೇ ಆದ ಗುಪ್ತ ಅಂಜೆಂಡಾ ಇಟ್ಟುಕೊಂಡು ಸಂಸ್ಕೃತಿ, ಸಂಪ್ರದಾಯಗಳ ಹೆಸರಿಟ್ಟುಕೊಂಡು ಶೋಷಣೆಗೆ ಹೊಸ ಮಾರ್ಗ ಹೊಸ ಉಪಾಯಗಳನ್ನು ಕಂಡುಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಂತೂ ಈ ಕ್ರೂರ ಕಾರ್ಯಾಚರಣೆ ನಿರಂತರವಾಗಿ ನಡೆಯುತ್ತಿದೆ. ಸಾಫ್ಟ್ ವೇರ್, ಐ.ಟಿ. ಬಿಟಿಗಳ ಹಿಂದೆ ಇಂಥ ನವ ಅಸ್ಪೃಶ್ಯಾತಾ ನೀತಿಯನ್ನು ಜಾರಿಗೊಳಿಸುತ್ತಿರುವುದು ತೀರಾ ಹೇಯವಾದದ್ದು. ಮೀಸಲಾತಿಗೆ ಆರ್ಥಿಕ ಮಾನದಂಡ ಕೆನೆಪದರು ನೀತಿ ಮುಂತಾದವುಗಳನ್ನು ಸೃಷ್ಟಿಮಾಡಿ ಶೋಷಿತ ಜನರನ್ನು ಮೀಸಲಾತಿ ಸೌಲಭ್ಯಗಳಿಂದ ವಂಚಿಸಲು ಮಸಲತ್ತು ಮಾಡಲಾಗುತ್ತಿದೆ.

ಇವೆಲ್ಲವುಗಳ ಫಲಶೃತಿಯಾಗಿ ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಜಾತಿಯು ಮತ್ತಷ್ಟು ಸಂಕೀರ್ಣ ವ್ಯವಸ್ಥೆಯಾಗುತ್ತಿದೆ. ಈ ವ್ಯವಸ್ಥೆಯಲ್ಲಿ ಜಾತೀಯತೆಯೆಂಬುದು ಹಂತ-ಹಂತವಾಗಿ ಕಳಚುತ್ತಾ ಹೋಗಿ ಅಂತಿಮವಾಗಿ ಮತದಾರನನ್ನು ಮುಕ್ತ ಪ್ರಜೆಯನ್ನಾಗಿ ಮಾಡಬೇಕಾಗಿತ್ತು. ಆದರೆ ಹಾಗಾಗುತ್ತಿಲ್ಲ. ಜಾತಿ-ಜನಾಂಗಗಳು ಅಧಿಕಾರದ ಗದ್ದುಗೆ ಹಿಡಿಯುವ ರಾಜಕೀಯ ಅಸ್ತ್ರವಾಗಿ ಬಳಕೆಯಾಗುತ್ತಿವೆ. ಈ ಸಂಘರ್ಷಮಯ ಸಂದರ್ಭವನ್ನೇ ರಾಜಕೀಯ ಧುರೀಣರು ಬಳಸಿಕೊಳ್ಳುತ್ತಿದ್ದಾರೆ. ಈ ಕಾರಣದಿಂದಾಗಿ ದಿನಕ್ಕೊಂದು ಜಾತಿ ಸಂಘಟನೆ ಹುಟ್ಟುತ್ತಲೇ ಇವೆ. ಈ ಪ್ರಕ್ರಿಯೆ ನಮ್ಮ ಬಹುಸಂಸ್ಕೃತಿಯ ಪರಂಪರೆಯುಳ್ಳ ಭಾರತ ದೇಶದಲ್ಲಿ ಯಾವ ಆಯಾಮ ಪಡೆಯಬಹುದು ಎಂಬ ಆತಂಕವುಂಟಾಗುತ್ತಿದೆ.

ಒಂದಷ್ಟು ಆತ್ಮಾವಲೋಕನ: - ಪ್ರತಿ ಜಾತಿ ಸಂಘಟನೆಯು ಉದಯವಾಗುವಾಗ ಉದಾತ್ತವಾದ ಉದ್ದೇಶವನ್ನೇ ಪ್ರಚಾರ ಪಡಿಸುತ್ತದೆ. ಮಠ-ಪೀಠಗಳ ಸ್ಥಾಪನೆ ಚರ-ಸ್ಥಿರ ಆಸ್ತಿಗಳ ಕ್ರೋಢೀಕರಣ ಆರಂಭವಾಗುತ್ತದೆ. ಈ ರೀತಿಯ ಸಂಪತ್ತಿನ ಆಧಿಕ್ಯ ಸಹಜವಾಗಿಯೇ ಅಧಿಕಾರ ವ್ಯಾಮೋಹಕ್ಕೆ ದಾರಿಮಾಡಿಕೊಡುತ್ತದೆ. ಆ ಮೂಲಕ ಆಯಾಯ ಜಾತಿ-ಜನಾಂಗಗಳ ರಾಜಕೀಯ ಪುಢಾರಿಗಳ ಬೇನಾಮಿ ಆಸ್ತಿ ಸಂಪತ್ತನ್ನು ಒಡಲಲ್ಲಿ ಇಟ್ಟುಕೊಂಡು ರಕ್ಷಿಸುವದೇ ಇಂಥ ಸಂಘಟನೆಗಳ ಮಹಾನ್ ಸಾಧನೆಯಾಗುತ್ತದೆ. ಅದ್ದಕಾಗಿ ತಮ್ಮ-ತಮ್ಮವರೇ ಅಧಿಕಾರ ಗದ್ದುಗೆಯಲ್ಲಿ ವಿರಾಜಮಾನರಾಗಬೇಕಾದದ್ದು ಅನಿವಾರ್ಯವಾಗುತ್ತದೆ. ಆಗ ತಮ್ಮವರೇ ಚುನಾವಣೆಯಲ್ಲಿ ಆಯ್ಕೆ ಆಗಲು ಬೇಕಾದ ಎಲ್ಲ ಅನೈತಿಕ ಮಾರ್ಗಗಳು ಕಾರ್ಯಗತ ವಾಗುತ್ತವೆ.

ಇಷ್ಟಾದರೂ ಸಂಘಟನೆಯೊಂದು ಕಟ್ಟುವಾಗ ಇದ್ದ ಕನಸುಗಳು ನನಸಾದವೇ ಎಂದರೆ "ಇಲ್ಲ" ಎಂಬ ಋಣಾತ್ಮಕ ಉತ್ತರ ಸಿದ್ಧವಾಗಿರುತ್ತದೆ. ಅಸಂಘಟನೆಯ ಜನಾಂಗ ಶಿಕ್ಷಣ ಪಡೆಯಿತೇ? ಆರ್ಥಿಕವಾಗಿ, ಔದ್ಯೋಗಿಕವಾಗಿ ತಮ್ಮ ಜೀವನವನ್ನು ಸ್ವಾವಲಂಬಿಯಾ ನಡೆಸುತ್ತಿದೆಯೇ? ಸಂಘಟನೆ ಮೂಲಕ ಸಂಗ್ರಹವಾದ ಸಂಪತ್ತಿನ ವಿತರಣೆ ನ್ಯಾಯಬದ್ಧವಾಗಿ ನಡೆದಿದೆಯೇ? ಸಂಘದ ಕೊನೆಯ ವ್ಯಕ್ತಿ ಸಂಘದಿಂದ ಏನನ್ನು ಪಡೆದ? ಲಿಂಗಸಮಾನತೆ ಸಾಧಿಸಿತೇ? ಬಡತನ ನಿವಾರಣೆಯಾಯಿತೇ? ಯಾವದಕ್ಕೂ ಧನಾತ್ಮಕ ಉತ್ತರಗಳು ಸಿಗುವದಿಲ್ಲ. ಸಾಧಿಸಿದ್ದು- ಅಷ್ಟಿಷ್ಟು ರಾಜಕೀಯ ಪ್ರಾಬಲ್ಯ, ಒಂದಿಷ್ಟು ಅಧಿಕಾರದ ಹುದ್ದೆಗಳು. ಇಡೀ ಜನಾಂಗವನ್ನೇ ಬಲಿಕೊಡುವ ಅಕ್ರಮಗಳು ಇದಷ್ಟು ಪಡೆಯುವದಕ್ಕೆ!

ಜಾತಿ ಸಂಘಟನೆಗಳು ಒಟ್ಟಾಗುತ್ತಿರುವದು ವೈಚಾರಿಕತೆಯನ್ನು ವಿಸ್ತರಿಸುವದಕ್ಕೆ ಎಂದು ಹೇಳಲಾಗುತ್ತದೆ. ಆದರೆ ಪ್ರತಿಯೊಂದು ಸಂಘಟನೆಯೂ ಒಬ್ಬೊಬ್ಬ ಸುಧಾರಕನನ್ನು ಮುಂದಿಟ್ಟುಕೊಂಡು ವ್ಯಕ್ತಿ ಪೂಜೆ ಮಾಡುವದರಲ್ಲಿಯೇ ಮೈಮರೆತಿವೆ. ಆ ಸುಧಾರಕರು ಯಾವ ಕಂದಾಚಾರಗಳನ್ನು ಧಿಕ್ಕರಿಸಿದ್ದರೋ ಅದೇ ಆಚರಣೆಗಳನ್ನು ಇವರು ತಮ್ಮದೇ ನಿಟ್ಟಿನಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ಸಂಘಟನೆಗಳು ತಮ್ಮ ಜಾತಿಜನರ ಭ್ರಷ್ಟಾಚಾರ ಕರ್ತವ್ಯ ಲೋಪಗಳಿಗೆ ಕುಮ್ಮಕ್ಕು ಕೊಡುವದೂ ನಡೆದಿದೆ. ಈ ಬೆಳವಣಿಗೆಗಳು ದೇಶದ ಅಭಿವೃದ್ಧಿಗೆ ಪೂರಕವೇ?

ಡಿ.ಎಂ. ನದಾಫ್,
ಗುಲಬರ್ಗಾ

ಸಾರಾ ಪ್ರತಿಕ್ರಿಯೆ

ಮಾನ್ಯ ಸಂಪಾದಕರಿಗೆ,

ತಮ್ಮ ಪತ್ರಿಕೆಯಲ್ಲಿ ಪ್ರಕಟವಾದ ನನ್ನ ಲೇಖನಕ್ಕೆ ಎನ್. ಗಾಯತ್ರಿಯವರು ಬರೆದ ಪ್ರತಿಕ್ರಿಯೆಯನ್ನು ಓದಿದೆ. ನನ್ನ ಲೇಖನದಲ್ಲಿ ನಾನು ಒರಿಸ್ಸಾದ ಕ್ರೈಸ್ತ ಸನ್ಯಾಸಿನಿಯ ಅತ್ಯಾಚಾರದ ಕುರಿತು ಕರ್ನಾಟಕದ ಒಂದೇ ಒಂದು ಮಹಿಳಾ ಸಂಘಟನೆಯೂ ಖಂಡಿಸಿಲವೆಂದು ಬರೆಯುವಾಗ ಅದೇ ವಾಕ್ಯದಲ್ಲಿ ಗುಜರಾತ್ ಕುರಿತೂ ಬರೆದದ್ದೇ ಈ ಅಪಾರ್ಥಕ್ಕೆ ಕಾರಣವಾಯಿತು. ನಾನು ಲೇಖನ ಬರೆಯುವಾಗ ನನ್ನ ಮನಸ್ಸಿನಲ್ಲಿದ್ದುದು ಕ್ರೈಸ್ತ ಸನ್ಯಾಸಿನಿಯ ಅತ್ಯಾಚಾರದ ಕುರಿತು ಮಾತ್ರವಾಗಿತ್ತು. ಇಷ್ಟಕ್ಕೂ ಈ ಎರಡೂ ವಿಷಯಗಳ ಕುರಿತೂ ಇಲ್ಲಿ, ಮಂಗಳೂರಿನಲ್ಲಿ ಪ್ರತಿಭಟನೆ ನಡೆದದ್ದು ನನ್ನ ಗಮನಕ್ಕೆ ಬಂದಿಲ್ಲ. ಈಗ ಪತ್ರಿಕೆಗಳೂ ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರಕಟವಾಗುತ್ತಿದ್ದು, ಸ್ಥಳೀಯ ಸುದ್ದಿಗಳನ್ನಷ್ಟೆ ಪ್ರಕಟಿಸುತ್ತಿದ್ದು ದೂರದ ಜಿಲ್ಲೆಯಲ್ಲಿ ನಡೆಯುತ್ತಿರುವ ಸುದ್ದಿಗಳ ವಿವರ ಇತರೆಡೆಗಳಲ್ಲಿ ಪ್ರಕಟವಾಗುವುದೂ ಅಪರೂಪವಾಗುತ್ತಿದೆ. ನನ್ನ ಸುತ್ತಲೂ ನಡೆಯುವ ವಿದ್ಯಮಾನಗಳನ್ನು ಪತ್ರಿಕೆಗಳು ಪ್ರಕಟಿಸಿದರೆ ತಾನೇ ನಾನು ಗಮನಿಸುವುದು?

ಸಾರಾ ಅಬೂಬಕ್ಕರ್, ಮಂಗಳೂರು

ಪತ್ರಗಳು



ಸಂವಾದ ತುಂಬಾ ಚೆನ್ನಾಗಿದೆ ಅತ್ಯಂತ ಪ್ರಸ್ತುತವಾಗಿದೆ

ಸಂಪಾದಕರಿಗೆ,

ನಮಸ್ಕಾರಗಳು, ಪತ್ರಿಕೆ ತುಂಬಾ ಚನ್ನಾಗಿ ಬರುತ್ತಿದೆ. ರಾಥೋಡ್ ಅವರ ಚಿತ್ರ ಮತ್ತು ಮುಖಪುಟ ವಿನ್ಯಾಸ ಪತ್ರಿಕೆಗೆ ಮೆರಗನ್ನು ಕೊಡುತ್ತಿವೆ. ಚಂದ್ರಭಾನ್ ಪ್ರಸಾದರ ಲೇಖನಗಳು ಇಂದು ಅತ್ಯಂತ ಪ್ರಸ್ತುತ ಎನಿಸುತ್ತಿದೆ. ಜಾಗತೀಕರಣಗೊಂದಲದಿಂದ ದಿಕ್ಕು ತಪ್ಪುತ್ತಿರುವ ದಲಿತ ಚಿಂತಕರಿಗೆ ಸರಿದಾರಿಯತ್ತ ಹೋಗಲು ಬೆಳಕು ನೀಡುತ್ತಿದೆ. ಬೌದ್ಧ ಧರ್ಮಕ್ಕೆ ಸಂಬಂಧಿಸಿದ ವಿಚಾರಗಳ ಚರ್ಚೆ. ದಲಿತ ಚಳವಳಿಗಳನ್ನು ಕುರಿತ ಚರ್ಚೆ ಪತ್ರಿಕೆಗೆ ಗಂಭೀರತೆಯನ್ನು ತಂದುಕೊಡುತ್ತಿದೆ.

ಭಯೋತ್ಪಾದನೆ ಕುರಿತಂತೆ 'ಸಂವಾದ'ದಲ್ಲಿ ಬರುತ್ತಿರುವ ಲೇಖನಗಳು ಅತ್ಯಂತ ಗಂಭೀರವೂ ಸ್ವಾರಸ್ಯವೂ ಆಗಿವೆ.

ರಮ್ಯ. ಜೆ,
ಬೆಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಂಪಾದಕೀಯ

ಅಂತರಂಗ

ಪ್ರತಿಭಟನೆಗೂ ಪರ್ಮಿಟ್!

ಇನ್ನು ಮುಂದೆ ಬೆಂಗಳೂರು ನಗರದಲ್ಲಿ ಯಾವುದೇ ಹೋರಾಟ–ಚಳವಳಿ ಮಾಡಬೇಕಾದರೆ ಪೊಲೀಸರ ಪೂರ್ವಾನುಮತಿ ತೆಗೆದುಕೊಳ್ಳಬೇಕು. ಅಷ್ಟೇ ಅಲ್ಲ ಹೀಗೆ ಪೂರ್ವಾನುಮತಿ ತೆಗೆದುಕೊಂಡರೂ, ಯಾವುದೇ ಸಂಘಟನೆ, ರಾಜಕೀಯ ಪಕ್ಷ, ಧರ್ಮ ಹಾಗೂ ವ್ಯಕ್ತಿಗಳ ವಿರುದ್ಧ ಘೋಷಣೆ ಕೂಗುವಂತಿಲ್ಲ! ಅಷ್ಟಕ್ಕೆ ಮುಗಿಯಲಿಲ್ಲ, ಚಳವಳಿ, ಧರಣಿ, ಪ್ರತಿಭಟನೆಗಾಗಿ ನೀವು ಧ್ವನಿವರ್ಧಕ ಬಳಸಿದರೆ ಅದಕ್ಕೆ ಪ್ರತ್ಯೇಕ ಅನುಮತಿ ಪಡೆಯಬೇಕು. ಹಾಗೆ ಅನುಮತಿ ಪಡೆದು ಬಳಸುವ ಧ್ವನಿವರ್ಧಕದ ಶಬ್ಧ ಭಾಗವಹಿಸಿದವರಿಗಷ್ಟೇ ಕೇಳಿಸಬೇಕು. ಹೊರಗಿನ ಸಾರ್ವಜನಿಕರಿಗೆ ಅದು ಕೇಳಿಸಿ, ಅವರಿಗೇನಾದರೂ ಕಿರಿಕಿರಿಯಾದರೆ ನಿಮ್ಮ ಮೇಲೆ ಮೊಕದ್ದಮೆ ಗ್ಯಾರಂಟಿ!

ಮುಗಿಯಿತೆಂದುಕೊಳ್ಳಬೇಡಿ. ನೀವೇನಾದರೂ ಹತ್ತು ಸಾವಿರಕ್ಕಿಂತ ಹೆಚ್ಚು ಜನರನ್ನು ಸೇರಿಸಿದರೆ ಸಮಾವೇಶಗಳಲ್ಲಿ ನಡೆಯುವ ಅನಾಹುತಗಳಿಗೆಲ್ಲ ನೀವೇ ಕಾರಣ. ಸಮಾರಂಭಗಳಲ್ಲಿ ನಡೆಯಬಹುದಾದ ಅನಾಹುತಗಳನ್ನು ತಡೆಯಲು ಬೇಕಾದ ಅಗ್ನಿಶಾಮಕದಳ ಇತ್ಯಾದಿ ಸೇವೆಗಳನ್ನು ನೀವೇ ಪಡೆದುಕೊಳ್ಳಬೇಕು. ಇಷ್ಟೆಲ್ಲ ನಿಬಂಧನೆ, ಮುನ್ನೆಚ್ಚರಿಕೆ, ಕಟ್ಟುಪಾಡುಗಳನ್ನು ನೀವು ಪಾಲಿಸಿದರೂ, ನಿಮಗೆ ಅನುಮತಿ ನೀಡುವ ಅಥವಾ ನಿರಾಕರಿಸುವ ಅಧಿಕಾರ ಪೊಲೀಸರಿಗೆ ಸೇರಿದ್ದು! ನೀವು ಮಾಡಬಹುದಾದ ಚಳವಳಿ, ಹೋರಾಟ, ಮೆರವಣಿಗೆಗಳಿಂದ ಯಾರಿಗಾದರೂ ನೋವುಂಟಾಗುವ ಸೂಚನೆಗಳು ಪೊಲೀಸರಿಗೆ ದೊರೆತರೆ ಅವರು ನಿಮಗೆ ಪರವಾನಗಿಯನ್ನು ನಿರಾಕರಿಸಬಹುದು!

ಇದೆಲ್ಲಕ್ಕಿಂತ ಹೆಚ್ಚಾಗಿ ನೀವು ಪ್ರತಿಭಟನೆ ಹೋರಾಟ ಮಾಡಬೇಕಾದರೆ ಕನಿಷ್ಟ ಏಳು ದಿನಗಳ ಮೊದಲೇ ಪೊಲೀಸ್ ಅಧಿಕಾರಿಗಳಿಗೆ ನಿಗದಿತ ಅರ್ಜಿಯಲ್ಲಿ ಮನವಿ ಸಲ್ಲಿಸಿ, ಅನುಮತಿ ಪಡೆದ ನಂತರವಷ್ಟೇ ಕಾರ್ಯಕ್ರಮ ನಡೆಸಬಹುದು!

ಇದೇನು ತುರ್ತು ಪರಿಸ್ಥಿತಿ ಮತ್ತೆ ಬಂತೇ ಎಂದು ನೀವು ಆಶ್ಚರ್ಯಕ್ಕೊಳಗಾಗಬೇಡಿ. ಹಾಗೇನು ಆಗಿಲ್ಲ. ಆದರೆ, ತುರ್ತು ಪರಿಸ್ಥಿತಿ ಕಾಲದ ವಿದ್ಯಮಾನಗಳ ಸಣ್ಣ ತುಣುಕೊಂದು ಮಾತ್ರ ಪೊಲೀಸ್ ಇಲಾಖೆಯಿಂದ ಹೊರಬಿದ್ದಿದೆ. ಇದಕ್ಕೊಂದು ಘನ ಘೋರ ಸಾರ್ವಜನಿಕ ಹಿತಾಸಕ್ತಿಯೂ ಇದೆ. ನಗರದಲ್ಲಿ ನಡೆಯುವ ಪ್ರತಿಭಟನೆ, ಮೆರವಣಿಗೆ, ರ್‍ಯಾಲಿ ಮುಂತಾದವುಗಳಿಂದ ಬೆಂಗಳೂರಿನ ಸಾರ್ವಜನಿಕ ಜೀವದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗದಂತೆ ಮಾಡಲು ಮತ್ತು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸರ್ಕಾರ ಈ ಕ್ರಮಕ್ಕೆ ಮುಂದಾಗಿದೆ.

ಮಾರ್ಚಿ 9, 2009ರಂದು ಹೊರಡಿಸಲಾದ ಕರ್ನಾಟಕ ರಾಜ್ಯ ಪತ್ರದಲ್ಲಿ ಈ ಕುರಿತ ಅಧಿಸೂಚನೆ ಹೊರಡಿಸಲಾಗಿದೆ. ಸಧ್ಯ ಅಧಿಸೂಚನೆ ಸರ್ಕಾರಿ ಆಜ್ಞೆಯಾಗಿ ಇನ್ನೂ ಜಾರಿಗೊಂಡಿಲ್ಲವಾದರೂ, ಲೋಕಸಭೆ ಚುನಾವಣೆ ಮುಗಿದ ಕೂಡಲೇ ಜಾರಿಗೆ ತರುವ ಎಲ್ಲಾ ಸಿದ್ಧತೆಗಳನ್ನು ಸರ್ಕಾರ ಮಾಡಿಕೊಂಡಿದೆ.

ಬೃಹತ್ ರ್‍ಯಾಲಿ, ಮೆರವಣಿಗೆ ಮುಂತಾದ ಕಾರ್ಯಕ್ರಮಗಳಿಂದ ಆಗಾಗ್ಗೆ ಬೆಂಗಳೂರಿನ ಸಂಚಾರ ವ್ಯವಸ್ಥೆ ಹದಗೆಟ್ಟು ಸಾರ್ವಜನಿಕರಿಗೆ ತೊಂದರೆ ಆಗುವುದುಂಟು. ಇದಕ್ಕೆ ಪರಿಹಾರಗಳನ್ನು ಹುಡುಕಲು ಹತ್ತಾರು ಮಾರ್ಗಗಳಿವೆ. ಆದರೆ ಈ ನೆಪವನ್ನು ಮುಂದಿಟ್ಟು ಕೊಂಡು ಪ್ರತಿಭಟನೆ, ಹೋರಾಟಗಳೆಂಬ ಪ್ರಜಾಸತ್ತಾತ್ಮಕ ಮಾರ್ಗಗಳನ್ನೇ ಮುಚ್ಚಿ ಬಿಡಲು ಸರ್ಕಾರ ಹೊರಟಿರುವುದು ಜನದ್ರೋಹದ ಪರಮಾವಧಿಯಾಗಿದೆ. ಹೋರಾಟ ಪ್ರತಿಭಟನೆಗಳು ಜನಸತ್ತೆಯ ಜೀವನಾಡಿಗಳು. ಮದವೇರಿದ ಅಧಿಕಾರಸ್ಥರ ದಪ್ಪ ಚರ್ಮಕ್ಕೆ ಆಗಾಗ ಚಳವಳಿ ಪ್ರತಿಭಟನೆಗಳ ಚಾವಟಿ ಏಟು ಬೀಳದಿದ್ದರೆ ಅವರು ಜನ ವಿರೋಧಿಗಳಾಗುವ ಸಂಭವವೇ ಹೆಚ್ಚಾಗಿರುತ್ತದೆ. ಆದರೆ ಅಧಿಕಾರಾರೂಢ ಬಿಜೆಪಿಗೆ ಬಹುಷಃ ಇಂಥ ಎಚ್ಚರಿಕೆ ಸಂಪೂರ್ಣವಾಗಿ ಬೇಡವೆನಿಸರಬೇಕು. ಅದಕ್ಕಾಗೇ ಇಂಥ ಅಪ್ರಜಾಸತ್ತಾತ್ಮಕ ಕಾನೂನಿಗೆ ಮುಂದಾಗಿದೆ.

ಆಶ್ಚರ್ಯ ಎಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಸತ್ತೆಯ ಮೌಲ್ಯಗಳ ಬಗ್ಗೆ ಬೊಬ್ಬಿರಿಯುತ್ತಿದ್ದ ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ವಿಚಿತ್ರವಾಗಿ ವರ್ತಿಸುತ್ತಿದೆ. ಮಂತ್ರಿ ಶಾಸಕರೆಲ್ಲ ಸಂಸ್ಕೃತಿ, ವಿವೇಕಗಳೇ ಇಲ್ಲದವರಂತೆ ವರ್ತಿಸುತ್ತಿದ್ದಾರೆ. ಭಿನ್ನ ಅಭಿಪ್ರಾಯಗಳನ್ನು ದಮನ ಮಾಡಲು ಎಂಥ ಮಟ್ಟಕ್ಕೆ ಇಳಿಯಲೂ ಹೇಸುತ್ತಿಲ್ಲ. ನೈತಿಕತೆ ಮತ್ತು ಸಂಸ್ಕೃತಿ ರಕ್ಷಣೆ ಹೆಸರಿನಲ್ಲಿ ನಡೆಯುತ್ತಿರುವ ಪುಂಡಾಟಗಳನ್ನೆಲ್ಲ ಪೋಷಿಸುತ್ತಿದ್ದಾರೆ. ನೀತಿ ನಿಯಮಗಳನ್ನೆಲ್ಲ ಗಾಳಿಗೆ ತೂರಿ ಅಂಧಾ ದರ್ಬಾರ್ ನಡೆಸುತ್ತಿದ್ದಾರೆ.

ಈ ಯಡಿಯೂರಪ್ಪ, ಆಚಾರ್ಯ, ರಾಮಚಂದ್ರೇಗೌಡ ಇವರನ್ನೆಲ್ಲ ನೋಡಿದರೆ ಸಾರ್ವಜನಿಕ ಜೀವನದಲ್ಲಿ ಇಂಥವರೆಲ್ಲ ಹೇಗೆ ಮೇಲೆ ಬಂದರೆಂದು ಆಶ್ಚರ್ಯವಾಗುತ್ತದೆ. ಜನರೇನು ತಿಳಿದುಕೊಂಡಾರೆಂಬ ಕನಿಷ್ಟ ಆತಂಕವೂ ಇವರಿಗಿದ್ದಂತಿಲ್ಲ. ಈ ಸಂದರ್ಭದಲ್ಲಿ ನನಗೆ ನೆನಪಾಗುವುದು ಗುಂಡೂರಾವ್ ಎಂಬ ಅವಿವೇಕಿ ಮುಖ್ಯಮಂತ್ರಿ! ಸಧ್ಯ ಗುಂಡೂರಾವ್ ಈ ಬಿಜೆಪಿ ಅವಿವೇಕಿಗಳಷ್ಟು ಗಂಡಾಂತರ ಕಾರಿಯಾಗಿರಲಿಲ್ಲ ಎಂದು ಈಗ ಅನ್ನಿಸುತ್ತಿದೆ. ಪ್ರಜಾ ಸತ್ತಾತ್ಮಕ ಚಳವಳಿ, ಹೋರಾಟಗಳ ವಿರುದ್ಧ ಅವರದು ದಮನಕಾರಿ ನೀತಿಯಾಗಿದ್ದರೂ, ಕಾನೂನಿನನ್ವಯ ಅವುಗಳನ್ನು ಹತ್ತಿಕ್ಕಲು ಪ್ರಯತ್ನಿಸಲಿಲ್ಲ.

ನಿಮಗೆಲ್ಲ ಗೊತ್ತಿದೆ. ಗುಂಡೂರಾಯರ ಕಾಲದಲ್ಲಿ ವಿಧಾನ ಸೌಧದ ಕೂಗಳತೆಯ ದೂರದಲ್ಲಿರುವ ಗೋಪಾಲಗೌಡ ಚೌಕಕ್ಕೆ ಹೊಂದಿಕೊಂಡಂತಿರುವ ಕಬ್ಬನ್ ಪಾರ್ಕ್‌ನ ಮೂಲೆ ಹೋರಾಟಗಾರರ ನಿರಂತರ ಪ್ರತಿಭಟನಾ ನೆಲೆಯಾಗಿತ್ತು. ವರ್ಷವಿಡೀ ಅಲ್ಲಿ ಒಂದಲ್ಲಾ ಒಂದು ಪ್ರತಿಭಟನೆ, ಧರಣಿ, ಸತ್ಯಾಗ್ರಹಗಳು ನಡೆಯುತ್ತಿದ್ದವು. ಗುಂಡೂರಾಯರ ಅಂಧಾ ದರ್ಬಾರ್ ಕೊನೆಗೊಂಡು ಜನತಾ ಪರಿವಾರ ಅಧಿಕಾರ ಹಿಡಿದ ನಂತರದ ಕೆಲವು ವರ್ಷಗಳಲ್ಲಿ ಅದು ಕೆ.ಆರ್.ಸರ್ಕಲ್‌ಗೆ ಸ್ಥಳಾಂತರವಾಯಿತು. ಈಗಂತೂ ಒಂದು ಕಿಲೋ ಮೀಟರ್ ಆಚೆಗಿನ ಬನಪ್ಪ ಪಾರ್ಕ್‌ಗೆ ಬಂದು ನಿಂತಿದೆ. ಸದನ ನಡೆಯುವ ಸಂದರ್ಭವಾದರಂತೂ ಬನಪ್ಪ ಪಾರ್ಕ್‌ನಲ್ಲೂ ಅವಕಾಶವಿಲ್ಲ. ಪ್ರತಿಭಟನಾಕಾರರೆಲ್ಲ ಟೌನ್ ಹಾಲ್ ಮೊದಲಾದ ದೂರದ ಸ್ಥಳಗಳನ್ನು ಆರಿಸಿಕೊಳ್ಳಬೇಕು. ಇಲ್ಲದಿದ್ದರೆ ಎಂ.ಜಿ. ರಸ್ತೆಯ ಮಹಾತ್ಮ ಗಾಂಧಿ ಪ್ರತಿಮೆ ಮುಂದಿನ ಫುಟ್ ಪಾತೇ ಗತಿ! ಕೆಲವು ಕಾಲ ಹಳೇ ಜೈಲಿನ ಖಾಲಿ ಮೈದಾನವನ್ನು ಪ್ರತಿಭಟನಾ ಕಾರರಿಗೆ ಬಿಟ್ಟುಕೊಡುವ ಚರ್ಚೆ ನಡೆದಿತ್ತು. ಈಗದು ಸ್ವಾತಂತ್ರ್ಯ ಉದ್ಯಾನವನವಾಗಿ ಪರಿವರ್ತಿತವಾಗಿರುವುದರಿಂದ ಸ್ವಾತಂತ್ರ್ಯಾಭಿಮಾನಿಗಳಿಗೆ ಅಲ್ಲಿ ಸ್ಥಳವಿಲ್ಲ!

ಸರ್ಕಾರಕ್ಕೆ ಇಷ್ಟೊಂದು ಅಹಂಕಾರವಿರಬಾರದು. ಪ್ರತಿಭಟನೆ ಹೋರಾಟಗಳನ್ನು ಗೌರವಿಸದ ಸರ್ಕಾರ ನಾಗರೀಕ ಸರ್ಕಾರವಾಗುವುದಿಲ್ಲ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಗಾಳಿಗೆ ತೂರಿ ದಬ್ಬಾಳಿಕೆ ಹಾಗೂ ವಿರೋಧಿ ಧ್ವನಿಗಳನ್ನು ಹತ್ತಿಕ್ಕುವುದರಿಂದ ಅರಾಜಕತೆ ಉಂಟಾಗಬಹುದೇ ಹೊರತು ಸೌಹಾರ್ದತೆ ಉಳಿಯುವುದಿಲ್ಲ.

ಪ್ರತಿಭಟನೆ, ಚಳವಳಿಗಳನ್ನು ನಿಯಂತ್ರಿಸುವ ಸರ್ಕಾರದ ಇಂಥ ಪ್ರಯತ್ನಕ್ಕೆ ಜನತೆ ಸರಿಯಾದ ಪಾಠ ಕಲಿಸಬೇಕಾಗಿದೆ.

○ ಇಂದೂಧರ ಹೊನ್ನಾಪುರ

ಆರ್ಥಿಕ ಬಿಕ್ಕಟ್ಟಿನ ಪರಿಣಾಮ: ಮುಂದಿನ ದಾರಿ ಏನು?

ಮಡಿವಾಳಪ್ಪ ಎಸ್ ಕೆ

ದೇಶಿಯ ರಿಯಲ್ ಎಸ್ಟೇಟ್ ಡೆವಲಪರ್‌ಗಳಿಗೆ ಬ್ಯಾಂಕುಗಳು ನೀಡಿರುವ ಸಾಲದ ಮೊತ್ತ ೭೫೦೦೦ ಕೋಟಿ ರೂ. ದಾಟಿದೆ. ಇದರ ಜೊತೆಗೆ ಮ್ಯೂಚವಲ್ ಫಂಡುಗಳು ಖರೀದಿಸಿರುವ ೨೫೦೦೦ ಕೋಟಿ ರೂ. ಬಾಂಡುಗಳನ್ನು ಲೆಕ್ಕಕ್ಕೆ ತೆಗೆದು ಕೊಂಡರೆ, ಒಟ್ಟು ಒಂದು ಲಕ್ಷ ಕೋಟಿ ರೂ.ಗಳಾಗುತ್ತವೆ. ಆದರೆ ಬೆಂಗಳೂರು ಸೇರಿದಂತೆ ಹೊಸದಾಗಿ ಕಟ್ಟಲಾದ ಲಕ್ಷಾಂತರ ಫ್ಲಾಟು, ಅಪಾರ್ಟ್‌ಮೆಂಟು, ಮನೆಗಳು ಮಾರಾಟವಾಗದೆ ನಿಂತಿವೆ. ಇದರಿಂದ ಬ್ಯಾಂಕುಗಳೇ ಖುದ್ದಾಗಿ ನಿಂತು ಕಡಿಮೆ ಬೆಲೆಗೆ ಮನೆ ಮಾರಲು ಬಿಲ್ಡರುಗಳ ಮನವೊಲಿಸುವ ಕೆಲಸ ಮಾಡುತ್ತಿವೆ. ಮನೆ ಸಾಲದ ಬಡ್ಡಿದರವನ್ನು ಕಡಿಮೆ ಮಾಡಿವೆ. ಮನೆಗಳ ಮಾರುಕಟ್ಟೆ ಬೆಲೆ ೧೦% ನಿಂದ ೩೦%ನಷ್ಟು ಕುಸಿಯತ್ತಿದ್ದರೂ ಅವಶ್ಯ ಸಂಖ್ಯೆಯಲ್ಲಿ ಕೊಳ್ಳುಗರಿಲ್ಲ. ಇನ್ನು ಕೃಷಿ ಉತ್ಪಾದನೆ ಕಳೆದ ಕೆಲ ವರ್ಷಗಳಲ್ಲಿ ೨೦ ಕೋಟಿ ಟನ್ನುಗಳ ಆಸುಪಾಸಿನಲ್ಲೇ ನಿಂತುಬಿಟ್ಟಿದೆ.

ಸೆಪ್ಟೆಂಬರ್ ತಿಂಗಳಿನಿಂದ ಪ್ರಾರಂಭವಾಗಿ ಇಡೀ ವಿಶ್ವವನ್ನು ನರಳಾಡುಸುತ್ತಿರುವ ವಿಶ್ವ ಬಂಡವಾಳಶಾಹಿ ಆರ್ಥಿಕ ಬಿಕ್ಕಟ್ಟು ದಿನೇ ದಿನೇ ತನ್ನ ಪ್ರಕರತೆಯನ್ನು ಹೆಚ್ಚಿಸಿಕೊಳ್ಳುತ್ತಿದೆ. ಹಿಂದೆಂದೂ ವಿಶ್ವವು ಕಂಡರಿಯದ ಘೋರ ಬಿಕ್ಕಟ್ಟು ಇದಾಗಿದೆ ಎಂದು ಬಂಡವಾಳಶಾಹಿ ಆರ್ಥಿಕ ತಜ್ಞರೇ ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಗಾತ್ರದಲ್ಲಿ, ವ್ಯಾಪಕತೆಯಲ್ಲಿ ಇದು ಹಿಂದಿನೆಲ್ಲಾ ಆರ್ಥಿಕ ಕುಸಿತಗಳನ್ನು, ಹಿಂಜರಿತಗಳನ್ನು ಹಿಂದಿಕ್ಕುತ್ತದೆ. ಭವಿಷ್ಯವನ್ನು ಕುರಿತು ಜನರ ಮನಸ್ಸಿನಲ್ಲಿ ಗಾಬರಿ, ಜೀವನದಲ್ಲಿ ಅನಿಶ್ಚಿತತೆ ತುಂಬಿದೆ. ಆದ್ದರಿಂದಲೇ, ಆರ್ಥಿಕ ಬಿಕ್ಕಟ್ಟು ಕಾಣಿಸಿಕೊಂಡಾಗಿನಿಂದ ವಿಶ್ವದೆಲ್ಲೆಡೆ ಮಾರ್ಕ್ಸ್‌ವಾದದ ಬಗ್ಗೆ ವಿಶೇಷ ಆಕರ್ಷಣೆ ಸಹಜವಾಗಿಯೇ ಏರಿದೆ. ವಿವಿಧ ದೇಶಗಳ ನಾಯಕರುಗಳ. ಹಾಗೂ ವಿಶ್ವ ಬಂಡವಾಳಶಾಹಿಗಳ ಕೈಯಲ್ಲಿ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಎಂಗೆಲ್ಸ್ ಬರೆದ ಪುಸ್ತಕಗಳು ಓಡಾಡುತ್ತಿವೆ! ಅವರ ಉದ್ದೇಶ ಮಾರ್ಕ್ಸ್‌ವಾದವನ್ನು ಅಭ್ಯಸಿಸಿ, ಅದು ತೋರಿಸಿಕೊಟ್ಟಿರುವ ಮಾರ್ಗದಲ್ಲಿ ವಿಶ್ವವನ್ನು ಬದಲಾಯಿಸಿ, ಜನತೆ ಬದುಕಲು ಅದನ್ನು ಯೋಗ್ಯ ಮಾಡಬೇಕು ಎಂಬುದಲ್ಲಿ. ಪ್ರಸಕ್ತ ಬಂಡವಾಳಶಾಹಿ ಬಿಕ್ಕಟ್ಟಿನಿಂದ ಹೊರಬರಲು ಮಾರ್ಕ್ಸ್ ಹೇಳಿರುವುದರಲ್ಲಿ ಏನಾದರೂ ಉಪಾಯ ಕಾಣುತ್ತದೆಯೇ ಎಂಬ ಹುಡುಕಾಟ ಅವರದು.

2007 ರಲ್ಲಿ ಅಮೇರಿಕಾದಲ್ಲಿ ಆರ್ಥಿಕತೆ ಕುಸಿಯುತ್ತಿದ್ದಾಗ, ಭಾರತ ಮತ್ತು ಚೀನಾಗಳಲ್ಲಿ ಸಾಪೇಕ್ಷವಾಗಿ ಆರ್ಥಿಕ ಬೆಳವಣಿಗೆಯಾಗಿದ್ದರಿಂದ ಕೆಲವು 'ಅರ್ಥತಜ್ಞ'ರು "ಭಾರತದ ಆರ್ಥಿಕತೆ ಅಮೇರಿಕಾದಿಂದ ಪ್ರಭಾವಗೊಳ್ಳದಷ್ಟು ಬೇರ್ಪಟ್ಟಿದೆ" ಎಂದು ಘೋಷಿಸಿ ಬಿಟ್ಟರು! ಪ್ರಾಮಾಣಿಕರಾಗಿದ್ದರೆ, ವಾಸ್ತವತೆ ಅವರಿಗೆ ಈಗ ಅರ್ಥವಾಗಿರುತ್ತದೆ. ಏಕೆಂದರೆ, ಜಾಗತೀಕರಣಗೊಂಡ ವಿಶ್ವದಲ್ಲಿ ಅಮೇರಿಕ ಕೆಳಗೆ ಬಿದ್ದರೆ, ಬಹುತೇಕ ರಾಷ್ಟ್ರಗಳು ಜೊತೆಗೆ ನೆಲಕಚ್ಚುತ್ತವೆ. ಇಲ್ಲವೇ ಮುಗ್ಗರಿಸುತ್ತವೆ. ಅಮೇರಿಕಾದ ಹಣಕಾಸು ಮಾಡುಕಟ್ಟೆಯಲ್ಲಿ ಹಣ ಹೂಡಿದ್ದ ಮತ್ತು ಸ್ವದೇಶದಲ್ಲೂ ಅಮೇರಿಕಾ ಚಾಳಿಯ 'ಸಬ್ ಪ್ರೈಮ್' ಹಾವಳಿಗೆ ತುತ್ತಾಗಿದ್ದ ಜರ್ಮನಿ ಈಗ ಆರ್ಥಿಕ ಹಿಂಜರಿತಕ್ಕೆ ಒಳಗಾಗಿರುವುದನ್ನು ಒಪ್ಪಿಕೊಂಡಿದೆ ಮತ್ತು ಬ್ರಿಟನ್, ಫ್ರಾನ್ಸ್ ಇತ್ಯಾದಿ ದೇಶಗಳಲ್ಲಿ ಆರ್ಥಿಕ ಹಿಂಜರಿತದ ಲಕ್ಷಣಗಳು ಈಗಾಗಲೇ ಕಂಡುಬಂದಿವೆ. ಐಸ್ ಲ್ಯಾಂಡ್ ಕುಸಿದು ಬಿದ್ದಿದೆ. ಅಮೇರಿಕಾದಲ್ಲಿ ಬಿತರಿಯಾಗುವ ಬಹುತೇಕ ಗ್ರಾಹಕ ಸಾಮಾಗ್ರಿಗಳನ್ನು (Consumer goods) ಉತ್ಪಾದಿಸುವ ಚೀನಾ, ಜಪಾನುಗಳು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿವೆ. ಹಾಲೆಂಡ್ ಎಡವಿದೆ.

ಸಿಂಗಪೂರ ಆರ್ಥಿಕ ಹಿಂಜರಿತವನ್ನು ಅಧಿಕೃತವಾಗಿ ಘೋಷಿಸಿದೆ. ವಿಶ್ವದಲ್ಲಿ ಶೀಘ್ರದಲ್ಲಿಯೇ ಕೆಲಸ ಕಳೆದುಕೊಳ್ಳುವವರ ಸಂಖ್ಯೆ ಎರಡು ಕೋಟಿ ಮೀರಲಿದೆ. ದಿನಕ್ಕೆ 50ರೂ.ಗಳಿಗಿಂತ ಕಡಿಮೆ ಹಣದಲ್ಲಿ ದಿನ ತೇಯುವವರ ಸಂಖ್ಯೆ ಇನ್ನೂ 4 ಕೋಟು ಹೆಚ್ಚಾದರೆ, 100 ರೂ.ಗಳಿಗಿಂತ ಕಡಿಮೆ ಹಣದಲ್ಲಿ ಬದುಕುವವರು ಇನ್ನೂ 10 ಕೋಟಿಯಷ್ಟು ಹೆಚ್ಚಾಗಲಿದ್ದಾರೆ!

ಭಾರತದಲ್ಲಿ ವಿದೇಶಿ ಸಾಂಸ್ಥಿತ ಹೂಡಿಕೆದಾರರು ಅದರಲ್ಲೂ ಅಮೇರಿಕಾ ಮೂಲದ ಸಂಸ್ಥೆಗಳು ತಮ್ಮ ಹೂಡಿಕೆಯನ್ನು ಹೊರತೆಗೆದು ಪಲಾಯನ ಮಾಡುತ್ತಿದ್ದಂತೆ, ಇಲ್ಲಿನ ಕೈಗಾರಿಕಾ ಮನೆತನಗಳಿಗೆ ಚಳಿ ಶುರುವಾಗಿದೆ. 60% ನಷ್ಟು ಅಮೇರಿಕಾದ ಮೇಲೆ ಅವಲಂಬಿತವಾದ ಐಟಿ-ಬಿಪಿಓ ಕ್ಷೇತ್ರಗಳಲ್ಲಿ ಬಿಕ್ಕಟ್ಟು ಕಾಣಿಸಿ ಕೊಂಡಿದೆ. ಯುಪಿಎ ಸರಕಾರವು ಆರ್ಥಿಕ ಹಿಂಜರಿತ ಇರುವುದನ್ನು ಒಪ್ಪಿಕೊಂಡಿದೆ. 11 ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳೂ ಸೇರಿದಂತೆ 14 ವಾಣಿಜ್ಯ ಬ್ಯಾಂಕುಗಳು ತಮ್ಮ ಠೇವಣಿದಾರರಿಗೆ ಹಣ ಮರು ಪಾವತಿಸುವ ಸಾಮಾರ್ಥ್ಯವನ್ನು ರಿಸರ್ವಬ್ಯಾಂಕು ನಿಗದಿಪಡಿಸಿರುವಷ್ಟು ಮಟ್ಟದಲ್ಲಿ ಹೊಂದಿಲ್ಲ. ಆದರೆ, ಇದೆಲ್ಲವೂ ಬರೀ ಅಮೇರಿಕದ ಕರ್ಮಗಳ ಫಲ ಎನ್ನುವುದೂ ತಪ್ಪಾಗುತ್ತದೆ. ಏಕೆಂದರೆ. ಭಾರತವೂ ಬಂಡವಾಳಶಾಹಿ ರಾಷ್ಟ್ರವೇ ಆಗಿರುವುದರಿಂದ ಆರ್ಥಿಕ ಹಿಂಜರಿತದ ಹಾವಳಿಗೆ ಹೊರತಲ್ಲ.

ದೇಶಿಯ ರಿಯಲ್ ಎಸ್ಟೇಟ್ ಡೆವಲಪರ್‌ಗಳಿಗೆ ಬ್ಯಾಂಕುಗಳು ನೀಡಿರುವ ಸಾಲದ ಮೊತ್ತ 75000 ಕೋಟಿ ರೂ. ದಾಟಿದೆ. ಇದರ ಜೊತೆಗೆ ಮ್ಯೂಚವಲ್ ಫಂಡುಗಳು ಖರೀದಿಸಿರುವ 25000 ಕೋಟಿ ರೂ. ಬಾಂಡುಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಒಟ್ಟು ಒಂದು ಲಕ್ಷ ಕೋಟಿ ರೂ.ಗಳಾಗುತ್ತವೆ. ಆದರೆ ಬೆಂಗಳೂರು ಸೇರಿದಂತೆ ಹೊಸದಾಗಿ ಕಟ್ಟಲಾದ ಲಕ್ಷಾಂತರ ಫ್ಲಾಟು, ಅಪಾರ್ಟ್‌ಮೆಂಟು, ಮನೆಗಳು

ಇನ್ಫೋಸಿಸ್ ಕ್ಯಾಂಪಸ್

ಮಾರಾಟವಾಗದೆ ನಿಂತಿವೆ. ಇದರಿಂದ ಬ್ಯಾಂಕುಗಳೇ ಖುದ್ದಾಗಿ ನಿಂತು ಕಡಿಮೆ ಬೆಲೆಗೆ ಮನೆ ಮಾರಲು ಬಿಲ್ಡರು ಗಳ ಮನವೊಲಿಸುವ ಕೆಲಸ ಮಾಡುತ್ತಿವೆ. ಮನೆಸಾಲದ ಬಡ್ಡಿದರವನ್ನು ಕಡಿಮೆ ಮಾಡಿವೆ. ಮನೆಗಳ ಮಟ್ರುಕಟ್ಟೆ ಬೆಲೆ 10% ನಿಂದ 30%ನಷ್ಟು ಕುಸಿಯತ್ತಿದ್ದರೂ ಅವಶ್ಯ ಸಂಖ್ಯೆಯಲ್ಲಿ ಕೊಳ್ಳುಗರಿಲ್ಲ. ಇನ್ನು ಕೃಷಿ ಉತ್ಪಾದನೆ ಕಳೆದ ಕೆಲ ವರ್ಷಗಳಲ್ಲಿ 20 ಕೋಟಿ ಟನ್ನುಗಳ ಆಸುಪಾಸಿನಲ್ಲೇ ನಿಂತುಬಿಟ್ಟಿದೆ. ಸಿಮೆಂಟ್, ಉಕ್ಕು, ಪೆಟ್ರೋಲಿಯಂ, ಪವರ್ ಮತ್ತು ಕಲ್ಲಿದ್ದಲು ಇತ್ಯಾದಿ ಮೂಲ ಸೌಕರ್ಯದ ಉತ್ಪಾದನಾ ಕ್ಷೇತ್ರವೂ ಅಧೋಮುಖಿಯಾಗಿದೆ.

ಆರ್ಥಿಕ ಕುಸಿತ ಏಕೆ ಉಂಟಾಗುತ್ತದೆ?

ಈಗ ಎಲ್ಲರನ್ನೂ ಕಾಡುತ್ತಿರುವ ಒಂದು ಮುಖ್ಯ ಪ್ರಶ್ನೆಗೆ ಬರೋಣ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಲ ಕಾಲಕ್ಕೆ ಆರ್ಥಿಕ ಹಿಂಜರಿತ ಎಂಬ ಪೆಡಂಭೂತ ಕಾಡು ವುದು ಏಕೆ? ಬಂಡವಾಳಸಾಹಿ ವ್ಯವಸ್ಥೆಯಲ್ಲಿ ಉತ್ಪಾದ ನೆಯ ಮೂಲ ಉದ್ದೇಶವೇ ಗರಿಷ್ಠ ಲಾಭ. ಯಾವನೇ ಬಂಡವಾಳಗಾರ ಲಾಭಗಳಿಸಲು ಮಾತ್ರ ಉತ್ಪಾದನೆಗೆ ಕೈ ಹಾಕುತ್ತಾನೆಯೇ ವಿನಃ ಸಮಾಜ ಸೇವೆ ಮಾಡಲು ಅಲ್ಲ. ಮಹಾನ್ ಚಿಂತಕರಾದ ಕಾರ್ಲ್ ಮಾರ್ಕ್ಸ್ ತೋರಿಸಿಕೊ ಟ್ಟಂತೆ "ಲಾಭವೆನ್ನುವುದು ಕಾರ್ಮಿಕನಿಗೆ ಪಾವತಿಸದೇ ಉಳಿಸಕೊಂಡ ಕೂಲಿ" ಅಂದರೆ, ಯಾವನೇ ಕಾರ್ಮಿಕನ ದುಡಿಮೆಯಿಂದ ಸೃಷ್ಟಿಯಾದ ಮೌಲ್ಯದಲ್ಲಿ ಒಂದು ಭಾಗ ವನ್ನು ಬಂಡವಾಳಿಗ ತನ್ನಕೈಯಲ್ಲಿ ಹಿಡಿದಿಟ್ಟುಕೊಳ್ಳುತ್ತಾನೆ. ಅದೇ ಲಾಭ.

ಇಲ್ಲಿ ಇನ್ನೆರಡು ಅಂಶಗಳನ್ನು ಗಮನಿಸಬೇಕು. ಒಂದೆಡೆ. ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಬಂಡವಾಳಿಗರು ತಂತ್ರಜ್ಞಾನದ ಮೊರೆ ಹೋಗುತ್ತಾರೆ. ಹೆಚ್ಚು ಹೆಚ್ಚು ಸ್ವಯಂ ಚಾಲಿತ ಯಂತ್ರಗಳನ್ನು ಉಪ ಯೋಗಿಸಲು ಮತ್ತು ಉತ್ತಮಪಡಿಸಲು ಸತತವಾಗಿ ಒತ್ತು ನೀಡುತ್ತಾರೆ. ಇನ್ನೊಂದೆಡೆ, ಕೈಗಾರಿಕೆಗಳು ಹೆಚ್ಚು ಹೆಚ್ಚು ವಿಸ್ತಾರ ಮತ್ತು ಸಂಕೀರ್ಣವಾಗುತ್ತಾ ಹೋದಂತೆ, ಉತ್ಪಾ ದನೆಯ ದಕ್ಷತೆಯನ್ನು ಹೆಚ್ಚಿಸಲು ಬಂಡವಾಳಿಗರು ಶ್ರಮದ ವಿಭಜನೆ (DIVISION OF LABOUR)ಗೆ ಕೈಹಾಕು ತ್ತಾರೆ. ಇದರಿಂದಾಗಿ ಕರಕೌಶಲ್ಯದ ಅವಶ್ಯಕತೆ ಕಮ್ಮಿಯಾ ಗುತ್ತದೆ ಮತ್ತು ಉತ್ಪಾದನೆಗೆ ಹೆಚ್ಚು ಕೈಗಳು ಬೇಕಾಗುವು ದಿಲ್ಲ. ಇದರಿಂದ, ಎರಡು ಪರಿಣಮಗಳು ಉಂಟಾಗುತ್ತವೆ. ಒಂದೆಡೆ, ಕೆಲಸಗಾರರಿಗೆ ನೀಡುವ ವೇತನದ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಇನ್ನೊಂದು ಕಡೆ, ಉದ್ಯೋಗಗಳೇ ಮಾಯವಾಗುತ್ತವೆ. ಒಟ್ಟಾರೆ, ಕಾರ್ಮಿಕರ ಬಡಜನರ "ಕೊಳ್ಳುವ ಶಕ್ತಿ"ಯು ಕ್ಷೀಣಿಸುತ್ತಲೇ ಹೋಗು ತ್ತದೆ. ಇದನ್ನೇ ಬೇಡಿಕೆಯ ಕೊರತೆ ಎನ್ನುವುದು.

ವಸ್ತುಗಳ ಬೇಡಿಕೆಯ ಇಳಿಯುವುದರಿಂದ ಸಹಜ ವಾಗಿ ಉತ್ಪಾದನೆಯಲ್ಲಿಯೂ ಏರಿಕೆ ಕಾಣುವುದಿಲ್ಲ. ಮಾರುಕಟ್ಟೆ ನಿಂತ ನೀರಾಗುತ್ತದೆ. ಇದನ್ನೇ "ಆರ್ಥಿಕ ಸ್ಥಗಿತ"(Stagnation) ಎನ್ನುವುದು. ಹೀಗಾದಾಗ, ಬಂಡವಾಳಶಾಹಿ ಆರ್ಥಿಕತೆಯಲ್ಲಿ "ಹಣದ ಚಲನೆ" ಯನ್ನು ತನ್ಮೂಲಕ ಉತ್ಪನ್ನಗಳ ಖರೀದಿಯನ್ನು ಹೆಚ್ಚಿಸಲು ಸರ್ಕಾರಗಳು ಕೆಲವೊಮ್ಮೆ ಹೆಚ್ಚಿನ ಹಣವನ್ನು ಮುದ್ರಿಸುತ್ತವೆ ಅಥವಾ ಆಪತ್ಕಾಲಕ್ಕೆಂದು ಸಂರಕ್ಷಿಸಿದ್ದ ಹಣವನ್ನು ಮಾರು ಕಟ್ಟೆಗೆ ಬಿಡಲು ಬ್ಯಾಂಕುಗಳಿಗೆ ಅವಕಾಶ ಮಾಡಿಕೊಡು ತ್ತವೆ. ಆದರೆ, ಮಾರುಕಟ್ಟೆಯಲ್ಲಿ ಹೆಚ್ಚಿನ ಹಣವು ಕಡಿಮೆ ಉತ್ಪನ್ನಗಳ ಬೆನ್ನಟುವುದರಿಂದ ಹಣದುಬ್ಬರ ಉಂಟಾಗಿ ಉತ್ಪನ್ನಗಳ ಬೆಲೆ ಏರುತ್ತದೆ. ಆರ್ಥಿಕ ಜಡತೆ ಮತ್ತು ಹಣ ದುಬ್ಬರ ಪ್ರಕ್ರಿಯೆಗಳು ಜೊತೆಗೂಡಿ ಇನ್ನೂ ತೀವ್ರ ವಾದ ಆರ್ಥಿಕ ಬಿಕ್ಕಟ್ಟಿಗೆ ಅಂದರೆ "Stagflation" (ಜಡ ಉಬ್ಬರ ಎನ್ನಬಹುದು)ಗೆ ಎಡೆಮಾಡಿಕೊಡುತ್ತವೆ.

ನಮ್ಮ ರಾಜ್ಯದಲ್ಲಿ ಲಕ್ಷಾಂತರ ಮಂದಿ ಗಾರ್ಮೆಂಟ್ಸ್ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಏಷ್ಯದಲ್ಲೇ ಅತಿ ದೊಡ್ಡದೆಂದು ಹೆಗ್ಗಳಿಕೆ ಪಡೆದಿದ್ದ ಪೀಣ್ಯ ಕೈಗಾರಿಕಾ ಪ್ರದೇಶವು ಇಂದು ಸ್ಮಶಾನ ಸದೃಶ್ಯವಾಗಿದೆ. ಅಲ್ಲಿ 1ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ ಎಂದು ಕರ್ನಾಟಕದ ವಾಣಿಜ್ಯೋಧ್ಯಮಿಗಳ ಸಂಘ (FKCCI) ಹೇಳಿದೆ. ಬಳ್ಳಾರಿ ಹಾಗೂ ಇತರೆಡೆಗಳಲ್ಲಿ ಗಣಿ ಉದ್ಯಮ ದಲ್ಲಿ ಸುಮಾರು 1ಲಕ್ಷ ಮಂದಿ ಉದ್ಯೋಗ ಹೀನರಾಗಿದ್ದಾರೆ. ಮೈಕೋ, ಟಯೋಟಾ ಹಾಗೂ ಇನ್ನಿತರ ರಾಜ್ಯದ ಲ್ಲಿರುವ ಹಲವಾರು ಖಾರ್ಕಾನೆಗಳು ಲೇ ಆಫ್ ಘೋಷಿಸಿವೆ. 'ಐಟಿ ಸಿಟಿ' ಎಂದು ಖ್ಯಾತಿ ಪಡೆದಿದ್ದ ಬೆಂಗಳೂರಿನಲ್ಲಿ ಹಲ ವಾರು ಸಣ್ಣ-ಪುಟ್ಟ ಸಾಫ್ಟ್‌ವೇರ್ ಸಂಸ್ಥೆ ಗಳು, ಬಿಪಿಓ ಕಂಪನಿಗಳು, ಕಾಲ್‌ಸೆಂಟ ರ್‌ಗಳು ಈಗಾಗಲೇ ಬಾಗಿಲು ಮುಚ್ಚಿವೆ. ವಿಪ್ರೋ ಆಕ್ಸೆಂಚರ್ ನಂತಹ ಕಂಪನಿಗಳು ಸಾವಿರಾರು ಮಂದಿಯನ್ನು ಮನೆಗೆ ಕಳು ಹಿಸಲು ಯೋಚಿಸುತ್ತಿವೆ. ಬರಲಿರುವ ದಿನಗಳು ಇನ್ನೂ ಭೀಕರವಾಗಲಿವೆ.

ಆರ್ಥಿಕ ಕುಸಿತಕ್ಕೆ ಪರಿಹಾರ ಸಮಾಜವಾದ ಸ್ಥಾಪನೆ.

ನಮ್ಮ ರಾಜ್ಯದಲ್ಲಿ ಲಕ್ಷಾಂತರ ಮಂದಿ ಗಾರ್ಮೆಂಟ್ಸ್ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಏಷ್ಯದಲ್ಲೇ ಅತಿ ದೊಡ್ಡದೆಂದು ಹೆಗ್ಗಳಿಕೆ ಪಡೆದಿದ್ದ ಪೀಣ್ಯ ಕೈಗಾರಿಕಾ ಪ್ರದೇಶವು ಇಂದು ಸ್ಮಶಾನ ಸದೃಶ್ಯವಾಗಿದೆ. ಅಲ್ಲಿ 1ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ ಎಂದು ಕರ್ನಾಟ ಕದ ವಾಣಿಜ್ಯೋಧ್ಯಮಿಗಳ ಸಂಘ(FKCCI) ಹೇಳಿದೆ. ಬಳ್ಳಾರಿ ಹಾಗೂ ಇತರೆಡೆಗಳಲ್ಲಿ ಗಣಿ ಉದ್ಯಮದಲ್ಲಿ ಸುಮಾರು 1ಲಕ್ಷ ಮಂದಿ ಉದ್ಯೋಗ ಹೀನರಾಗಿದ್ದಾರೆ. ಮೈಕೋ, ಟಯೋಟಾ ಹಾಗೂ ಇನ್ನಿತರ ರಾಜ್ಯದಲ್ಲಿರುವ ಹಲವಾರು ಖಾರ್ಕಾನೆಗಳು ಲೇ ಆಫ್ ಘೋಷಿಸಿವೆ. 'ಐಟಿ ಸಿಟಿ' ಎಂದು ಖ್ಯಾತಿ ಪಡೆದಿದ್ದ ಬೆಂಗಳೂರಿನಲ್ಲಿ ಹಲವಾರು ಸಣ್ಣ-ಪುಟ್ಟ ಸಾಫ್ಟ್‌ವೇರ್ ಸಂಸ್ಥೆಗಳು, ಬಿಪಿಓ ಕಂಪನಿಗಳು, ಕಾಲ್‌ಸೆಂಟರ್‌ಗಳು ಈಗಾಗಲೇ ಬಾಗಿಲು ಮುಚ್ಚಿವೆ. ವಿಪ್ರೋ ಆಕ್ಸೆಂಚರ್ ನಂತಹ ಕಂಪನಿಗಳು ಸಾವಿರಾರು ಮಂದಿಯನ್ನು ಮನೆಗೆ ಕಳುಹಿಸಲು ಯೋಚಿ ಸುತ್ತಿವೆ. ಬರಲಿರುವ ದಿನಗಳು ಇನ್ನೂ ಭೀಕರವಾಗಲಿವೆ.

ಪ್ರಸಕ್ತ ಬಿಕ್ಕಟ್ಟಿನಿಂದ ಹೊರಬರಲು ವಿಶ್ವದ ಜನತೆ ಸಮಾಜವಾದತ್ತ ಮುನ್ನಡೆಯಬೇಕು. ಆದರೆ, ಸಮಾಜವಾ ದವು ಸ್ಥಾಪನೆಯಾಗುವವರೆಗೂ, ಕಾರ್ಮಿಕ ವರ್ಗವು ಕೈಕಟ್ಟಿ ಕೂರಬೇಕಾಗಿಲ್ಲ. ಇಂದು ವಿಶ್ವದೆಲ್ಲೆಡೆ, ಜನರಿಂದ ಚುನಾಯಿತವಾದ ಸರಕಾರಗಳು ಲೂಟಿಕೋರ ಬ್ಯಾಂಕರ್ ಗಳನ್ನು, ಕೈಗಾರಿಕಾ ಪತಿಗಳನ್ನು ಕಾಪಾಡಲು ಬೃಹತ್ತಾಗಿ ಸಾರ್ವಜನಿಕ ಹಣವನ್ನು ತೊಡಗಿಸಿ. ಕೋಟಿ-ಕೋಟಿ ಡಾಲರ್‌ಗಳನ್ನು ಪರಿಹಾರವಾಗಿ ನೀಡುತ್ತಿವೆ. ಬಂಡವಾಳಿ ಗರನ್ನು ಉಳಿಸಲು ತೋರುತ್ತಿರುವ ಮುತುವರ್ಜಿಯನ್ನು ಸಾಮಾನ್ಯ ಜನತೆಯ ಬಗ್ಗೆ ಈ ಸರಕಾರಗಳು ತೋರು ತ್ತಿಲ್ಲ. ಜನಪರವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲು, ಕೆಲಸದಿಂದ ವಜಾಮಾಡುವುದನ್ನು ನಿಲ್ಲಿಸಲು, ಬೆಲೆ ಏರಿಕೆ, ನಿರುದ್ಯೋಗಕ್ಕೆ ಕಡಿವಾಣ ಹಾಕುವಂತಹ ನೀತಿಗಳನ್ನು, ಜಾರಿಗೆ ತರಲು ಸರಕಾರಗಳ ಮೇಲೆ ಪ್ರಬಲ ಹೋರಾ ಟದ ಮುಲಕ ಜನತೆ ಒತ್ತಡ ಹೇರಬೇಕಾಗಿರುವುದು ಇಂದಿನ ಗಳಿಗೆಯಲ್ಲಿ ತುರ್ತು ಅವಶ್ಯಕತೆಯಾಗಿದೆ. □

ಸ್ವಾತಂತ್ರ್ಯ

ನನ್ನನ್ನು
ನಿನ್ನ ಶಸ್ತ್ರವನ್ನಾಗಿಸಲು .
ನೀ
ನನಗೆ ಶಸ್ತ್ರಕೊಟ್ಟೆ.
ನಾನೀಗ ನಿನ್ನನ್ನು
ಶೂಟ್ ಮಾಡಬೇಕು....
ತಿಳಿದುಕೋ!
ನಾನು ಯಾರದೋ
ಶಸ್ತ್ರವಾಗದಿರಲು ನನಗೆ
ಶಸ್ತ್ರ ಬೇಕಿತ್ತು.

○ ಶ್ರೀಶ ಉಡುಪ

ಸಂಪಾದಕರೊಡನೆ ಸಂವಾದ

ಕಿಟ್, ಊಟ ಮತ್ತು ಸಾಹಿತ್ಯ: ಸ್ವಾಯತ್ತತೆಯ ಪ್ರಶ್ನೆ

"ಚಿತ್ರದುರ್ಗ ಸಾಹಿತ್ಯ ಸಮ್ಮೇಳನ ಸಂಘಟನೆಗೆ ಮಠಗಳೇ ಮುಖ್ಯವಾದ ಪಾತ್ರ ವಹಿಸಿರುವ ವಿಷಯ ಗೊತ್ತಿದ್ದರೂ ಸಮ್ಮೇಳನಾಧ್ಯಕ್ಷ ಎಲ್.ಬಸವರಾಜು ಅಧ್ಯಕ್ಷಗಿರಿಗೆ ಒಪ್ಪಿಕೊಂಡದ್ದು ಏಕೆ?'

– ಸಿರಿಗೆರೆ ಶಿವಮೂರ್ತಿ ಶಿವಾಚಾರ್ಯಿ ಸ್ವಾಮಿ

'ಮಠಗಳನ್ನು, ರಾಜಕಾರಣಿಗಳನ್ನು ವಿರೋಧಿಸಿದ ಮಾತ್ರಕ್ಕೆ ಅವರು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಬಾರದು ಎನ್ನುವುದು ಅತ್ಯಂತ ಕ್ರೂರ..'

–ಕಿ.ರಂ. ನಾಗರಾಜ್

ಚಿತ್ರದುರ್ಗದಲ್ಲಿ ನಡೆದ 75ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಎಲ್. ಬಸವರಾಜು ಅವರು ಸಮ್ಮೇಳನವನ್ನು ಉದ್ಘಾಟಿಸಿದ ವೇದಿಕೆಯಿಂದ ಮಾಡಿದ ಅಧ್ಯಕ್ಷ ಭಾಷಣ ಹಾಗೂ ಅದಕ್ಕೆ ವ್ಯಕ್ತವಾದ ಪ್ರತಿಕ್ರಿಯೆಗಳು ಬಹುಮುಖ್ಯ ಪ್ರಶ್ನೆಯೊಂದನ್ನು ಮತ್ತೆ ಮುನ್ನೆಲೆಗೆ ತಂದಿವೆ. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರತಿನಿಧಿಕ ಸಂಸ್ಥೆ ಎಂದು ಭಾವಿಸುವುದಾದರೆ ಅದು ವ್ಯಕ್ತಿಯೊಬ್ಬನ ಸ್ವಾಭಿಮಾನದ ಪ್ರಶ್ನೆ ಕೂಡ. ಸಮಕಾಲೀನ ಪ್ರಜಾತಾಂತ್ರಿಕ ಚೌಕಟ್ಟು ವಿಷಯದ ತುರ್ತನ್ನು ಹೆಚ್ಚಿಸುತ್ತದೆ.

ಸಾಹಿತ್ಯ ಸಮ್ಮೇಳನಕ್ಕಿಂತ ಮೊದಲೇ ಜಿ.ಎಚ್. ನಾಯಕರೂ ಸೇರಿದಂತೆ ಅನೇಕರು ಸಾಹಿತ್ಯ ಸಮ್ಮೇಳನಗಳಲ್ಲಿ ಮಠಾಧೀಶರುಗಳು ತುಂಬಿಕೊಳ್ಳುತ್ತಿರುವುದು ಔಚಿತ್ಯವನ್ನು ಪ್ರಶ್ನಿಸಿದ್ದರು. ಸಮ್ಮೇಳನಾಧ್ಯಕ್ಷ ಎಲ್.ಬಸವರಾಜು ಅವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಣ ಕೂಡ ಇಂದು ಬಂಡವಳಶಾಹಿಗಳು, ಶ್ರೀಮಂತರೂ ಹಾಗೂ ಮಠಗಳ ಪಾಲಾಗಿದೆ ಎಂದಿದ್ದಾರೆ. ಶಿಕ್ಷಣ, ಸಾಹಿತ್ಯ, ಅಂತಿಮವಾಗಿ ಜನಸಾಮಾನ್ಯರ ಒಟ್ಟೂ ಬದುಕು ಬಂಡವಳಶಾಹಿ ಹಾಗೂ ಮಠಾಧೀಶರುಗಳ ಗುಲಾಮತನಕ್ಕೆ ಒಳಗಾಗುವ ಅಪಾಯವನ್ನು ಅವರು ಪ್ರಸ್ತಾಪಿಸಿದ್ದಾರೆ. ಶೈಕ್ಷಣಿಕ ಮಾರುಕಟ್ಟೆಯಲ್ಲಿ ಮಠಗಳ ಪಾಲನ್ನು ಅರಿತಿರುವ ಯಾರೇ ಆದರೂ ಇದನ್ನು ನಿರಾಕರಿಸಲು ಸಾಧ್ಯವಿಲ್ಲ.

ದುರಂತವೆಂದರೆ ಸಮೇಳನಾಧ್ಯಕ್ಷರ ಮಾತಿಗೆ ಉದ್ಘಾಟನೆಯ ವೇದಿಕೆಯಲ್ಲೇ ಮಠಾದೀಶರೊಬ್ಬರು ಉಡಾಫೆಯಿಂದ ಪ್ರತಿಕ್ರಿಯಿಸಿದ್ದಾರೆ. ಇನ್ನು ಮಠಾಧೀಶರು ಆನಂತರ ಈ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಶಿವಮೂರ್ತಿ ಶಿವಾಚಾರ್ಯರ ಹೇಳಿಕೆಯಲ್ಲಂತೂ ತಾವಿಲ್ಲದಿದ್ದರೆ ಸಮ್ಮೇಳನವೇ ನಡೆಯುತ್ತಿರಲಿಲ್ಲವೇನೋ ಎಂಬ ಭಾವನೆ ಹಾಗೂ ಜನತಂತ್ರದ ವಿರೋಧಿಯಾಗಿರುವ ಫ್ಯೂಡಲ್ ಹಮ್ಮು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆದರೆ ಸಾಹಿತ್ಯ ಪರಿಷತ್ತು ಇಂದು ತಾನೇ ಆಯ್ಕೆ ಮಾಡಿದ ಸಮ್ಮೇಳನಾಧ್ಯಕ್ಷರನ್ನು ಸಮರ್ಥಿಸುವ ಪರಿಸ್ಥಿತಿಯಲ್ಲಿಲ್ಲ. ಇದು ಬರೀ ಆರ್ಥಿಕ ಅವಲಂಬನೆಯ ಪರಿಣಾಮವೋ ಅಥವಾ ಇದನ್ನು ಹೊರತು ಪಡಿಸಿದ ಸಮೀಕರಣಗಳೇನಾದರೂ ಈ ದುಸ್ಥಿತಿಗೆ ಕಾರಣವಾಗಿವೇಯೋ ಎಂದು ಕಂಡುಕೊಳ್ಳಬೇಕಾಗಿದೆ.

ಇದರ ಜೊತೆಗೆ ಹೊಂದಿಕೊಂಡಿರುವಂತೆ ಸಮ್ಮೇಳನದ ಸ್ವರೂಪದ ಪ್ರಶ್ನೆಯಿದೆ. ಸಮ್ಮೇಳನಗಳು ಜಾತ್ರೆಗಳಾಗುತ್ತಾ ತಮ್ಮ ಔಚಿತ್ಯ ಕಳೆದುಕೊಳ್ಳುತ್ತಿವೆ ಎಂಬ ಆಕ್ಷೇಪ ಒಂದು ಕಡೆ ಇದೆ. ಆದರೆ ಈ ಬಾರಿ ನಲ್ಲೂರು ಪ್ರಸಾದರು ಬೆಂಗಳೂರು ದೂರದರ್ಶನದಿಂದ ಪ್ರಸಾರವಾಗಿರುವ ಸಂದರ್ಶನ 'ಪ್ರಚಲಿತ'ದಲ್ಲೂ ಸೇರಿದಂತೆ ಹಲವೆಡೆ ಇದು ಜಾತ್ರೆಯಾಗಿಯೇ ಇರಬೇಕು ಎಂದು ಸಮರ್ಥಿಸಿಕೊಂಡಿದ್ದಾರೆ. ಸಾಹಿತ್ಯ ಸಮ್ಮೇಳನವಾಗಿದ್ದಂತಹ ಒಂದು ಘಟನೆ ಕನ್ನಡ ಜಾತ್ರೆಯಾಗಿ ಬದಲಾದಾಗ ಹಲವು ಸ್ವರೂಪಾತ್ಮಕ ಭಿನ್ನತೆಗಳೂ ಅನಿವಾರ್ಯವಾಗಿ ಉಂಟಾಗುತ್ತವೆ ಎನ್ನುವುದನ್ನು ಗಮನಿಸಬೇಕು. ಪ್ರಾಯಶಃ ಚಿತ್ರದುರ್ಗ ಸಂದರ್ಭದಲ್ಲಿ ವ್ಯಕ್ತವಾದ ಹಲವು ಪ್ರತಿಕ್ರಿಯೆಗಳನ್ನು ಈ ಚೌಕಟ್ಟಿನಲ್ಲಿಟ್ಟು ನೋಡಿದರೆ ಹೆಚ್ಚು ಸೂಕ್ತವಾದೀತು. ಜನರ ಹಾಗೂ ಮಾಧ್ಯಮಗಳ ಪ್ರತಿಕ್ರಿಯೆಯಲ್ಲಿ ಸಾಹಿತ್ಯವೆನ್ನುವುದು ಸಹಜವಾಗಿಯೇ ಪರಿಧಿಯಗೊಂಡಿದೆ. ಹಾಗೂ ಅದರ ಜಾಗವನ್ನು ಊಟ, ಕಿಟ್‌ಗಳು ಪಡೆದಿವೆ. ಈ ಆಕ್ಷೇಪಗಳು ಬರುವ ಹೊತ್ತಿಗೆ ಎಚ್ಚರಗೊಂಡು ಸಾಹಿತ್ಯ ಸಮ್ಮೇಳನವೆಂದರೆ ಬರೀ ಊಟ-ಕಿಟ್‌ಗಳಲ್ಲ. ಸಾಹಿತ್ಯ-ಗೋಷ್ಠಗಳಿಗಿಂತ ಹೆಚ್ಚಾಗಿ ಈ ಅವ್ಯವಸ್ಥೆಗಳಿಗೇ ಅನಗತ್ಯವಾಗಿ ಪ್ರಚಾರ ನೀಡಲಾಗುತ್ತಿದೆ ಎನ್ನುತ್ತಿದ್ದಾರೆ. ಸರಿಯೇ, ಆದರೆ ಸಮ್ಮೇಳನದ ಕಾರ್ಯಕ್ರಮ ವಿವರಗಳ ಪುಸ್ತಿಕೆಯಲ್ಲಿ ವಿವಿಧ ಕಾರ್ಯಕ್ರಮಗಳ ವಿವರಗಳು ತುಂಬಿರುವಷ್ಟೇ ಜಾಗವನ್ನು ಊಟ-ಉಪಚಾರಗಳ ವಿವರಗಳೂ ತುಂಬಿರುವಾಗ, ಬಹುಪಾಲು ಶ್ರಮವನ್ನು ಮೆನುವಿನ ವೈವಿಧ್ಯಕ್ಕೆ ವ್ಯಯಿಸಿರುವಾಗ, ಊಟದ ಉಸ್ತುವಾರಿ ನೋಡುವ ಮಠಾಧೀಶರುಗಳು ಇಡೀ ಸಮ್ಮೇಳನವನ್ನು ತಾವೇ ನಡೆಸುತ್ತಿರುವಂತೆ ಮಾತನಾಡುತ್ತಿರುವಾಗ, ಸಮ್ಮೇಳನಾಧ್ಯಕ್ಷರ ಮಾತಿಗೆ ಪ್ರತಿಕ್ರಿಯಿಸುತ್ತಿರುವಾಗ ಇಂತಹ ಟೀಕೆಗಳು ಬಂದರೆ ಅದನ್ನು ತಪ್ಪಿಸಲಾಗುವುದಿಲ್ಲ. ಹಾಗೆ ನೋಡಿದರೆ ಇತ್ತೀಚಿನ ಎಲ್ಲಾ ಸಾಹಿತ್ಯ ಸಮ್ಮೇಳನಗಳಲ್ಲೂ ಒಂದಷ್ಟು ಹೆಚ್ಚೇ ಎನ್ನ ಬಹುದಾದಷ್ಟು ಫೋಕಸ್ಸನ್ನು ಊಟದ ವ್ಯವಸ್ಥೆ ಪಡೆದುಕೊಳ್ಳುತ್ತಿದೆ. ಇದರ ಜವಾಬ್ದಾರಿ ವಹಿಸಿಕೊಳ್ಳುತ್ತಿರುವವರು, ಬಹಳ ಕಡೆ ಮಠಾಧೀಶರು, ಇಡೀ ಸಮ್ಮೇಳನವೇ ತಮ್ಮ ಮೂಗಿನ ಕೆಳಗೆ ನಡೆಯುತ್ತಿರುವಂತೆ ವರ್ತಿಸುತ್ತಿದ್ದಾರೆ. ಅನ್ನಕ್ಕಾಗಿ ಸ್ವಾಭೀಮಾನವನ್ನು ಮಾರಿಕೊಳ್ಳುವ ಗುಲಾಮಗಿರಿ ಬೇಕೆ? ತಲೆಯೆತ್ತಿ ನಿಲ್ಲಲಾಗದ ಸಾಹಿತ್ಯ ಪರಿಷತ್ತು ಎಲ್ಲಿಯವರೆಗೆ ರಾಜಿ ಮಾಡಿಕೊಳ್ಳಬೇಕು?

> ಸಾಹಿತ್ಯ ಸಮ್ಮೇಳನಕ್ಕಿಂತ ಮೊದಲೇ ಜಿ.ಎಚ್. ನಾಯಕರೂ ಸೇರಿದಂತೆ ಅನೇಕರು ಸಾಹಿತ್ಯ ಸಮ್ಮೇಳನಗಳಲ್ಲಿ ಮಠಾಧೀಶರುಗಳು ತುಂಬಿಕೊಳ್ಳುತ್ತಿರುವುದರ ಔಚಿತ್ಯವನ್ನು ಪ್ರಶ್ನಿಸಿದ್ದರು. ಸಮ್ಮೇಳನಾಧ್ಯಕ್ಷ ಎಲ್.ಬಸವರಾಜು ಅವರು ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಶಿಕ್ಷಣ ಕೂಡ ಇಂದು ಬಂಡವಾಳಶಾಹಿಗಳು, ಶ್ರೀಮಂತರೂ ಹಾಗೂ ಮಠಗಳ ಪಾಲಾಗಿದೆ ಎಂದಿದ್ದಾರೆ.

'ಸಮ್ಮೇಳನದ ನಿರ್ಣಯಗಳನ್ನು ಜಾರಿಗೊಳಿಸಲಾಗುವುದು' ಎಂದು ಪ್ರತೀ ಬಾರಿ ಭರವಸೆ ನೀಡುವ ಸರಕಾರಗಳ ಡೋಂಗಿತನವೂ ಈ ಸಂದರ್ಭದಲ್ಲಿ ಬಯಲಿಗೆ ಬಂದಿದೆ. ಯಥಾ ಪ್ರಕಾರ ಸಮ್ಮೇಳನಕ್ಕೆ ಮೊದಲು ಮುಖ್ಯಮಂತ್ರಿಗಳು ಅಲ್ಲಿ ಕೈಗೊಳ್ಳಲಾಗುವ ನಿರ್ಣಯಗಳನ್ನು ಜಾರಿಗೊಳೊಸುತ್ತೇವೆ ಎಂದಿದ್ದಾರೆ. 75ನೇ ಸಮ್ಮೇಳನ ಕೈಗೊಂಡ ಮೂರು ನಿರ್ಣಯಗಳಲ್ಲಿ 'ಶಿಕ್ಷಣದ ರಾಷ್ಟ್ರೀಕರಣ ಆಗಬೇಕು. ಈ ಕುರಿತು ಸರಕಾರ ತುರ್ತು ಕ್ರಮ ಕೈಗೊಳ್ಳಬೇಕು' ಎಂಬುದು ಒಂದು. ಸಮ್ಮೇಳನದ ನಂತರ ಮುಖ್ಯಮಂತ್ರಿಗಳು ದಾವಣಗೆರೆಯಲ್ಲಿ 'ಶಿಕ್ಷಣದ ರಾಷ್ಟ್ರೀಕರಣ ಸಾಧ್ಯವಿಲ್ಲ' ಎಂಬ ಹೇಳಿಕೆ ನೀಡಿದ್ದಾರೆ. ಅದೇ ಹೊತ್ತಿನಲ್ಲಿ ಅಲ್ಲಿ ಕೆಲವು ಮಠಾಧೀಶರುಗಳು ರಾಷ್ಟ್ರೀಕರಣಗೊಳಿಸುವ ಅಧಿಕಾರವಿರುವ ಸರಕಾರಕ್ಕೆ ಕೆಲವು ಷರತ್ತುಗಳನ್ನು ಹಾಕಿರುವುದು ವರದಿಯಾಗಿದೆ. ಸಮ್ಮೇಳನದಲ್ಲಿ ಕೈಗೊಂಡಿರುವ ನಿರ್ಣಯ ಒಂದೆಡೆ ಇದ್ದರೂ ಮಠಾಧೀಶರುಗಳು ಹೇಳಿಕೆ ಹಾಗೂ ಷರತ್ತುಗಳಿಗೆ ಸ್ಪಂದಿಸಿ ಮುಖ್ಯಮಂತ್ರಿಗಳು ನೀಡಿದ ಹೇಳಿಕೆ ಸರಕಾರ ಯಾರಿಗೆ ಎಷ್ಟು ಬೆಲೆ ನೀಡುತ್ತದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯೊಂದು ಅಖಿಲ ಭಾರತ ಸಮ್ಮೇಳನದ ವೇದಿಕೆಯಲ್ಲಿ ಕೈಗೊಂಡ ನಿರ್ಣಯವನ್ನು ಮಠಾಧೀಶರುಗಳ ಹೇಳಿಕೆ-ಪ್ರತಿಕ್ರಿಯೆಗಳು ಬದಿಗೆ ಸರಿಸಬಲ್ಲವೆಂದಾದರೆ ಕಸಾಪದ ಸ್ವಾಭಿಮಾನದ ಪ್ರಶ್ನೆ, ಕನ್ನಡಿಗರ ಸ್ವಾಯತ್ತತೆಯ ಪ್ರಶ್ನೆ ಎಲ್ಲಿಗೆ ಬಂತು?

ನಾಡಿನ ಜನ ಧ್ವನಿ ಕಳೆದುಕೊಳ್ಳುವಲ್ಲಿ ಸರ್ವಾಧಿಕಾರದ ಫಸಲಷ್ಟೇ ಬೆಳೆಯುತ್ತದೆ. ಅದು ಒಂದು ನಾಡಿನ ದುರಂತ.

❍ ಶ್ರೀಶ ಉಡುಪ

ಸಂಪಾದಕರೊಡನೆ ಸಂವಾದ

ಕರ್ನಾಟಕದ ತಾಲಿಬಾನ್

ದಕ್ಷಿಣ ಕನ್ನಡದ ಸುಳ್ಯ ತಾಲ್ಲೂಕಿನ ಪಂಜ ಗ್ರಾಮದ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಹಿಂದುತ್ವದ ಹೊಸ ಅವತಾರ ತಲೆದೋರಿದೆ. ಕಾಲೇಜಿಗೆ ಬರುವ ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾ ಧರಿಸಬಾರದೆಂದು ಸಂಘಪರಿವಾರದ ವಿದ್ಯಾರ್ಥಿ ಸಂಘಟನೆ ಎ.ಬಿ.ವಿ.ಪಿ ಫತ್ವಾ ಹೊರಡಿಸಿದೆ. ಸಂಘಟನೆಯ ನಾಯಕ ಲಕ್ಷ್ಮೀಶ ಎಂಬುವರ ಪ್ರಕಾರ ಎಬಿವಿಪಿ ಸಂಘಟನೆಯ ಪದಾಧಿಕಾರಿಗಳು ಕಾಲೇಜಿನ ಪ್ರಾಂಶುಪಾಲರೊಡನೆ ಚರ್ಚೆ ನಡೆಸಿದ ನಂತರವೇ ಈ ಫತ್ವಾ ಜಾರಿಗೊಳಿಸಲಾಗಿದೆ. ಕಾಲೇಜಿನ ಪ್ರಾಂಶುಪಾಲರೂ ಸಹ ಯಾವುದೇ ಅನಗತ್ಯ ಸಮಸ್ಯೆ (?) ತಲೆದೋರದಿರಲೆಂದು ಈ ಕೈಂಕರ್ಯಕ್ಕೆ ತಥಾಸ್ತು ಎಂದಿದ್ದಾರೆ. ವಿದ್ಯಾರ್ಥಿಗಳಲ್ಲಿ ಕೆಲವರು ಈ ಕ್ರಮಕ್ಕೆ ಬೆಂಬಲ ನೀಡಿರುವ ಹಿನ್ನೆಲೆಯಲ್ಲಿ 28 ಎಕರೆಯ ಇಡೀ ಕಾಲೇಜು ಕ್ಯಾಂಪಸ್ಸಿಗೆ ಈ ಫತ್ವಾವನ್ನು ವಿಸ್ತರಿಸಲಾಗಿದ್ದು, ಪ್ರತಿದಿನ ಸಂಘಟನೆಯ ವಿದ್ಯಾರ್ಥಿಗಳು ಗೇಟಿನ ಬಳಿಯೇ ನಿಂತು ಬುರ್ಖಾ ಧರಿಸುವ ಮುಸ್ಲಿಂ ಯುವತಿಯರನ್ನು ನಿಂದಿಸಲಾರಂಭಿಸಿದ್ದಾರೆ.

ಜನವರಿ 29ರಂದು ನಡೆದ ಕಾಲೇಜು ಆಡಳಿತ ಮಂಡಲಿ ಸಭೆಗೆ ಏಕಾಏಕಿ ನುಗ್ಗಿದ ಎಬಿವಿಪಿ ಕಾರ್ಯಕರ್ತರು ಮುಸ್ಲಿಂ ವಿದ್ಯಾರ್ಥಿನಿಯರು ಬುರ್ಖಾಧರಿಸಿ ಕಾಲೇಜಿಗೆ ಬರಬಾರದೆಂದು ತಾಕೀತು ಮಾಡಿದ ಸಂದರ್ಭದಲ್ಲಿ, ಪ್ರಾಂಶುಪಾಲರ ಎದುರಿಗೇ ಮುಸ್ಲಿಂ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ವರದಿಯಾಗಿದೆ. "ನಮ್ಮ ಈ ಕ್ರಮದಿಂದ ಇನ್ನೂ ಹೆಚ್ಚಿನ ಜನ ಪ್ರೇರೇಪಿತರಾಗಿದ್ದಾರೆ, ಹಾಗಾಗಿ ಈ ಫತ್ವಾವನ್ನು ಸರ್ಕಾರಿ ಕಾಲೇಜುಗಳಿಗೂ ವಿಸ್ತರಿಸುತ್ತೇವೆ" ಎನ್ನುತ್ತಾರೆ ಲಕ್ಷ್ಮೀಶ. ಮುಂದಿನ ದಿನಗಳಲ್ಲಿ ಹಳ್ಳಿಯ ಸಾರ್ವಜನಿಕ ಸ್ಥಳಗಳಲ್ಲೂ ಇದನ್ನು ನಿಷೇಧಿಸುವುದಾಗಿ ಅವರು ಘಂಟಾಘೋಷವಾಗಿ ಹೇಳುತ್ತಾರೆ.

ಕಾಲೇಜು ಆಡಳಿತ ಮಂಡಲಿ ಈ ನಿಷೇಧಕ್ಕೆ ಮನ್ನಣೆ ನೀಡಿದ ಒಂದು ವಾರದೊಳಗೆ ಎಬಿವಿಪಿ ಕಾರ್ಯಕರ್ತರು ದೇವಾಲಯದ ಬಳಿ ಸಭೆ ನಡೆಸಿ ಅಲ್ಲಿ ಮುಸ್ಲಿಂ ಸಮುದಾಯದ ಬಗ್ಗೆ ಅವಹೇಳನಕಾರಿಯಾದ ಭಾಷಣಗಳನ್ನೂ ಮಾಡಲಾಗಿದೆ ಎಂದು ಸಭೆಗೆ ಹೋಗಿದ್ದ ಮುಸ್ಲಿಂ ಯುವಕನೊಬ್ಬ ಹೇಳಿಕೆ ನೀಡಿದ್ದಾನೆ. ಪ್ರಾಥಮಿಕ ಶಾಲಾ ಹಂತದಿಂದಲೂ ಒಡನಾಡಿಗಳಾಗಿದ್ದ ಹಿಂದೂ-ಮುಸ್ಲಿಂ ವಿದ್ಯಾರ್ಥಿಗಳು ಪರಸ್ಪರ ದೂರವಾಗಿದ್ದಾರೆಂದು ಹೇಳಲಾಗಿದೆ. ಬುರ್ಖಾ ಧರಿಸಿದವರನ್ನು ಹಿಂದೂ ವಿದ್ಯಾರ್ಥಿ-ವಿದ್ಯಾರ್ಥಿನಿಯರುವ ಡಾಂಬರು ಡಬ್ಬ ಎಂದು ಛೇಡಿಸುತ್ತಾರೆಂದು ಕೆಲವು ಯುವತಿಯರು ಅಲವತ್ತುಕೊಂಡಿದ್ದಾರೆ. ಅವರ ಬುರ್ಖಾಗಳನ್ನು ಬ್ಯಾಗುಗಳಿಂದ ತೆಗೆದು ಬಚ್ಚಿಡುವುದು, ಬುರ್ಖಾ ಕಂಡೊಡನೆಯೇ ಜೈ ಶ್ರೀರಾಂ ಘೋಷಣೆ ಕೂಗುವುದು, ಸಾಮಾನ್ಯವಾಗಿದೆ.

ಕಳೆದ ವರ್ಷ ಚಿಕುನ್ ಗುನ್ಯಾದಿಂದ ಇಡೀ ಗ್ರಾಮವೇ ತತ್ತರಿಸಿದಾಗ ಜಾತಿ, ಮತಗಳ ಬೇಧವನ್ನು ಮರೆತು ಸಹಬಾಳ್ವೆ ನಡೆಸಿದ್ದ ಪಂಜಗ್ರಾಮ ಇಂದು ಹಿಂದೂ ಫ್ಯಾಸಿಸ್ಟ್ ಶಕ್ತಿಗಳ ಪ್ರಯೋಗಾಲಯವಾಗಿದೆ. ಈ ಇಡೀ ಪ್ರಕರಣ ದಿ ಹಿಂದೂ ಪತ್ರಿಕೆಯಲ್ಲಿ (3 ಮತ್ತು 4 ಮಾರ್ಚ್2009) ಮಾತ್ರ ಪ್ರಕಟವಾಗಿರುವುದು ಅಚ್ಚರಿ ಮೂಡಿಸುತ್ತದೆ. ರೋಮಾಂಚಕಾರಿ ಸುದ್ದಿಗಳನ್ನು ದಿನವಿಡೀ ಪ್ರಸಾರ ಮಾಡುವ ವಿದ್ಯುನ್ಮಾನ ಮಾಧ್ಯಮಗಳಲ್ಲೂ ಈ ಘಟನೆ ವರದಿಯಾಗದಿರುವುದು ಇನ್ನೂ ಅಚ್ಚರಿಯ ಸಂಗತಿಯಾಗಿದೆ. ಸರ್ಕಾರದಿಂದಲೂ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಪಂಜ ಒಂದು ಪುಟ್ಟ ಗ್ರಾಮ. ಅಲ್ಲಿ ಕೆಲವು ಪುಂಡರು ಈ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಭಾವಿಸಿಸುವುದು ತಪ್ಪಾಗುತ್ತದೆ. ಅಯೋಧ್ಯೆಯ ಕಿಡಿ ಪ್ರಾರಂಭವಾದದ್ದೂ ಒಂದು ಮಂದಿರದ ಆವರಣದಲ್ಲಿ ಎಂಬ ಅಂಶವನ್ನು ಮರೆಯಲಾಗದು. ಶತಮಾನಗಳ ಕಾಲ ಒಂದು ವರ್ಗದ ಮಹಿಳೆಯರಿಗೆ ಕುಪ್ಪಸ ತೊಡುವುದನ್ನೂ ನಿಷೇಧಿಸಿದ್ದ ಸಂಸ್ಕೃತಿಯ ಆರಾಧಕರೇ ಇಂದು ಮುಸ್ಲಿಂ ಯುವತಿಯರು ಬುರ್ಖಾ ತೊಡುವುದನ್ನು ವಿರೋಧಿಸುತ್ತಿದ್ದಾರೆ ಎಂಬ ಅಂಶವನ್ನೂ ನಿರ್ಲಕ್ಷಿಸುವಂತಿಲ್ಲ. ಮಧ್ಯಮ ವರ್ಗವನ್ನು ಆಕರ್ಷಿಸುವ ಯಾವುದೇ ರಂಜನೀಯ ಸಮಸ್ಯೆಗಳು ಫ್ಯಾಸಿಸಂನ ಬೆಳವಣಿಗೆಗೆ ಉತ್ತಮ ವೇದಿಕೆಯಾಗುತ್ತವೆ. ಇಂದು ಮುಸ್ಲಿಂ ಯುವತಿಯರ ಮೇಲೆ ಹೇರಿರುವ ಫತ್ವಾ ಮುಂದೊಂದು ದಿನ ಹಿಂದೂ ಯುವತಿಯರ ಮೇಲೂ ಹೇರಲಾಗುವುದು. ಪುರುಷ ಪ್ರಧಾನ ವ್ಯವಸ್ಥೆಯ ಸಮರ್ಥಕರಾದ ಫ್ಯಾಸಿಸ್ಟ್ ಶಕ್ತಿಗಳ ದೃಷ್ಟಿಯಲ್ಲಿ ವಸ್ತ್ರ ಸಂಹಿತೆ ಮಹಿಳೆಯರಿಗೆ ಮಾತ್ರ ಅನ್ವಯಿಸುತ್ತದೆ. ಧರ್ಮ ನಗಣ್ಯವಾಗುತ್ತದೆ. ಬುರ್ಖಾಗೆ ಒದಗಿದ ಗತಿಯೇ ಚೂಡಿದಾರ್, ಸಲ್ವಾರ್ ಖಮೀಝ್‌ಗೂ ಒದಗಬಹುದು. ಸಾಂಸ್ಕೃತಿಕ ಆರಕ್ಷಣೆಯನ್ನು ಸಮರ್ಥಿಸುವ ಮಹಿಳಾಮಣಿಗಳು ಎಚ್ಚರ ದಿಂದಿರಬೇಕು.

ಪಂಜ ಒಂದು ಪುಟ್ಟ ಗ್ರಾಮ, ಅಲ್ಲಿ ಕೆಲವು ಪುಂಡರು ಈ ಕೃತ್ಯಗಳಲ್ಲಿ ತೊಡಗಿದ್ದಾರೆ ಎಂದು ಭಾವಿಸಿಸುವುದು ತಪ್ಪಾಗುತ್ತದೆ. ಅಯೋಧ್ಯೆಯ ಕಿಡಿ ಪ್ರಾರಂಭವಾದದ್ದೂ ಒಂದು ಮಂದಿರದ ಆವರಣದಲ್ಲಿ ಎಂಬ ಅಂಶವನ್ನು ಮರೆಯಲಾಗದು. ಶತಮಾನಗಳ ಕಾಲ ಒಂದು ವರ್ಗದ ಮಹಿಳೆಯರಿಗೆ ಕುಪ್ಪಸ ತೊಡುವುದನ್ನೂ ನಿಷೇಧಿಸಿದ್ದ ಸಂಸ್ಕೃತಿಯ ಆರಾಧಕರೇ ಇಂದು ಮುಸ್ಲಿಂ ಯುವತಿಯರು ಬುರ್ಖಾ ತೊಡುವುದನ್ನು ವಿರೋಧಿಸುತ್ತಿದ್ದಾರೆ ಎಂಬ ಅಂಶವನ್ನೂ ನಿರ್ಲಕ್ಷಿಸುವಂತಿಲ್ಲ. ಮಧ್ಯಮ ವರ್ಗವನ್ನು ಆಕರ್ಷಿಸುವ ಯಾವುದೇ ರಂಜನೀಯ ಸಮಸ್ಯೆಗಳು ಫ್ಯಾಸಿಸಂನ ಬೆಳವಣಿಗೆಗೆ ಉತ್ತಮ ವೇದಿಕೆಯಾಗುತ್ತವೆ. ಇಂದು ಮುಸ್ಲಿಂ ಯುವತಿಯರ ಮೇಲೆ ಹೇರಿರುವ ಫತ್ವಾ ಮುಂದೊಂದು ದಿನ ಹಿಂದೂ ಯುವತಿಯರ ಮೇಲೂ ಹೇರಲಾಗುವುದು.

ವಿದ್ಯಾರ್ಥಿ ಮತ್ತು ಯುವಜನತೆ ಯಲ್ಲಿ ರಾಷ್ಟ್ರಪ್ರೇಮ ಮೂಡಿಸಲು ಮತ್ತು ಭಯೋತ್ಪಾದಕತೆಯ ವಿರುದ್ಧ ಜಾಗೃತರನ್ನಾಗಿ ಮಾಡಲು ಭಾಜಪ ಸರ್ಕಾರ ಹರಸಾಹಸ ಮಾಡುತ್ತಿದೆ. ರಾಜ್ಯಾದ್ಯಂತ ಅಭಿಯಾನವನ್ನೂ ನಡೆಸಿದೆ. ಆದರೆ ಭಾಜಪದ ಅಂಗ ಸಂಸ್ಥೆಯಾದ ಎಬಿವಿಪಿ ತನ್ನದೇ ಆದ ರೀತಿಯಲ್ಲಿ ಸಾಂಸ್ಕೃತಿಕ ಭಯೋತ್ಪಾದನೆಯಲ್ಲಿ ತೊಡಗಿರುವುದು ಸರ್ಕಾರದ ಗಮನಕ್ಕೆ ಬರದಿರುವುದು ವಿಪರ್ಯಾಸ. ವಿದ್ಯಾರ್ಥಿ ಸಮುದಾಯದಲ್ಲಿ ರಾಷ್ಟ್ರಪ್ರೇಮಕ್ಕಿಂತಲೂ ಹೆಚ್ಚಾಗಿ ಮಾನವೀಯ ಮೌಲ್ಯಗಳು ಬೆಳೆಯಬೇಕಾಗಿದೆ. ಮನುಕುಲದ ಏಳಿಗೆಗಾಗಿ, ಸಾಮಾಜಿಕ ಸೌಹಾರ್ದತೆಗಾಗಿ, ಸಹಬಾಳ್ವೆಗಾಗಿ ಶ್ರಮಿಸುವ ಮನ ಹೃದಯಗಳನ್ನು ಕಾಲೇಜುಗಳ ಕ್ಯಾಂಪಸ್ಸುಗಳು ತಯಾರಿಸಬೇಕಾಗಿದೆ. ಆದರೆ, ಇಂದು ಅದೇ ಕ್ಯಾಂಪಸ್ಸುಗಳಲ್ಲಿ ದ್ವೇಷ, ಮತ್ಸರ, ಅಸೂಯೆಗಳ ವಿಷಬೀಜಗಳನ್ನು ಬಿತ್ತಲಾಗುತ್ತಿದೆ. ಸ್ಥಾಪಿತ ಧರ್ಮ ಮತ್ತು ಸಂಸ್ಕೃತಿಗಳ ರಕ್ಷಣೆಯ ನೆಪದಲ್ಲಿ ಅನ್ಯ ಧರ್ಮೀಯರನ್ನು ದ್ವೇಷಿಸುವ ಫ್ಯಾಸಿಸ್ಟ್ ಸಂಸ್ಕೃತಿ ಕರ್ನಾಟಕದ ಮೂಲೆಮೂಲೆಗಳಿಗೂ ಹರಡುತ್ತಿರುವುದು ಸ್ಪಷ್ಟವಾಗುತ್ತಿದೆ. ಪಂಜಗ್ರಾಮ ಇಡೀ ರಾಜ್ಯವನ್ನು ದ್ವೇಷಾಗ್ನಿಯ ಕೆನ್ನಾಲಿಗೆಗೆ ದೂಡುವ ಪಂಜು ಎಂಬ ಸತ್ಯವನ್ನು ಪ್ರಜ್ಞಾವಂತ ನಾಗರಿಕ ಸಮಾಜ ಗ್ರಹಿಸದಿದ್ದಲ್ಲಿ, ಕರಾಳ ದಿನಗಳು ದೂರ ಉಳಿದಿಲ್ಲ.

○ ನಾ ದಿವಾಕರ

ಮೀಸಲಾತಿ ನೀತಿಯ ಶವಪೆಟ್ಟಿಗೆ ಮೇಲೆ ಕೊನೆಯ ಮೊಳೆ

ವೈಜ್ಞಾನಿಕ ಅಥವಾ ತಾಂತ್ರಿಕ ಎಂದು ವರ್ಗೀಕೃತಗೊಂಡ ಹುದ್ದೆಗಳನ್ನು ಮೀಸಲಾತಿ ಪರಿಧಿಯಿಂದ ಹೊರಗಿರಿಸುವುದು ಖಂಡಿತ ಆಕ್ಷೇಪಾರ್ಹವಾದ ವಿಷಯ. ಮೂಲಭೂತ ವಿಜ್ಞಾನ, ಮತ್ತು ತಾಂತ್ರಿಕತೆಯ ಅರ್ಹತೆ ಬಯಸುವ ಹುದ್ದೆಗಳು ಅಥವಾ ವಿಜ್ಞಾನ ವಿಷಯಗಳ ಜ್ಞಾನ ಅವಶ್ಯ ಕವಿರುವ ಹುದ್ದೆಗಳನ್ನು "ವೈಜ್ಞಾನಿಕ ಮತ್ತು ತಾಂತ್ರಿಕ ಹುದ್ದೆಗಳು" ಎಂದು ಮಸೂದೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಇದರರ್ಥ ಏನೆಂದರೆ, ಕನಿಷ್ಠ ವಿಜ್ಞಾನ ವಿಷಯಗಳಲ್ಲಿ ಬಿಎಸ್ಸಿ, ಬಿಕಾಂ, ಎಂಎಸ್ಸಿ, ಅನ್ವಯಿಕ ವಿಜ್ಞಾನ ವಿಷಯಗಳು ಎಂ.ಟೆಕ್, ಬಿ. ಟೆಕ್, ಇನ್ಯಾವುದೇ ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಅರ್ಹತೆ ಬಯಸುವ ಕೇಂದ್ರದ ೫೪ ಮಿನಿರತ್ನ ಸಂಸ್ಥೆಗಳು ಉದ್ದಿಮೆಗಳಲ್ಲಿ ವಾಸ್ತವವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಪ್ರವೇಶವಿರುವುದಿಲ್ಲ.

2008ರ ಡಿಸೆಂಬರ್ ತಿಂಗಳಲ್ಲಿ ರಾಜ್ಯಸಭೆಯಲ್ಲಿ ಅಂಗೀಕೃತವಾದ ಪ.ಜಾತಿ ಮತ್ತು ಪ.ಪಂಗಡಗಳ ಮಸೂದೆ-2008 (ಹುದ್ದೆಗಳು ಮತ್ತು ಸೇವೆಗಳಲ್ಲಿ ಮೀಸಲಾತಿ), ದಲಿತರು ಮತ್ತು ಆದಿವಾಸಿಗಳ ಅಭಿವೃದ್ಧಿ ಹಾಗೂ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದ ಸಂವಿಧಾನದ ಮೀಸಲಾತಿ ನೀತಿಯ ಆಶಯಕ್ಕೆ ತಣ್ಣೀರೆರಚುವಂತಿದೆ.

ಸದನದಲ್ಲಿ ಯಾವುದೇ ರೀತಿಯ ಚರ್ಚೆಗೊಳಗಾಗದೆ ಕೇವಲ ಎರಡು ನಿಮಿಷಗಳಲ್ಲಿ ಮಸೂದೆಯನ್ನು ಕೇಂದ್ರ ಸರ್ಕಾರ ಅಂಗೀಕರಿಸಿದೆ. 2008ರ ಡಿಸೆಂಬರ್ ತಿಂಗಳಿನಲ್ಲಿ ನಡೆದ ಅಧಿವೇಶನದಲ್ಲಿ ಇದೇ ರೀತಿ ಹಲವು ಮಸೂದೆಗಳು ಯಾವುದೇ ಚರ್ಚೆಗಳಿಲ್ಲದೆ ಅಂಗೀಕರಿಸಲ್ಪಟ್ಟವು.

47ಸರ್ಕಾರಿ ಶಿಕ್ಷಣ ಸಂಸ್ಥೆಗಳು ಮೀಸಲಾತಿ ನೀತಿಯ ಪ್ರಯೋಜನದಿಂದ ವಂಚಿತವಾಗುವ ಆತಂಕಕಾರಿ ಅಂಶ ಈ ಮಸೂದೆಯಲ್ಲಿದೆ. ಐಐಟಿ, ಐಐಎಂ, ಏಮ್ಸ್, ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು, ರಾಷ್ಟ್ರೀಯ ತಾಂತ್ರಿಕ ಸಂಸ್ಥೆಗಳು ಮತ್ತು ಐದು ಕೇಂದ್ರಿಯ ವಿವಿಗಳು ಈ ಪಟ್ಟಿಗೆ ಸೇರುತ್ತವೆ. 45 ದಿನಗಳಿಗಿಂತ ಕಡಿಮೆ ಅವಧಿಯ ನೇಮಕಾತಿ; ತುರ್ತು ಪರಿಹಾರ ಕಾರ್ಯ ಸಂಬಂಧಿತ ನೇಮಕಾತಿ; 'ವೈಜ್ಞಾನಿಕ' ಮತ್ತು 'ತಾಂತ್ರಿಕ' ಹುದ್ದೆಗಳಿಗೆ ನೇಮಕಾತಿ; 'ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಶಿಕ್ಷಣ ಸಂಸ್ಥೆ'ಗಳಲ್ಲಿನ ಹುದ್ದೆಗಳ ನೇಮಕಾತಿ; ಹಾಗೂ ಐಐಎಂಗಳಲ್ಲಿನ ನೇಮಕಾತಿ ಪ್ರಕ್ರಿಯೆಗೆ ಮೀಸಲಾತಿ ನೀತಿ ಅನ್ವಯವಾಗುವುದಿಲ್ಲ ಎಂಬ ಅಂಶ ಮಸೂದೆಯ 4(1)ನೇ ವಿಧಿಯಲ್ಲಿದೆ. ಕೆಳಮಟ್ಟದ ವರ್ಗ 'ಎ' ಹುದ್ದೆಗಳಿಗಿಂತ ಮೇಲ್ಪಟ್ಟ ಹುದ್ದೆಗಳಿಗೆ ಈ ನಿಬಂಧನೆ ಅನ್ವಯವಾಗುತ್ತದೆ. ಮಸೂದೆಯಲ್ಲಿನ ಪಟ್ಟಿ ಪ್ರಸ್ತುತ 47 ಶಿಕ್ಷಣ ಸಂಸ್ಥೆಗಳನ್ನು ಹೊಂದಿದ್ದು, ಸರ್ಕಾರ ಯಾವುದೇ ಕ್ಷಣದಲ್ಲಿ ಸಂಸತ್ತಿನ ಒಪ್ಪಿಗೆ ಪಡೆಯದೆ ಹೆಚ್ಚುವರಿ ಶಿಕ್ಷಣ ಸಂಸ್ಥೆಗಳನ್ನು ಪಟ್ಟಿಗೆ ಸೇರ್ಪಡೆ ಮಾಡಬಹುದು! "ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಶಿಕ್ಷಣ ಸಂಸ್ಥೆಗಳು" ಎಂಬ ಪರಿಕಲ್ಪನೆ ಇದುವರೆಗೆ ಅಸ್ತಿತ್ವದಲ್ಲಿರಲೇ ಇಲ್ಲ; ಇದು ಕಾಂಗ್ರೆಸ್ ಪಕ್ಷದ ಸೃಷ್ಟಿ.

"ವೈಜ್ಞಾನಿಕ ಅಥವಾ ತಾಂತ್ರಿಕ" ಎಂದು ವರ್ಗೀಕೃತಗೊಂಡ ಹುದ್ದೆಗಳನ್ನು ಮೀಸಲಾತಿ ನೀತಿಯ ಪರಿಧಿಯಿಂದ ಹೊರಗಿರಿಸುವುದು ಖಂಡಿತ ಆಕ್ಷೇಪಾರ್ಹವಾದ ವಿಷಯ. ಮೂಲಭೂತ ವಿಜ್ಞಾನ, ಅನ್ವಯಿಕ ವಿಜ್ಞಾನ ಮತ್ತು ತಾಂತ್ರಿಕತೆಯ ಅರ್ಹತೆ ಬಯಸುವ ಹುದ್ದೆಗಳು ಅಥವಾ ವಿಜ್ಞಾನ ವಿಷಯಗಳ ಜ್ಞಾನ ಅವಶ್ಯಕವಿರುವ ಹುದ್ದೆಗಳನ್ನು "ವೈಜ್ಞಾನಿಕ ಮತ್ತು ತಾಂತ್ರಿಕ ಹುದ್ದೆಗಳು" ಎಂದು ಮಸೂದೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಇದರರ್ಥ ಏನೆಂದರೆ, ಕನಿಷ್ಠ ವಿಜ್ಞಾನ ವಿಷಯಗಳಲ್ಲಿ ಬಿಎಸ್ಸಿ ಅಥವಾ ಎಂಎಸ್ಸಿ ಅಥವಾ ಅನ್ವಯಿಕ ವಿಜ್ಞಾನ ವಿಷಯಗಳಾದ ಮೈಕ್ರೋಬಯಾಲಜಿ, ಎಂಬಿಬಿಎಸ್, ಬಿ. ಟೆಕ್, ಎಂ. ಟೆಕ್, ಅಥವಾ ಇನ್ಯಾವುದೇ ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಅರ್ಹತೆ ಬಯಸುವ ಕೇಂದ್ರದ 54 ಮಿನಿ-ರತ್ನ ಸಂಸ್ಥೆಗಳು ಅಥವಾ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ವಾಸ್ತವವಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರವೇಶವಿರುವುದಿಲ್ಲ.

ಪ.ಜಾತಿ ಮತ್ತು ಪ.ಪಂಗಡಗಳಿಗೆ ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು 47 ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಪರೋಕ್ಷವಾಗಿ ಪ್ರವೇಶ ನಿರಾಕರಿಸುವ ಮೂಲಕ ಮಸೂದೆ, ಪರಿಶಿಷ್ಟರು ಯಾವುದೇ ಹುದ್ದೆ ನಿರ್ವಹಿಸಲು "ಅನರ್ಹ"ರೆಂದು ಘೋಷಿಸಲೂಬ

ಮೂಲ: ಡಿ. ರಾಜಾ
ಕನ್ನಡಕ್ಕೆ:
ಸತ್ಯಪ್ರಕಾಶ್ ಎಂ ಆರ್

ಹುದು. ಮಸೂದೆಯ 9ನೇ ವಿಧಿ ಮೂರು ರೀತಿಯ ಅರ್ಹತೆಯನ್ನು ನಿಗದಿಪಡಿಸುವ ಅಧಿಕಾರವನ್ನು ನೇಮಕಾತಿ ಪ್ರಾಧಿಕಾರಕ್ಕೆ ನೀಡುತ್ತದೆ:(1)ಮೂಲಭೂತ ಅರ್ಹತೆ: ವಿಜ್ಞಾನ ಅಥವಾ ಮಾನವಿಕ ವಿಷಯಗಳಲ್ಲಿ ಕನಿಷ್ಠ ಪದವಿ. (2) ಅವಶ್ಯಕ ಅರ್ಹತೆ: ವೃತ್ತಿ ಸಂಬಂಧಿತ ಅನುಭವ. (3)ಸೂಕ್ತ ಅರ್ಹತೆ. ಅಭ್ಯರ್ಥಿ ಯಾವುದೇ ಹುದ್ದೆಗೆ ಕನಿಷ್ಠ ಅರ್ಹತೆ ಹೊಂದಿದ್ದರೆ ಸಾಕು. ಶಾಸನಾತ್ಮಕವಾಗಿ ಹುದ್ದೆಗೆ "ಸೂಕ್ತ ಅರ್ಹತೆ" ಎಂಬ ಪರಿಕಲ್ಪನೆಗೆ ಅವಕಾಶವೇ ಇಲ್ಲ.

ಓರ್ವ ಅಭ್ಯರ್ಥಿ ಈ ಮೂರು ರೀತಿಯ ಅರ್ಹತೆಗಳನ್ನು ಹೊಂದಿದ್ದರೂ ಕೂಡ ಒಂದು ನಿರ್ದಿಷ್ಟ ಹುದ್ದೆಗೆ ಆತನನ್ನು "ಅನರ್ಹ" ಎಂದು ನಿರ್ಧರಿಸಬಹುದಾದ ಅಪಾಯಕಾರಿ ಅಂಶ ಈ ಮಸೂದೆಯಲ್ಲಿದೆ. ಮಸೂದೆಗೆ 9ನೇ ವಿಧಿಯನ್ನು ಸೇರಿಸುವ ಮೂಲಕ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಪ.ಜಾತಿ-ಪ.ಪಂಗಡಗಳ ಮೀಸಲಾತಿ ಅವಕಾಶಗಳ ಶವಪೆಟ್ಟಿಗೆಗೆ ಕೊನೆಯ ಮೊಳೆ ಹೊಡೆದಿದೆ.

ಮಸೂದೆಯ 18ನೇ ವಿಧಿ ಪ.ಜಾತಿ ಮತ್ತು ಪ.ಪಂಗಡಗಳಿಗೆ ಮೀಸಲಾತಿಯನ್ನು ನಿರಾಕರಿಸುವ ಪರವಾನಗಿಯನ್ನು ಆಡಳಿತಶಾಹಿಗೆ ನೀಡಿದೆ. ಮೀಸಲಾತಿ ನೀತಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿದ್ದರೆ ಇಲಾಖೆಯ ಮಟ್ಟದಲ್ಲಿ ಶಿಸ್ತುಕ್ರಮವನ್ನು ಜರುಗಿಸಬಹುದೇ ಹೊರತು ಇನ್ನಾವ ರೀತಿಯಲ್ಲಿಯೂ ಈ ಅಧಿಕಾರಿಗಳು ಶಿಕ್ಷಾರ್ಹರಲ್ಲ. ಇಲಾಖೆಯ ಮಟ್ಟದಲ್ಲಿ ಕ್ರಮ ಕೈಗೊಳ್ಳಲು ಕೂಡ ಮೀಸಲಾತಿ ನಿರಾಕರಣೆ "ಉದ್ದೇಶಪೂರ್ವಕವಾದುದು" ಎಂಬ ಬಗ್ಗೆ ಪುರಾವೆ ಇರಬೇಕು. ಮೀಸಲಾತಿ ನಿಯಮ ಉಲ್ಲಂಘನೆಗಾಗಿ ಯಾವುದೇ ಅಧಿಕಾರಿಯನ್ನು ಶಿಕ್ಷಿಸಿರುವ ನಿದರ್ಶನ ಇದುವರೆವಿಗೂ ಇಲ್ಲ.

ಅಪಾಯಕಾರಿ ಮಸೂದೆ

2004ರ ಮೇ ತಿಂಗಳಲ್ಲಿ ಯುಪಿಎ ಅಳವಡಿಸಿಕೊಂಡ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ತರುವ ನಿಟ್ಟಿನಲ್ಲಿ ಕಾಯ್ದೆ ರಚನೆಯ ಬಗ್ಗೆ ವಿವರ ಒಳಗೊಂಡಿತ್ತು. ಆದರೆ ಕಳೆದ ಐದು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡುವ ಕುರಿತ ಚರ್ಚೆಯನ್ನು ಬಹುತೇಕ ಕೊಂದು ಹಾಕಿದೆ. ಅಣು ಒಪ್ಪಂದದ ಬಳಿಕ ಅವಿಶ್ವಾಸ ನಿರ್ಣಯದಲ್ಲಿ ಗೆಲುವು ಸಾಧಿಸಿದ ಭರದಲ್ಲಿ ಈ ಮಸೂದೆಯನ್ನು ಸರ್ಕಾರ ಅಂಗೀಕರಿಸಿದಂತಿದೆ. ಹೀಗೆ, ಸರ್ಕಾರ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ನೀಡಿದ ಭರವಸೆಯನ್ನು ತಾನೇ ಮುರಿದಿದೆ.

2004ರ ಡಿಸೆಂಬರ್ ತಿಂಗಳಲ್ಲಿ ಪ.ಜಾತಿ, ಪ.ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ಹುದ್ದೆಗಳು ಮತ್ತು ಸೇವೆಯಲ್ಲಿನ ಮೀಸಲಾತಿ) ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸುವುದಾಗಿ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ದಾಖಲಿಸಲಾಗಿದೆ. ಸದರಿ ಮಸೂದೆಯನ್ನು ಸಿಬ್ಬಂದಿ ಇಲಾಖೆಯ ಸದನದ ಸ್ಥಾಯಿಸಮಿತಿಯ ಪರಾಮರ್ಶೆಗೆ ಕಳುಹಿಸಲಾಯಿತು. ಸಮಿತಿ ಈ ಸಂಬಂಧ 2005ರ ಜೂನ್ ತಿಂಗಳಲ್ಲಿ ವರದಿ ನೀಡಿತು. ಮೀಸಲಾತಿ ನೀತಿಯನ್ನು ಪಾಲಿಸದ ಅಧಿಕಾರಿಗಳಿಗೆ (ಮೂರು ವರ್ಷ ಸೆರೆವಾಸ ಅಥವಾ 50,000ರೂ.ದಂಡ ಅಥವಾ ಎರಡೂ) ಶಿಕ್ಷೆ ವಿಧಿಸಬೇಕು ಹಾಗೂ "ಅನರ್ಹ" ಎಂಬ ಪರಿಕಲ್ಪನೆಯನ್ನು ಮಸೂದೆಯಿಂದ ತೆಗೆದುಹಾಕಬೇಕು ಎಂಬ ಶಿಫಾರಸ್ಸುಗಳನ್ನು ಸಮಿತಿ ಮಾಡಿತು. ಅಂದಿನ ಮಸೂದೆ ಕರಡು ಪ್ರತಿಯಲ್ಲಿ 4(1)ನೇ ವಿಧಿಯಲ್ಲಿ 47ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳು, ಸಾರ್ವಜನಿಕ ವಲಯದ ಉದ್ಯಮಗಳಲ್ಲಿನ ಹುದ್ದೆಗಳು ಮತ್ತು 'ವೈಜ್ಞಾನಿಕ-ತಾಂತ್ರಿಕ' ಹುದ್ದೆಗಳನ್ನು ಪ.ಜಾತಿ ಮತ್ತು ಪ.ಪಂಗಡಗಳಿಂದ ದೂರವಿಡುವ ಮೀಸಲಾತಿ-ವಿರೋಧಿ ಅಂಶವಿರಲಿಲ್ಲ.

ಸಮಿತಿಯ ವರದಿಯನ್ನು ಪಕ್ಕಕ್ಕಿಟ್ಟ ಸರ್ಕಾರ, ಮಸೂದೆಯನ್ನು ಪುನರ್ರಚಿಸಿ, ಓಬಿಸಿಗಳನ್ನು ತನ್ನ ವ್ಯಾಪ್ತಿಯಿಂದ ಕೈಬಿಟ್ಟಿತು. ಹೀಗೆ ಮಾಡುವಾಗ ಸರ್ಕಾರ ಸಂಬಂಧಪಟ್ಟ ಇಲಾಖೆಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲಿಲ್ಲ. ಮೀಸಲಾತಿ ವಿರೋಧಿ ಅಂಶವನ್ನು ಮಸೂದೆಗೆ ಸೇರಿಸಿ, 2008ರಲ್ಲಿ ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ಇನ್ನು ಓಬಿಸಿಗಳಿಗೆ ಸಂಬಂಧಪಟ್ಟ ಪ್ರತ್ಯೇಕವಾದ ಮಸೂದೆ ಇನ್ನೂ ಬೆಳಕು ಕಾಣಬೇಕಿದೆ.

ಸಮಿತಿಯ ವರದಿಯನ್ನು ಪಕ್ಕಕ್ಕಿಟ್ಟ ಸರ್ಕಾರ, ಮಸೂದೆಯನ್ನು ಪುನರ್ರಚಿಸಿ, ಓಬಿಸಿಗಳನ್ನು ತನ್ನ ವ್ಯಾಪ್ತಿಯಿಂದ ಕೈಬಿಟ್ಟಿತು. ಹೀಗೆ ಮಾಡುವಾಗ ಸರ್ಕಾರ ಸಂಬಂಧಪಟ್ಟ ಇಲಾಖೆಗಳನ್ನು ಕೂಡ ಗಣನೆಗೆ ತೆಗೆದುಕೊಳ್ಳಲಿಲ್ಲ. ಮೀಸಲಾತಿ-ವಿರೋಧಿ ಅಂಶವನ್ನು ಮಸೂದೆಗೆ ಸೇರಿಸಿ, 2008ರಲ್ಲಿ ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ಇನ್ನು ಓಬಿಸಿಗಳಿಗೆ ಸಂಬಂಧಪಟ್ಟ ಪ್ರತ್ಯೇಕವಾದ ಮಸೂದೆ ಇನ್ನೂ ಬೆಳಕು ಕಾಣಬೇಕಿದೆ.

ಖಾಸಗಿ ವಲಯದ ಹುದ್ದೆಗಳಲ್ಲಿ ಮೀಸಲಾತಿ ಹಾಗೂ ಆತ್ಮಗೌರವ ಮತ್ತು ಸರ್ಕಾರಿ ವಲಯದ ವರ್ಗ 1ರ ಹುದ್ದೆಗಳಲ್ಲಿ(ಸರ್ಕಾರದ ಕಾರ್ಯದರ್ಶಿಗಳ ಹುದ್ದೆಗಳು ಸೇರಿದಂತೆ)ನ ಮೀಸಲಾತಿಗಾಗಿ ಪ.ಜಾತಿ ಮತ್ತು ಪ.ಪಂಗಡಗಳು ಇನ್ನೂ ಹೋರಾಡುತ್ತಲೇ ಇವೆ. ವಿವಿಗಳ ಪ್ರವಾಚಕರು ಹಾಗೂ ಪ್ರಾಧ್ಯಾಪಕರ ಹುದ್ದೆಗಳಿಗೆ ಮೀಸಲಾತಿ ನೀತಿ ಅನ್ವಯಿಸುವ ಬಗ್ಗೆ ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ 2008ರಲ್ಲಿ ನಿರ್ದೇಶನ ನೀಡಿತ್ತು- ಈಗ ಈ ಮಸೂದೆ ಆ ನಿರ್ದೇಶನಕ್ಕೆ ತಿಲಾಂಜಲಿ ಇಟ್ಟಿದೆ. ವೈಜ್ಞಾನಿಕ ಮತ್ತು ತಾಂತ್ರಿಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕೇಂದ್ರ ಲೋಕಸೇವಾ ಆಯೋಗದ ಸಲಹೆ ಪಡೆಯುವುದನ್ನು ಕೂಡ ಸರ್ಕಾರ ನಿಲ್ಲಿಸಿಬಿಟ್ಟಿದೆ.

21ನೇ ಶತಮಾನದಲ್ಲಿ ದಲಿತರು ಮತ್ತು ಆದಿವಾಸಿಗಳಿಗೆ ಎಲ್ಲ ವಲಯಗಳಲ್ಲಿ ಹಾಗೂ ಎಲ್ಲ ಹಂತಗಳಲ್ಲಿ ಸೂಕ್ತ ಪ್ರಾತಿನಿಧ್ಯತೆ ದೊರಕಿಸಿಕೊಡಲು ದಲಿತ ಮತ್ತು ಪ್ರಜಾತಂತ್ರ ಚಳವಳಿಗಳು ಶ್ರಮಿಸುತ್ತಿವೆ. ಆದರೆ ಸರ್ಕಾರ ಈ ಮಸೂದೆಯ ಮೂಲಕ ಸಂವಿಧಾನದ ಕರ್ತೃಗಳ ಆಶಯ, ಹಾಗೂ ಡಾ. ಬಿ. ಆರ್. ಅಂಬೇಡ್ಕರರ ಐತಿಹಾಸಿಕ ಪ್ರಯತ್ನಗಳಿಗೆ ತಿಲಾಂಜಲಿಯಿಟ್ಟಿದೆ.

ಮಸೂದೆಯನ್ನು ಲೋಕಸಭೆಯಲ್ಲಿ ಚರ್ಚೆಗೊಳಪಡಿಸಿ 4 (1)ನೇ ವಿಧಿ, 9ನೇ ವಿಧಿ ಹಾಗೂ 18ನೇ ವಿಧಿಗಳಲ್ಲಿರುವ ಮೀಸಲಾತಿ ವಿರೋಧಿ ಧೋರಣೆಯನ್ನು ಕೈಬಿಟ್ಟು ಸಂವಿಧಾನದ ಮೂಲ ಆಶಯವನ್ನು ಎತ್ತಿಹಿಡಿಯುವ ದಿನ ಬರಲಿದೆಯೇ? □

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಮಾರುಕಟ್ಟೆಗೋಸ್ಕರ ಆಸ್ಕರ್!?

ನಿಲ್(ಪೈಸೆ..)ವಾಲೆ(ಹಾಲಿವುಡ್) ದುಲ್ಹನಿಯಾ(ಬಾಲಿವುಡ್)ಲೇ ಜಾಯೇಂಗೇ

ಎಲ್ಲರ ನಿರೀಕ್ಷೆಯಂತೆ ಮತ್ತು ಅಂತರರಾಷ್ಟ್ರೀಯ ಸಿನಿಮಾ ಮಲ್ಟಿನ್ಯಾಷನಲ್‌ಗಳ ಪೂರ್ವ ನಿರ್ಧಾರದಂತೆ ಈ ವರ್ಷ 'ಸ್ಲಂ ಡಾಗ್ ಮಿಲಿಯನೀರ್' ಚಿತ್ರಕ್ಕೆ ಎಂಟು ಆಸ್ಕರ್ ಪ್ರಶಸ್ತಿಗಳು ದಕ್ಕಿವೆ. ಅಥವಾ ಪಡೆದುಕೊಳ್ಳಲಾಗಿದೆ..? (ಈ 'ದಕ್ಕಿದೆ' ಅಥವಾ 'ಪಡೆದು ಕೊಳ್ಳಲಾಗಿದ' ಎಂಬುದರ ನಡುವಿನ ವ್ಯತ್ಯಾಸ ಕೇವಲ ಪದಗಳ ವ್ಯತ್ಯಾಸವಲ್ಲ. ಅವುಗಳ ಹಿಂದೆ ದೊಡ್ಡ ಅರ್ಥ ವ್ಯತ್ಯಾಸಗಳೂ ಇವೆ. ಉದಾಹರಣೆಗೆ ಮೊನ್ನೆ ಸಭೆಯೊಂದರಲ್ಲಿ ಚಿಂತಕ-ಹೋರಾಟಗಾರ ವಿಠಲ್ ಹೆಗಡೆಯವರು ಈ ದೇಶದ ಸ್ವಾತಂತ್ರವನ್ನು ನಾವು ಪಡೆದು ಕೊಂಡಿದ್ದೋ, ಬ್ರೀಟಿಷರು ಕೊಟ್ಟಿದ್ದೋ, ಅಥವಾ ಹೋರಾಡಿಗಳಿಸಿದ್ದೋ ಎಂಬ ಜಿಜ್ಞಾಸೆಯನ್ನು ಎತ್ತಿದ್ದರು. ಈ ಪದ ವ್ಯತ್ಯಾಸಗಳು ಹೇಗೆ ಒಂದು ಐತಿಹಾಸಿಕ ಪ್ರಕ್ರಿಯೆಯನ್ನೇ ತಪ್ಪಾಗಿ ವ್ಯಾಖ್ಯಾನಿಸಿ ತಪ್ಪು ಇತಿಹಾಸವನ್ನು ಬಿತ್ತಬಲ್ಲವು ಎಂಬುದನ್ನು ಸೂಚಿಸುತ್ತದೆ. ಕೊಡುವುದರ ರಾಜಕಾರಣಕ್ಕೂ ಗಳಿಸುವುದರ ರಾಜಕಾರಣಕ್ಕೂ ಅಜಗಜಾಂತರ ವ್ಯತ್ಯಾಸವಿರುತ್ತದೆ. ಅಲ್ಲವೇ?) ಅದೇನೇ ಇರಲಿ ಈ ಬಾರಿಯ ಆಸ್ಕರ್ ಪ್ರಶಸ್ತಿಯನ್ನು ಸ್ಲಂ ಡಾಗ್ ಮಿಲಿಯನೇರ್‌ಗೆ ಕೊಡಲಾಗಿದ್ದರೂ, ಅಥವಾ ಅದೇ ಗಳಿಸಿಕೊಂಡಿದ್ದರೂ, ಭಾರತದ ಅಪ್ರತಿಮ ಸಂಗೀತಗಾರ ಎ.ಆರ್. ರಹಮಾನ್‌ಗೂ, ಅದೇ ಚಿತ್ರದ ಧ್ವನಿ ಸಂಯೋಜನೆಗೆ ರಸೂಲ್ ಪೂಕುಟ್ಟಿಗೂ, ಹಾಡು ಬರೆದ ಗುಲ್ಜಾರ್‌ಗೂ ಆಸ್ಕರ್ ಪ್ರಶಸ್ತಿ ಸಿಕ್ಕಿರುವುದು ಇಡೀ ಭಾರತೀಯರನ್ನು ಸಂತಸದಲ್ಲಿ ತೇಲಾಡುವಂತೆ ಮಾಡಿದೆ.

ಪ್ರಶಸ್ತಿ ಪಡೆದ ರಹಮಾನ್ "ಆಸ್ಕರ್ ಪಡೆದ ನನ್ನ ಈ ಯಶಸ್ಸು ದ್ವೇಷದ ಬದಲಿಗೆ ಪ್ರೀತಿಯನ್ನೇ ಆಯ್ಕೆ ಮಾಡಿಕೊಂಡ ನನ್ನ ಆಯ್ಕೆಗೆ ಸಮರ್ಪಿತ" ಎಂದು ಹೇಳುತ್ತಾ ಸಾಮಾಜಿಕ ದ್ವೇಷವೇ ತುಂಬಿರುವ ಭಾರತದ ಸಂದರ್ಭದಲ್ಲಿ ಅಪಾರ ಮಾನವ ಪ್ರೀತಿಯ ಸಂದೇಶ ಕೊಟ್ಟರೇ ರಸೂಲ್ ಪೂಕುಟ್ಟಿ ತನ್ನ ಪ್ರಶಸ್ತಿಯನ್ನು ಭಾರತ ದೇಶಕ್ಕೆ ಅರ್ಪಿಸಿ ದೇಶಪ್ರೇಮ ಮೆರೆದರು. ಅಷ್ಟು ಮಾತ್ರವಲ್ಲ ತನ್ನ ದೇಶದಲ್ಲಿ ಪ್ರೀತಿ ತಾಳ್ಮೆಗೆ ಪ್ರತಿರೂಪವಾಗಿರುವ 'ಓಂ' ಕಾರವನ್ನು ನೆನಪಿಸಿಕೊಂಡರು. ಸ್ಲಂ ಡಾಗ್ ಕಥೆಯ ಪಾತ್ರಧಾರಿಗಳು, ಆಸ್ಕರ್ ಪಡೆದ ತಂತ್ರಜ್ಞರು ಎಲ್ಲರೂ ಮುಸ್ಲಿಮರೇ ಆಗಿರುವುದರಿಂದಲೇ ಏನೋ ದೇಶ ಭಕ್ತಿಯ ಚಿಲ್ಲರೆ ಕಾಂಟ್ರಾಕ್ಟ್‌ದಾರರಾದ ಸಂಘ ಪರಿವಾರದವರು, ಭಾರತೀಯರು ಆಸ್ಕರ್ ಪಡೆದ ಬಗ್ಗೆ ಈವರೆಗೆ ಕಿಂಚಿತ್ತೂ ಹೆಮ್ಮೆಯನ್ನು ವ್ಯಕ್ತಪಡಿಸಿಲ್ಲ. ನಾಯಿ ಬೊಗಳಿದರೂ, ಬೊಗಳದಿದ್ದರೂ ದೇವಲೋಕ ಹಾಳಿಲ್ಲ ಎಂಬ ಗಾದೆ ಇರುವುದೇ ಇಂತವರಿಗಾಗಿ. ಅದಿರಲಿ.

ಈ ಪೊಳ್ಳು ದೇಶಾಭಿಮಾನಿಗಳ ಹೊಟ್ಟೆ ಸಂಕಟ ಅರ್ಥವಾಗುವಂತದ್ದೇ ಆದರೂ ಸ್ಲಂ ಡಾಗ್ ಬಗ್ಗೆ ಇತರ ಅಪಸ್ವರಗಳು ಬಂದಿವೆ. ಈ ಚಿತ್ರದ ಶೀರ್ಷಿಕೆಯಲ್ಲಿ ಸ್ಲಂ ಜನರನ್ನು ಡಾಗ್ ಎಂದು ಬೈದಿದ್ದಾರೆ

ಪ್ರಶಸ್ತಿ ಪಡೆದ ರಹಮಾನ್ "ಆಸ್ಕರ್ ಪಡೆದ ನನ್ನ ಈ ಯಶಸ್ಸು ದ್ವೇಷದ ಬದಲಿಗೆ ಪ್ರೀತಿಯನ್ನೇ ಆಯ್ಕೆ ಮಾಡಿಕೊಂಡ ನನ್ನ ಆಯ್ಕೆಗೆ ಸಮರ್ಪಿತ" ಎಂದು ಹೇಳುತ್ತಾ ಸಾಮಾಜಿಕ ದ್ವೇಷವೇ ತುಂಬಿರುವ ಭಾರತದ ಸಂದರ್ಭದಲ್ಲಿ ಅಪಾರ ಮಾನವ ಪ್ರೀತಿಯ ಸಂದೇಶ ಕೊಟ್ಟರೇ, ರಸೂಲ್ ಪೂಕುಟ್ಟಿ ತನ್ನ ಪ್ರಶಸ್ತಿಯನ್ನು ಭಾರತ ದೇಶಕ್ಕೆ ಅರ್ಪಿಸಿ ತನ್ನ ದೇಶದಲ್ಲಿ ಪ್ರೀತಿ ತಾಳ್ಮೆಗೆ ಪ್ರತಿರೂಪವಾಗಿರುವ 'ಓಂ' ಕಾರವನ್ನು ನೆನಪಿಸಿಕೊಂಡರು. ಸ್ಲಂ ಡಾಗ್ ಕಥೆಯ ಪಾತ್ರಧಾರಿಗಳು, ಆಸ್ಕರ್ ಪಡೆದ ಎಲ್ಲರೂ ಮುಸ್ಲಿಮರೇ ಆಗಿರುವುದರಿಂದಲೇ ಏನೋ ದೇಶ ಭಕ್ತಿಯ ಚಿಲ್ಲರೆ ಕಾಂಟ್ರಾಕ್ಟ್‌ದಾರರಾದ ಸಂಘಪರಿವಾರದವರು, ಭಾರತೀಯರು ಆಸ್ಕರ್ ಪಡೆದ ಬಗ್ಗೆ ಈವರೆಗೆ ಕಿಂಚಿತ್ತೂ ಹೆಮ್ಮೆಯನ್ನು ವ್ಯಕ್ತಪಡಿಸಿಲ್ಲ.

ಶಿವಸುಂದರ್

ಎಂಬ ಇಂಗ್ಲೀಷ ಕುಪಂಡಿತರ ತಗಾದೆಯಿಂದ ಪ್ರಾರಂಭ ಗೊಂಡು ನಿಜಕ್ಕೂ ಈ ಚಿತ್ರಕ್ಕೆ ಆಸ್ಕರ್ ಪಡೆಯುವ ಅರ್ಹತೆ ಇತ್ತೇ ಎಂಬವರೆಗೆ ಈ ತಕರಾರುಗಳು ಹರಡಿ ಕೊಂಡಿವೆ. ಅವುಗಳಲ್ಲಿ ಕೆಲವು ಸಂಘಪರಿವಾರದ ಕರ್ಕಷ ಗೀತೆಗಳ ಅನುಪಲ್ಲವಿಗಳಂತಿದ್ದರೆ ಕೆಲವು ವಸಾಹತೋತ್ತರ ಸಂದರ್ಭದ ಸಾಂಸ್ಕೃತಿಕ ರಾಜಕಾರಣದ ಪ್ರಶ್ನೆಗಳನ್ನೂ ಎತ್ತುತ್ತಿವೆ.

'ಸ್ಲಂ ಡಾಗ್' ಚಿತ್ರ ಭಾರತದ ಕೆಲವು ನ್ಯೂನತೆಗಳನ್ನು ಅಂತರರಾಷ್ಟ್ರಿಯ ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಚಿತ್ರಿಸಿ ಭಾರತದ ಮರ್ಯಾದೆ ತೆಗೆಯುತ್ತಿದೆ ಎಂಬುದು ಕೆಲವರ ತಗಾದೆ. ಇವರುಗಳ ಪ್ರಕಾರ ಈ ದೇಶದ ಬಡತನ, ಜಾತೀಯತೆ ಕೇವಲ ಕೆಲವು ನ್ಯೂನತೆಗಳು ಅಷ್ಟೆ. ಅದನ್ನು ಜಗತ್ತಿಗೆ ತೋರಿಸುವುದು ದೇಶದ್ರೋಹ. ಇವರು ಶೈನಿಂಗ್ ಇಂಡಿಯಾ ಎಂಬ ಅಗ್ರಹಾರದಲ್ಲಿರುವ ಕುಲೀನರು ಮತ್ತು ಸಂಘಪರಿವಾರದ ಗುಪ್ತ ಪ್ರಚಾರಕರು. ಈ ಮಹನೀಯರೇ ಡರ್ಬಾನ್‌ನಲ್ಲಿ ಜನಾಂಗೀಯ ದಮನದ ಬಗ್ಗೆ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಈ ದೇಶದ ದಲಿತರ ಮೇಲೆ ಸವರ್ಣೀಯರು ಮಾಡುತ್ತಿರುವ ದೌರ್ಜನ್ಯದ ಬಗ್ಗೆ ಚರ್ಚೆ ಎತ್ತದಾರದೆಂದು ಫತ್ವಾ ಹೊರಡಿಸಿದವರು. ಅರವಿಂದ ಅಡಿಗರ 'ವೈಟ್ ಟೈಗರ್' ಪುಸ್ತಕಕ್ಕೆ ಬೂಕರ್ ಪ್ರಶಸ್ತಿ ಬಂದಾಗ ಮೂಗುಮುರಿದವರು. ಅಂದರೆ ಸಾರಾಂಶದಲ್ಲಿ ಈ ದೇಶದ ಕತ್ತಲಿನ ನಿಜವನ್ನು ಮುಚ್ಚಿಡಲು ಬಯಸುವ ಇರುಳ ಪಕ್ಷಪಾತಿಗಳು. ಹಗಲಿನ ದ್ವೇಷಿಗಳು. ಇದೀಗ ಮತ್ತೆ ಅವರೇ 'ಸ್ಲಂ ಡಾಗ್' ಚಿತ್ರದ ಬಗ್ಗೆ ಮತ್ತು ಅದಕ್ಕೆ ಆಸ್ಕರ್ ಬಂದ ಬಗ್ಗೆ ಅಸಹನೆಯನ್ನು ಬಚ್ಚಿಡಲಾಗದೆ ಕಾರಿಕೊಳ್ಳುತ್ತಿದ್ದಾರೆ. ಇವರ ಟೀಕೆಯ ಸಾರಾಂಶ ಮತ್ತು ಉದ್ದೇಶಗಳೆರಡೂ ಖಂಡನೀಯ.

ಆದರೆ 'ಸ್ಲಂ ಡಾಗ್'ಗೆ ಆಸ್ಕರ್ ಪ್ರಶಸ್ತಿ ಬಂದ ಬಗ್ಗೆ ಗಮನಿಸಲೇಬೇಕಾದ ಕೆಲವು ಗಂಭೀರ ಟೀಕೆಗಳು ಬಂದಿವೆ. ಅವು ಸಾರಾಂಶದಲ್ಲಿ ವಸಾಹತೋತ್ತರ ಸಂದರ್ಭದ ಸಾಂಸ್ಕೃತಿಕ ರಾಜಕಾರಣಕ್ಕೆ ಸಂಬಂಧಪಟ್ಟಿವೆ. ರಹಮಾನ್ ಅಪ್ರತಿಮ ಸಂಗೀತಗಾರನೆಂಬುದರಲ್ಲಿ ಎರಡು ಮಾತಿಲ್ಲ. ಅವರಿಗೆ ಆಸ್ಕರ್ ಪ್ರಶಸ್ತಿ ಎಂದೋ ಬಂದಿರಬೇಕಿತ್ತು. ಹಾಗೆ ನೋಡಿದಲ್ಲಿ 'ಸ್ಲಂ ಡಾಗ್'ನಲ್ಲಿ ಅವರು ಅಂತಹ ಅತ್ಯುತ್ತಮ ಸಂಗೀತ ವೇನೂ ನೀಡಿಲ್ಲ. ಅದೇ ರೀತಿ 'ಸ್ಲಂ ಡಾಗ್' ಅಂತಹ ಅತ್ಯುತ್ತಮ ಚಿತ್ರವೇನೂ ಅಲ್ಲ. ಹಿಂದಿಯನ್ನೂ ಒಳಗೊಂಡಂತೆ ಈ ದೇಶದ ಹಲವು ಭಾಷೆಗಳಲ್ಲಿ ಅದಕ್ಕಿಂತ ಅತ್ಯುತ್ತಮ ಚಿತ್ರಗಳು ಬಂದಿವೆ. ಬಾಲಿವುಡ್‌ನ ಹಲವು ಮಸಾಲ ಚಿತ್ರಗಳಿಗಿಂತ 'ಸ್ಲಂ ಡಾಗ್' ಭಿನ್ನವಾಗಿಯೇನೂ ಇಲ್ಲ. ಭಾರತೀಯ ನಿರ್ದೇಶಕರು 'ಸ್ಲಂ ಡಾಗ್'ಗಿಂತ ಅತ್ಯುತ್ತಮ ಚಿತ್ರ ಮಾಡಿದರೂ, ರಹಮಾನ್ ಇದಕ್ಕಿಂತ ಅತ್ಯುತ್ತಮ ಸಂಗೀತವನ್ನು ಹಿಂದಿ ಮತ್ತು ಇತರ ಭಾರತೀಯ ಚಿತ್ರಗಳಿಗೆ ನೀಡಿದ್ದರೂ ವಾರ್ನರ್ ಬ್ರದರ್ಸ್‌ನಂತ ಅಮೆರಿಕನ್ ಚಿತ್ರ ನಿರ್ಮಾಣ ಸಂಸ್ಥೆ ಮತ್ತು ಡ್ಯಾನಿ ಬೋಯಲ್‌ನಂತ ಬ್ರಿಟಿಷ್ ನಿರ್ದೇಶಕರ ಏಣಿಯಿಲ್ಲದೆ ಭಾರತೀಯ ಕಲಾವಿದರಿಗೆ ಆಸ್ಕರ್ ಮನ್ನಣೆ ಏಕೆ ಸಿಗುವುದಿಲ್ಲ? ಇದಕ್ಕೆ ಕಾರಣ ಆಸ್ಕರ್ ಮಾನದಂಡಗಳಲ್ಲಿ ಮತ್ತು ಆ ಪ್ರಶಸ್ತಿ ಪ್ರಕ್ರಿಯೆಗಳಲ್ಲೇ ಇರುವ ಜನಾಂಗೀಯ ತಾರ ತಮ್ಯವಲ್ಲವೇ? ಈ ಆಸ್ಕರ್ ಪ್ರಶಸ್ತಿಗಳ ಹಿಂದೆ ಒಂದು ಬಗೆಯ ಕಲಾಭಿರುಚಿಯನ್ನು ಮಾತ್ರ ಶ್ರೇಷ್ಠವೆಂದೂ ಉಳಿದದ್ದು ಕನಿಷ್ಠವೆಂದು ಪರಿಗಣಿಸುವ ಸಾಂಸ್ಕೃತಿಕ ರಾಜಕಾರಣವಿದೆ ಎಂಬುದು ಈ ಆಕ್ಷೇಪಣೆಗಳ ಸಾರಾಂಶ.

ಇದನ್ನು ಎಟುಕದ ದ್ರಾಕ್ಷಿ ಹುಳಿ ಎನ್ನುವವರ ಟೀಕೆ ಎನ್ನಲಾಗದು. ಈ ತಕರಾರಿನ ಹಿಂದೆ ಚಾರಿತ್ರಿಕವಾದ ಮತ್ತು ಸಮಕಾಲೀನವೂ ಆಗಿರುವ ಕೆಲವು ರಾಜಕೀಯ ಮತ್ತು ಸಾಂಸ್ಕೃತಿಕ ಸತ್ಯಗಳು ಅಡಗಿವೆ. 'ಸ್ಲಂ ಡಾಗ್'ನಲ್ಲಿರುವ ರಹಮಾನ್‌ರ 'ಜೈ ಹೋ' ಹಾಡು ಕುಣಿಸುತ್ತದೆ. ಆದರೆ ಅದು ಅವರು ರೋಜಾದಲ್ಲಿ ನೀಡಿದ ಅಥವಾ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡಿದ್ದ ಲಗಾನ್ ಚಿತ್ರದ ಸಂಗೀತಕ್ಕಿಂತ ಅದ್ಭುತವಾದದ್ದು ಎಂದು ಯಾವ ಮಾನದಂಡದಲ್ಲಿ ಹೇಳಲು ಸಾಧ್ಯ. ಆಸ್ಕರ್ ಪ್ರಶಸ್ತಿಯನ್ನು 'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆರ್ಟ್ಸ್ ಅಂಡ್ ಸೈನ್ಸ್‌ಸ್'ನ ೬೦೦೦ ಸದಸ್ಯರು ನೀಡುವ ಓಟಿನ ಆಧಾರದಲ್ಲಿ ನಿರ್ಧರಿಸಲಾಗುತ್ತದೆ. ಅಂದರೆ ಈ ೬೦೦೦ ಸದಸ್ಯರ ಸಾಂಸ್ಕೃತಿಕ ಅಭಿರುಚಿ ಮತ್ತು ಮಾನದಂಡಗಳೇ ಒಂದು ಚಿತ್ರದ ಜಾಗತಿಕ ಗುಣಮಟ್ಟವನ್ನು ನಿರ್ಧರಿಸುತ್ತದೆ ಎಂದಾಯ್ತು. ಆದರೆ ಜಗತ್ತು ಹಲವು ಸಂಸ್ಕೃತಿಗಳ ರಂಗಮಂಚ. ಭಾರತದಂತ ಒಂದೇ ದೇಶದಲ್ಲಿ ನೂರಾರು ಬಗೆಯ ಸಂಸ್ಕೃತಿಗಳಿವೆ. ಯಾವುದು ಉತ್ತಮ, ಯಾವುದು ಅಲ್ಲ ಎನ್ನುವುದರ ಬಗ್ಗೆ ಒಂದೊಂದು ಸಂಸ್ಕೃತಿಗೆ ಒಂದೊಂದು ಮಾನದಂಡಗಳಿರುತ್ತವೆ. ಉದಾಹರಣೆಗೆ ಯಾವುದು ಸುಂದರ ಎಂಬ ಬಗ್ಗೆ ಕಪ್ಪು ಜನರ ಅಭಿರುಚಿಗೂ, ಬಿಳಿಯರ ಅಭಿರುಚಿಗೂ ಭೂಮ್ಯಾಕಾಶದಷ್ಟು ವ್ಯತ್ಯಾಸಗಳಿರುತ್ತವೆ. ಹೀಗಿರುವಾಗ ಕಲಾಭಿರುಚಿಯಲ್ಲಿ ಶ್ರೇಷ್ಠ ಮತ್ತು ಕನಿಷ್ಟ ಎಂಬ ಮಾನದಂಡಗಳನ್ನು ಹೇರುವುದು ಯಾವಾಗಲೂ ಒಂದು ಸಂಸ್ಕೃತಿಯ ಮೇಲೆ ಇನ್ನೊಂದು ಸಂಸ್ಕೃತಿಯ ಆಕ್ರಮಣವೇ ಆಗಿರುತ್ತದೆ. ಅದರಲ್ಲೂ ಈ ಅಕಾಡೆಮಿಯ ೬೦೦೦ ಸದಸ್ಯರಲ್ಲಿ ಬಿಳಿಯೇತರ ಸದಸ್ಯರೆಷ್ಟು? ಭಾರತ, ಆಫ್ರಿಕಾ,ಲ್ಯಾಟಿನ್ ಅಮೆರಿಕಾದಂತ ಮೂರನೇ ಜಗತ್ತಿನ ದೇಶದ ಸದಸ್ಯರೆಷ್ಟು? ಅವರಿಲ್ಲದಿದ್ದರೂ ಇತರ ಸಂಸ್ಕೃತಿಗಳ ಮಾನದಂಡಗಳ ಬಗ್ಗೆ ಅವರಿಗಿರುವ ಅರಿವೆಷ್ಟು?

ಭಾರತೀಯರಿಗೆ ಆಸ್ಕರ್ ಪ್ರಶಸ್ತಿ ದಕ್ಕಿರುವ ಸಂಭ್ರಮದಲ್ಲಿ ಈ ಮೇಲಿನ ಪ್ರಶ್ನೆಗಳನ್ನು ಮರೆತುಬಿಡುವುದು ಆತ್ಮಘಾತುಕತನವೇ ಆಗುತ್ತದೆ. ಏಕೆಂದರೆ ಆ ಮೂಲಕ ಆಸ್ಕರ್ ಪ್ರಶಸ್ತಿ ಪಡೆದ ಚಿತ್ರದ ಸಂಗೀತ, ಕಥೆ, ಚಿತ್ರಕಥೆ ಇನ್ನಿತರ ಚಿತ್ರರಂಗದ ೧೫ ಕ್ಷೇತ್ರಗಳು ಸಾಧನೆಗಳು ಮಾತ್ರ ಅತ್ಯುತ್ತಮ ಮಿಕ್ಕವು ಅಲ್ಲ ಎಂಬ ಅಭಿಪ್ರಾಯಕ್ಕೆ ಇನ್ನಷ್ಟು ಮನ್ನಣೆ ಸಿಕ್ಕಿ ಬಿಡುತ್ತದೆ. ಆ ಬಗೆಯ ಅಭಿಪ್ರಾಯ ಮತ್ತೊಂದು ಬಗೆಯಲ್ಲಿ ನಮ್ಮಾ ಅಭಿರುಚಿಗಳನ್ನು ಸಾಂಸ್ಕೃತಿಕ ವಸಾಹತೀಕರಣಕ್ಕೆ ಗುರಿಪಡಿಸುತ್ತದೆ. ಆದ್ದರಿಂದ ಈ ಪ್ರಶ್ನೆಗಳನ್ನು ಗಂಭೀರವಾಗಿ ತೆಗೆದುಕೊಳ್ಳಲೇ ಬೇಕು.

ಸ್ಲಂ ಡಾಗ್ ಚಿತ್ರಕ್ಕೆ ಎಂಟು ಆಸ್ಕರ್ ಮಾತ್ರವಲ್ಲದೆ ಈವರೆಗೆ ಬೇರೆ ಬೇರೆ ದೇಶಗಳ ಒಟ್ಟು ೬೬ ಚಿತ್ರಪ್ರಶಸ್ತಿಗಳು ಸಿಕ್ಕಿವೆ. ಅದನ್ನು ತಯಾರಿಸಲು ವೆಚ್ಚವಾದದ್ದು ೧೫ ಮಿಲಿಯನ್ ಡಾಲರ್‌ಗಳು ಅಂದರೆ ೭೫ ಕೋಟಿ ರೂಪಾಯಿಗಳು! ಆದರೆ ಈಗಾಗಲೇ ಅದೇ ಗಳಿಸಿರುವ ಮೊತ್ತ ೧೭೫ ಮಿಲಿಯನ್ ಡಾಲರ್‌ಗಳು ಅಂದರೆ ೬೦೦ ಕೋಟಿ ರೂಪಾಯಿಗಳು! ಆಸ್ಕರ್ ಪ್ರಶಸ್ತಿ ಬಂದಕಾರಣದಿಂದಲೇ ಈ ಚಿತ್ರಕ್ಕೆ ಏನಿಲ್ಲವೆಂದರೂ ೧೦೦ ಮಿಲಿಯನ್ ಡಾಲರ್ ಅಂದರೆ ೫೦೦ ಕೋಟಿ ರೂಪಾಯಿಗಳಷ್ಟು ವ್ಯವಹಾರವಾಗುವ ನಿರೀಕ್ಷೆಯಿದೆ. ಅಂದರೆ ಆಸ್ಕರ್ ಪ್ರಶಸ್ತಿ ಬಂದರೆ ಹೂಡಿದ ಹಣಕ್ಕೆ ೬ ಪಟ್ಟು ಹೆಚ್ಚು ಲಾಭ ಬರಲಿದೆ. ಹಾಗಿರುವಾಗ ಆಸ್ಕರ್ ಪ್ರಶಸ್ತಿಯ ಮೇಲಿನ ಹೂಡಿಕೆಯೂ ಒಂದು ಒಳ್ಳೆಯ ವ್ಯಾಪಾರವೇ ಅಲ್ಲವೇ?

[illegible] ಆಸ್ಕರ್ ಪ್ರಶಸ್ತಿಯು ಸಾಂಸ್ಕೃತಿಕ [illegible] [illegible] ಅವರ ಆಸ್ಕರ್ ಪ್ರಶಸ್ತಿ ಕೇವಲ ಸಾಂಸ್ಕೃತಿಕ ವಿದ್ಯಮಾನವೇನಲ್ಲ. ಅದೊಂದು ರಾಜಕೀಯ ಆರ್ಥಿಕ ವಿದ್ಯಮಾನವೂ ಹೌದು. 'ಸ್ಲಂ ಡಾಗ್' ಚಿತ್ರ ಆಸ್ಕರ್‌ಗೆ ನಾಮಕರಣಗೊಂಡಾಗಲೇ ಅದಕ್ಕೆ ಪ್ರಶಸ್ತಿ ಸಿಕ್ಕೇಸಿಗುತ್ತದೆ ಎಂದು ಅಮೆರಿಕದ ಮಾಧ್ಯಮಗಳು ಮತ್ತು ಚಿತ್ರೋದ್ಯಮಿಗಳು ಭವಿಷ್ಯ ನುಡಿದಿದ್ದರು. ಚಿತ್ರೋದ್ಯಮಿಗಳು ಈ ಭವಿಷ್ಯ ನುಡಿದಿದ್ದು ಚಿತ್ರ ನೋಡಿಯೂ ಅಲ್ಲ. ಚಿತ್ರದ ಗುಣಮಟ್ಟದ ಬಗೆಗಿನ ಮೆಚ್ಚುಗೆಯಿಂದಲೂ ಅಲ್ಲ. ಬದಲಿಗೆ ಆ ಚಿತ್ರದ ನಿರ್ಮಾಣ ಮಾಡಿದ್ದು ಹಾಲಿವುಡ್ಡಿನ ಅತಿ ಶ್ರೀಮಂತ ಉದ್ಯಮ ಸಂಸ್ಥೆಯಾದ ಟೈಮ್–ವಾರ್ನರ್ ಸಂಸ್ಥೆಯಾದ್ದರಿಂದ. ಹೀಗಾಗಿ ಆಸ್ಕರ್ ಪ್ರಶಸ್ತಿ ಮತ್ತು ಅದು ತರುತ್ತಿರುವ ಉದ್ಯಮ ಸಂಸ್ಕೃತಿಯ ಹಿಂದೆ ಮತ್ತು ಅದು ಬಿತ್ತಬಯಸುವ ಸಾಮಾಜಿಕ ಮೌಲ್ಯಗಳ ಹಿಂದೆಯೂ ಜಾಗತೀಕರಣದ ಕಾಲಘಟ್ಟದ ಸಾಮ್ರಾಜ್ಯಶಾಹಿ ರಾಜಕೀಯ–ಆರ್ಥಿಕತೆ ಇದೆ.

ಸ್ಲಂ ಡಾಗ್ ಚಿತ್ರಕ್ಕೆ ಎಂಟು ಆಸ್ಕರ್ ಮಾತ್ರವಲ್ಲದೆ ಈವರೆಗೆ ಬೇರೆ ಬೇರೆ ದೇಶಗಳ ಒಟ್ಟು ೬೬ ಚಿತ್ರಪ್ರಶಸ್ತಿಗಳು ಸಿಕ್ಕಿವೆ. ಅದನ್ನು ತಯಾರಿಸಲು ವೆಚ್ಚವಾದದ್ದು ೧೫ ಮಿಲಿಯನ್ ಡಾಲರ್‌ಗಳು ಅಂದರೆ ೭೫ ಕೋಟಿ ರೂಪಾಯಿಗಳು! ಆದರೆ ಈಗಾಗಲೇ ಅದೇ ಗಳಿಸಿರುವ ಮೊತ್ತ ೧೨೫ ಮಿಲಿಯನ್ ಡಾಲರ್‌ಗಳು ಅಂದರೆ ೬೦೦ ಕೋಟಿ ರೂಪಾಯಿಗಳು! ಆಸ್ಕರ್ ಪ್ರಶಸ್ತಿ ಬಂದಕಾರಣದಿಂದಲೇ ಈ ಚಿತ್ರಕ್ಕೆ ಏನಿಲ್ಲವೆಂದರೂ ೧೦೦ ಮಿಲಿಯನ್ ಡಾಲರ್ ಅಂದರೆ ೫೦೦ ಕೋಟಿ ರೂಪಾಯಿಗಳಷ್ಟು ವ್ಯವಹಾರವಾಗುವ ನಿರೀಕ್ಷೆಯಿದೆ. ಅಂದರೆ ಆಸ್ಕರ್ ಪ್ರಶಸ್ತಿ ಬಂದರೆ ಹೂಡಿದ ಹಣಕ್ಕೆ ೬ ಪಟ್ಟು ಹೆಚ್ಚು ಲಾಭ ಬರಲಿದೆ. ಹಾಗಿರುವಾಗ ಆಸ್ಕರ್ ಪ್ರಶಸ್ತಿಯ ಮೇಲಿನ ಹೂಡಿಕೆಯೂ ಒಂದು ಒಳ್ಳೆಯ ವ್ಯಾಪಾರವೇ ಅಲ್ಲವೇ? ಆದ್ದರಿಂದಲೇ ಪ್ರತಿ ಆಸ್ಕರ್ ಪ್ರಶಸ್ತಿಗೆ ಮುನ್ನ ಹಾಲಿವುಡ್ಡಿನಲ್ಲಿ ಬಿಗ್ ಬಜೆಟ್ ಚಿತ್ರ ಮಾಡುವ ವಾರ್ನರ್ ಬ್ರದರ್ಸ್‌ನಂತ ಚಿತ್ರನಿರ್ಮಾಣ ಸ್ಟುಡಿಯೋಗಳು ಸೆಪ್ಟೆಂಬರ್‌ನಿಂದಲೇ ತಮ್ಮ ಚಿತ್ರವನ್ನು ಆಸ್ಕರ್‌ಗೆ ನಾಮ ನಿರ್ದೇಶನ ಮಾಡಬೇಕೆಂದು ಅಧಿಕೃತ ಲಾಬಿ ಪ್ರಾರಂಭಿಸುತ್ತಾರೆ. ಈ ಸ್ಲಂ ಡಾಗ್ ಚಿತ್ರ ನಿರ್ಮಾಣವಾಗಿದ್ದು ೨೦೦೭ರಲ್ಲೇ ಆದರೂ ಅದರ ವಿತರಣೆ ಮತ್ತು ಹಂಚಿಕೆ ಮಾತ್ರ ೨೦೦೮ರ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಗಿದ್ದು ಇದೇ ಕಾರಣಕ್ಕೆ. ಆಸ್ಕರ್ ಪ್ರಶಸ್ತಿಗೆ ಓಟು ನೀಡುವ ೬೦೦೦ ಮತದಾರರಿಗೆ ಜನವರಿಯಲ್ಲಿ ಮತದಾನ ಪತ್ರವನ್ನು ನೀಡಲಾಗುತ್ತದೆ. ಅವರು ಫೆಬ್ರವರಿ ಮೊದಲ ವಾರದಲ್ಲಿ ತಮ್ಮ ಆಯ್ಕೆಯನ್ನು ಬರೆದು ಗುಪ್ತವಾಗಿ ವಾಪಸ್ ನೀಡಬೇಕು. ಈ ಮತದಾನದ ಗುಪ್ತತೆಯನ್ನು ಮತ್ತು ವಿಶ್ವಸಾರ್ಹತೆಯನ್ನು ಕಾಪಾಡುವುದು ಮತ್ತು ಅದರ ಎಣಿಕೆ ಮಾಡಿ ವಿಜೇತರನ್ನು ಆರಿಸುವ ಸಂಪೂರ್ಣ ಪ್ರಕ್ರಿಯೆಯ ಜವಾಬ್ದಾರಿ ಮತ್ತೊಂದು (ಕು)ಖ್ಯಾತ ಬಹುರಾಷ್ಟ್ರೀಯ ಕಂಪನಿಯಾದ ಪ್ರೈಸ್‌ವಾಟರ್‌ಹೌಸ್ ಕೂಪರ್ಸ್ ಸಂಸ್ಥೆಯದು. ಈ ಕಂಪನಿಯ ಇಬ್ಬರು ಅಧಿಕಾರಿಗಳಿಗೆ ಮಾತ್ರ ವಿಜೇತರು ಯಾರು ಎಂಬುದು ಮೊದಲೇ ತಿಳಿದಿರುತ್ತದೆ. ಈ ಕಂಪನಿಯ ಹೆಸರು ನೆನಪಿರಬೇಕಿಲ್ಲವೇ? ಕೇವಲ ಲೆಕ್ಕದ ಹೇರಾಫೇರಿ ಮಾಡಿ ಜನತೆಯ ಸಾವಿರಾರು ಕೋಟಿ ನುಂಗಿ ಹಾಕಿದ ಸತ್ಯಂ ಕಂಪನಿಯ ಲೆಕ್ಕಾಚಾರದ ವಿಶ್ವಾಸಾರ್ಹತೆಗೆ ಸರ್ಟಿಫಿಕೇಟ್ ನೀಡುತ್ತಿದುದೂ ಇದೇ ಕಂಪನಿಯೇ! ಆದ್ದರಿಂದಲೆ ಈ ಬಾರಿಯ ಆಸ್ಕರ್ ಪ್ರಶಸ್ತಿ ಸ್ಲಂ ಡಾಗ್‌ಗೆ ಸಿಕ್ಕೇ ಸಿಗುತ್ತದೆ ಎಂದು ಮೊದಲೇ ಗೊತ್ತಾದದ್ದು ಆಕಸ್ಮಿಕವೇನಲ್ಲ!

ಭಾರತೀಯ ತಾಂತ್ರಿಕ ವರ್ಗ, ಭಾರತೀಯ ಕಥೆ, ಭಾರತೀಯರು ನೋಡಲು ಬಯಸುವ ರೀತಿಯಲ್ಲಿ ಹಾಡು, ನೃತ್ಯ, ಮೆಲೊಡ್ರಾಮಗಳನ್ನೊಳಗೊಂಡ ಅಥವಾ ಒಂದು ಮಾತಿನಲ್ಲಿ ಹೇಳುವುದಾದರೆ ಬಾಲಿವುಡ್ ರೀತಿಯಲ್ಲಿ ಹಾಲಿವುಡ್ ಚಿತ್ರ ನಿರ್ಮಾಣ ಮಾಡುವ ಹೊಸ ಹಾಲಿವುಡ್ ಮಾರುಕಟ್ಟೆ ತಂತ್ರಕ್ಕೆ ಈ ಸ್ಲಂಡಾಗ್ ಒಂದು ಉದಾಹರಣೆ. ಇದೊಂದು ಅಪವಾದವೇನಲ್ಲ. ಇತ್ತೀಚಿನ 'ಚಾಂದಿನಿಚೌಕ್‌ಸೆ ಚೈನಾ ತಕ್' ಚಿತ್ರದ ನಿರ್ಮಾಪಕರೂ ಇದೇ ವಾರ್ನರ್ಸ್ ಬ್ರದರ್ಸ್ ಸಂಸ್ಥೆಯೇ. ಏಕಕಾಲದಲ್ಲಿ ಭಾರತ ಮತ್ತು ಚೀನಾ ಮಾರುಕಟ್ಟೆಗಳ ಮೇಲೆ ಕಣ್ಣಿಟ್ಟು ತೆಗೆದ ಚಿತ್ರವದು. ಅಷ್ಟು ಮಾತ್ರವಲ್ಲ ಇದೇ ಸಂಸ್ಥೆಯೇ ಈ ವರ್ಷ ಭಾರತದ ಚಲನಚಿತ್ರೋದ್ಯಮದಲ್ಲಿ ೨೦೦ ಕೋಟಿ ರೂಪಾಯಿಗಳನ್ನು ಹೂಡಲಿದೆ.

ಭಾರತದ ಯಾವುದೇ ಚಿತ್ರಗಳು ಆಸ್ಕರ್ ಪ್ರಶಸ್ತಿ ಪಡೆದ ಚಿತ್ರಗಳಿಗಿಂತ ಉತ್ತಮ ಗುಣಮಟ್ಟದ್ದಾಗಿದ್ದರೂ ಆಸ್ಕರ್ ರೇಸಿನಲ್ಲಿ ಸೋಲುವುದು ಇದೇ ಕಾರಣಕ್ಕೆ. ಆಸ್ಕರ್ ಪ್ರಶಸ್ತಿ ಪ್ರಕ್ರಿಯೆಯನ್ನೇ ಹಾಲಿವುಡ್ಡಿನ ದೊಡ್ಡದೊಡ್ಡ ಸ್ಟುಡಿಯೋಗಳ ಚಿತ್ರಗಳಿಗೆ ಮಾತ್ರ ದಕ್ಕುವಂತೆ ರೂಪಿಸಲಾಗಿದೆ. ಅಪರೂಪಕ್ಕೊಮ್ಮೆ ಈ ನಿಯಮಗಳು ಬ್ರೇಕ್ ಆಗುವುದು ನಿಜ. ಆದರೆ ಅದು ಕೇವಲ ಅಪವಾದವೇ ವಿನಃ ಸಾಮಾನ್ಯ ನಿಯಮವಲ್ಲ!

ಅದೇನೇ ಇದ್ದರೂ ಸ್ಲಂಡಾಗ್ ಎಂಬ ಈ ವಾರ್ನರ್ ಬ್ರದರ್ಸ್ ಚಿತ್ರ ಮುಖ್ಯವಾಗುವುದು ಕೇವಲ ಅದಕ್ಕೆ ಆಸ್ಕರ್ ಬಂದಿತು ಎಂಬ ಕಾರಣಕ್ಕಲ್ಲ. ಸ್ಲಂಡಾಗ್‌ನಂತ ಚಿತ್ರನಿರ್ಮಾಣದ ಮೂಲಕ ಹಾಲಿವುಡ್‌ನ ಬೃಹತ್ ಚಿತ್ರನಿರ್ಮಾಣ ಸಂಸ್ಥೆಗಳು ಭಾರತದ ಚಲನಚಿತ್ರ ಮಾರುಕಟ್ಟೆಯನ್ನು ಆಕ್ರಮಿಸಲು ಹೇಗೆ ಹೊಸ ವ್ಯೂಹತಂತ್ರಗಳನ್ನು ರೂಪಿಸುತ್ತಿದೆ ಎಂಬುದಕ್ಕೂ ಈ ಚಿತ್ರ ಪ್ರತಿನಿಧಿಯಾಗಿರುವ ಕಾರಣಕ್ಕೆ ಈ ಸಂದರ್ಭ ಹೆಚ್ಚು ಮುಖ್ಯವಾಗುತ್ತದೆ. ಈವರೆಗೆ ಭಾರತದಲ್ಲಿ ಹಾಲಿವುಡ್ ಚಿತ್ರ ವ್ಯಾಪಾರವೆಂದರೆ ಹಾಲಿವುಡ್ ಚಿತ್ರಗಳ ವಿತರಣೆ ಮತ್ತು ಸ್ಥಳೀಯ ಭಾಷೆಗಳಿಗೆ ಡಬ್ಬಿಂಗ್ ಮಾಡಿಕೊಳ್ಳುವ ಹಕ್ಕಿನ ಮಾರಾಟ ಮಾತ್ರವಾಗಿತ್ತು. ಚಿತ್ರ ನಿರ್ಮಾಣದ ತಾಂತ್ರಿಕವರ್ಗದಲ್ಲಾಗಲೀ, ಕಥೆಯ ವಸ್ತು ಹಾಗೂ ಅದರ ಚಿತ್ರಣದಲ್ಲಾಗಲೀ ಭಾರತೀಯರು ಇದ್ದದ್ದು ಅಪರೂಪ. ಆದರೆ ಸ್ಲಂ ಡಾಗ್ ನೋಡಿ! ಆ ಚಿತ್ರದ ಕಥೆ ವಿಕಾಸ್ ಸ್ವರೂಪ್ ಎಂಬ ಭಾರತೀಯ ಅಧಿಕಾರಿಯದ್ದು. ಅದರ ತಾಂತ್ರಿಕ ವರ್ಗದಲ್ಲಿ ಆಸ್ಕರ್ ಪಡೆದ ರಹಮಾನ್. ರಸೂಲ್ ಪೂಕುಟ್ಟಿ, ಗುಲ್ಜಾರ್‌ರನ್ನೂ ಒಳಗೊಂಡಂತೆ ಹೆಚ್ಚು ಜನ ಭಾರತೀಯರಿದ್ದರು. ಶೂಟಿಂಗ್ ನಡೆದದ್ದೆಲ್ಲಾ ಭಾರತದಲ್ಲೇ. ಆದರೆ ನಿರ್ದೇಶಕರನ್ನೂ ಒಳಗೊಂಡತೆ ಮುಖ್ಯ ತಾಂತ್ರಿಕ ವರ್ಗ ವಿದೇಶಿಯರು ಮತ್ತು ಅದರ ನಿರ್ಮಾಣ ಮತ್ತು ಜಾಗತಿಕ ವಿತರಣೆ ಮಾತ್ರ ವಾರ್ನರ್ಸ್ ಬ್ರದರ್ಸ್ ಮತ್ತು ಫಾಕ್ಸ್ ಸರ್ಚ್‌ಲೈಟ್ ಎಂಬ ದೈತ್ಯ ಬಹುರಾಷ್ಟ್ರೀಯ ಕಂಪನಿಗಳದ್ದು!

ಭಾರತೀಯ ತಾಂತ್ರಿಕ ವರ್ಗ, ಭಾರತೀಯ ಕಥೆ, ಭಾರತೀಯರು ನೋಡಲು ಬಯಸುವ ರೀತಿಯಲ್ಲಿ ಹಾಡು, ನೃತ್ಯ, ಮೆಲೊಡ್ರಾಮಗಳನ್ನೊಳಗೊಂಡ ಅಥವಾ ಒಂದು ಮಾತಿನಲ್ಲಿ ಹೇಳುವುದಾದರೆ ಬಾಲಿವುಡ್ ರೀತಿಯಲ್ಲಿ ಹಾಲಿವುಡ್ ಚಿತ್ರ ನಿರ್ಮಾಣ ಮಾಡುವ ಹೊಸ ಹಾಲಿವುಡ್ ಮಾರುಕಟ್ಟೆ ತಂತ್ರಕ್ಕೆ ಈ ಸ್ಲಂಡಾಗ್ ಒಂದು ಉದಾಹರಣೆ. ಇದೊಂದು ಅಪವಾದವೇನಲ್ಲ. ಇತ್ತೀಚೆಗೆ ಅಕ್ಷಯ್‌ಕುಮಾರ್–ದೀಪಿಕಾ ಪಡುಕೋಣೆ ಅಭಿನಯಿಸಿದ ಬಾಲಿವುಡ್ಡಿನ ಚಾಂದಿನಿ ಚೌಕ್‌ಸೆ ಚೈನಾ ತಕ್ ಚಿತ್ರದ ನಿರ್ಮಾಪಕರೂ ಇದೇ ವಾರ್ನರ್ಸ್‌ಬ್ರದರ್ಸ್ ಸಂಸ್ಥೆಯೇ. ಏಕಕಾಲದಲ್ಲಿ ಭಾರತ ಮತ್ತು ಚೀನಾ ಮಾರುಕಟ್ಟೆಗಳ ಮೇಲೆ ಕಣ್ಣಿಟ್ಟು ತೆಗೆದ ಚಿತ್ರವದು. ಅಷ್ಟು ಮಾತ್ರವಲ್ಲ ಇದೇ ಸಂಸ್ಥೆಯೇ ಈ ವರ್ಷ ಭಾರತದ ಚಲನಚಿತ್ರೋದ್ಯಮದಲ್ಲಿ ೨೦೦ ಕೋಟಿ ರೂಪಾಯಿಗಳನ್ನು ಹೂಡಲಿದೆ.

ಹಾಗೆಯೇ ಹಾಲಿವುಡ್ಡಿನ ಆರು ದೈತ್ಯ ಚಿತ್ರನಿರ್ಮಾಣ ಸಂಸ್ಥೆಗಳಲ್ಲಿ ಒಂದಾದ ಸೋನಿ ಪಿಕ್ಚರ್ಸ್ ಎಂಟರ್‌ಟೈನ್‌ಮೆಂಟ್ ಸಂಸ್ಥೆ ಬಾಲಿವುಡ್ಡಿನ ಸಂಜಯ್ ಲೀಲಾ ಬನ್ಸಾಲಿಯೊಂದಿಗೆ ೨೦೦೭ರಲ್ಲಿ ಹಿಂದಿ ಚಲನಚಿತ್ರ ಸಾವ

ರಿಯ ವನ್ನು ನಿರ್ಮಿಸಿತ್ತು. ಅದೇ ಸಂಸ್ಥೆಯೇ ಈ ವರ್ಷ ಸ್ಪ್ರೈಟ್ ಮತ್ತು ತೇರೆ ಸಂಗ್ ಎಂಬ ಹಿಂದಿ ಚಿತ್ರಗಳನ್ನು ನಿರ್ಮಿಸುತ್ತಿದೆ. ಇದಲ್ಲದೆ ರಫ್ತಾರ್ ಎಂಬ ಚಿತ್ರವನ್ನೂ ಈ ಸಂಸ್ಥೆ ಸಹ ನಿರ್ಮಾಣ ಮಾಡುತ್ತಿದೆ. ಇದಲ್ಲದೆ ಸ್ಲಂಡಾಗ್ ಚಿತ್ರ ವಿತರಿಸಿದ ಫಾಕ್ಸ್ ಸಂಸ್ಥೆಯೇ ವರ್ಷಕ್ಕೆ ೬ ಹಿಂದಿ ಚಿತ್ರಗಳ ನಿರ್ಮಾಣ ಮಾಡಲು ಯೋಚಿಸುತ್ತಿದೆ. ಇದಲ್ಲದೆ ಮತ್ತೊಂದು ದೈತ್ಯ ಹಾಲಿವುಡ್ ಸಂಸ್ಥೆಯಾದ ವಾಲ್ಟ್ ಡಿಸ್ನಿ ಸಂಸ್ಥೆ ಭಾರತದ ಯಶ್‌ರಾಜ್ ಸಂಸ್ಥೆಯೊಂದಿಗೆ ಕೂಡಿ ಚಿತ್ರೋದ್ಯಮದಲ್ಲಿ ೧೫೦೦ ಕೋಟಿ ರೂಪಾಯಿಗಳಷ್ಟು ಹೂಡಿಕೆ ಮಾಡಲಿದೆ. ಅಮೆರಿಕದ ಆರು ದೈತ್ಯ ಚಿತ್ರ ನಿರ್ಮಾಣ ಸಂಸ್ಥೆಗಳಲ್ಲಿ ಮತ್ತೊಂದಾದ ವಯಾಕಾಮ್ ಸಂಸ್ಥೆ ಭಾರತದ ರಾಘವ್ ಬಹಲ್‌ರ ಟಿವಿ-೧೮ ಗುಂಪಿನ ಜೊತೆಗೂಡಿ ಚಿತ್ರೋದ್ಯಮ ಹಣಹೂಡಿಕೆ ನಿಧಿಯೊಂದನ್ನು ಪ್ರಾರಂಭಿಸಲಿದೆ.

ಸ್ಲಂಡಾಗ್ ಚಿತ್ರನಿರ್ಮಾಣವಾದದ್ದು ಮತ್ತು ಅದಕ್ಕೆ ಎಂಟು ಆಸ್ಕರ್‌ಗಳು ಸಿಕ್ಕಿರುವುದು ಹಾಲಿವುಡ್ ಈ ರೀತಿ ಭಾರತದ ಚಿತ್ರೋದ್ಯಮವನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುತ್ತಿರುವ ಸನ್ನಿವೇಶದಲ್ಲಿ. ಇದ್ದಕ್ಕಿದ್ದಂತೆ ಬಾಲಿವುಡ್ಡಿನ ಮೇಲೆ ಈ ಹಾಲಿವುಡ್ ರ್‍ಯಾಂಬೋಗಳು ಸ್ಟಾರ್‌ವಾರ್ ಮಾಡಲು ಕಾರಣವೇನು? ಭಾರತದ ಚಿತ್ರೋದ್ಯಮದ ಮೇಲೆ ಮತ್ತು ಒಟ್ಟಾರೆ ಭಾರತದ ಸಾಂಸ್ಕೃತಿಕ ವಾತಾವರಣದ ಮೇಲೆ ಇದರ ಪರಿಣಾಮವೇನಾಗಬಹುದು?

ಜಾಗತೀಕರಣ ಮತ್ತು ಖಾಸಗೀಕರಣಗಳು ಪ್ರಾರಂಭವಾದ ಕಳೆದ ಹತ್ತು ವರ್ಷಗಳಲ್ಲಿ ಹಾಲಿವುಡ್ಡಿನ ಚಿತ್ರೋದ್ಯಮದಲ್ಲಿದ್ದ ಹಲವು ಪುಡಿಪುಕ್ಕ ಚಿತ್ರನಿರ್ಮಾಣ ಸಂಸ್ಥೆಗಳು ಮಾತ್ರವಲ್ಲದೆ ಮಧ್ಯಮ ಗಾತ್ರದ ಚಿತ್ರ ನಿರ್ಮಾಣ ಸಂಸ್ಥೆಗಳು ಮುಳುಗಿಹೋಗಿ ಈಗ ಹಾಲಿವುಡ್ಡಿನಲ್ಲಿ ಕೆಲವೇ ಕೆಲವು ಬೃಹತ್ ಚಿತ್ರನಿರ್ಮಾಣ ಸಂಸ್ಥೆಗಳಿವೆ. ಅವುಗಳೆಂದರೆ ಟೈಂ-ವಾರ್ನರ್, ಡಿಸ್ನಿ, ವಯಾಕಾಂ, ನ್ಯೂಸ್ ಕಾರ್ಪೊರೇಷನ್, ಸೋನಿ, ಜಿಇ-ಎನ್‌ಬಿಸಿ ಮತ್ತು ವಿವೆಂಡಿ. ಇವೆಲ್ಲಾ ಮೊದಲಿಂದಲೂ ಚಿತ್ರೋದ್ಯಮದಲ್ಲಿದ್ದವೇನೂ ಅಲ್ಲ. ಉದಾಹರಣೆಗೆ ಟೈಂ, ನ್ಯೂಸ್ ಕಾರ್ಪೊರೇಷನ್ ಮಾಧ್ಯಮ ಸಂಸ್ಥೆಗಳಾಗಿದ್ದರೆ, ಜಿಇ ಒಂದು ವಿದ್ಯುತ್ ಉತ್ಪಾದನಾ ಸಂಸ್ಥೆ, ವಿವೆಂಡಿ ಫ್ರಾನ್ಸಿನ ನೀರು ವಿತರಣಾ ಸಂಸ್ಥೆ. ಆದರೆ ಹಣಕಾಸು ವಹಿವಾಟು ಜಾಗತೀಕರಣಗೊಳ್ಳುತ್ತಿದ್ದಂತೆ ಯಾವುದೇ ಕ್ಷೇತ್ರದಲ್ಲಿರುವ ಬೃಹತ್ ಉದ್ಯಮಿಗಳು ಲಾಭದ ಸಾಧ್ಯತೆ ಇರುವ ಯಾವ ಉದ್ಯಮವನ್ನೂ ಬಿಡದೆ ಕೊಂಡುಕೊಳ್ಳುತ್ತಾ ಬೃಹತ್ ಮಾನಾಪಲಿಗಳನ್ನು (ಏಕಸ್ವಾಮ್ಯ)ಗಳನ್ನು ನಿರ್ಮಿಸಿಕೊಂಡಿವೆ. ಇವುಗಳ ವ್ಯವಹಾರ ಹಲವಾರು ದೇಶಗಳ ಒಟ್ಟಾರೆ ರಾಷ್ಟ್ರಿಯ ಆದಾಯಕ್ಕಿಂತ ಜಾಸ್ತಿ ಇರುವುದರಿಂದ ಅವು ಯಾವುದೇ ದೇಶಗಳ ನೀತಿಗಳನ್ನು ಬದಲಿಸಿ ಅಲ್ಲಿರುವ ಮಾರುಕಟ್ಟೆಯನ್ನು ತಮ್ಮದಾಗಿಸಿಕೊಳ್ಳಬಲ್ಲವು.

ಜಾಗತೀಕರಣದ ಪ್ರಭಾವದಿಂದಲೇ ಚಲನಚಿತ್ರ ನಿರ್ಮಾಣ ಮತ್ತು ವಿತರಣೆಗಳಿಗೆ ಇದ್ದ ಅಡ್ಡಿಗಳನ್ನು ಈ ಬೃಹತ್ ಸಂಸ್ಥೆಗಳು WTOನಲ್ಲಿರುವ GATS ಕಲಮನ್ನು ಬಳಸಿಕೊಂಡು ನಿವಾರಿಸಿಕೊಂಡವು. ಹೀಗೆ ಅತಿ ದೊಡ್ಡ ಮಟ್ಟದಲ್ಲಿ ಏಷಿಯಾ ಅದರಲ್ಲೂ ಚೀನಾ,ತೈವಾನ್, ಜಪಾನ್ ಮತ್ತು ಇಂಡಿಯಾದ ಮಾರುಕಟ್ಟೆಯಲ್ಲಿ ಹಾಲಿವುಡ್ ಬ್ಲಾಕ್‌ಬಸ್ಟರ್ ಚಿತ್ರಗಳು ಬರಲಾರಂಭಿಸಿದವು. ಇಂದು ತೈವಾನ್‌ನಲ್ಲಿ ಚಿತ್ರವೀಕ್ಷಣೆಯಿಂದ ಬರುವ ಆದಾಯದ ಶೇ.೯೬ರಷ್ಟು ಪಾಲು, ಥೈಲ್ಯಾಂಡಿನ ಶೇ.೭೮ರಷ್ಟು

ಆಳವಾಗಿ ನೋಡಿದರೆ ಹಾಲಿವುಡ್ಡಿನ ಈ ಕಾಲದ ಸಿನಿಮಾಗಳು ಸಾರ್ವಜನಿಕ ಜೀವನವನ್ನು ಮತ್ತು ಸಾಮೂಹಿಕ ಬದುಕನ್ನು ನಗಣ್ಯವಾಗುವಂತೆ ಅಥವಾ ಮರೆಯುವಂತೆ ಮಾಡುತ್ತವೆ. ಯಾವುದೇ ವಿಷಯವನ್ನು ರಾಜಕೀಯ ರಹಿತಗೊಳಿಸುವುದು ಅದರ ಒಳ ಉದ್ದೇಶವಾಗಿರುತ್ತದೆ. ಪ್ರತಿನಿತ್ಯದ ಬದುಕಿನಲ್ಲಿ ಖಾಸಗಿ ಜೀವನಕ್ಕೆ ಸಾರ್ವಜನಿಕ ಆಯಾಮವೇ ಇಲ್ಲವೆಂಬಂತೆ ತೋರಿಸುವುದರಿಂದ ಸಾಮಾಜಿಕ ಬಂಧನ ಮತ್ತು ಒಂದು ಸಮುದಾಯಕ್ಕೆ ಸೇರಿದವರೆಂಬ ಭಾವನೆ ಮಾಯವಾಗುತ್ತದೆ. ಎಲ್ಲಾ ಬಗೆಯ ರಾಜಕೀಯವು ಅನುಮಾನ, ಅವಿಶ್ವಾಸ, ಭಯ ಮತ್ತು ಹಿಂಸೆಗಳನ್ನು ವ್ಯಕ್ತಪಡಿಸುವ ಕ್ಷೇತ್ರವೆಂಬಂತೆ ಕಾಣ ತೊಡಗುತ್ತದೆ.

ಮತ್ತು ಜಪಾನಿನ ಶೇ.೬೫ರಷ್ಟು ಪಾಲು ಹಾಲಿವುಡ್ಡಿನ ಚಿತ್ರಗಳದ್ದೇ ಆಗಿದೆ. ಭಾರತದಲ್ಲಿ ಈ ಪ್ರಮಾಣದಲ್ಲಿಲ್ಲದಿದ್ದರೂ ನಿಧಾನವಾಗಿ ಹಾಲಿವುಡ್ಡಿನ ಪ್ರಮಾಣ ಏರುತ್ತಿದೆ. ಹೀಗಾಗಿಯೇ ೧೯೫೦-೭೦ರಲ್ಲಿ ಹಾಲಿವುಡ್ ಚಿತ್ರಗಳು ತಮ್ಮ ಆದಾಯದ ಶೇ. ೩೦ರಷ್ಟು ಭಾಗವನ್ನು ಮಾತ್ರ ಅಮೆರಿಕದ ಹೊರಗಿನಿಂದ ಪಡೆಯುತ್ತಿದ್ದರೆ, ಈಗ ಹಾಲಿವುಡ್ಡಿನ ಆದಾಯದ ಅರ್ಧಭಾಗ ಬರುತ್ತಿರುವುದು ಅಮೆರಿಕದ ಹೊರಗಿನ ವೀಕ್ಷಕರಿಂದಲೇ! ಮುಂದಿನ ಇಪ್ಪತ್ತು ವರ್ಷಗಳಲ್ಲಿ ಹಾಲಿವುಡ್ಡಿನ ಮುಕ್ಕಾಲು ಭಾಗ ಆದಾಯ ಹೊರಗಿನ ದೇಶಗಳ ವೀಕ್ಷಕರಿಂದಲೇ ಬರುತ್ತದೆ ಎಂದು ಅಂದಾಜಿಸಲಾಗಿದೆ. ಹೀಗಾಗಿ ಕ್ರಮೇಣವಾಗಿ ಹಾಲಿವುಡ್ಡಿನ ಚಿತ್ರಗಳನ್ನು ಪ್ರಧಾನವಾಗಿ ಹೊರಗಿನ ದೇಶಗಳ ವೀಕ್ಷಕರನ್ನೇ ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತಿದೆ. ಉದಾಹರಣೆಗೆ ಯುವಜನತೆಯ ಆರಾಧಿಸುವ ಜಾಕಿ ಚಾನ್‌ಗೆ ೭೦ರ ದಶಕದಲ್ಲಿ ಹಾಲಿವುಡ್ಡಿಗೆ ಪ್ರವೇಶವೇ ದೊರೆತಿರಲಿಲ್ಲ. ಒಂದೆರಡು ಚಿತ್ರಗಳಲ್ಲಿ ಅಭಿನಯಿಸಿದ್ದರೂ ಅದನ್ನು ಅಮೆರಿಕನ್ ಮಾದರಿಯಲ್ಲಿ ತಿದ್ದಿತೀಡಲಾಗಿತ್ತು. ಆದರೆ ೯೦ರ ನಂತರ ಅದೆ ಹಾಲಿವುಡ್ ಏಷಿಯಾದ ವೀಕ್ಷಕರನ್ನು ಗಮನದಲ್ಲಿಟ್ಟುಕೊಂಡು ಜಾಕಿಚಾನ್ ಬ್ರಾಂಡಿನ ಚಿತ್ರಗಳನ್ನು ನಿರ್ಮಿಸತೊಡಗಿದೆ. ನಂತರದ ಅಮೆರಿಕದ ಪ್ರೇಕ್ಷಕರಿಗೂ ರ್‍ಯಾಂಬೋಗಿಂದ ಜಾಕಿಚಾನ್ ಇಷ್ಟವಾಗತೊಡಗಿದ್ದು ಬೇರೆ ಕಥೆ.

ಹೀಗಾಗಿ ಹಾಲಿವುಡ್ ಚಿತ್ರಗಳಲ್ಲಿ ನಿಧಾನವಾಗಿ ಇತರ ಸಂಸ್ಕೃತಿಗಳು, ಅಮೆರಿಕನ್ನರಲ್ಲದ ನಾಯಕ-ನಾಯಕಿಯರು ಕಥೆಗಳು ಕಾಣತೊಡಗಿದವು. ಉದಾಹರಣೆಗೆ ೧೯೯೮ರಲ್ಲಿ ತೆರೆಕಂಡ ೩೦೮ ಹಾಲಿವುಡ್ ಚಿತ್ರಗಳಲ್ಲಿ ೧೩೯ ಚಿತ್ರಗಳನ್ನು ಅಮೆರಿಕದಿಂದ ಹೊರಗಡೆ ಚಿತ್ರೀಕರಿಸಲಾಗಿತ್ತು. ಹೀಗೆ ಜಾಗತೀಕರಣದ ಜೊತೆಜೊತೆಗೆ ಹಾಲಿವುಡ್ಡಿನ ಜಾಗತೀಕರಣವೂ ಆಗತೊಡಗಿದೆ. ಈ ಜಾಗತಿಕ ಜೈತಯಾತ್ರೆಯ ಭಾಗವಾಗಿಯೇ ಬಾಲಿವುಡ್ಡಿನ ಹಾಲಿವುಡ್ಡೀಕರಣವೂ ಪ್ರಾರಂಭಗೊಂಡಿದೆ.

ಇತ್ತೀಚೆಗೆ ಭಾರತದ ದೊಡ್ಡ ಉದ್ಯಮ ಸಂಸ್ಥೆಗಳ ಕೂಟವಾದ ಸಿಐಐ, ಭಾರತದ ಚಲನಚಿತ್ರೋದ್ಯಮದ ಅಭಿವೃದ್ಧಿ ಸಾಧ್ಯತೆಗಳ ಕುರಿತು ಮಾಡಿದ ಅಧ್ಯಯನದ ಪ್ರಕಾರ ಭಾರತದ ಚಲನಚಿತ್ರೋದ್ಯಮ ಮುಂದಿನ ಮೂರು ವರ್ಷಗಳಲ್ಲಿ ಶೇ.೧೪ರಷ್ಟು ಅಭಿವೃದ್ಧಿ ಸಾಧಿಸುತ್ತಾ ೨೦೧೦ರ ವೇಳೆಗೆ ೧೪,೪೦೦ ಕೋಟಿ ರೂಪಾಯಿಗಳ ಬೃಹತ್ ಮಾರುಕಟ್ಟೆಯಾಗಲಿದೆ. ಭಾರತದ ಮತ್ತೊಂದು ದೊಡ್ಡ ಉದ್ಯಮಿಗಳ ಸಂಸ್ಥೆಯಾದ ಫಿಕ್ಕಿ ಮತ್ತು ಪ್ರೈಸ್ ವಾಟರ್‌ಹೌಸ್ ಕೂಪರ್ಸ್ ಜಂಟಿಯಾಗಿ ನಡೆಸಿದ ಅಧ್ಯಯನದ ಪ್ರಕಾರ ಮುಂದಿನ ಐದು ವರ್ಷಗಳಲ್ಲಿ ಭಾರತದ ಚಲನಚಿತ್ರೋದ್ಯಮದ ವಹಿವಾಟು ೧೭,೫೦೦ ಕೋಟಿ ರೂ.ಗಳಷ್ಟಾಗಲಿದೆ. ಹಾಲಿವುಡ್ಡಿನ ಖುದ್ದು ಅಧ್ಯಯನದ ಪ್ರಕಾರ ಭಾರತದ ಚಿತ್ರೋದ್ಯಮ ೪.೧ ಬಿಲಿಯನ್ ಮಾರುಕಟ್ಟೆಯದು. ಇದನ್ನು ಅಮೆರಿಕದ ೯ ಮಿಲಿಯನ್ ಮಾರುಕಟ್ಟೆಗೆ ಹೋಲಿಸಿದರೆ ಹಾಲಿವುಡ್ಡಿಗೆ ಭಾರತದ ಮಾರುಕಟ್ಟೆ ಎಷ್ಟು ಮುಖ್ಯವಾದದ್ದು ಎಂಬುದು ಅರ್ಥವಾಗುತ್ತದೆ! ಏಕೆಂದರೆ ಭಾರತದಲ್ಲಿ ವರ್ಷಕ್ಕೆ ೧೦೦೦ ಚಿತ್ರಗಳು ತೆರೆಕಾಣುತ್ತವೆ. ಅದೇ ಅಮೆರಿಕದಲ್ಲಿ ಕೇವಲ ೫೦೦. ಮತ್ತು ಫಿಕ್ಕಿ ಮಾಡಿರುವ ಅಧ್ಯಯನದ ಪ್ರಕಾರ ಒಬ್ಬ ದಕ್ಷಿಣ ಭಾರತೀಯ ಹೊಟ್ಟೆಗೆ ಹಿಟ್ಟಿಲ್ಲವೆಂದರೂ ಸರಿ, ವರ್ಷಕ್ಕೆ ಸರಾಸರಿ ೧೫ ಚಿತ್ರಗಳನ್ನಾದರೂ ಖಂಡಿತಾ ನೋಡುತ್ತಾನೆ. ಅವೆಲ್ಲಾ ಖಂಡಿತಾ ಹಾಲಿವುಡ್ ಚಿತ್ರಗಳಲ್ಲ. ಅವುಗಳಲ್ಲಿ ಶೇ.೯೫ರಷ್ಟು ಪ್ರಾದೇಶಿಕ ಚಿತ್ರ ಗಳು. ಈಗ ಹಿಂದಿ ಚಿತ್ರಗಳು ಮತ್ತು ಸ್ಥಳೀಯ ಭಾಷೆಗೆ ಡಬ್ಬಿಂಗ್ ಆದ ಹಾಲಿವುಡ್ ಚಿತ್ರಗಳೂ ಸೇರಿಕೊಳ್ಳುತ್ತಿವೆ. ಆದ್ದರಿಂದ ಈಗ ಹಾಲಿವುಡ್ಡಿನ ಚಾಣಾಕ್ಯರು ಒಂದೆಡೆ ಭಾರತೀಯ ಭಾಷೆಯುಳ್ಳ ಹಾಲಿವುಡ್ ಚಿತ್ರಗಳನ್ನೂ ಮತ್ತೊಂದೆಡೆ ಭಾರತೀಯ ಭಾಷಾ ಚಿತ್ರಗಳನ್ನೂ ನಿರ್ಮಿಸಲು ಮುಂದೆ ಬಂದಿದ್ದಾರೆ. ಹಿಂದಿ, ತಮಿಳು, ತೆಲುಗು, ಮಲಯಾಳಂ ಭಾಷಾ ಚಿತ್ರಗಳಿಗೆ ಕೇವಲ ಭಾರತದಲ್ಲಿ ಮಾತ್ರವಲ್ಲದೆ ಅಮೆರಿಕದಲ್ಲಿ, ಯೂರೋಪಿನಲ್ಲಿ ಮತ್ತು ಏಷಿಯಾದ ಇತರ ದೇಶಗಳಲ್ಲೂ ಮಾರುಕಟ್ಟೆ ಇರುವುದರಿಂದ ಭಾರ

(೨೪ನೇ ಪುಟಕ್ಕೆ)

ಭಯೋತ್ಪಾದನೆ ನಿಗ್ರಹ ಹೇಗೆ ಸಾಧ್ಯ?

ನಿತ್ಯಾನಂದಸ್ವಾಮಿ

ಪಾಕ್ ನೆಲದಿಂದ ಬಂದು ಮುಂಬೈ ಮೇಲೆ ದಾಳಿ ಮಾಡಿದ ಭಯೋತ್ಪಾದಕರ ಬರ್ಬರ ಕೃತ್ಯವನ್ನು ದೇಶದ ಎಲ್ಲ ಬಲ ಪಂಥೀಯ ಹಾಗೂ ಎಡ ಪಂಥೀಯ ರಾಜಕೀಯ ಪಕ್ಷಗಳು ಸಂಸತ್ತಿನ ಒಳಗೆ ಹಾಗೂ ಹೊರಗೆ ಬಲವಾಗಿ ಖಂಡಿಸಿವೆ. ಈ ದುಷ್ಕೃತ್ಯದ ಸುದ್ದಿ ಹೊರ ಬೀಳುತ್ತಿದ್ದಂತೆಯೇ ದೇಶಾದ್ಯಂತ ಎಲ್ಲ ಮತಪಂಥಗಆಗೆ ಸೇರಿದ ಜನಗಳು ತಮ್ಮ ಪ್ರತಿಭಟನೆಯನ್ನು ವ್ಯಕ್ತ ಪಡಿಸಿವೆ. ಕೇಂದ್ರ ಮತ್ತು ಮಹಾರಾಷ್ಟ್ರದ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಅಕ್ರೋಶ ವ್ಯಕ್ತವಾಗಿದೆ. ಇದು ಅಸಹಜ ವಿದ್ಯಮಾನವೇನಲ್ಲ. ದೇಶದ ಬೇಹುಗಾರಿಕೆಯ ಮೂಲದಿಂದ ದಾಆಯ ಬಗ್ಗೆ ಮುನ್ಸೂಚನೆಗಳು ಬಂದಿದ್ದರೂ ಅಗತ್ಯ ಕ್ರಮ ಕೈಗೊಳ್ಳದಿರುವ ಬಗ್ಗೆ ಸಹಜವಾಗಿ ಅಕ್ಷೇಪ ವ್ಯಕ್ತವಾಗಿದೆ. 'ನಮಗೆ ರಕ್ಷಣೆ ಒದಗಿಸಲಾಗದ ಸರ್ಕಾರಗಳಆಗೆ ನಾವು ತೆರಿಗೆ ನೀಡುವುದಿಲ್ಲ' ಎಂಬ ಕೂಗು ಸಹ ಪ್ರತಿಧ್ವನಿಸುವಂತಾಗಿದೆ.

2008ನವೆಂಬರ್ 26ರಿಂದ 29 ರವರೆಗೆ ಮುಂಬೈ ಮೇಲೆ ಪಾಕಿಸ್ತಾನದಿಂದ ಬಂದ ಭಯೋತ್ಪಾದಕರು ನಡೆಸಿದ ದಾಳಿಯಿಂದ ಉಂಟಾದ ಆಘಾತದಿಂದ ಹೊರಬರಲು ಭಾರತದ ಜನತೆಗೆ ಇದುವರೆಗೂ ಸಾಧ್ಯವಾಗಿಲ್ಲ. ಪ್ರಮುಖವಾಗಿ ವಿದೇಶಿಯರನ್ನೇ ಗುರಿಯಾಗಿಸಿಕೊಂಡಿದ್ದ ಈ ದಾಳಿ ಸಹಜವಾಗಿ ಇಡೀ ವಿಶ್ವವನ್ನೇ ತಲ್ಲಣಗೊಳಿಸಿದೆ. ಘಟನೆಯಲ್ಲಿ 26 ಜನ ವಿದೇಶಿಯರೂ ಸೇರಿದಂತೆ ಒಟ್ಟು 164 ಜನ ಸಾವನಪ್ಪಿದರು. 300ಕ್ಕೂ ಹೆಚ್ಚು ಜನ ಗಾಯಗೊಂಡಿದ್ದರು. ಭಯೋತ್ಪಾದಕರ ವಿರುದ್ಧದ ಸೆಣಸಾಟದಲ್ಲಿ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹದಳ(ಎಟಿಎಸ್)ದ ಮುಖ್ಯಸ್ಥ ಹೇಮಂತ ಕರ್ಕರೆ ಮತ್ತು ಅವರ ಸಹೋದ್ಯೋಗಿಗಳಾದ ವಿಜಯ್ ಸಾಲಸ್ಕರ್ ಹಾಗೂ ಅಶೋಕ್ ಕಮಟೆ ಮತ್ತು ಎನ್‌ಎಸ್‌ಜಿ ಕಮಾಂಡೊ ಮೇಜರ್ ಸಂದೀಪ್ ಉನ್ನಿಕೃಷ್ಣನ್ ಅಲ್ಲದೆ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ತುಕಾರಾಮ್ ಒಂಬ್ಲೆ ಹಾಗೂ 10 ಜನ ಪೊಲೀಸರು ಪ್ರಾಣಬಲಿದಾನ ಮಾಡಿದ್ದಾರೆ. ಮುಂಬೈ ಮೇಲೆ ದಾಳಿ ನಡೆಸಿದ ಪಾಕ್ ಮೂಲದ 10 ಜನ ಭಯೋತ್ಪಾದಕರಲ್ಲಿ 9 ಮಂದಿಯನ್ನು ಭಾರತದ ಭದ್ರತಾ ಪಡೆಗಳು ಸಾಯಿಸಿವೆ. ಪಾಕ್ ಪ್ರಜೆ ಆಗಿರುವ ಅಜ್ಮಲ್ ಕಸಬ್‌ನನ್ನು ಜೀವಂತವಾಗಿ ಸೆರೆ ಹಿಡಿಯಲು ಸಾಧ್ಯವಾಗಿದೆ.

ಅಸ್ಸಾಂನಲ್ಲಿ 89 ಜನ ಅಮಾಯಕರನ್ನು ಬಲಿತೆಗೆದುಕೊಂಡ ಭಯಂಕರ ಬಾಂಬ್ ಸ್ಫೋಟ ನಡೆದ ಒಂದು ತಿಂಗಳ ಅವಧಿಯಲ್ಲೇ ಮುಂಬೈ ಘಟನೆ ನಡೆದಿದೆ. ಇದಕ್ಕೂ ಮೊದಲು 2008ರ ಜುಲೈ ತಿಂಗಳಲ್ಲಿ ಬೆಂಗಳೂರು ಮತ್ತು ಮಾಲೆಗಾಂವ್‌ನಲ್ಲಿ ಬಾಂಬ್ ಸ್ಫೋಟಗಳು ಸಂಭವಿಸಿವೆ. ಈ ದಾಳಿಗಳನ್ನು ಸ್ಥಳೀಯರೇ ನಡೆಸಿದ್ದು, ಮುಂಬೈ ದಾಳಿಯನ್ನು ಮಾತ್ರ ಪಾಕಿಸ್ತಾನದಿಂದ ಸಮುದ್ರದ ಮೂಲಕ ಬಂದಿದ್ದ ಭಯೋತ್ಪಾದಕರು ನಡೆಸಿದ್ದು ಎಂಬುದು ಖಚಿತವಾಗಿದೆ.

ಪಾಕ್ ನೆಲದಿಂದ ಬಂದು ಮುಂಬೈ ಮೇಲೆ ದಾಳಿ ಮಾಡಿದ ಭಯೋತ್ಪಾದಕರ ಬರ್ಬರ ಕೃತ್ಯವನ್ನು ದೇಶದ ಎಲ್ಲ ಬಲಪಂಥೀಯ ಹಾಗೂ ಎಡಪಂಥೀಯ ರಾಜಕೀಯ ಪಕ್ಷಗಳು ಸಂಸತ್ತಿನ ಒಳಗೆ ಹಾಗೂ ಹೊರಗೆ ಬಲವಾಗಿ ಖಂಡಿಸಿವೆ. ಈ ದುಷ್ಕೃತ್ಯದ ಸುದ್ದಿ ಹೊರ ಬೀಳುತ್ತಿದ್ದಂತೆಯೇ ದೇಶಾದ್ಯಂತ ಎಲ್ಲ ಮತಪಂಥಗಳಿಗೆ ಸೇರಿದ ಜನಗಳು ತಮ್ಮ ಪ್ರತಿಭಟನೆಯನ್ನು ವ್ಯಕ್ತ ಪಡಿಸಿವೆ. ಕೇಂದ್ರ ಮತ್ತು ಮಹಾರಾಷ್ಟ್ರದ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಅಕ್ರೋಶ ವ್ಯಕ್ತವಾಗಿದೆ. ಇದು ಅಸಹಜ ವಿದ್ಯಮಾನವೇನಲ್ಲ. ದೇಶದ ಬೇಹು ಗಾರಿಕೆಯ ಮೂಲ ದಿಂದ ದಾಳಿಯ ಬಗ್ಗೆ ಮುನ್ಸೂಚನೆಗಳು ಬಂದಿದ್ದರೂ ಅಗತ್ಯ ಕ್ರಮ ಕೈಗೊಳ್ಳದಿರುವ ಬಗ್ಗೆ ಸಹಜವಾಗಿ ಅಕ್ಷೇಪ ವ್ಯಕ್ತವಾಗಿದೆ 'ನಮಗೆ ರಕ್ಷಣೆ ಒದಗಿಸಲಾಗದ ಸರ್ಕಾರಗಳಿಗೆ ನಾವು ತೆರಿಗೆ ನೀಡುವುದಿಲ್ಲ' ಎಂಬ ಕೂಗು ಸಹ ಪ್ರತಿಧ್ವನಿಸುವಂತಾಗಿದೆ.

ವಿಶ್ವ ಸಮುದಾಯವೂ ಸಹ ಭಾರತದ ಜನತೆಯ ಆತಂಕವನ್ನು ಹಂಚಿಕೊಂಡಿದೆ. ಪಾಕಿಸ್ತಾನ ನೆಲದಿಂದ ನಡೆಯುವ ಭಯೋತ್ಪಾದನೆಯನ್ನು ತಡೆಗಟ್ಟಲು ಕಠಿಣ ಕ್ರಮ ತೆಗೆದುಕೊಳ್ಳುವಂತೆ ಅ ದೇಶದ ಮೇಲೆ ಒತ್ತಡ ಹೇರಲಾಗಿದೆ. ವಿಶ್ವ ಸಂಸ್ಥೆಯು ಜಮಾತ್-ಉದ್-ದವಾ ಹಾಗೂ ಇತರ ಆತಂಕವಾದಿ ಸಂಘಟನೆಗಳ ಮೇಲೆ ನಿಷೇಧ ಹೇರಿದೆ. ಈ ಹಿನ್ನೆಲೆಯಲ್ಲಿ ಪಾಕಿಸ್ತಾ ನವು ಅನಿವಾರ್ಯವಾಗಿ ಭಯೋತ್ಪಾದ ಕರ ವಿರುದ್ಧ ಕಾರ್ಯ ಚರಣೆಗೆ ಮುಂದಾಗಿದೆ.

ಪಾಕಿಸ್ತಾನಕ್ಕೆ ಪಾಠ ಕಲಿಸುವುದು ಹೇಗೆ?

ನವೆಂಬರ್ 26ರ ಹತ್ಯಾಕಾಂಡಕ್ಕೆ ವ್ಯಕ್ತವಾದ ವ್ಯಾಪಕವಾದ ಖಂಡನೆಯನ್ನು ಬಳಸಿಕೊಂಡು ಕಾರ್ಪೋರೇಟ್ ಮಾಧ್ಯಮಗಳ

ಒಂದು ದೊಡ್ಡ ವಿಭಾಗವು ಪಾಕಿಸ್ತಾನದ ಮೇಲೆ ಸೇನಾ ಕಾರ್ಯಚರಣೆಗೆ ಭಾರತ ಮುಂದಾಗಬೇಕೆಂಬ ಅಭಿಪ್ರಾಯವನ್ನು ರೂಪಿಸಲು ಪರಿಣಾಮಕಾರಿ ಪ್ರಯತ್ನವನ್ನೇ ಮಾಡಿತು. 9/11ರ ದಾಳಿಗೆ ಅಮೇರಿಕ ಪ್ರತಿಕ್ರಿಯಿಸಿದ ರೀತಿಯಲ್ಲೇ ಭಾರತವೂ ಪ್ರಕ್ರಿಯಿಸಬೇಕೆಂಬುದು ಈ ಬಲಪಂಥೀಯ ಮಾಧ್ಯಮಗಳ ವಾದವಾಗಿತ್ತು. ಅಮೇರಿಕವು ಅನುಸರಿಸಿದ ಆಕ್ರಮಣಕಾರಿ ಕ್ರಮಗಳ ಪರಿಣಾಮವಾಗಿ ಅಮೇರಿಕಾದಲ್ಲಿ 9/11ರ ನಂತರ ಯಾವುದೇ ಭಯೋತ್ಪಾನಾ ಕೃತ್ಯ ಜರಗಲಿಲ್ಲ ಎಂದು ಎತ್ತಿ ತೋರಿಸುವ ಮೂಲಕ ಭಾರತ ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಿ ಆ ದೇಶಕ್ಕೆ ಪಾಠ ಕಲಿಸಬೇಕು ಎಂಬ ಪ್ರಚೋದನೆ ಅದಾಗಿತ್ತು. ಬಿಜೆಪಿ ಈ ವಾದವನ್ನು ಬೆಂಬಲಿಸಿತು. 'ಎಲ್ಲಾ ಆಯ್ಕೆಗಳು ನಮ್ಮ ಮುಂದಿವೆ' ಎಂಬ ಹೇಳಿಕೆಯನ್ನು ನೀಡುವ ಮೂಲಕ ಯುಪಿಎ ಸರ್ಕಾರ ಪರಿಸ್ಥಿತಿಯನ್ನು ಪ್ರಕ್ಷುಬ್ಧಗೊಳಿಸಲು ಮುಂದಾಯಿತು. ಪರಿಣಾಮವಾಗಿ ಗಡಿಯಲ್ಲಿ ಸೇನೆಗಳ ಜಮಾವಣೆ ಆರಂಭವಾಯಿತು. ಎರಡೂ ಕಡೆಳಿಂದ ಪೌರುಷದ ಮಾತುಗಳು ಕೇಳಲಾರಂಭಿಸಿದವು. ಎಡಪಕ್ಷಗಳು ಮಾತ್ರ ತಮ್ಮ ಭಿನ್ನವಾದ ನಿಲುಮೆಯನ್ನು ಜನತೆಯ ಮುಂದಿಡಲು ಹಿಂಜರಿಯಲಿಲ್ಲ. ಪ್ರಧಾನ ಮಂತ್ರಿಯವರು ನವೆಂಬರ್ 29ರಂದು ಕರೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಪ್ರತಿನಿಧಿಗಳು, ನಮ್ಮ ಬೇಹು ಗಾರಿಕಾ ವ್ಯವಸ್ಥೆಯನ್ನು ಬಲಪಡಿಸಲು ತುರ್ತು ಅದ್ಯತೆ ನೀಡಬೇಕೆಂಬ ಸಲಹೆಯನ್ನು ನೀಡಿದರಲ್ಲದೆ ಇಡೀ ಪೊಲೀಸ್ ಇಲಾಖೆಯನ್ನು ಮತ್ತು ವಿಶೇಷವಾಗಿ ಕರಾವಳಿ ಭದ್ರತಾ ವ್ಯವಸ್ಥೆಯನ್ನು ತುರ್ತಾಗಿ ಆಧುನೀಕರಣಗೊಳಿಸಬೇಕೆಂದು ಒತ್ತಾಯಿಸಿದರು. ಮುಂಬೈ ದಾಳಿಯಲ್ಲಿ ಭಾಗವಹಿಸಿದ್ದ ಭಯೋತ್ಪಾದಕರು ಪಾಕಿಸ್ತಾನದಿಂದ ಬಂದವರು ಎಂಬುದನ್ನು ಸಾಬೀತುಪಡಿಸಲು ಭಾರತದ ಬಳಿ ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳನ್ನು ಭಾರತ ಸರ್ಕಾರ ಪಾಕಿಸ್ತನಕ್ಕೆ ನೀಡಿ ಸಂಬಂಧಪಟ್ಟ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸಲು ಒತ್ತಾಯಿಸಬೇಕು; ಪಾಕಿಸ್ತನ ಸಹಕರಿಸದೆ ಹೋದರೆ ಭಾರತವು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಗೆ ದೂರು ಸಲ್ಲಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿತು. ಹೀಗೆ ಭಾರತದ ಮನವಿ ಮೇರೆಗೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯು ಲಷ್ಕರ್-ಎ-ತೊಯ್ಬಾ ಸಂಘಟನೆಯ ಅಂಗ ಸಂಸ್ಥೆಯಾದ ಜಮಾತ್-ಉದ್-ದವಾ ಸಂಘಟನೆಯ ಮೇಲೆ ನಿಷೇಧ ಹೇರುವಂತಾಯಿತು.

ಯುದ್ಧದಿಂದ ಭಯೋತ್ಪಾದನೆ ನಿಲ್ಲದು

ಪಾಕ್ ನೆಲದಲ್ಲಿ ಇರುವ ಭಯೋತ್ಪಾದಕ ಸಂಘಟನೆಗಳನ್ನು ಮತ್ತು ಅವುಗಳ ನೆಲೆಗಳನ್ನು ನಾಶ ಮಾಡಲು ಪಾಕಿಸ್ತಾನ ಅಷ್ಟೊಂದು ಆಸಕ್ತಿ ತೋರುತ್ತಿಲ್ಲ ಎಂಬುದು ನಿಜ. ಒಂದು ಮತದ ಅಧಾರದಲ್ಲಿ ರಚನೆಯಾಗಿರುವ ಆ ದೇಶದಲ್ಲಿ ಪ್ರಜಾಪ್ರಭುತ್ವ ಅತಿ ದುರ್ಬಲವಾಗಿದೆ. (ದೇವರನ್ನು ಪ್ರಜಾಪ್ರಭುತ್ವೀಕರಣಗೊಳಿಸಲು ಸಾಧ್ಯವೇ?)ಹಾಗಾಗಿ ಅಲ್ಲಿ ಮತಾಂಧ ಶಕ್ತಿಗಳು ಪ್ರಭಾವಶಾಲಿಯಾಗಿವೆ. ಪ್ರಜಾಪ್ರಭುತ್ವದ ಬಲಹೀನತೆಯದಿಂದಾಗಿ ಸೈನ್ಯದ ಅಲ್ಲಿ ಪ್ರಬಲ್ಯವೇ ಹೆಚ್ಚು. ಸೈನ್ಯದ ಭಾಗವೇ ಆಗಿರುವ ಪಾಕ್‌ನ ಬೇಹುಗಾರಿಕಾ ಸಂಸ್ಥೆ (ಐಎಸ್ಐ) ಭಯೋತ್ಪಾದಕರೊಂದಿಗೆ ನಂಟು ಇಟ್ಟುಕೊಂಡಿದೆ. ಆದ್ದರಿಂದಲೇ ಪಾಕಿಸ್ತಾನವು ಸ್ವತಃ ಭಯೋತ್ಪಾದನೆಯ ದುಷ್ಪರಿಣಾಮಗಳನ್ನು ಅನು ಭವಿಸುತ್ತಿದ್ದರೂ ಅದನ್ನು ನಿಗ್ರಹಿಸಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಪಾಕಿಸ್ತಾನಕ್ಕೆ ತಾಲಿಬಾನ್ ಉಪಟಳದ ತಲೆನೋವು ತಪ್ಪಿಲ್ಲ. ಇದೆಲ್ಲವೂ ಪಾಕಿಸ್ತಾನದ ಆಂತರಿಕ ಸಮಸ್ಯೆ. ನಾವು ಪಾಕಿಸ್ತಾನದ ಅಂತರಿಕ ವಿಷಯದಲ್ಲಿ ಕೈಹಾಕುವುದು ಸರಿಯಲ್ಲ. ಅಂತರಾಷ್ಟ್ರೀಯ ಕಾನೂನುಗಳು ಅದನ್ನು ಒಪ್ಪುವುದಿಲ್ಲ. ಅಲ್ಲಿರುವ ಭಯೋತ್ಪಾದಕರ ನೆಲಗಳನ್ನು ನಾಶಮಾಡಲು ಭಾರತ ಪಾಕಿಸ್ತಾನದ ಮೇಲೆ ದಾಳಿ ಮಾಡಬೇಕೆಂಬವಾದ ಭಾರತದ ಹಿತದೃಷ್ಟಿಯಿಂದಲೂ ಸರಿಯಾದುದಲ್ಲ. ವಿಶ್ವ ಸಮುದಾಯದ ಒಕ್ಕೊರಲಿನ ಒತ್ತಡ ಒಂದೇ ಪರಿಹಾರ.

ಪಾಕ್ ನೆಲದಲ್ಲಿ ಇರುವ ಭಯೋತ್ಪಾದಕ ಸಂಘಟನೆಗಳನ್ನು ಮತ್ತು ಅವುಗಳ ನೆಲೆಗಳನ್ನು ನಾಶ ಮಾಡಲು ಪಾಕಿಸ್ತಾನ ಅಷ್ಟೊಂದು ಆಸಕ್ತಿ ತೋರುತ್ತಿಲ್ಲ ಎಂಬುದು ನಿಜ. ಒಂದು ಮತದ ಅಧಾರದಲ್ಲಿ ರಚನೆಯಾಗಿರುವ ಆ ದೇಶದಲ್ಲಿ ಪ್ರಜಾಪ್ರಭುತ್ವ ಅತಿ ದುರ್ಬಲವಾಗಿದೆ. (ದೇವರನ್ನು ಪ್ರಜಾಪ್ರಭುತ್ವೀಕರಣಗೊಳಿಸಲು ಸಾಧ್ಯವೇ?) ಹಾಗಾಗಿ ಅಲ್ಲಿ ಮತಾಂಧ ಶಕ್ತಿಗಳು ಪ್ರಭಾವಶಾಲಿಯಾಗಿವೆ. ಪ್ರಜಾಪ್ರಭುತ್ವದ ಬಲಹೀನತೆಯ ದಿಂದಾಗಿ ಸೈನ್ಯದ ಅಲ್ಲಿ ಪ್ರಾಬಲ್ಯವೇ ಹೆಚ್ಚು. ಸೈನ್ಯದ ಭಾಗವೇ ಆಗಿರುವ ಪಾಕ್‌ನ ಬೇಹುಗಾರಿಕಾಸಂಸ್ಥೆ(ಐಎಸ್ಐ) ಭಯೋತ್ಪಾದಕರೊಂದಿಗೆ ನಂಟು ಇಟ್ಟುಕೊಂಡಿದೆ. ಆದ್ದರಿಂದಲೇ ಪಾಕಿಸ್ತಾನವು ಸ್ವತಃ ಭಯೋತ್ಪಾದನೆಯ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದರೂ ಅದನ್ನು ನಿಗ್ರಹಿಸಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಪಾಕಿಸ್ತಾನಕ್ಕೆ ತಾಲಿಬಾನ್ ಉಪಟಳದ ತಲೆನೋವು ತಪ್ಪಿಲ್ಲ. ಇದೆಲ್ಲವೂ ಪಾಕಿಸ್ತಾನದ ಆಂತರಿಕ ಸಮಸ್ಯೆ.

ಯುದ್ಧದಿಂದ ಯಾವುದೇ ಸಮಸ್ಯೆ ಇತ್ಯರ್ಥ ಆಗುವುದಿಲ್ಲ. ಯುದ್ಧದಿಂದ ಭಯೋತ್ಪಾದನೆ ನಿಲ್ಲುವುದಿಲ್ಲ. 9/11ನ್ನು ನೆಪಮಾಡಿಕೊಂಡು ಅಮೇರಿಕ ಅಫಘಾನಿಸ್ತಾನದ ಮೇಲೆ ಆಕ್ರಮಣ ಮಾಡಿತು. ಅಧ್ಯಕ್ಷ ಸದ್ದಾಂ ಹುಸೇನ್ ಸಮೂಹ ನಾಶದ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿದ್ದಾನೆ ಎಂದು ಆರೋಪಿಸಿ ಇರಾಕ್ ಮೇಲೆ ಅಮೇರಿಕ ಆಕ್ರಮಣ ಮಾಡಿತು. ಎರಡೂ ದೇಶಗಳಲ್ಲಿ ಲಕ್ಷಾಂತರ ನಾಗರೀಕರು ಸಾವನಪ್ಪಿದರು. ಆದರೆ ಭಯೋತ್ಪಾದನೆ ಮಾತ್ರ ನಿಲ್ಲಲಿಲ್ಲ. ಅದು ಬಲಿಯಾಗು ವಂತಾಯಿತು.

'ಭಯೋತ್ಪಾದನೆಯ ವಿರುದ್ಧ ಸಮರ' ಎಂಬುದು ಅಮೇರಿಕದ ಘೋಷಣೆ! ಇದೊಂದು ಅರ್ಥಹೀನ ಘೋಷಣೆ. ಯುದ್ಧ ಎಂಬುದೇ ಅತಿ ದೊಡ್ಡ ಭಯೋತ್ಪಾದನೆ. ಭಯೋತ್ಪಾದನೆಯಿಂದ ಭಯೋತ್ಪಾದನೆಯನ್ನು ನಿಲ್ಲಿಸಲು ಸಾಧ್ಯವಿಲ್ಲ. ಅಮೇರಿಕದ ಅಧ್ಯಕ್ಷ ಜಾರ್ಜ್ ಬುಷ್ ಇರಾಕ್‌ಗೆ ಭೇಟಿ ನೀಡಲು ಹೋದಾಗ ಅವರತ್ತ ಬೂಟ್‌ಗಳನ್ನು ಎಸೆಯುವ ಮೂಲಕ ಇರಾಕಿಗಳು ಅದನ್ನು ಸಾಬೀತುಪಡಿಸಿದ್ದಾರೆ.

ವಿಶ್ವದಲ್ಲಿ ಭಯೋತ್ಪಾದನೆಯನ್ನು ತಡೆಗಟ್ಟಲು ಸಮರ ಸಾರಿರುವ ಅಮೇರಿಕವೇ ವಿಶ್ವದ ಅತಿದೊಡ್ಡ ಭಯೋತ್ಪಾದಕ ದೇಶವಾಗಿದೆ ಎಂದು ಹೇಳಿದರೆ ತಪ್ಪಾಗದು. ವಿಶ್ವದ ಮೇಲೆ ತನ್ನ ಯಜಮಾನಿಕೆಯನ್ನು ಹೇರಲು ಹವಣಿಸುತ್ತಿರುವ ಅಮೇರಿಕ ತನ್ನ ತಾಳಕ್ಕೆತಕ್ಕಂತೆ ಕುಣಿಯಲು ನಿರಾಕರಿಸುವ ದೇಶಗಳ ಸರ್ಕಾರಗಳನ್ನು ಪದಚ್ಯುತಗೊಳಿಸಲು ಷಡ್ಯಂತ್ರಗಳನ್ನು ರೂಪಿಸುತ್ತದೆ. ಅಂತಹ ದೇಶಗಳ ಮೇಲೆ ನಿರ್ಬಂಧಗಳನ್ನು ಹೇರುತ್ತದೆ. ಆ ದೇಶಗಳಲ್ಲಿ ಭಯೋತ್ಪಾದಕರನ್ನು ಹುಟ್ಟು ಹಾಕುತ್ತದೆ. ಕೊನೆಗೆ ಸೇನಾ ಕಾರ್ಯಚರಣೆಯ ಮೂಲಕ ಅಂತಹ ದೇಶಗಳನ್ನು ಸದೆಬಡಿದು ಅಲ್ಲಿ ಕೈಗೊಂಬೆ ಸರ್ಕಾರಗಳನ್ನು ರಚಿಸುತ್ತದೆ. ಅರಬ್ ರಾಷ್ಟ್ರಗಳಲ್ಲಿನ ತೈಲ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ಉದ್ದೇಶದಿಂದ ಆ ದೇಶಗಳನ್ನು ಒಂದೊಂದಾಗಿ ಸದೆಬಡಿಯಲು ಅದು ನೆಪಗಳನ್ನು ಹುಡುಕುತ್ತಾ ಇರುತ್ತದೆ. ಇರಾಕ್ ಮೇಲೆ ಅದರ ಆಕ್ರಮಣ, ಇರಾನ್ ಮೇಲೆ ಅದು ಹಾಕುತ್ತಿರುವ ಬೆದರಿಕೆಯ ಹಿಂದಿನ ಉದ್ದೇಶ ಅಲ್ಲಿನ ತೈಲ ಸಂಪನ್ಮೂಲಗಳನ್ನು ಲೂಟಿ ಮಾಡುವುದೇ ಆಗಿದೆ ಎಂದು ಈಗಾಗಲೇ ಇಡೀ ವಿಶ್ವಕ್ಕೆ ಮನವರಿಕೆಯಾಗಿದೆ.

ಕ್ಯೂಬಾ ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಆರೋಪಿಸಿ ಅಮೇರಿಕ ಕ್ಯೂಬಾ ವಿರುದ್ಧ ಹೊಸ ಹೊಸ ದಿಗ್ಬಂಧನಗಳನ್ನು ಹೇರುತ್ತಿದೆ. ಕ್ಯೂಬಾದ ಅಧ್ಯಕ್ಷರಾಗಿದ್ದ ಅಲ್ಲಿನ ಜನಪ್ರಿಯ ನಾಯಕ ಫಿಡೆಲ್ ಕ್ಯಾಸ್ಟ್ರೋ ಅವರ ಹತ್ಯೆ ಮಾಡಲು ಅಮೇರಿಕದ ಕುಖ್ಯಾತ ಬೇಹಗಾರಿಕಾ ಸಂಸ್ಥೆ ಸಿಐಎ 600ಕ್ಕೂ ಹೆಚ್ಚು ಸಲ ಪ್ರಯತ್ನಮಾಡಿ ವಿಫಲಗೊಂಡಿರುವುದು ವಿಶ್ವಕ್ಕೆ ತಿಳಿದ ವಿಷಯವಾಗಿದೆ. ಹಮಸ್ ಒಂದು ಭಯೋತ್ಪಾದಕ ಸಂಘಟನೆ ಎಂದು ಆರೋಪಿಸಿ ತಮ್ಮ ತಾಯ್ನಾಡಿಗಾಗಿ ಹೋರಾಡುತ್ತಿರುವ ಪಾಲೆಸ್ತೈನಿಯರ ಮೇಲೆ ನಿರಂತರವಾಗಿ ದಾಳಿ ಮಾಡಲು ಇಸ್ರೇಲ್‌ಗೆ ಅಮೇರಿಕ ಕುಮ್ಮಕ್ಕು ನೀಡುತ್ತ ಬಂದಿದೆ. ಅಮೇರಿಕದ ಈ ಯುದ್ಧಕೋರ ನೀತಿಯಿಂದಾಗಿ ವಿಶ್ವದಲ್ಲಿ ಭಯೋತ್ಪಾದನೆ ಹೆಚ್ಚಾಗುತ್ತಿದೆ.

ಅಮೇರಿಕ ಅತ್ಯಂತ ದೊಡ್ಡ ಶಸ್ತ್ರಾಸ್ತ್ರ ವ್ಯಾಪಾರಿಯಾಗಿರುವುದರಿಂದ ವಿಶ್ವದಲ್ಲಿ ಎಲ್ಲಿ ಯುದ್ಧ ನಡೆದರೂ ಅಮೇರಿಕಕ್ಕೆ ಲಾಭವಾಗುತ್ತದೆ. ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧ ನಡೆದರೆ ತನಗೆ ಮಧ್ಯಪ್ರವೇಶ ಮಾಡಲು ಅವಕಾಶ ಸಿಗಲಿದೆ ಎಂದು ಅದು ಕಾಯುತ್ತಿದೆ. ಭಾರತ ಪಾಕಿಸ್ತಾನದ ನಡುವೆ ತನಗೊಂದು ನೆಲೆ ದೊರಕಿಸಿಕೊಳ್ಳಲು ಎರಡು ಬೆಕ್ಕುಗಳು ತರುವ ಬೆಣ್ಣೆಯನ್ನು ತೂಕ ಮಾಡಲು ಕಾಯುವ ಕೋತಿಯಂತೆ ಅದು ಕಾಯುತ್ತಾ ಇದೆ.

ಅಧುನಿಕ ಯುದ್ಧಗಳು ಅತ್ಯಂತ ವಿನಾಶಕಾರಿಯಾಗಿವೆ. ಹಿರೋಷಿಮಾದಿಂದ ಹಿಡಿದು ಇರಾಕ್ ಯುದ್ಧದವರೆಗೂ ಇದು ಸರ್ವಕಾಲಿಕ ಸತ್ಯವಾಗಿ ಸಾಬೀತಾಗಿದೆ. ಭಯಂಕರವಾದ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಬಳಸಲಾಗುವ ಇಂದಿನ ಯುದ್ಧಗಳಲ್ಲಿ 'ಗೆದ್ದವನು ಸೋತಿರುತ್ತಾನೆ; ಸೋತವನು ಸತ್ತಿರುತ್ತಾನೆ' ಪಾಕ್ ಮೇಲೆ ಯುದ್ಧ ಎರಡೂ ದೇಶಗಳಿಗೂ ವಿನಾಶಕಾರಿಯಾಗಿದೆ. ಇಂತಹ

ಯುದ್ಧಗಳಲ್ಲಿ ಪ್ರಾಣ ಕಳೆದುಕೊಳ್ಳುವವರು ಅಮಾಯಕ ನಾಗರೀಕರು, ಮತ್ತು ಹೊಟ್ಟೆ ಪಾಡಿಗಾಗಿ ಸೈನ್ಯ ಸೇರಿ ಗಡಿ ಕಾಯುತ್ತಿರುವ ಯೋಧರು. ಈ ಯೋಧರು ಭಾರತದಲ್ಲಾಗಲಿ, ಪಾಕಿಸ್ತಾನದಲ್ಲಾಗಲಿ ಶ್ರೀಮಂತರ ಮಕ್ಕಳಲ್ಲ. ಅವರೆಲ್ಲ ಬಡವರ ಮಕ್ಕಳು. ಇದರಿಂದ ವಿಧವೆಯರಾಗುತ್ತಿರುವುದು ಬಡ ಹೆಣ್ಣು ಮಕ್ಕಳು.

ಯುದ್ಧವೆಂದರೆ ಅಪಾರ ಖರ್ಚು ವೆಚ್ಚ. ದೇಶದ ಅಭಿವೃದ್ಧಿಗಾಗಿ, ಕೃಷಿ, ಕೈಗಾರಿಕೆ, ಉದ್ಯೋಗ, ಶಿಕ್ಷಣ, ಆರೋಗ್ಯ ಮೊದಲಾದವುಗಳಿಗಾಗಿ ಖರ್ಚು ಮಾಡಬೇಕಾದ ತೆರಿಗೆಗಳ ಮೂಲಕ ಜನರಿಂದ ಸಂಗ್ರಹವಾದ ಹಣವನ್ನು ಜನರನ್ನು ಸಾಯಿಸಲು ಖರ್ಚು ಮಾಡಬೇಕಾಗುತ್ತದೆ. ಯಾರಿಗೆ ಬೇಕು ಇಂತಹ ವಿನಾಶಕಾರಿ ಯುದ್ಧ?

ಪಾಕಿಸ್ತಾನದ ನಮ್ಮ ನೆರೆಯ ದೇಶ. ನಮ್ಮ ಸಹೋದರ ದೇಶ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ನೆರೆಯ ದೇಶಗಳೊಂದಿಗೆ ಶಾಂತಿಯಿಂದ ಇರುವುದು, ಅವುಗಳೊಂದಿಗೆ ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಉತ್ತಮ ಪಡಿಸಿಕೊಳ್ಳುವುದು. ನಮ್ಮ ಹಿತಸಾಧನೆಯ ದೃಷ್ಟಿಯಿಂದ ಅತ್ಯಗತ್ಯವಾಗಿದೆ. ಪಾಕಿಸ್ತಾನದೊಂದಿಗೆ ಗಡಿ ಪ್ರಶ್ನೆಯೂ ಸೇರಿದಂತೆ ನಮಗೆ ಅನೇಕ ವಿವಾದಗಳು ಇರುವುದು ನಿಜ. ಈ ವಿವಾದಗಳನ್ನು ಯುದ್ಧದಿಂದ ಬಗೆಹರಿಸಲು ಸಾಧ್ಯವಿಲ್ಲ. ಎಲ್ಲಾ ವಿವಾದಗಳನ್ನು ದ್ವಿಪಕ್ಷೀಯ ಮಾತು ಕತೆಗಳ ಮೂಲಕವೇ ಇತ್ಯರ್ಥಪಡಿಸಲು ಸಾಧ್ಯ. ಮಾತುಕತೆಗೆ ಒತ್ತಾಯಿಸುವುದು ಬಲಹೀನತೆ ಎಂದು ಪರಿಗಣಿಸುವುದು ಸರಿಯಲ್ಲ. ಅಪಾರ ಸಾವು ನೋವು, ಕಷ್ಟ ನಷ್ಟಗಳಿಗೆ ಕಾರಣವಾಗುವ ಯುದ್ಧಕ್ಕೆ ಪ್ರಚೋದನೆ ನೀಡುವುದು ಪೌರುಷವಲ್ಲ.

ಅಮೇರಿಕದ ಆಕ್ರಮಣಕಾರಿ ನೀತಿ ಬದಲಾಗಬೇಕು

ವಿಶ್ವದಲ್ಲಿ ಇಂದು ಭಯೋತ್ಪಾದಕರ ಅಟ್ಟಹಾಸ ಹೆಚ್ಚಾಗುತ್ತಿದೆ. ಅಮಾಯಕರ ರಕ್ತ ಹರಿಯುತ್ತಿದೆ. ವಿಶ್ವದೆಲ್ಲೆಡೆ ಮುಖ್ಯವಾಗಿ ಅರಬ್ ರಾಷ್ಟ್ರಗಳಲ್ಲಿ ಭಯೋತ್ಪಾದಕ ಸಂಘಟನೆಗಳು ಬೆಳೆಯುತ್ತಿವೆ. ಮುಸ್ಲಿಂ ಯುವಕರು, ವಿಶೇಷವಾಗಿ ವಿದ್ಯಾವಂತ ಮುಸ್ಲಿಂ ಯುವಕರು ಭಯೋತ್ಪಾದಕ ಸಂಘಟನೆಗಳಿಗೆ ಆಕರ್ಷಿತರಾಗುತ್ತಿದ್ದಾರೆ. ಮಾನವ ಬಾಂಬ್‌ಗಳಾಗಿ ಕೆಲಸ ಮಾಡಲು ಇವರು ಮುಂದೆ ಬರುತ್ತಿದ್ದಾರೆ. ವಿಶ್ವದೆಲ್ಲೆಡೆಯಿಂದ ಈ ಭಯೋತ್ಪಾದಕ ಸಂಘಟನೆಗಳು ಭಾರೀ ದೊಡ್ಡ ಪ್ರಮಾಣದಲ್ಲಿ, ನಿರಂತರವಾಗಿ ಹಣ ಸಂಗ್ರಹ ಮಾಡುತ್ತಿವೆ.

ಮುಸ್ಲಿಂ ಯುವಕರು ಇಂದು ಹೆಚ್ಚಾಚ್ಚಾಗಿ ಭಯೋತ್ಪಾದಕರಾ ಗುತ್ತಿರುವುದಕ್ಕೆ ಕಾರಣವೇನು? ಯಾಕೆ ಅವರು ಇತರರನ್ನು ಸಾಯಿಸುವುದಕ್ಕಾಗಿ ತಾವೂ ಸಾಯಲು ಮುಂದಾಗುತ್ತಾರೆ? ಯಾವ ಸೇಡಿನ ಕಿಚ್ಚು ಅವರನ್ನು ಇಷ್ಟೊಂದು ಕ್ರೌರ್ಯಕ್ಕೆ ತಳ್ಳುತ್ತಿದೆ? ಅಮೇರಿಕದ ನೀತಿಯೇ ಕಾರಣ. ವಿಶ್ವದ ಬೇರೆ ಬೇರೆ ಕಡೆಗಳಲ್ಲಿ ಇಂದು ಮುಸ್ಲಿಂ ಜನಸಮೂಹಗಳ ಮೇಲೆ ಅಮೇರಿಕ ಇದಕ್ಕೆ ನಡೆಸುತ್ತಿರುವ ದೌರ್ಜನ್ಯವೇ ಮುಸ್ಲಿಂ ಯುವಕರನ್ನು ಅಮೇರಿಕನ್ನರ ವಿರುದ್ಧ ಸೇಡಿಗಾಗಿ ಪರಿತಪಿಸುವಂತೆ ಮಾಡುತ್ತಿದೆ. ಮುಂಬೈ ಘಟನೆಯಲ್ಲಿ ಹತರಾದ ವಿದೇಶಿಯರಲ್ಲಿ 6ಜನ ಅಮೇರಿಕದ ಪ್ರಜೆಗಳಿದ್ದರು ಎಂಬುದನ್ನು ಗಮನಿಸಬೇಕು.

ಅಮೇರಿಕ ಒಸಾಮಾ ಬಿನ್ ಲಾಡೆನ್‌ನನ್ನು 'ಅಂತರಾಷ್ಟ್ರೀಯ ಭಯೋತ್ಪಾದಕ' ಎಂದು ಘೋಷಿಸಿದೆ. ಆದರೆ ಆತನನ್ನು ಭಯೋತ್ಪಾದಕನನ್ನಾಗಿ ತಯಾರು ಮಾಡಿದ್ದು ಅಮೇರಿಕವೇ. ಅಫಘಾನಿಸ್ತಾನದಲ್ಲಿದ್ದ ಕಮ್ಯೂನಿಸ್ಟ್ ಸರ್ಕಾರವನ್ನು ಬುಡಮೇಲು ಮಾಡಲು ಅಮೇರಿಕದ ಮುಕ್ತ ಬೆಂಬಲದೊಂದಿಗೆ ಒಸಾಮಾ ಬಿನ್ ಲಾಡೆನ್, ಆಲ್‌ಖೈದಾ ಸಂಘಟನೆಯನ್ನು ಹುಟ್ಟುಹಾಕಿದ್ದ. ಈತನ ಭಯೋತ್ಪಾದಕ ಸಂಘಟನೆಯ ಮೂಲಕ ಅಫಘಾನಿಸ್ತಾದಲ್ಲಿ ಮತಾಂಧ ಮೂಲಭೂತವಾದಿ ಶಕ್ತಿಗಳನ್ನು ಬಡಿದೆಬ್ಬಿಸಿ ಅಲ್ಲಿಯ ಕಮ್ಯೂನಿಸ್ಟ್ ಸರ್ಕಾರವನ್ನು ಪದಚ್ಯುತಗೊಳಿಸುವಲ್ಲಿ ಅಮೇರಿಕ ಯಶಸ್ವಿಯಾಯಿತು.



ಮಾಲೆಗಾಂವ್ ಸ್ಫೋಟದ ಆರೋಪಿ ಸುಧಾಕರ್ ದ್ವಿವೇದಿ

> **ಇರಾಕ್ ಮೇಲೆ ಆಕ್ರಮಣ ಮಾಡಿ ಆರೇಳು ಲಕ್ಷ ಇರಾಕಿ ನಾಗರಿಕರನ್ನು ಸಾಯಿಸಿದ ಅಮೇರಿಕ ಮತ್ತು ಅದರ ಮಿತ್ರ ಕೂಟದ ವಿರುದ್ಧ ಹಾಗೂ ಇರಾಕಿನ ಭಯೋತ್ಪಾದಕರಿಗೆ ಇರಾನ್ ನೆರವು ನೀಡುತ್ತಿದೆ ಎಂದು ಆರೋಪಿಸಿ ಅದರ ವಿರುದ್ಧ ಮಿಲಿಟರಿ ಕಾರ್ಯಚರಣೆಯ ಬೆದರಿಕೆ ಹಾಕುತ್ತಿರುವ ಅಮೇರಿಕದ ವಿರುದ್ಧ ಮುಸ್ಲಿಂ ಜಗತ್ತಿನಲ್ಲಿ ತೀವ್ರ ಆಕ್ರೋಶ ಬೆಳೆಯುತ್ತಿದೆ. ಸಹಜವಾಗಿ ಅನೇಕ ಮುಸ್ಲಿಂ ಯುವಕರು ಸೇಡಿನ ಕಿಚ್ಚಿನಲ್ಲಿ ಬೆಂದು ಬಿಟ್ಟಿದ್ದಾರೆ. ಹೀಗೆ ಜಗತ್ತಿನ ವಿವಿಧ ಭಾಗಗಳಲ್ಲಿ, ಮುಖ್ಯವಾಗಿ ಪಶ್ಚಿಮ ಏಷ್ಯಾದ ದೇಶಗಳಲ್ಲಿ ಹೆಚ್ಚುತ್ತಿರುವ ಅಮೇರಿಕ ಪ್ರಭುತ್ವ ಪ್ರಾಯೋಜಿತ ಭಯೋತ್ಪಾದನೆಯಿಂದಾಗಿ ಮುಸ್ಲಿಂ ಮತಾಂಧ ಶಕ್ತಿಗಳು, ಮುಸ್ಲಿಂ ಭಯೋತ್ಪಾದನಾ ಸಂಘಟನೆಗಳು ಬೆಳೆಯುತ್ತಿವೆ. ಭಯೋತ್ಪಾದಕ ಸಂಘಟನೆಗಳಲ್ಲಿ ಸೇರಿಸಿಕೊಳ್ಳುವ ಮುಸ್ಲಿಂ ಯುವಕರ ಬಗ್ಗೆ ಮುಸ್ಲಿಂ ಸಮುದಾಯಗಳಲ್ಲಿ ಅನುಕಂಪವೂ ಹೆಚ್ಚುತ್ತಿದೆ.**

ಆದರೆ, ಒಸಾಮಾ ಬಿನ್ ಲಾಡೆನ್ ಬಹುಬೇಗ ಅಮೇರಿಕದ ವಿರುದ್ಧ ತಿರುಗಿ ಬಿದ್ದ. ಪಾಲೆಸ್ತೈನ ಮುಸಲ್ಮಾನರ ಮೇಲೆ ಇಸ್ರೇಲ್‌ನ ಯಹೂದಿಗಳ ಮೂಲಕ ಅಮೇರಿಕಾ ನಡೆಸುತ್ತಿರುವ ದೌರ್ಜನ್ಯವನ್ನು ಕಂಡು ಕಂಗೆಟ್ಟ ಲಾಡೆನ್ ಅಮೇರಿಕದ ವಿರುದ್ಧ ಜಿಹಾದ್‌ಗೆ ಕರೆ ನೀಡಿದ. ಇದರ ಪರಿಣಾಮವೇ ಅಮೇರಿಕಾದ ಮೇಲೆ 9/11ರ ದಾಳಿ.

ಪಾಲೆಸ್ತೈನ್ ಜನತೆ ಕಳೆದ ಸುಮಾರು 60 ವರ್ಷಗಳಿಂದ ತಮ್ಮ ತಾಯ್ನಾಡಿನ ಹಕ್ಕಿಗಾಗಿ ಹೋರಾಟ ಮಾಡುತ್ತಿದೆ. ಪಾಲೆಸ್ತೈನ್ ವಿಮೋಚನಾ ಸಂಘಟನೆ(ಪಿಎಲ್‌ಓ) ಎಂಬ ಎಡಪಂಥಿಯ ಸಂಘಟನೆಯ ಜನಪ್ರಿಯ ನಾಯಕ ಯಾಸೆರ್ ಅರಾಫತ್ ನೇತೃತ್ವದಲ್ಲಿ ಈ ಹೋರಾಟ ನಡೆದು ಬಂದಿತ್ತು. ಅಮೇರಿಕದ ಕುಮ್ಮಕ್ಕಿನಿಂದ ಪಾಲೆಸ್ತೈನ್ ದೇಶದ ಮೇಲೆ ಇಸ್ರೇಲ್ ಆಕ್ರಮಣ ಮಾಡಿ ಅದರ ಭೂಪ್ರದೇಶಗಳನ್ನು ಆಕ್ರಮಿಸಿಕೊಂಡಿದೆ. ಯಾಸೆರ್ ಅರಾಫತ್ ಅವರ ನಿಗೂಢ ಸಾವಿನ ನಂತರ ಹಮಸ್ ಎಂಬ ಬಲಪಂಥೀಯ ಸಂಘಟನೆ ಪ್ರಾಬಲ್ಯವನ್ನು ಪಡೆದು ಸಶಸ್ತ್ರ ಹೋರಾಟ ನಡೆಸುತ್ತಿದೆ. ಇದನ್ನೇ ನೆಪಮಾಡಿಕೊಂಡು ಇಸ್ರೇಲ್ ನಿರಂತರವಾಗಿ ಪಾಲೆಸ್ತೈನ್ ಮೇಲೆ ದಾಳಿ ನಡೆಸುತ್ತಿದೆ. ಈ ದಾಳಿಗಳಲ್ಲಿ ಸಾವಿರಾರು ಜನ ಪಾಲೆಸ್ತೈನಿಯರು ಈಗಾಗಲೇ ಪ್ರಾಣ ಕಳೆದುಕೊಂಡಿದ್ದಾರೆ. ಇತ್ತೀಚೆಗೆ (2008 ಡಿಸೆಂಬರ್ 27 ರಿಂದ) ಪಾಲೆಸ್ತೈನಿಯರು ನೆಲೆಸಿರುವ ಗಾಝಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸಲಾರಂಭಿಸಿರುವ ಭೀಭತ್ಸ ಸೇನಾ ಕಾರ್ಯಾಚರಣೆಯಲ್ಲಿ ಅನೇಕ ಮಕ್ಕಳೂ ಸೇರಿದಂತೆ 2000ಕ್ಕೂ ಹೆಚ್ಚು ಗಾಝಾ ನಿವಾಸಿಗಳು ಸತ್ತಿದ್ದಾರೆ. ಇಸ್ರೇಲಿ ವೈಮಾನಿಕ ದಾಳಿಯಿಂದಾಗಿ ಜನವಸತಿಯ ಕಟ್ಟಡಗಳು, ಶಾಲೆಗಳು, ಆಸ್ಪತ್ರೆಗಳು, ಮಸೀದಿಗಳು ನೆಲಸಮವಾಗಿವೆ. ಕಟ್ಟಡಗಳ ಭಗ್ನಾವೇಶಗಳ ಅಡಿಯಲ್ಲಿ ಅಸಂಖ್ಯಾತ ಪಾಲೆಸ್ತೈನಿಯರ ಮೃತದೇಹಗಳು ಸಿಲುಕಿಕೊಂಡಿವೆ ಎಂದು ಹೇಳಲಾಗುತ್ತಿದೆ.

ಕಳೆದ ಐದಾರು ದಶಕಗಳಿಂದ ನಡೆದಿರುವ ಪಾಲೆಸ್ತೈನಿಯರ ಮಾರಣಹೋಮ ಜಗತ್ತಿನಾದ್ಯಂತ ಮಾನವೀಯತೆಯನ್ನು ಪ್ರೀತಿಸುವವರ ಮನವನ್ನು ಕುಲುಕಿದೆ. ಮುಸ್ಲಿಂ ಜಗತ್ತು ವಿಶೇಷವಾಗಿ ತಮ್ಮ ಜನಾಂದವರ ಮೇಲೆ ಎಸಗಲಾಗುತ್ತಿರುವ ಈ ಕ್ರೌರ್ಯವನ್ನು ಕಂಡು ಕೇಳಿ ತೀವ್ರ ಆತಂಕಕ್ಕೆ ಒಳಗಾಗಿದೆ. ಅಮೇರಿಕ ಮತ್ತು ಇಸ್ರೇಲ್ ದೇಶಗಳ ನಾಗರಿಕರನ್ನು ಗುರಿಯಾಗಿಸಿಕೊಂಡು ಇಂದು ಹೆಚ್ಚುತ್ತಿರುವ ಭಯೋತ್ಪಾದಕ ಕೃತ್ಯಗಳಿಗೆ ಇದುವೇ ಪ್ರಮುಖ ಕಾರಣವಾಗಿದೆ. ಮುಂಬೈ ದಾಳಿಯಲ್ಲಿ ಅಮೇರಿಕ ಮತ್ತು ಇಸ್ರೇಕ್ ಪ್ರವಾಸಿಗರು ಬಲಿಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ಇದರಂತೆಯೇ ಇರಾಕ್ ಮೇಲೆ ಆಕ್ರಮಣ ಮಾಡಿ ಆರೇಳು ಲಕ್ಷ ಇರಾಕಿ ನಾಗರಿಕರನ್ನು ಸಾಯಿಸಿದ ಅಮೇರಿಕ ಮತ್ತು ಅದರ ಮಿತ್ರಕೂಟದ ವಿರುದ್ಧ ಹಾಗೂ ಇರಾ

ಕಿನ ಭಯೋತ್ಪಾದಕರಿಗೆ ಇರಾನ್ ನೆರವು ನೀಡುತ್ತಿದೆ ಎಂದು ಆರೋಪಿಸಿ ಅದರ ವಿರುದ್ಧ ಮಿಲಿಟರಿ ಕಾರ್ಯಾಚರಣೆಯ ಬೆದರಿಕೆ ಹಾಕುತ್ತಿರುವ ಅಮೇರಿಕದ ವಿರುದ್ಧ ಮುಸ್ಲಿಂ ಜಗತ್ತಿನಲ್ಲಿ ತೀವ್ರ ಆಕ್ರೋಶ ಬೆಳೆಯುತ್ತಿದೆ. ಸಹಜವಾಗಿ ಅನೇಕ ಮುಸ್ಲಿಂ ಯುವಕರು ಸೇಡಿನ ಕಿಚ್ಚಿನಲ್ಲಿ ಬೆಂದು ಬಿಟ್ಟಿದ್ದಾರೆ. ಹೀಗೆ ಜಗತ್ತಿನ ವಿವಿಧ ಭಾಗಗಳಲ್ಲಿ, ಮುಖ್ಯವಾಗಿ ಪಶ್ಚಿಮ ಏಷ್ಯಾದ ದೇಶಗಳಲ್ಲಿ ಹೆಚ್ಚುತ್ತಿರುವ ಅಮೇರಿಕ ಪ್ರಭುತ್ವ ಪ್ರಾಯೋಜಿತ ಭಯೋತ್ಪಾದನೆಯಿಂದಾಗಿ ಮುಸ್ಲಿಂ ಮತಾಂಧ ಶಕ್ತಿಗಳು, ಮುಸ್ಲಿಂ ಭಯೋತ್ಪಾದನಾ ಸಂಘಟನೆಗಳು ಬೆಳೆಯುತ್ತಿವೆ. ಭಯೋತ್ಪಾದಕ ಸಂಘಟನೆಗಳಲ್ಲಿ ಸೇರಿಸಿಕೊಳ್ಳುವ ಮುಸ್ಲಿಂ ಯುವಕರ ಬಗ್ಗೆ ಮುಸ್ಲಿಂ ಸಮುದಾಯಗಳಲ್ಲಿ ಅನುಕಂಪವೂ ಹೆಚ್ಚುತ್ತಿದೆ.

ಆದ್ದರಿಂದ, ವಿಶ್ವದಲ್ಲಿ ಇಂದು ಮುಸ್ಲಿಂ ಭಯೋತ್ಪಾದನೆ ಹೆಚ್ಚುತ್ತಿರುವುದಕ್ಕೆ ಅಮೇರಿಕಾದ ಸಾಮ್ರಾಜ್ಯಶಾಹಿ ಧೋರಣೆಯೇ ಪ್ರಮುಖ ಕಾರಣವಾಗಿದೆ. ಅದರ ಆಕ್ರಮಣಕಾರಿ ನೀತಿ ಬದಲಾಗದೆ ವಿಶ್ವದಲ್ಲಿ ಶಾಂತಿ ನೆಲೆಸಲಾರದು. ಭಯೋತ್ಪಾದನೆ ನಿಲ್ಲಬೇಕು ಎಂದು ಬಯಸುವವರೆಲ್ಲರೂ ಅಮೇರಿಕದ ಮೇಲೆ ಒಕ್ಕೊರಲಿನ ಒತ್ತಡವನ್ನು ಹೇರುವ ಮೂಲಕ ಭಯೋತ್ಪಾದನೆಯನ್ನು ಹಿಮ್ಮೆಟ್ಟಿಸಬಹುದು.

ಭಾರತದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆ

ಭಾರತದಲ್ಲಿ ಹೆಚ್ಚುತ್ತಿರುವ ಭಯೋತ್ಪಾದಕ ದುಷ್ಕೃತ್ಯಗಳ ಬಗ್ಗೆ ಎಲ್ಲೆಡೆ ಆತಂಕ ವ್ಯಕ್ತವಾಗುತ್ತಿದೆ. ಅಮಾಯಕ ಜೀವಗಳನ್ನು ಬಲಿತೆಗೆದುಕೊಳ್ಳುವ ಈ ಕೃತ್ಯಗಳಲ್ಲಿ ಮುಸ್ಲಿಂ ಯುವಕರೇ ಹೆಚ್ಚೆಚ್ಚು ಪಾಲ್ಗೊಳ್ಳುತ್ತಿರುವುದು ಕಂಡು ಬರುತ್ತಿದೆ. ಇಲ್ಲಿಯೂ ಸಹ ಮುಸ್ಲಿಂ ಯುವಕರು ಅತ್ಮಾಹತ್ಯಾ ಪಡೆಗಳಾಗಿ ಕಾರ್ಯನಿರ್ವಹಿಸಲು ಮುಂದಾಗುತ್ತಿದ್ದಾರೆ. ಭಾರತದ ಮುಸ್ಲಿಂ ಯುವಕರು, ಅವರಲ್ಲಿಯೂ ಹೆಚ್ಚಾಗಿ ವಿದ್ಯಾವಂತ ಮುಸ್ಲಿಂ ಯುವಕರು ಯಾಕೆ ಈ ರೀತಿಯಲ್ಲಿ ಭಯೋತ್ಪಾದಕ ಸಂಘಟನೆಗಳಿಗೆ ಆಕರ್ಷಿತರಾಗುತ್ತಿದ್ದಾರೆ?

ಭಯೋತ್ಪಾದಕ ಕೃತ್ಯಗಳ ಸಂದರ್ಭದಲ್ಲಿ ಪೊಲೀಸರು ಬಂಧಿಸುವ ಎಲ್ಲ ಯುವಕರು ಭಯೋತ್ಪಾದಕರಾಗಿರುವುದಿಲ್ಲ. ಅನೇಕ ಸಲ ಭಯೋತ್ಪಾದಕ ಕೃತ್ಯಗಳನ್ನು ತಡೆಗಟ್ಟುವಲ್ಲಿ ತಮ್ಮ ವೈಫಲ್ಯವನ್ನು ಮರೆಮಾಚಲು ಪೊಲೀಸರು ಸಿಕ್ಕ ಸಿಕ್ಕವರನ್ನು ಬಂಧಿಸುತ್ತಾರೆ. ಬಂಧಿತರನ್ನು ನ್ಯಾಯಾಲಯಗಳಲ್ಲಿ ಹಾಜರುಪಡಿಸುವಾಗ ಅವರ ಮುಖಗಳಿಗೆ ನಿರ್ದಿಷ್ಟ ನಮೂನೆಯ ಬಟ್ಟೆಗಳನ್ನು ಸುತ್ತಿ ಅವರೆಲ್ಲರೂ ಮುಸಲ್ಮಾನರು ಎಂದು ಉದ್ದೇಶಪೂರ್ವಕವಾಗಿ ಬಿಂಬಿಸುವ ಪ್ರಯತ್ನವೂ ನಡೆಯುತ್ತಿದೆ. ಕೆಲವು ದೃಶ್ಯ ಮಾಧ್ಯಮಗಳು 'ಎಲ್ಲ ಭಯೋತ್ಪಾದಕರು ಮುಸಲ್ಮಾನರೇ' ಎಂಬ ಅಭಿಪ್ರಾಯವನ್ನು ಮೂಡಿಸುವ ಪ್ರಯತ್ನ ಮಾಡುತ್ತಿವೆ. ಆದರೆ ತನಿಖೆಯ ನಂತರ ಬಿಡುಗಡೆಯಾಗುವ ನಿರಪರಾದಿಗಳ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುವುದೇ ಇಲ್ಲ.

ಎಲ್ಲಾ ಮುಸಲ್ಮಾನರು ಭಯೋತ್ಪಾದಕರಲ್ಲ ಎಂಬುದು ನಿಜವಾಗಿದ್ದರೂ, ಮುಸ್ಲಿಂ ಯುವಕರು ಭಯೋತ್ಪಾದಕ ಕೃತ್ಯಗಳಲ್ಲಿ ಭಾಗವಹಿಸುತ್ತಿರುವುದು ಹೆಚ್ಚಾಗುತ್ತಿದೆ ಎಂಬುದು ಸಹ ನಿಜ. ಇದಕ್ಕೆ ಏನು ಕಾರಣ ಎಂಬುದನ್ನು ನಾವೆಲ್ಲರೂ ತಾಳ್ಮೆಯಿಂದ ಯೋಚಿಸುವುದು ಅಗತ್ಯವಿದೆ.

ಭಯೋತ್ಪಾದಕ ಕೃತ್ಯಗಳ ಸಂದರ್ಭದಲ್ಲಿ ಪೊಲೀಸರು ಬಂಧಿಸುವ ಎಲ್ಲ ಯುವಕರು ಭಯೋತ್ಪಾದಕರಾಗಿರುವುದಿಲ್ಲ. ಅನೇಕ ಸಲ ಭಯೋತ್ಪಾದಕ ಕೃತ್ಯಗಳನ್ನು ತಡೆ ಗಟ್ಟುವಲ್ಲಿ ತಮ್ಮ ವೈಫಲ್ಯವನ್ನು ಮರೆಮಾಚಲು ಪೊಲೀಸರು ಸಿಕ್ಕ ಸಿಕ್ಕವರನ್ನು ಬಂಧಿಸುತ್ತಾರೆ. ಬಂಧಿತರನ್ನು ನ್ಯಾಯಾಲಯಗಳಲ್ಲಿ ಹಾಜರುಪಡಿಸುವಾಗ ಅವರ ಮುಖಗಳಿಗೆ ನಿರ್ದಿಷ್ಟ ನಮೂನೆಯ ಬಟ್ಟೆಗಳನ್ನು ಸುತ್ತಿ ಅವರೆಲ್ಲರೂ ಮುಸಲ್ಮಾನರು ಎಂದು ಉದ್ದೇಶಪೂರ್ವಕವಾಗಿ ಬಿಂಬಿಸುವ ಪ್ರಯತ್ನವೂ ನಡೆಯುತ್ತಿದೆ. ಕೆಲವು ದೃಶ್ಯ ಮಾಧ್ಯಮಗಳು 'ಎಲ್ಲ ಭಯೋತ್ಪಾದಕರು ಮುಸಲ್ಮಾನರೇ' ಎಂಬ ಅಭಿಪ್ರಾಯವನ್ನು ಮೂಡಿಸುವ ಪ್ರಯತ್ನ ಮಾಡುತ್ತಿವೆ. ಆದರೆ ತನಿಖೆಯ ನಂತರ ಬಿಡುಗಡೆಯಾಗುವ ನಿರಪರಾದಿಗಳ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುವುದೇ ಇಲ್ಲ.

ಭಾರತದಲ್ಲಿ ಮುಸ್ಲಿಂ ಸಮುದಾಯದ ಮೇಲೆ ಹಿಂದುತ್ವ ಸಂಘಟನೆಗಳ ಹೆಚ್ಚುತ್ತಿರುವ ದೌರ್ಜನ್ಯದಿಂದಾಗಿ ಆ ಅಲ್ಪಸಂಖ್ಯಾತ ಸಮುದಾಯ ತೀವ್ರ ಆತಂಕಕ್ಕೆ ಒಳಗಾಗಿದೆ. ಸುಮಾರು 400 ವರ್ಷಗಳಿಂದ ಮುಸಲ್ಮಾನರು ನಮಾಜ್ ಮಾಡುತ್ತಿದ್ದ ಬಾಬರಿ ಮಸೀದಿಯನ್ನು ಹಿಂದುತ್ವ ಸಂಘಟನೆಗಳು 1992ರಲ್ಲಿ ಧ್ವಂಸ ಮಾಡಿದಾಗ ಉಂಟಾದ ಅಘಾತದಿಂದ ಅವರು ಇನ್ನು ಚೇತರಿಸಿಕೊಂಡಿಲ್ಲ. ಇದರ ನಂತರವೂ ಅವರ ಮೇಲೆ ಆಘಾತಗಳ ಮೇಲೆ ಆಘಾತಗಳು ತಲೆದೊರುತ್ತಲೇ ಇವೆ. ಮೂಂಬೈ ಸರಣಿ ಬಾಂಬ್ ಸ್ಫೋಟದ ಸಂದರ್ಭದಲ್ಲಿ ಸಂಭವಿಸಿದ ಗಲಭೆಗಳಲ್ಲಿ ಸಾವಿರಾರು ಮುಸಲ್ಮಾನರು ಹತ್ಯೆಗೀಡಾಗಿರುವುದನ್ನು ಜಸ್ಟೀಸ್ ಶ್ರೀಕೃಷ್ಣ ಆಯೋಗ ದಾಖಲಿಸಿದೆ. ಆದರೆ ಇದುವರೆಗೂ ಅಪರಾಧಿಗಳಿಗೆ ಶಿಕ್ಷೆಯಾಗಿಲ್ಲ. ಗುಜರಾತ್‌ನಲ್ಲಿ ಗೋದ್ರಾ ದುರಂತದ ಸೇಡಿನ ಹೆಸರಿನಲ್ಲಿ ನಡೆದ ಮೋದಿ ಸರ್ಕಾರ ಪ್ರಾಯೋಜಿತ ಜನಾಂಗೀಯ ಹತ್ಯೆಯಲ್ಲಿ 2000ಕ್ಕೂ ಹೆಚ್ಚು ಮುಸಲ್ಮಾನ ಸ್ತ್ರೀಪುರುಷರು ಹತರಾದರು. ಕೊಲೆಗಡುಕರಿಗೆ ಇದುವರೆಗೂ ಶಿಕ್ಷೆಯಾಗಿಲ್ಲ. ಕಾಶ್ಮೀರದಲ್ಲಿ ನೆಲೆನಿಂತಿರುವ ಭಾರತೀಯ ಸೈನ್ಯವು ಭಯೋತ್ಪಾದಕರನ್ನು ಪತ್ತೆಹಚ್ಚುವ ನೆಪದಲ್ಲಿ ಅಮಾಯಕ ಮುಸ್ಲಿಂ ಯುವಕರನ್ನು ಬೇಟೆಯಾಡುತ್ತಿದ್ದು ಅದನ್ನು ವಿರೋಧಿಸುವ ಅವರ ತಾಯಂದಿರು, ಅಕ್ಕತಂಗಿಯರ ಮೇಲೆ ಅತ್ಯಾಚಾರ ಮಾಡುವುದು ಅವ್ಯಾಹತವಾಗಿ ನಡೆಯುತ್ತಿದೆ. ಇಂತಹ ಭೀಭತ್ಸ ಕೃತ್ಯಗಳಿಂದ ಮುಸಲ್ಮಾನರು ರೋಸಿಹೋಗದಿರಲು ಸಾಧ್ಯವೇ? ಅವರೂ ಮನುಷ್ಯರಲ್ಲವೇ?

ಇತ್ತೀಚಿನ ವರ್ಷಗಳಲ್ಲಿ ಭಾರತದ ಮುಸಲ್ಮಾನರಲ್ಲಿ ಪರಕೀಯ ಭಾವನೆಗಳು ಬೆಳೆಯುತ್ತಿವೆ. ತಮ್ಮ ಆಸ್ತಿಪಾಸ್ತಿಗಳಿಗೆ, ತಮ್ಮ ಧಾರ್ಮಿಕ ಮಂದಿರಗಳಿಗೆ, ತಮ್ಮ ಜೀವಕ್ಕೆ ಇಲ್ಲಿ ರಕ್ಷಣೆ ಇಲ್ಲದಂತಾಗಿದೆ ಎಂಬ ಆತಂಕ ಅವರನ್ನು ಆವರಿಸಿಕೊಳ್ಳುತ್ತಿದೆ. ಹೀಗಾಗಿ ಬಿಸಿ ರಕ್ತದ ಕೆಲವು ಮುಸ್ಲಿಂ ಯುವಕರು ದಾರಿ ತಪ್ಪುತ್ತಿದ್ದಾರೆ. ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಭಯೋತ್ಪಾದಕರಾಗುತ್ತಿದ್ದಾರೆ. ಮುಸಲ್ಮಾನರ ಬಗ್ಗೆ ವ್ಯವಸ್ಥಿತವಾಗಿ ನಡೆಸಲಾಗುತ್ತಿರುವ ಅಪಪ್ರಚಾರದಿಂದಾಗಿ ವಿದ್ಯಾವಂತ ಮುಸ್ಲಿಂ ಯುವಕರು ಹೆಚ್ಚು ಹತಾಶರಾಗುತ್ತಿದ್ದಾರೆ. ದೇಶಕ್ಕೆ ತಮ್ಮ ನಿಷ್ಠೆಯನ್ನು ಸಾಬೀತುಪಡಿಸಬೇಕಾದ ಸಂಕಟಕ್ಕೆ ಅವರು ಒಳಗಾಗುತ್ತಿದ್ದಾರೆ.

ಭಾರತದಲ್ಲಿ ಇಂದು ಹೆಚ್ಚುತ್ತಿರುವ ಮುಸ್ಲಿಂ ಭಯೋತ್ಪಾದನೆಗೆ ಹಿಂದೂ ಕೋಮುವಾದವೇ ಪ್ರಮುಖ ಕಾರಣವಾಗಿದೆ. ಕೋಮುವಾದ ಮತ್ತು ಭಯೋತ್ಪಾದನೆ ಒಂದೇ ನಾಣ್ಯದ ಎರಡು ಮುಖಗಳಾಗಿವೆ. ದೇಶದಲ್ಲಿ ಕೋಮುವಾದ ಅಳಿಯದೆ ಭಯೋತ್ಪಾದನೆ ಅಳಿಯದು.

ಎಲ್ಲ ಹಿಂದುಗಳು ಕೋಮುವಾದಿಗಳಲ್ಲ

ವಿಶ್ವದ ಮೇಲೆ ತನ್ನ ಯಜಮಾನಿಕೆಯನ್ನು ಸ್ಥಾಪಿಸಲು ಅಮೇರಿಕ ಹೇಗೆ ಆಕ್ರಮಣಕಾರಿ ನೀತಿಯನ್ನು ಅನುಸರಿಸುತ್ತದೆಯೋ ಅದೇ ರೀತಿಯಲ್ಲಿ ಭಾರತದಲ್ಲಿ ರಾಜಕೀಯ ಅಧಿಕಾರವನ್ನು ಗಿಟ್ಟಿಸಿಕೊಳ್ಳಲು ಹಿಂದುತ್ವ ಶಕ್ತಿಗಳು ಕೋಮುದ್ವೇಷದ ಆಕ್ರಮಣಕಾರಿ ನೀತಿಯನ್ನು ಅನುಸರಿಸುತ್ತಿವೆ. ಹಿಂದು ಧರ್ಮ ರಕ್ಷಣೆಯ ಮುಖವಾಡ ಧರಿಸಿಕೊಂಡ ಈ ಶಕ್ತಿಗಳು ಮುಗ್ಧ ಹಿಂದೂಗಳ ಧಾರ್ಮಿಕ ನಂಬಿಕೆಗಳನ್ನು ದುರ್ಬಳಕೆ ಮಾಡುತ್ತಿವೆ. ಹಿಂದೂ ಧರ್ಮಕ್ಕೆ ಮುಸಲ್ಮಾನರಿಂದ, ಕ್ರೈಸ್ತರಿಂದ ಅಪಾಯವಿದೆ ಎಂಬ ಗುಲ್ಲೆಬ್ಬಿಸಿ ಬಹುಸಂಖ್ಯಾತ ಹಿಂದುಗಳಲ್ಲಿ ಆತಂಕವನ್ನು ಉಂಟುಮಾಡುವ ಮೂಲಕ ಅವರನ್ನು ತಮ್ಮ ರಾಜಕೀಯ ಗುರಿಸಾಧನೆಗೆ ಏಣಿಯಾಗಿ ಬಳಕೆ ಮಾಡಲು ಯತ್ನಿಸಿದ್ದಾರೆ. ಹಿಂದೂಗಳ ರಕ್ಷಣೆಯ ಹೆಸರಿನಲ್ಲಿ ಹಿಂದೂ ಓಟ್ ಬ್ಯಾಂಕ್ ಮಾಡುವುದೇ ಅವರ ನಿಜವಾದ ಉದ್ದೇಶವಾಗಿದೆ. ಆದ್ದರಿಂದಲೇ ಕ್ಷುಲ್ಲಕ ಕಾರಣಗಳನ್ನು ಮುಂದೆ ಮಾಡಿ ಅಲ್ಪಸಂಖ್ಯಾತ ಮುಸಲ್ಮಾನರ ಮೇಲೆ, ಕ್ರೈಸ್ತರ ಮೇಲೆ, ಅವರ ಪ್ರಾರ್ಥನಾಲಯಗಳ ಮೇಲೆ ಧಾಳಿ ಮಾಡುತ್ತಾರೆ. ಸಕಲ ಜೀವಿಗಳಿಗೆ ಲೇಸನ್ನೇ

ಮಾಲೆಗಾಂವ್ ಸ್ಫೋಟದ ಆರೋಪಿ ಸಾಧ್ವಿ ಪ್ರಜ್ಞಾಸಿಂಗ್

ಬಯಸಬೇಕೆಂಬ ಹಿಂದೂ ಧರ್ಮದ ಆದರ್ಶವನ್ನು ಉಲ್ಲಂಘಿಸಲು ಹಿಂದೇಟು ಹಾಕದಿರುವ ಇವರು ಇಂದೂ ಧರ್ಮವನ್ನು ಹೇಗೆ ರಕ್ಷಣೆ ಮಾಡಲು ಸಾಧ್ಯ?

ಮುಸಲ್ಮಾನರು ಗೋಮಾಂಸ ಸೇವಿಸುತ್ತಾರೆ ಎನ್ನುವ ಕಾರಣಕ್ಕಾಗಿ ಅವರನ್ನು ದೂಷಿಸಲಾಗುತ್ತಿದೆ. ವೇದಗಳ ಕಾಲದಿಂದಲೂ ಇಲ್ಲಿ ಗೋಮಾಂಸ ಸೇವನೆ ರೂಢಿಯಲ್ಲಿದೆ. ಹಿಂದೂಗಳಲ್ಲಿ ಅನೇಕ ಸಮುದಾಯಗಳು ಇಂದಿಗೂ ಗೋಮಾಂಸವನ್ನು ಸೇವಿಸುತ್ತವೆ. ಒಂದು ಸಮುದಾಯದ ಆಹಾರ ಪದ್ಧತಿಯ ಹಕ್ಕನ್ನು ಕಿತ್ತುಕೊಳ್ಳಬ ಯಸುವುದು ಸರಿಯಲ್ಲ. ನಮ್ಮ ರೈತರು ದನಕರುಗಳನ್ನು ಸಾಕುತ್ತಾರೆ. ವಯಸ್ಸಾದ ದನಗಳನ್ನು ಅವರು ಮಾರಾಟ ಮಾಡಲೇಬೇಕಾಗುತ್ತದೆ. ವಯಸ್ಸಾದ ದನಗಳನ್ನು ಮಾಂಸ ಕ್ಕಾಗಿ ಬಳಸಲಾಗುತ್ತದೆ. ಅವುಗಳ ಚರ್ಮವನ್ನು ಚರ್ಮೋ ದ್ಯಮಕ್ಕಾಗಿ ಬಳಸಲಾಗುತ್ತದೆ. ಕೆಲವು ಹಿಂದು ದೇವತೆಗ ಳಿಗೆ ಕೋಣವನ್ನು ಬಲಿಕೊಡುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ.

ಗೋವು ಕೆಲವು ಹಿಂದೂಗಳಿಗೆ ಪವಿತ್ರವಾದ ಪ್ರಾಣಿ. ಇನ್ನು ಕೆಲವರಿಗೆ ಕುರಿ ಪವಿತ್ರ. ಅದನ್ನು ಅವರು ಪೂಜಿಸುತ್ತಾರೆ ಮತ್ತು ಅದರ ಮಾಂಸವನ್ನು ತಿನ್ನುತ್ತಾರೆ. ಕೆಲವರಿಗೆ ಹಂದಿ ಪವಿತ್ರ. ಅದನ್ನು ಪೂಜಿಸುತ್ತಾರೆ ಮತ್ತು ಅದರ ಮಾಂಸವನ್ನು ತಿನ್ನುತ್ತಾರೆ. ಕೆಲವರಿಗೆ ಒಂಟೆ ಪವಿತ್ರ. ಅದರ ಮಾಂಸವನ್ನು ಅವರು ತಿನ್ನುತ್ತಾರೆ. ಜನ ಪವಿತ್ರವಾದುದ್ದನ್ನೇ ತಿನ್ನುತ್ತಾರೆ. ಅಪವಿತ್ರವಾದುದನ್ನು ತಿನ್ನು ವುದಿಲ್ಲ. ಒಂದು ಸಮುದಾಯದ ಆಹಾರ ಪದ್ಧತಿಯ ಮೇಲೆ ದಾಳಿ ಮಾಡುವುದು ಎಷ್ಟು ಸರಿ? ಕುರಿಗಳನ್ನು, ಕೋಳಿಗಳನ್ನು, ಹಂದಿಗಳನ್ನು ಮಂಸಕ್ಕಾಗಿಯೇ ಸಾಕು ವಂತೆ ದನಗಳನ್ನು ಸಹ ಮಾಂಸಕ್ಕಾಗಿಯೇ ಸಾಕುವಂತಾ ದರೆ ತಪ್ಪೇನಿದೆ? ಸಸ್ಯಹಾರಿಗಳು ಈ ಬಗ್ಗೆ ಉದಾರವಾಗಿರ ಬೇಕಲ್ಲವೇ?

ಮತಾಂತರದ ಗುಲ್ಲೆಬ್ಬಿಸಿ ಕ್ರೈಸ್ತರ ಮೇಲೆ ದಾಳಿ ಮಾಡಲಾಗುತ್ತಿದೆ. ಭಾರತ ಎಂಬ ಈ ಉಪಖಂಡದಲ್ಲಿ ಭಗವಾನ್ ಬುದ್ಧನ ಕಾಲದಿಂದ ಮತಾಂತರ ನಡೆಯುತ್ತಾ ಬಂದಿದೆ. ಅಶೋಕ ಚಕ್ರವರ್ತಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ನಂತರ ಅದರ ಪ್ರಚಾರಾರ್ಥ ಬೌದ್ಧ ಭಿಕ್ಷುಗಳನ್ನು ದೇಶವಿದೇಶಗಳಿಗೆ ಕಳಿಹಿಸಿದ್ದು ಇದೆ. ಅನಂತರ ಶಂಕರಾಚಾರ್ಯರು ಬೌದ್ಧರನ್ನು ವೈಧಿಕ ಧರ್ಮಕ್ಕೆ ಮತಾಂತರ ಮಾಡಿದ್ದೂ ಇದೆ. ಪಾಶ್ಚಾತ್ಯ ದೇಶ ಗಳಲ್ಲಿ ಹಿಂದೂ ಮತಪ್ರಚಾರ ಮತ್ತು ಮತಾಂತರ ನಡೆ ಯುತ್ತಿದೆ.

ನಮ್ಮ ದೇಶದ ಸಂವಿಧಾನ ನಮಗೆ ಮತಾಂತರದ ಹಕ್ಕನ್ನು ನೀಡಿದೆ. ಸ್ವತಃ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದರು ಮಾತ್ರವಲ್ಲ ದಲಿತ ರೆಲ್ಲರೂ ಬೌದ್ಧ ಧರ್ಮ ಸ್ವೀಕರಿಸಬೇಕೆಂದು ಕರೆ ನೀಡಿದ್ದಾರೆ. ನಾವು ಯಾರೂ ಇದೇ ಧರ್ಮದಲ್ಲಿ ಹುಟ್ಟಬೇಕೆಂದು ಅರ್ಜಿ ಹಾಕಿಕೊಂಡು ಹುಟ್ಟಿರುವುದಿಲ್ಲ. ಇಷ್ಟವಾದ ಧರ್ಮವನ್ನು ಅಂಗೀಕರಿಸಲು, ಅದನ್ನು ಆಚರಿಸಲು, ಅದನ್ನು ಪ್ರಚಾರ ಮಾಡಲು ಪ್ರತಿಯೊಬ್ಬನಿಗೆ ಹಕ್ಕಿದೆ. ಈ ಹಕ್ಕನ್ನು ಕಿತ್ತುಕೊ ಳ್ಳಲಾಗದು. ಬಲವಂತದ ಮತಾಂತರ ಸಾಧ್ಯವೇ ಇಲ್ಲ. ಬಲವಂತವಾಗಿ ಮತಾಂತರಗೊಂಡವ ನಿಗೆ ಅಥವಾ ಆಮಿಷಕ್ಕೆ ಒಳಗಾಗಿ ಮತಾಂತರ ಗೊಂಡವನಿಗೆ ತನ್ನ ಮೂಲ ಧರ್ಮಕ್ಕೆ ಮರಳಲು ಅವಕಾಶ ಇದ್ದೇ ಇದೆ.

ಮುಂಬೈ ಧಾಳಿಯಲ್ಲಿ ಸಿಕ್ಕಿಬಿದ್ದ ಭಯೋತ್ಪಾದಕ ಕಸಬ್

ಕ್ರೈಸ್ತರು ತಮ್ಮ ಧರ್ಮ ಪ್ರಚಾರ ಮಾಡುತ್ತಾರೆ. ಮತಾಂತರ ಮಾಡು ತ್ತಾರೆ ಎಂಬ ಆರೋಪ ಹೊರಿಸಿ ಅವರ ಮೇಲೆ ದಾಳಿ ಮಾಡಲು ಪ್ರಚೋದಿಸುವುದು ಹಿಂದೂಗಳಿಗೆ ಶೋಭೆ ತರುವ ವಿಷಯವಲ್ಲ.

ಒರಿಸ್ಸಾದಲ್ಲಿ ಸ್ವಾಮಿ ಲಕ್ಷ್ಮಣಾನಂದರನ್ನು ಕೊಲೆ ಮಾಡಿದ ಆರೋಪವನ್ನು ಕ್ರೈಸ್ತರ ಮೇಲೆ ಹೊರಿಸಿ ಅಲ್ಲಿನ ಬುಡಕಟ್ಟು ಸಮುದಾಯಗಳಿಗೆ ಸೇರಿದ ಕ್ರೈಸ್ತರ ಮೇಲೆ ಹಿಂದುತ್ವ ಸಂಘಟನೆಗಳು ನಡೆಸಿದ ದೌರ್ಜನ್ಯ ಹಿಂದೂ ಗಳ ಮೇಲೆ ಅಳಿಸಲಾಗದ ಕಳಂಕವನ್ನು ತಂದಿದೆ. ಕ್ರೈಸ್ತ ಸನ್ಯಾಸಿನಿಯೊಬ್ಬರ ಮೇಲೆ ಹಿಂದು ಯುವಕರು ಸಾಮೂ ಹಿಕ ಅತ್ಯಾಚಾರವೆಸಗಿದ ಪ್ರಕರಣವಂತೂ ಎಲ್ಲ ಸಜ್ಜನ ಹಿಂದುಗಳು ತಲೆತಗ್ಗಿಸುವಂತೆ ಮಾಡಿದೆ. ಪರಸ್ತ್ರೀಯರನ್ನು ತಮ್ಮ ತಾಯಿ, ತಮ್ಮ ಅಕ್ಕತಂಗಿಯರಂತೆ ಕಾಣಬೇಕೆಂಬ ಹಿಂದೂ ಸತ್ಪರಂಪರೆಗೆ ಇದರಿಂದ ಮಸಿ ಬಳಿದಂತಾಗಿದೆ. ಇಂತಹವರಿಂದ ಹಿಂದೂ ಧರ್ಮದ ರಕ್ಷಣೆ ಸಾಧ್ಯವೇ?

ಅಲ್ಪಸಂಖ್ಯಾತ ಕ್ರೈಸ್ತರು, ಮುಸಲ್ಮಾನರು ತಪ್ಪು ಮಾಡುವುದೇ ಇಲ್ಲ ಎಂದು ಹೇಳಲಾಗದು. ಅವರೂ ತಪ್ಪು ಮಾಡುತ್ತಾರೆ. ತಮ್ಮ ಧರ್ಮಗಳ ಕುರಿತಾದ ಪ್ರಚಾ ರದ ಸಂದರ್ಭದಲ್ಲಿ ಹಿಂದೂ ದೇವತೆಗಳನ್ನು ಕೀಳಾಗಿ ಚಿತ್ರಿಸಿ ಹಿಂದುಗಳ ಭಾವನೆಗಳಿಗೆ ನೋವುಂಟುಮಾಡುವ ಘಟನೆಗಳು ನಡೆದಿವೆ. ಇತ್ತೀಚಿನ ದಿನಗಳಲ್ಲಿ ಇಂತಹ ಪ್ರಕ ರಣಗಳು ಕಡಿಮೆಯಾಗಿವೆ. ಹೀಗೆ ಮಾಡುವುದು ಸರಿ ಯಲ್ಲ ಎಂಬ ತಿಳುವಳಿಕೆ ಅವರಲ್ಲಿಯೂ ಮೂಡುತ್ತಿರು ವುದು ಸ್ವಾಗತಾರ್ಹವಾಗಿದೆ. ಆದರೆ ಯಾರೋ ಕೆಲವರು ಮಾಡುವ ತಪ್ಪಿಗೆ ಅಥವಾ ಎಂದೋ ಕೆಲವರು ಮಾಡಿರ ಬಹುದಾದ ತಪ್ಪಿಗೆ ಇಂದು ಇಡೀ ಸಮುದಾಯವದರ ಮೇಲೆ ಆರೋಪ ಹೊರಿಸಿ ಅವರ ಮೇಲೆ ದಾಳಿ ಮಾಡಲು ಹೊರಡುವುದು ಎಷ್ಟು ಸರಿ? ಸಣ್ಣವರು ತಪ್ಪು ಮಾಡಿದಾಗ ಅವರಿಗೆ ಸಮಾಧಾನದಿಂದ ಬುದ್ಧಿ ಹೇಳಿ ತಿದ್ದುವುದು ದೊಡ್ಡವರ ಕರ್ತವ್ಯ. ಇದು ನಮ್ಮ ಪರಂಪರೆ. ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರು ದೌರ್ಜನ್ಯ ಮಾಡುವುದು ಪೌರುಷವಲ್ಲ.

ಹಿಂದೂ ಕೋಮಿಗೆ ಸೇರಿದವರೆಲ್ಲರೂ ಕೋಮು ವಾದಿಗಳಲ್ಲ. ಶತಮಾನಗಳಿಂದ ಅವರು ಮುಸಲ್ಮಾನ ರೊಂದಿಗೆ, ಕ್ರೈಸ್ತರೊಂದಿಗೆ, ಸಿಖ್ಖರೊಂದಿಗೆ ಸೌಹಾರ್ದತೆ ಯಿಂದ ಬದುಕಿ ಬಾಳಿದ್ದಾರೆ. ರಾಜಕೀಯ ಲಾಭಕ್ಕಾಗಿ ಹಿಂದುಗಳ ಸಂಖ್ಯಾಬಲದ ದುರ್ಲಾಭ ಪಡೆಯಲು ಹವ ಣಿಸುತ್ತಿರುವವರು ನೈಜ ಹಿಂದೂಗಳ ಪ್ರನಿಧಿಗಳಲ್ಲ.

ಇತ್ತೀಚೆಗೆ ಬೆಳಕಿಗೆ ಬಂದ ಕೆಲವು ಪ್ರಕರಣಗಳು ಈ ಹಿಂದುತ್ವ ಶಕ್ತಿಗಳ ನಿಜ ಬಣ್ಣವನ್ನು ಬಯಲು ಮಾಡಿವೆ. ಇವರು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಏನನ್ನೂ ಮಾಡಲು ಹೇಸಲಾರರು ಎಂದು ಸಾಬೀತಾಗಿದೆ. 2008ರ ಸೆಪ್ಟಂಬರ್ ತಿಂಗಳಲ್ಲಿ ಮಹಾರಾಷ್ಟ್ರದ ಮಾಲೆ ಗಾಂವ್ ಎಂಬಲ್ಲಿ ಬಾಂಬ್ ಸ್ಫೋಟ ಸಂಭವಿಸಿ ಹತ್ತಾರು ಜನ ಅಮಾಯಕರು ಬಲಿಯಾಗಿದ್ದರು. 'ಎಲ್ಲ ಭಯೋತ್ಪಾ ದಕರು ಮುಸಲ್ಮಾನರೇ' ಎಂಬ ಅಪಪ್ರಚಾರದ ಆರ್ಭಟ ದಲ್ಲಿ ಇದು ಸಹ ಮತಾಂದ ಮುಸಲ್ಮಾನರ ಕೃತ್ಯವೆಂದೇ ಭಾವಿಸಲಾಗಿತ್ತು. ಆದರೆ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳದ ದಕ್ಷ ಅಧಿಕಾರಿ ಹೇಮಂತ ಕರ್ಕರೆ ಮತ್ತು ಅವರ ಸಹೋದ್ಯೋಗಿಗಳು ನಡೆಸಿದ ತನಿಖೆಯಿಂದ ಮಾಲೆಗಾಂವ್ ಬಾಂಬ್ ಸ್ಫೋಟದ ರೂವಾರಿಗಳು ಸಾಧ್ವಿ ಪ್ರಜ್ಞಾಸಿಂಗ್ ಮತ್ತು 'ಅಭಿನವ ಭಾರತ್' ಎಂಬ ಹಿಂದುತ್ವ ಸಂಘಟನೆಗೆ ಸೇರಿದ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಶ್ರೀಕಾಂತ್ ಪುರೋಹಿತ್, ರಮೇಶ್ ಉಪಾಧ್ಯಾಯ, ರಾಖೇಶ್ ಧಾವಡೆ, ಸಮೀರ್ ಕುಲಕರ್ಣಿ ಮತ್ತು ಇತ

ಭಯೋತ್ಪಾದನೆ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ನಮಗೆ ಮತ್ತೊಬ್ಬ ರಿಂದ ಎಷ್ಟೇ ಅನ್ಯಾಯವಾಗಿದ್ದರೂ ಮತ್ತೊಬ್ಬರನ್ನು ಸಾಯಿಸುವ, ಅವರ ಮೇಲೆ ದೌರ್ಜನ್ಯ ಮಾಡುವ ಅಧಿಕಾರ ನಮಗಿಲ್ಲ. ಆದ್ದರಿಂದ ಭಯೋತ್ಪಾದನೆ ಯಲ್ಲಿ ತೊಡಗುವವರೆಲ್ಲರನ್ನೂ ನಾವು ಖಂಡಿಸಬೇಕು. ನಮ್ಮ ಧರ್ಮದವರು, ನಮ್ಮ ಜಾತಿಯವರು, ನಮ್ಮ ಭಾಷೆ ಮಾತನಾಡುವವರು ಎಂಬ ಕಾರಣಕ್ಕಾಗಿ ಭಯೋತ್ಪಾದಕರನ್ನು ಬೆಂಬಲಿಸುವುದು, ಅವರಿಗೆ ಸಹಾಯ ಮಾಡುವುದು, ಅವ ರಿಗೆ ರಕ್ಷಣೆ ನೀಡುವುದು ದೇಶದ್ರೋಹವಾ ಗುತ್ತದೆ. ಇದು ದೇಶದ ಕಾನೂನಿನ ವಿರು ದ್ಧವಾದ ಅಪರಾಧ ಮಾತ್ರವಲ್ಲ. ಇದು ಮಾನವೀಯತೆಯ ವಿರುದ್ಧದ ಅಪರಾಧ ವಾಗಿದೆ. ನಮ್ಮದು ಮಾನವ ಸಮಾಜ ಹೌದು. ಅದು ಮಾನವೀಯ ಸಮಾಜ ಆಗಬೇಕಾಗಿದೆ.

ರರು ಎಂದು ಬೆಳಕಿಗೆ ಬಂದಿದೆ. ಇವರೆಲ್ಲರೂ ಈಗ ಬಂಧನದಲ್ಲಿದ್ದು ಇವರ ವಿರುದ್ಧ ನ್ಯಾಯಾಲಯದ ಮುಂದೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಮಹತ್ತರವಾದ ಈ ಬೆಳವಣಿಗೆಯಿಂದ ದೇಶದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಗೆ ಆತಂಕಕಾರಿ ಆಯಾಮ ದೊರಕಿದಂತಾಗಿದೆ. ಇದುವರೆಗೆ ಎಲ್ಲಾ ಬಾಂಬ್ ಸ್ಫೋಟಗಳಲ್ಲಿ ಮುಸ್ಲಿಂ ಭಯೋತ್ಪಾದಕರತ್ತ ಬೆರಳು ಮಾಡಲಾಗುತ್ತಿತ್ತು. ಆದರೆ ಈಗ ಭಯೋತ್ಪಾದಕ ಕೃತ್ಯಗಳಲ್ಲಿ ಉಗ್ರ ಹಿಂದುತ್ವ ಸಂಘಟನೆಗಳ ಪಾತ್ರ ಬಯಲಾಗಿದೆ. ಆರ್.ಎಸ್.ಎಸ್. ಶಿಬಿರಗಳಲ್ಲಿ ಬಂದೂಕು ಚಲಾಯಿಸುವ ತರಬೇತಿ ನೀಡುತ್ತಿರುವುದು, ಆರ್.ಎಸ್.ಎಸ್. ಕಛೇರಿಗಳಲ್ಲಿ ಬಾಂಬ್ ತಯಾರಿಸುತ್ತಿರುವಾಗ ಅವುಗಳು ಸ್ಫೋಟಗೊಂಡು ಅದರ ಕಾರ್ಯಕರ್ತರು ಬಲಿಯಾದ ಘಟನೆಗಳು ಬೆಳೆಯುತ್ತಿರುವ ಹಿಂದೂ ಭಯೋತ್ಪಾದನೆಗೆ ಸಾಕ್ಷಿಗಳಾಗಿವೆ. ಸಾಧ್ವಿ ಪ್ರಜ್ಞಾ ಸಿಂಗ್ ಎ.ಬಿ.ವಿ.ಪಿ. ಎಂಬ ಹಿಂದುತ್ವ ಪರಿವಾರಕ್ಕೆ ಸೇರಿದ ವಿದ್ಯಾರ್ಥಿ ಸಂಘ ಟನೆಯ ನಾಯಕಿ, ಸಮೀರ್ ಕುಲಕರ್ಣಿ ಸಹ ಎ.ಬಿ.ವಿ.ಪಿ. ಮುಖಂಡ. ಈ ವಿದ್ಯಾರ್ಥಿ ಸಂಘಟನೆಯು ವಿದ್ಯಾರ್ಥಿಗಳ ನಡುವೆ ಮುಸಲ್ಮಾನರ, ಕ್ರೈಸ್ತರ ವಿರುದ್ಧ ದ್ವೇಷ ವನ್ನು ಬೆಳೆಸಿ ಹಿಂದೂ ವಿದ್ಯಾರ್ಥಿಗಳಲ್ಲಿರುವ ಧೈರ್ಯ ಸಾಹಸ ಮನೋಭಾವದ ದುರ್ಬಳಕೆ ಮಾಡುತ್ತಿದ್ದಂತೆ ಕಾಣುತ್ತಿದೆ. ಹುಬ್ಬಳ್ಳಿಯ ನ್ಯಾಯಾಲಯವೊಂದರಲ್ಲಿ ನಡೆದ ಬಾಂಬ್ ಸ್ಫೋಟದ ಸಂದರ್ಭದಲ್ಲಿಯೂ ಮುಸ್ಲಿಂ ಸಂಘಟನೆಗಳ ಬಗ್ಗೆ ಎಲ್ಲರೂ ಸಂಶಯ ವ್ಯಕ್ತಪಡಿಸಿದ್ದರು. ಆದರೆ ಈಗ ಪೊಲೀಸರು ಪ್ರಕರಣದ ರಹಸ್ಯವನ್ನು ಭೇದಿಸಿದ್ದು ಮಾಲೆಗಾಂವ್ ಮಾದರಿಯಲ್ಲೇ ಹಿಂದುತ್ವ ಸಂಘಟನೆಯವರು ನಡೆಸಿದ ಭಯೋತ್ಪಾದನೆ ಇದಾಗಿದೆ ಎಂದು ಬಹಿರಂಗ ಪಡಿಸಿದ್ದಾರೆ.

> **ಭಯೋತ್ಪಾದನೆಯನ್ನು ತಡೆಗಟ್ಟುವುದು ಹೇಗೆ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಶಸ್ತ್ರಾಸ್ತ್ರ ಪ್ರಯೋಗ, ಮಿಲಿಟರಿ ಕಾರ್ಯಚರಣೆಯಿಂದ ಭಯೋತ್ಪಾದನೆ ನಿಲ್ಲುವುದಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಬಾಂಬ್ ಬಂದೂಕುಗಳಿಂದ ಒಂದು ದೇಶ ಬಲಿಷ್ಠ ಆಗುವುದಿಲ್ಲ. ಭಾರತ ಹಾಗೂ ಪಾಕಿಸ್ತಾನ ಎರಡೂ ದೇಶಗಳ ಬಳಿ ಅಣ್ವಸ್ತ್ರಗಳಿವೆ. ಆದರೆ ಅವುಗಳನ್ನು ಪ್ರಯೋಗಿಸುವ ಸ್ಥಿತಿಯಲ್ಲಿ ನಾವೂ ಇಲ್ಲ, ಅವರೂ ಇಲ್ಲ. ಆ ದೇಶದ ಜೊತೆಯಲ್ಲಿ ನಮಗೆ ಇರುವ ಎಲ್ಲ ವಿವಾಧಗಳನ್ನು ದ್ವಿಪಕ್ಷೀಯ ಚರ್ಚೆಯ ಮೂಲಕ ತಾಳ್ಮೆಯಿಂದ ಬಗೆಹರಿಸಿಕೊಳ್ಳಲು ನಮಗೆ ಸಾಧ್ಯವಾಗಬೇಕು. ಆದರೆ ಈ ವಿಷಯದಲ್ಲಿ ಅಮೇರಿಕದಂತಹ ಸಾಮ್ರಾಜ್ಯಶಾಹಿ ದೇಶಗಳ ಮೇಲೆ ನಮ್ಮ ಅವಲಂಬನೆ ಇರಬಾರದು. ನಮ್ಮ ಎಲ್ಲ ನೆರೆಯ ದೇಶಗಳೊಂದಿಗೆ ಪರಸ್ಪರ ಸ್ನೇಹ, ಸಹಕಾರದೊಂದಿಗೆ ಬಾಳುವುದರಲ್ಲೇ ನಮ್ಮ ಹಿತವಿದೆ.**

ಭಯೋತ್ಪಾದಕರಿಗೆ ಧರ್ಮವಿಲ್ಲ

ದೇಶದಲ್ಲಿ ಕೋಮುಗಲಭೆಗಳು ಹೆಚ್ಚಿದಂತೆಲ್ಲಾ ಭಯೋತ್ಪಾದನೆಯೂ ಹೆಚ್ಚುತ್ತಿದೆ. ಕೋಮುವಾದ ಮತ್ತು ಭೀತಿವಾದ ಪರಸ್ಪರ ಒಂದನ್ನೊಂದು ಪೋಷಿಸಿ ಬೆಳೆಯುತ್ತವೆ. ಹಿಂದೂ ಭಯೋತ್ಪಾದನೆ ಹೆಚ್ಚುತ್ತಿರುವುದಕ್ಕೆ ಮುಸ್ಲಿಂ ಭಯೋತ್ಪಾದನೆ ಕಾರಣವಾಗಿರಬಹುದು. ಮುಸ್ಲಿಂ ಭಯೊತ್ಪಾದನೆ ಹೆಚ್ಚುತ್ತಿರುವುದಕ್ಕೆ ಮುಸ್ಲಿಂ ಸಮುದಾಯದ ಮೇಲೆ ಹೆಚ್ಚುತ್ತಿರುವ ದಾಳಿ ದೌರ್ಜನ್ಯಗಳೇ ಕಾರಣವಾಗಿರಬಹುದು. ಆದರೆ ಈ ಒಟ್ಟಾರೆ ಬೆಳವಣಿಗೆ ಅತ್ಯಂತ ಅಪಾಯಕಾರಿಯಾಗಿದೆ.

ಭಯೋತ್ಪಾದಕರನ್ನು ಮುಸಲ್ಮಾನರೆಂದಾಗಲಿ, ಹಿಂದೂಗಳೆಂದಾಗಲಿ, ಕ್ರೈಸ್ತರೆಂದಾಗಲಿ, ಸಿಖ್‌ರೆಂದಾಗಲಿ ಗುರುತಿಸುವುದು ಸರಿಯಲ್ಲ. ಧರ್ಮ ರಕ್ಷಣೆಯ ಹೆಸರಿನಲ್ಲಿ ಇನ್ನೊಂದು ಧರ್ಮದವರನ್ನು ಸಾಯಿಸುವುದು ಧರ್ಮ ವಿರೋಧಿಯಾಗಿದೆ. ಅಧರ್ಮದಿಂದ ಧರ್ಮ ರಕ್ಷಣೆ ಸಾಧ್ಯವಿಲ್ಲ. ಭಯೋತ್ಪಾದಕರು ತಮ್ಮ ಸ್ವಧರ್ಮಿಯರನ್ನೂ ಸಾಯಿಸುತ್ತಾರೆ. ಮುಂಬೈ ಸ್ಫೋಟದಲ್ಲಿ ಸುಮಾರು 40 ಜನ ಮುಸಲ್ಮಾನರು ಸತ್ತಿದ್ದಾರೆ. ಹಿಂದೂ ಸನ್ಯಾಸಿನಿ ಪ್ರಜ್ಞಾ ಸಿಂಗ್ ಮತ್ತು ಇತರರು ಸೇರಿ ಮಾಲೆಗಾಂವ್‌ನಲ್ಲಿ ಬಾಂಬ್ ಸ್ಫೋಟ ಮಾಡಿದಾಗ ಸತ್ತವರಲ್ಲಿ ಹಿಂದೂಗಳೂ ಇದ್ದರು.

ಪಾಕಿಸ್ತಾನಿ ಮೂಲದ ಭಯೋತ್ಪಾದಕರು ಮುಂಬೈ ಮೇಲೆ ನಡೆಸಿದ ದಾಳಿಯನ್ನು ಎಲ್ಲಾ ಮುಸ್ಲಿಂ ಸಂಘಟನೆಗಳೂ ಬಲವಾಗಿ ಖಂಡಿಸಿವೆ. ಅಮಾಯಕರನ್ನು ಸಾಯಿಸುವವರು ಮುಸಲ್ಮಾನರಲ್ಲ ಎಂದು ಅವರು ಸಾರಿದ್ದಾರೆ. ಭಾರತದ ಮುಸಲ್ಮಾನರಿಗೆ ಪಾಕಿಸ್ತಾನದ ಯಾವ ನೆರವು ಬೇಕಿಲ್ಲ. ನಮ್ಮ ವಿಷಯದಲ್ಲಿ ನಿಮ್ಮ ಹಸ್ತಕ್ಷೇಪ ಬೇಕಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ನಾವು ಭಾರತದ ಮಣ್ಣಿನಲ್ಲಿ ಹುಟ್ಟಿದ್ದೇವೆ. ನಾವು ಇದೇ ಮಣ್ಣಲ್ಲಿ ಮಣ್ಣಾಗಲು ಬಯಸುತ್ತೇವೆ ಎಂಬ ಮಾತುಗಳು ಸಹ ಅವರಿಂದ ಕೇಳಿಬಂದಿವೆ.

ಕಂಧಮಾಲ್‌ನಲ್ಲಿ ಕ್ರೈಸ್ತ ಸನ್ಯಾಸಿನಿಯ ಮೇಲೆ ಭಜರಂಗದಳದ ಯುವಕರು ಅತ್ಯಾಚಾರ ಮಾಡಿದ ಪ್ರಕರಣದ ಬಗ್ಗೆ ಸದ್ಭಾವನೆಯ ಹಿಂದೂಗಳು ದೊಡ್ಡಸಂಖ್ಯೆಯಲ್ಲಿ ತಮ್ಮ ಆಕ್ಷೇಪ, ಆತಂಕ ವ್ಯಕ್ತಪಡಿಸಿದ್ದಾರೆ. ಹಿಂದೆ ಕ್ರೈಸ್ತ ಪಾದ್ರಿಗ್ರ್ಯಾಹಂ ಸ್ಟೈನ್ಸ್ ಮತ್ತು ಆತನ ಇಬ್ಬರು ಪುಟ್ಟ ಮಕ್ಕಳನ್ನು ಜೀವಂತ ಸುಟ್ಟು ಹಾಕಿದ ಘಟನೆಯನ್ನೂ ದೇಶದ ಎಲ್ಲೆಡೆ ಖಂಡಿಸಲಾಗಿತ್ತು. ಹಿಂದೂಗಳು ಬಹುತೇಕವಾಗಿ ಶಾಂತಿಪ್ರಿಯರಾಗಿದ್ದು ಹಿಂದುತ್ವ ಶಕ್ತಿಗಳ ಕೋಮುವಾದಿ ರಾಜಕೀಯಕ್ಕೆ ತಮ್ಮ ಅಸಮ್ಮತಿಯನ್ನು ವ್ಯಕ್ತ ಪಡಿಸುತ್ತಾ ಇದ್ದಾರೆ, ಕೆಲವೊಮ್ಮೆ ಮೌನವಾಗಿ, ಮತ್ತೆ ಕೆಲವೊಮ್ಮೆ ಮೌನಮುರಿದು. ಬಲಪಂಥೀಯ ಹಿಂದುತ್ವ ಶಕ್ತಿ ಗಳಿಗೆ ಇದು ನುಂಗಲಾರದ ತುತ್ತಾಗಿದೆ. ಬಹುಸಂಖ್ಯಾತ ಹಿಂದೂಗಳ ಬೆಂಬಲವನ್ನು ಗಿಟ್ಟಿಸಿಕೊಳ್ಳಲು ವಿವಿಧ ರೀತಿಯ ದುಸ್ಸಾಹಸಗಳಿಗೆ ಅವರು ಇಳಿಯುತ್ತಿದ್ದಾರೆ. ಆದರೆ ಸ್ವಾಮಿ ವಿವೇಕಾನಂದರಂತಹ ಮಹಾನ್ ಮಾನವತಾವಾದಿಗಳ ಭಾರತದಲ್ಲಿ ದ್ವೇಷದ ಈ ರಾಜಕೀಯ ಯಶಸ್ವಿಯಾಗದು.

ಭಯೋತ್ಪಾದನೆಯನ್ನು ತಡೆಗಟ್ಟುವುದು ಹೇಗೆ ಎಂಬ ಪ್ರಶ್ನೆ ಮುಖ್ಯವಾಗುತ್ತದೆ. ಶಸ್ತ್ರಾಸ್ತ್ರ ಪ್ರಯೋಗ, ಮಿಲಿಟರಿ ಕಾರ್ಯಚರಣೆಯಿಂದ ಭಯೋತ್ಪಾದನೆ ನಿಲ್ಲುವುದಿಲ್ಲ ಎಂಬುದು ಈಗಾಗಲೇ ಸಾಬೀತಾಗಿದೆ. ಬಾಂಬ್ ಬಂದೂಕುಗಳಿಂದ ಒಂದು ದೇಶ ಬಲಿಷ್ಠ ಆಗುವುದಿಲ್ಲ. ಭಾರತ ಹಾಗೂ ಪಾಕಿಸ್ತಾನ ಎರಡೂ ದೇಶಗಳ ಬಳಿ ಅಣ್ವಸ್ತ್ರಗಳಿವೆ. ಆದರೆ ಅವುಗಳನ್ನು ಪ್ರಯೋಗಿಸುವ ಸ್ಥಿತಿಯಲ್ಲಿ ನಾವೂ ಇಲ್ಲ, ಅವರೂ ಇಲ್ಲ. ಆ ದೇಶದ ಜೊತೆಯಲ್ಲಿ ನಮಗೆ ಇರುವ ಎಲ್ಲ ವಿವಾಧಗಳನ್ನು ದ್ವಿಪಕ್ಷೀಯ ಚರ್ಚೆಯ ಮೂಲಕ ತಾಳ್ಮೆಯಿಂದ ಬಗೆಹರಿಸಿಕೊಳ್ಳಲು ನಮಗೆ ಸಾಧ್ಯವಾಗಬೇಕು. ಆದರೆ ಈ ವಿಷಯದಲ್ಲಿ ಅಮೇರಿಕದಂತಹ ಸಾಮ್ರಾಜ್ಯಶಾಹಿ ದೇಶಗಳ ಮೇಲೆ ನಮ್ಮ ಅವಲಂಬನೆ ಇರಬಾರದು. ನಮ್ಮ ಎಲ್ಲ ನೆರೆಯ ದೇಶಗಳೊಂದಿಗೆ ಪರಸ್ಪರ ಸ್ನೇಹ, ಸಹಕಾರದೊಂದಿಗೆ ಬಾಳುವುದರಲ್ಲೇ ನಮ್ಮ ಹಿತವಿದೆ.

ಪಾಕಿಸ್ತಾನ ನಮಗೆ ಆದರ್ಶವಲ್ಲ. ಅದರ ತಪ್ಪುಗಳಿಂದ ಅದು ಪಾಠ ಕಲಿಯಬೇಕು. ಅದೇ ತಪ್ಪುಗಳನ್ನು ನಾವೂ ಮಾಡಬಾರದು. ಸಾಧ್ವಿ ಪ್ರಜ್ಞಾಸಿಂಗ್ ನಮಗೆ ಮಾದರಿಯಲ್ಲ. ಪರಮತ ಸಹಿಷ್ಣುತೆ ಎಂಬುದು ವಿಶ್ವಕ್ಕೆ ಭಾರತದ ಸಂದೇಶ. ಇಂದು ಮುಸ್ಲಿಂ, ಹಿಂದೂ ಹಾಗೂ ಕ್ರೈಸ್ತ ವಿದ್ಯಾರ್ಥಿ ಯುವಜನರು ಭಯೋತ್ಪಾದನೆಯತ್ತ ಆಕರ್ಷಿತರಾಗುತ್ತಿರುವುದು ನಿಜ. ಕೋಮುಗಲಭೆಗಳಲ್ಲಿ, ಭಯೋತ್ಪಾದಕ ಕೃತ್ಯಗಳಲ್ಲಿ ವಿದ್ಯಾರ್ಥಿ ಯುವಜನರ ದುರ್ಬಳಕೆಯೂ ಆಗುತ್ತಿದೆ. ವಿದ್ಯಾವಂತರಾಗಿದ್ದರೂ ಉದ್ಯೋಗವಿಲ್ಲದೆ ನಿರುದ್ಯೋಗಿಗಳಾಗಿ ಅಲೆಯುವ ಯುವಕರು ಸಮಾಜಘಾತುಕ ಶಕ್ತಿಗಳ ಸಂಪರ್ಕಕ್ಕೆ ಬಂದು ಜೀವ ವಿರೋಧಿಗಳಾಗುತ್ತಾರೆ. ಇದನ್ನು ತಡೆಗಟ್ಟಲು ವಿದ್ಯಾರ್ಥಿ ಯುವಜನರ ನಡುವೆ ಜಾಗೃತಿ ಅಗತ್ಯವಿದೆ. ಕೋಮುವಾದ ಮತ್ತು ಭಯೋತ್ಪಾದನೆಯ ನಡುವಿನ ಸಂಬಂಧವನ್ನು ಅವರು ಅರ್ಥಮಾಡಿಕೊಳ್ಳಲು ಸಾಧ್ಯವಾಗಬೇಕು. ಧರ್ಮದ ಆಧಾರದಲ್ಲಿ ನಮ್ಮನ್ನು ಸಂಘಟಿಸ ಬಯಸುವವರ, ಧರ್ಮದ ಹೆಸರಿನಲ್ಲಿ ಪರಸ್ಪರ ಹೊಡೆದಾಡಲು ಪ್ರಚೋದಿಸುವವರ ಬಗ್ಗೆ ಯುವ ಜನತೆ ಎಚ್ಚರವಾಗಿರಬೇಕಾಗಿದೆ. ಶಿಕ್ಷಕರಿಗೆ ದೊಡ್ಡ ಜವಾಬ್ದಾರಿಯಿದೆ.

ಭಯೋತ್ಪಾದನೆ ಯಾವ ಕಾರಣಕ್ಕೂ ಸಮರ್ಥನೀಯವಲ್ಲ. ನಮಗೆ ಮತ್ತೊಬ್ಬರಿಂದ ಎಷ್ಟೇ ಅನ್ಯಾಯವಾಗಿದ್ದರೂ ಮತ್ತೊಬ್ಬರನ್ನು ಸಾಯಿಸುವ, ಅವರ ಮೇಲೆ ದೌರ್ಜನ್ಯ ಮಾಡುವ ಅಧಿಕಾರ ನಮಗಿಲ್ಲ. ಆದ್ದರಿಂದ ಭಯೋತ್ಪಾದನೆಯಲ್ಲಿ ತೊಡಗುವವರೆಲ್ಲರನ್ನೂ ನಾವು ಖಂಡಿಸಬೇಕು. ನಮ್ಮ ಧರ್ಮದವರು, ನಮ್ಮ ಜಾತಿಯವರು, ನಮ್ಮ ಭಾಷೆ ಮಾತನಾಡುವವರು ಎಂಬ ಕಾರಣಕ್ಕಾಗಿ ಭಯೋತ್ಪಾದಕರನ್ನು ಬೆಂಬಲಿಸುವುದು, ಅವರಿಗೆ ಸಹಾಯ ಮಾಡುವುದು, ಅವರಿಗೆ ರಕ್ಷಣೆ ನೀಡುವುದು ದೇಶದ್ರೊಹವಾಗುತ್ತವೆ. ಇದು ದೇಶದ ಕಾನೂನಿನ ವಿರುದ್ಧವಾದ ಅಪರಾಧ ಮಾತ್ರವಲ್ಲ. ಇದು ಮಾನವೀಯತೆಯ ವಿರುದ್ಧದ ಅಪರಾಧವಾಗಿದೆ. ಭಯೋತ್ಪಾದನೆ ಮತ್ತು ಕೋಮುವಾದ ಮಾನವೀಯತೆಯ ವಿರುದ್ಧದ ಅಪರಾಧಗಳಾಗಿವೆ. ನಮ್ಮದು ಮಾನವ ಸಮಾಜ ಹೌದು. ಅದು ಮಾನವೀಯ ಸಮಾಜ ಆಗಬೇಕಾಗಿದೆ.

(ಸೌಜನ್ಯ: ಎಸ್.ಎಫ್.ಐ ಪ್ರಕಟಿಸಿರುವ ಕಿರು ಹೊತ್ತಿಗೆ) □

ಬಸವಣ್ಣನ ವಚನ ಅಂಬೇಡ್ಕರ್ ಪ್ರಜ್ಞೆ

ಡಾ.ಎಸ್.ನರೇಂದ್ರ ಕುಮಾರ್

ಬಸವಣ್ಣನ ಕಾಲಘಟ್ಟಕ್ಕಾಗಲೇ ದೇವಾಲಯವೆಂಬುದು ಸಾಮೂಹಿಕ ಒಳಗೊಳ್ಳುವಿಕೆಯ ಭಕ್ತಿಯ, ಆಧ್ಯಾತ್ಮದ ಅಥವಾ ಆರಾಧನೆಯ ಕೇಂದ್ರವಾಗದೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಅಸಮಾನತೆಯ ಮತ್ತು ಶೋಷಣೆಯ ಕೇಂದ್ರವಾಗಿತ್ತು ಎನ್ನುವುದಿಲ್ಲ ಮುಖ್ಯವಾದ ಅಂಶ. ಸಮಾಜದ ಅರ್ಧದಷ್ಟಿರುವ ಮಹಿಳೆಯರು ಹಾಗೂ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟವರಿಗೆ ದೇವಾಲಯ ಪ್ರವೇಶ ನಿಶಿದ್ಧವಾಗಿತ್ತು. ಅಲ್ಲದೆ ಅದಾಗಲೇ ದೇವದಾಸಿ ಪದ್ಧತಿ ಜಾರಿಗೆ ಬಂದಿತ್ತು. ಮಹಿಳೆಗೆ ದೇವಾಲಯ ಪ್ರವೇಶ ನಿಶೇಧ ಎನ್ನುವ ಧರ್ಮದ ಹೆಸರಿನಲ್ಲೆ ದೇವದಾಸಿ ಪದ್ಧತಿಯು ಜಾರಿಗೊಂಡು ತಳಸಮುದಾಯದ ಮಹಿಳೆಯರ ಮೇಲೆ ಲೈಂಗಿಕ ಶೋಷಣೆ ಕೂಡ ನಡೆಯುತ್ತಿತ್ತು. ಹೀಗೆ ಧಾರ್ಮಿಕ ನಂಬಿಕೆಯ ಹಿನ್ನೆಲೆಯಲ್ಲಿ ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯನ್ನು ಪ್ರಚೋದಿಸುವ ಇಂತಹ ದೇವಾಲಯವನ್ನೇ ಬಸವಣ್ಣ ನಿರಾಕರಿಸುತ್ತಾನೆ.

ಉಳ್ಳವರು ಶಿವಾಲಯ ಮಾಡುವರು
ನಾನೇನ ಮಾಡಲಿ ಬಡವನಯ್ಯಾ
ಎನ್ನ ಕಾಲೇ ಕಂಬ, ದೇಹವೇ ದೇಗುಲ
ಶಿರ ಹೊನ್ನ ಕಲಶವಯ್ಯಾ
ಕೂಡಲಸಂಗಮದೇವಾ, ಕೇಳಯ್ಯಾ
ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಇದು ಸುಪ್ರಸಿದ್ಧವಾದ ಬಸವಣ್ಣನವರ ವಚನ. ಈ ವಚನವನ್ನು ಮತ್ತಮತ್ತೆ ಓದಿದಂತೆ ಅದು ಹೊರಡಿಸುವ ಧ್ವನಿ, ಅರ್ಥ ಗಳು ಯಾವಾಗಲೂ ಹೊಸತನ್ನೆ ಹೇಳುತ್ತದೆ. ಅಲ್ಲದೆ ಸಮಕಾಲೀನ ವಾಸ್ತವ ವಿದ್ಯಮಾನಗಳೊಟ್ಟಿಗೂ ಸಂವಾದಿಸುತ್ತದೆ. ಅದರಲ್ಲೂ ಅಂಬೇಡ್ಕರ್ ಅವರ ಚಿಂತನೆ, ಹೋರಾಟಗಳ ಹಿನ್ನೆಲೆಯಲ್ಲಿ ಈ ವಚನ ಬಹಳ ಮಹತ್ವಪೂರ್ಣವಾದುದು ಎನಿಸುತ್ತದೆ.

ಈ ವಚನದ ಚರ್ಚೆಗೂ ಮುನ್ನ-12ನೇ ಶತಮಾನದ ಕನ್ನಡನಾಡಿನ ಬಸವಣ್ಣನ ಬಗ್ಗೆ 20ನೇ ಶತಮಾನದ ಮಹಾರಾಷ್ಟ್ರ ನೆಲದ ಅಂಬೇಡ್ಕರ್ ಅವರಿಗೆ ಗೊತ್ತಿತ್ತಾ ಎನ್ನುವ ಕುತೂಹಲ ಮೂಡುವುದು ಸಹಜ. ಉತ್ತರಕ್ಕಾಗಿ ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಎಸ್.ನಿಜಲಿಂಗಪ್ಪ ಅವರ "ನನ್ನ ಜೀವನ ಮತ್ತು ರಾಜಕೀಯ" ಎನ್ನುವ ಆತ್ಮಕಥನವನ್ನು ಗಮನಿಸಬಹುದು. ನಿಜಲಿಂಗಪ್ಪ ಹಾಗೂ ಅಂಬೇಡ್ಕರ್ ಅವರು ಒಳ್ಳೆಯ ಗೆಳೆಯರಾಗಿದ್ದರಲ್ಲದೆ ಆಗಾಗ ರಾಷ್ಟ್ರ, ರಾಜಕಾರಣ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಪರಸ್ಪರ ಭೇಟಿಯಾದಾಗಲೆಲ್ಲ ಚರ್ಚಿಸುತ್ತಿರುತ್ತಾರೆ. ಅಂಬೇಡ್ಕರ್ ಅವರ ಕಾಳಜಿ ಮತ್ತು ಹೋರಾಟಗಳನ್ನು ಗಮನಿಸಿದ್ದ ನಿಜಲಿಂಗಪ್ಪ ಅವರು; ಬಸವಣ್ಣನು 12ನೇ ಶತಮಾನದಲ್ಲೆ ಅಸ್ಪೃಶ್ಯತೆ ಮತ್ತು ಜಾತಿ ವಿನಾಶಕ್ಕಾಗಿ ಹೋರಾಡಿದ ಬಗ್ಗೆ, ಅಂತರ್ಜಾತಿ ವಿವಾಹ ಹಾಗೂ ಸಹಭೋಜನಗಳನ್ನು ನೆರವೇರಿಸಿದ್ದ ಬಗ್ಗೆ ಹಾಗೂ ಸಮಾನತಾ ಸಮಾಜದ ಕನಸನ್ನು ಕಂಡಿದ್ದ ಬಗ್ಗೆ ತಿಳಿಸುತ್ತಾರೆ. ಈ ಕುರಿತು ತೀವ್ರ ಆಸಕ್ತಿಯನ್ನು ತಾಳಿದ ಅಂಬೇಡ್ಕರ್ ಅವರಿಗೆ ನಿಜಲಿಂಗಪ್ಪನವರು ಬಸವಣ್ಣನ ಬಗ್ಗೆ ತಮ್ಮ ಬಳಿ ಇದ್ದ ಕೆಲವು ಇಂಗ್ಲಿಷ್ ಆಕರಗಳನ್ನು ನೀಡುತ್ತಾರೆ. ಅವುಗಳನ್ನು ತಾಳ್ಮೆಯಿಂದ ಓದಿದ ಅಂಬೇಡ್ಕರ್ ಅವರು, ನಿಜಲಿಂಗಪ್ಪನವರನ್ನು ಕೆಲವು ದಿನಗಳ ನಂತರ ಭೇಟಿಯಾದ ಸಂದರ್ಭದಲ್ಲಿ ತೀವ್ರ ವಿಷಾದದಿಂದ "Basavanna was the greatest man in the world but Lingayats are Pocketed him" ಎಂದು ಹೇಳುತ್ತಾರೆ. ಇದರ ಉಲ್ಲೇಖ ನಿಜಲಿಂಗಪ್ಪನವರ ಆತ್ಮಕಥನದಲ್ಲಿದೆ. ಅಂಬೇಡ್ಕರ್ ಅವರು ಬಸವಣ್ಣನವರನ್ನು ಕುರಿತು ಹೇಳಿದ ಈ ಮಾತುಗಳು ಇಂದಿಗೂ ಚರ್ಚಾರ್ಹ ವಿಷಯವಾಗಿದೆ. ಬಸವಣ್ಣನ ಕಾಲಕ್ಕೆ ಅತ್ಯಂತ ಚಲನ ಶೀಲವಾಗಿದ್ದ ಇಡೀ ವಚನ ಚಳವಳಿ ಅಥವಾ ಶರಣ ಚಳವಳಿ ಅನಂತರ ಸ್ಥಾವರಗೊಂಡದ್ದು ಮತ್ತು ಕಾಲಕಾಲಕ್ಕೆ ಇನ್ನಷ್ಟು ಸ್ಥಾವರಗೊಳ್ಳುತ್ತಿರುವುದನ್ನು ಗಮನಿಸಿದರೆ ನಮಗೆ ನಾವೇ ಆತ್ಮಾವಲೋಕನ ಮಾಡಿಕೊಳ್ಳಬೇಕೆನಿಸುತ್ತದೆ. ಈ ಕಾರಣಕ್ಕಾಗೇ ಈ ವಚನದ ಮರುಚರ್ಚೆಯನ್ನು ಇಲ್ಲಿ ಮಾಡಿದ್ದೇನೆ.

ಅಂಬೇಡ್ಕರ್ ಪ್ರಜ್ಞೆಯ ಹಿನ್ನೆಲೆಯಲ್ಲಿ ಈ ವಚನವನ್ನು ಕೆಲವು ಪ್ರಮುಖ ಆಯಾಮಗಳಲ್ಲಿ ನೋಡಲು ಸಾಧ್ಯ. ಅವುಗಳೆಂದರೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಭಾರತದ ಸಂದರ್ಭದಲ್ಲಿ ಇವು ಮೂರು ಪರಿಕಲ್ಪನೆಗಳೂ ಪರಸ್ಪರ ಅಂತರ್ ಸಂಬಂಧ ಹೊಂದಿರುವಂತವು ಅದರಲ್ಲೂ ವೈದಿಕ ಹಿಡಿತದ ಹಿಂದೂ ಧರ್ಮದಲ್ಲಿ ಇವುಗಳು ಒಂದಕ್ಕೊಂದು ಬೆಸೆದುಕೊಂಡೇ ಇರುವಂತವು. ಹಾಗಾಗಿ ಇವೆಲ್ಲವುಗಳ ಜೊತೆಜೊತೆಗೇ ಈ ವಚನವನ್ನು ಇಲ್ಲಿ ಚರ್ಚಿಸಲು ಸಾಧ್ಯ.

ಬಸವಣ್ಣನ ಕಾಲಘಟ್ಟಕ್ಕಾಗಲೇ ದೇವಾಲಯವೆಂಬುದು ಸಾಮೂಹಿಕ ಒಳಗೊಳ್ಳುವಿಕೆಯ ಭಕ್ತಿಯ, ಆಧ್ಯಾತ್ಮದ ಅಥವಾ ಆರಾಧನೆಯ ಕೇಂದ್ರವಾಗದೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಅಸಮಾನತೆಯ ಮತ್ತು ಶೋಷಣೆಯ ಕೇಂದ್ರವಗಿತ್ತು ಎನ್ನುವುದಿಲ್ಲ ಮುಖ್ಯವಾದ ಅಂಶ. ಸಮಾಜದ ಅರ್ಧದಷ್ಟಿರುವ ಮಹಿಳೆಯರು ಹಾಗೂ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟವರಿಗೆ ದೇವಾಲಯ ಪ್ರವೇಶ ನಿಶಿದ್ಧವಾಗಿತ್ತು. ಅಲ್ಲದೆ ಅದಾಗಲೇ ದೇವದಾಸಿ ಪದ್ಧತಿ ಜಾರಿಗೆ ಬಂದಿತ್ತು. ಮಹಿಳೆಗೆ ದೇವಾಲಯ ಪ್ರವೇಶ ನಿಶೇಧ ಎನ್ನುವ ಧರ್ಮದ ಹೆಸರಿನಲ್ಲೆ ದೇವದಾಸಿ ಪದ್ಧತಿಯು ಜಾರಿಗೊಂಡು ತಳಸಮುದಾಯದ ಮಹಿಳೆಯರ ಮೇಲೆ ಲೈಂಗಿಕ ಶೋಷಣೆ ಕೂಡ ನಡೆಯುತ್ತಿತ್ತು. ಹೀಗೆ ಧಾರ್ಮಿಕ ನಂಬಿಕೆಯ ಹಿನ್ನೆಲೆಯಲ್ಲಿ ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯನ್ನು ಪ್ರಚೋದಿಸುವ ಇಂತಹ ದೇವಾಲಯವನ್ನೇ ಬಸವಣ್ಣ ನಿರಾಕರಿಸುತ್ತಾನೆ. ಆತ ಸ್ವತಃ ಶೈವನಾಗಿದ್ದರಿಂದ ಶಿವಾಲಯ ವನ್ನು ನಿರಾಕರಿಸುತ್ತಾನೆ. ಇದನ್ನು ಎಲ್ಲಾ ದೇವಾಲಯಗಳನ್ನು ಕುರಿತೂ ಅನ್ವಯಿಸಬಹುದು. ಆ ಮೂಲಕ ನಿರ್ಜೀವ ವಸ್ತುಗಳಾದ ಕಲ್ಲುಮಣ್ಣು ಇತ್ಯಾದಿಗಳಿಂದ ಕಟ್ಟಿದ ದೇವಾಲಯ ಪವಿತ್ರ ಎಂಬುದನ್ನು ಸಂಪೂರ್ಣ ಭಗ್ನಗೊಳಿಸಿ, ಜೀವಿಸುವ ಪ್ರತಿಯೊಬ್ಬ ಮಾನವನೂ ಪವಿತ್ರ ಎಂಬ ಪರಿಕಲ್ಪನೆಯನ್ನು ಸ್ಥಾಪಿಸುತ್ತಾನೆ. ಇದೊಂದು ಅಪೂರ್ವ ಚಿಂತನೆಯಾಗಿದೆ

ಈ ವಚನದ ಆರಂಭದ ಎರಡು ಸಾಲುಗಳು ಅರ್ಥಿಕ ಹಾಗೂ ರಾಜಕೀಯ ಆಯಾಮವನ್ನೂ ಹೊಂದಿದೆ. ಆ ಕಾಲದಲ್ಲಿ ದೇವಾಲ ಯಗಳನ್ನು ಯಾರು ಕಟ್ಟಿಸುತ್ತಿದ್ದರು ಮತ್ತು ಅವು ಯಾರ ಅಧೀನದಲ್ಲಿ ಇರುತಿದ್ದವು ಎಂಬುದು ಗಮನಾರ್ಹ ಅಂಶ. ದೇವಾಲಯಗಳನ್ನು ಕಟ್ಟಿಸುತ್ತಿದ್ದವರು ಅಂದಿನ ರಾಜರು, ಪಾಳೇಗಾರರು,

ಜಮೀನ್ದಾರರು ಎಂದರೆ ಉಳ್ಳವರು. ಆದರೆ ಹೀಗೆ ಕಟ್ಟಿಸಿದ ದೇವಾಲಯಗಳು ಆನಂತರ ವೈದಿಕ ಪುರೋಹಿತ ಹಿಡಿತಕ್ಕೆ ಒಳಪಡುತ್ತಿದ್ದವು. ಇಂತಹ ದೇವಾಲಯಕ್ಕೆ ಕ್ಷೇತ್ರದಿಂದ, ಊರವರಿಂದ ಬರುತ್ತಿದ್ದ ದೇಣಿಗೆ-ಆದಾಯಗಳ ಜೊತೆಗೇ ಆ ದೇವಾಲಯದ ವ್ಯಾಪ್ತಿಗೆ ಒಳಪಡುವ ಉತ್ಪನ್ನಗಳೆಲ್ಲವೂ ಆ ದೇವಾಲಯಕ್ಕೆ ಸಂಬಂಧಿಸಿದ ಪುರೋಹಿತನ ಮತ್ತು ಅವನ ಕುಟುಂಬದವರಿಗೇ ವಂಶ ಪಾರಂಪರ್ಯವಾಗಿ ದಕ್ಕುತ್ತಿದ್ದವು. ಯಾವುದೇ ದೈಹಿಕ ಶ್ರಮವಿಲ್ಲದೆ ಸಮೃದ್ಧ ಜೀವನ ನಡೆಸುವ, ಇಡೀ ಸಮಾಜವನ್ನು ಮೌಢ್ಯ ಅಸಮಾನತೆಗಳ ಅಂಧಕಾರದಲ್ಲಿ ಕೆಡವಿದ ಈ ಶ್ರಮ ವಿರೋಧಿ ವರ್ಗವನ್ನು ಮತ್ತು ಈ ವರ್ಗವು ಸೃಷ್ಟಿಸಿದ ತಾನೇ ಶ್ರೇಷ್ಠ ಎಂಬ ಹುಸಿ ಪ್ರತಿಷ್ಠೆಯನ್ನು ಒಟ್ಟೊಟ್ಟಿಗೇ ಈ ವಚನವು ನಿರಾಕರಿಸುತ್ತದೆ. ಜೊತೆಗೆ ವಚನಕಾರರು/ಶರಣರು ಕಾಯಕ ನಿಷ್ಠೆಗೆ ಸಮಾನತೆಗೆ ಮತ್ತು ವ್ಯಕ್ತಿ ಗೌರವಕ್ಕೆ ಮಹತ್ವ ಕೊಟ್ಟಿದ್ದನ್ನೂ, ಶ್ರಮವಿಲ್ಲದ ಆದಾಯ ಅನೈತಿಕವಾದುದು ಎಂಬ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತ ಪುರೋಹಿತಶಾಹಿಗೆ ಅವಲಂಬನೆ ಯಾಗುವುದನ್ನು ಇದು ವಿರೋಧಿಸುತ್ತದೆ. ಅಂಬೇಡ್ಕರ್ ಅವರು ಹೇಳುವ "ನಿಮ್ಮ ನಿಮ್ಮ ಅದೃಷ್ಟವನ್ನು ನಂಬಬೇಡಿ, ನಿಮ್ಮ ಶ್ರಮದಲ್ಲಿ ನಂಬಿಕೆ ಇಡಿ" ಎನ್ನುವ ಮಾತುಗಳು ಇಲ್ಲಿ ನೆನಪಾಗುತ್ತವೆ.

ಈ ವಚನದ ಎನ್ನ ಕಾಲೇ ಕಂಬ ಎನ್ನುವ ಸಾಲು ಬಹಳ ಧ್ವನಿ ಪೂರ್ಣವಾದುದು. ಇದನ್ನು ಪ್ರಜ್ಞಾಪೂರ್ವಕವಾಗೇ ಬಳಸಲಾಗಿದೆ. ಇಡೀ ಮನುಷ್ಯ ದೇಹದಲ್ಲಿ ಕಾಲನ್ನು ಅಪವಿತ್ರವೆಂದು ನಂಬಿಸಲಾಗಿದೆ. ಇನ್ನು ಚಾತುರ್ವರ್ಣ ಪದ್ಧತಿಯ ನಂಬಿಕೆಯಂತೆ ಶೂದ್ರರು ಬ್ರಹ್ಮನ ಕಾಲಿನಿಂದ ಹುಟ್ಟಿದವರು. ಇಂತಹ ಧಾರ್ಮಿಕ ಮಿಥ್‌ನ ನಿರಾಕರಣೆ ಇಲ್ಲಿದೆ. ವಚನವು ಕಾಲು ಅತ್ಯಂತ ಮುಖ್ಯ ಎಂಬುದನ್ನು ಹೇಳುವುದರ ಮೂಲಕ ಶ್ರಮ ಸಂಸ್ಕೃತಿ ಹಿನ್ನೆಲೆಯ ಶೂದ್ರ-ಅಸ್ಪೃಶ್ಯ ಸಮುದಾಯವೂ ಮಹತ್ವವಾದುದು ಎನ್ನುವುದನ್ನು ಧ್ವನಿಸುತ್ತದೆ. ಮುಂದುವರೆದು ದೇಹದ ಯಾವುದೇ ಅಂಗವೂ ಶ್ರೇಷ್ಠವೂ ಅಲ್ಲ ಕನಿಷ್ಠವೂ ಅಲ್ಲ, ಎಲ್ಲ ಅಂಗಗಳೂ ಮುಖ್ಯವೆ ಎಂಬುದನ್ನು ತಿಳಿಸುತ್ತ ಆ ಮೂಲಕ ಜಾತಿ ಹಾಗೂ ಶ್ರೇಣೀಕರಣವನ್ನು ನಿರಾಕರಿಸುತ್ತದೆ. ವಚನದ ಮುಂದಿನ ಸಾಲಿನಲ್ಲಿ ದೇಹವನ್ನು ದೇವಾಲಯ ಎಂದು ಹೇಳುವ ಬಸವಣ್ಣನ ಕಲ್ಪನೆ ಅಸಾಧಾರಣವಾದುದು ಇದು ಬುದ್ಧನು ಹೇಳುವ "ಎಲ್ಲಾ ಮನುಷ್ಯರಲ್ಲೂ ಬೋಧಿಸತ್ವ ಇರುತ್ತದೆ ಅದನ್ನು ಎಚ್ಚರಿಸಿಕೊಂಡು ಎಲ್ಲರೂ ಬುದ್ಧರಾಗಬಹುದು" ಎಂಬುದನ್ನು ನೆನಪಿಸುತ್ತದೆ.

ಈ ವಚನದಲ್ಲಿ ಬಸವಣ್ಣ ಕಾಲಿನಿಂದ ಆರಂಭಿಸಿ ಕೊನೆಗೆ ಶಿರವನ್ನು ಉಲ್ಲೇಖಿಸಿರುವುದೂ ವಿಶೇಷ. ಶಿರ ಪವಿತ್ರವೇ ಇರಬಹುದು, ಅದು ಹೊನ್ನಿನದೇ ಇರಬಹುದು ಆದರೆ ಅದಕ್ಕೆ ಮಹತ್ವ ಬರುವುದು ಅದು ಚಲಿಸಿದಾಗಲೆ. ಆದರೆ ಚಲಿಸುವ ಗುಣ ಇರುವುದು ಕಾಲಿಗೆ ಮಾತ್ರ, ಇದನ್ನೆ ಸಾಮಾಜಿಕ ರಾಜಕಾರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾದರೆ; ಕಾಲು ಶ್ರಮಿಕ ವರ್ಗವನ್ನು ಸಂಕೇತಿಸಿದೆರೆ, ಶಿರವು ಬುದ್ಧಿವಂತರೆಂದು, ವಿದ್ವಾಂಸರೆಂದು ಕರೆದುಕೊಳ್ಳುವ ವರ್ಗವನ್ನು ಪ್ರತಿನಿಧಿಸುತ್ತದೆ. ಈ ಎರಡೂ ವರ್ಗಗಳೂ ಮುಖ್ಯ. ಎರಡೂ ಪರಸ್ಪರ ಕೊಳುಕೊಡುವಿಕೆ ಮತ್ತು ಪರಸ್ಪರ ಸಮಾನತಾ ಸೃಷ್ಠಿಯಲ್ಲಿ ಸಾಗಬೇಕೆಂಬುದನ್ನೆ ಇದು ಹೇಳುತ್ತದೆ. ಇಡೀ ದೇಹವೇ ದೇವಾಲಯವಾಗುವ ಕಲ್ಪನೆಯಲ್ಲಿ ಸಾಮಾಜಿಕ ಅಸಮಾನತೆ ನಿರ್ಮೂಲನಗೊಂಡು ಒಟ್ಟು ಮಾನವನ ಸಮೂಹವೇ ಅಮೂಲ್ಯವೆಂದು ಒಂದೇ ಪಾತಳಿಯಲ್ಲಿ ಬರಬೇಕೆಂಬುದನ್ನು ಈ ವಚನ ಆಶಿಸುತ್ತದೆ.

ಈ ವಚನದಲ್ಲಿ ಬಸವಣ್ಣ ಕಾಲಿನಿಂದ ಆರಂಭಿಸಿ ಕೊನೆಗೆ ಶಿರವನ್ನು ಉಲ್ಲೇಖಿಸಿರುವುದೂ ವಿಶೇಷ. ಶಿರ ಪವಿತ್ರವೇ ಇರಬಹುದು, ಅದು ಹೊನ್ನಿನದೇ ಇರಬಹುದು ಆದರೆ ಅದಕ್ಕೆ ಮಹತ್ವ ಬರುವುದು ಅದು ಚಲಿಸಿದಾಗಲೆ. ಆದರೆ ಚಲಿಸುವ ಗುಣ ಇರುವುದು ಕಾಲಿಗೆ ಮಾತ್ರ ಇದನ್ನೆ ಸಾಮಾಜಿಕ ರಾಜಕಾರಣದ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದಾದರೆ; ಕಾಲು ಶ್ರಮಿಕ ವರ್ಗವನ್ನು ಸಂಕೇತಿಸಿದೆರೆ, ಶಿರವು ಬುದ್ಧಿವಂತರೆಂದು, ಕರೆದುಕೊಳ್ಳುವ ವರ್ಗವನ್ನು ಪ್ರತಿ ನಿಧಿಸುತ್ತದೆ. ಈ ಎರಡೂ ವರ್ಗಗಳೂ ಮುಖ್ಯ. ಎರಡೂ ಪರಸ್ಪರ ಸಮನತಾ ಸೃಷ್ಠಿಯಲ್ಲಿ ಸಾಗಬೇಕೆಂಬುದನ್ನೆ ಇದು ಹೇಳುತ್ತದೆ. ಇಡೀ ದೇಹವೇ ದೇವಾಲಯವಾಗುವ ಕಲ್ಪನೆಯಲ್ಲಿ ಸಾಮಾಜಿಕ ಅಸಮಾನತೆ ನಿರ್ಮೂಲನಗೊಂಡು ಒಟ್ಟು ಮಾನವನ ಸಮೂಹವೇ ಅಮೂಲ್ಯವೆಂದು ಒಂದೇ ಪಾತಳಿಯಲ್ಲಿ ಬರಬೇಕೆಂಬುದನ್ನು ಈ ವಚನ ಆಶಿಸುತ್ತದೆ.

ಈ ವಚನದೊಟ್ಟಿಗೆ ಅಂಬೇಡ್ಕರ್ ಅವರು 1930ರ ಸಂದರ್ಭದಲ್ಲಿ ತಮ್ಮ ಬೆಂಬಲಿಗರೊಂದಿಗೆ ನಡೆಸಿದ-ಮುಂಬೈನ ನಾಸಿಕ್‌ನಲ್ಲಿರುವ-ಕಾಲರಾಮ ದೇವಾಲಯ ಪ್ರವೇಶ ಚಳವಳಿಯನ್ನೂ ಹೋಲಿಸಬಹುದು. ಅಂಬೇಡ್ಕರ್ ಹಾಗೂ ಅವರ ಸಂಗಡಿಗರು ಹಲವಾರು ತಿಂಗಳುಗಳ ಕಾಲ ಈ ದೇವಾಲಯಕ್ಕೆ ಅಸ್ಪೃಶ್ಯರ ಪ್ರವೇಶವನ್ನು ಕುರಿತು ಚಳವಳಿ ನಡೆಸಿದರೂ ಅಲ್ಲಿನ ಪುರೋಹಿತರು ಹಾಗೂ ಸಂಪ್ರದಾಯವಾದಿಗಳು ಪ್ರವೇಶವನ್ನು ನಿರಾಕರಿಸುತ್ತಾರೆ. ಅಂಬೇಡ್ಕರ್ ಅವರು ಅರ್ಥಕ್ಕೆ ಈ ಚಳವಳಿಯನ್ನು ಕೈಬಿಡುತ್ತಾರೆ. ಆ ಸಂಧರ್ಭದಲ್ಲಿ ಅವರು; ದೇವಾಲಯ ಪ್ರವೇಶ ಎಂಬುದೇ ನಿರರ್ಥಕವಾ[illegible]ನು. ದೇವಾಲಯ ಪ್ರವೇಶದಿಂದ ಮನುಷ್ಯರಿಗೆ, ಅದರಲ್ಲೂ ಶೋಷಣೆಗೆ ಒಳಗಾಗಿರುವ ಸಮುದಾಯಗಳಿಗೆ ಮತ್ತು ಮಹಿಳೆಯರಿಗೆ ಏನಾದರೂ ಪ್ರಯೋಜನವಿದೆಯೆ? ಇದು ಮತ್ತೆ ಮೂಢನಂಬಿಕೆಗಳತ್ತಲೇ ಹೋಗುವ ಪ್ರಯತ್ನವಾಗುತ್ತದೆ. ಪುರೋಹಿತನ ಮಧ್ಯಸ್ಥಿಕೆಯಲ್ಲಿ ದೇವರ ಪೂಜೆ ಮಾಡಿಸಲಾಗುತ್ತದೆ. ಇದೆಷ್ಟು ಸರಿ? ಪುರೋಹಿತಶಾಹಿ ಎಂಬುದು ಎಲ್ಲಾ ಬಗೆಯ ಅಸಮಾನತೆಗಳನ್ನು ಒಪ್ಪಿ ಕೊಂಡು ಪರಾವಲಂಬನೆಯಲ್ಲಿ ಬದುಕುವುದನ್ನು ಕಡ್ಡಾಯ ಪಡಿಸುತ್ತದೆ. ದೇವಾಲಯ ಪ್ರವೇಶ ಚಳವಳಿಯ ಬದಲಿಗೆ ನಿರ್ಲಕ್ಷಿತ ಸಮುದಾಯಗಳಾದ ಮಹಿಳೆಯರು, ಅಸ್ಪೃಶ್ಯರು, ಶೂದ್ರರು ತಮ್ಮ ತಮ್ಮ ಬಿಡುಗಡೆಗಾಗಿ, ಬದುಕುವ ಹಕ್ಕುಗಳಿಗಾಗಿ, ಸಾಮಾಜಿಕ ನ್ಯಾಯಕ್ಕಾಗಿ ಅವಿರತವಾಗಿ ಶ್ರಮಿಸಬೇಕು ಮತ್ತು ಚಳವಳಿಗಳನ್ನು ಮಾಡಬೇಕು. ದೇವಾಲಯ ಪ್ರವೇಶದ ಹೋರಾಟ, ದೇವಾಲಯಗಳ ಸ್ಥಾಪನೆ ಇವು ನಿರರ್ಥಕ. ಇಂತಹದ್ದು ಕಾಲ, ಶ್ರಮ ಹಾಗೂ ಬುದ್ಧಿಯ ಪೋಲಿನ ಅನಗತ್ಯ ವಿನಿಯೋಗವಾಗುತ್ತದೆ ಎನ್ನುವ ಅರ್ಥದ ಮಾತುಗಳನ್ನಾಡುತ್ತಾರೆ. ಬಸವಣ್ಣನ ಈ ವಚನದ ಕೇಂದ್ರ ಕಾಳಜಿಯುಲ್ಲಿ ಇಂತಹ ಅಂಶವೇ ಅಡಗಿದೆ.

ವಚನದ ಕೊನೆಯ ಸಾಲಿನಲ್ಲಿ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎನ್ನುವ ವಾಕ್ಯವೂ ಅನೇಕ ಅರ್ಥಧ್ವನಿಗಳನ್ನು ಬಿಟ್ಟುಕೊಡುತ್ತದೆ. ಸ್ಥಾವರವೆಂದರೆ; ಜಡ, ಚಲನ ರಾಹಿತ್ಯ, ನಿರ್ಜೀವ ಹಾಗೂ ಸ್ಥಾಪಿಸಲ್ಪಟ್ಟ ಸ್ಥಿರಸ್ಥಿತಿ. ಬಸವಣ್ಣ ಇಂತದ್ದನ್ನು ತ್ಯಜಿಸಿ ಜಂಗಮಕ್ಕೆ ಮಹತ್ವ ನೀಡುತ್ತಾನೆ. ಜಂಗಮವೆಂದರೆ ಚಲನಶೀಲತೆ, ಜ್ಞಾನ, ಅರಿವು, ಚಿಂತನೆ ಮುಂತಾದ ಗುಣಾತ್ಮಕ ಅರ್ಥಗಳನ್ನು ಪಡೆದುಕೊಳ್ಳುತ್ತದೆ. ದೇವಾಲಯ ಸ್ಥಾವರವಾದರೆ ದೇಹ ಎಂಬುದು ಜಂಗಮವಾಗುತ್ತದೆ ಎನ್ನುವುದು ಒಂದು ಅರ್ಥವಾದರೆ, ಇನ್ನೊಂದು ಅರ್ಥದಲ್ಲಿ ವಿಮೋಚನಾ ಶೂನ್ಯತೆಯ ಸಂಪ್ರದಾಯ, ಆಚರಣೆ, ನಡವಳಿಕೆಗಳೂ ಸ್ಥಾವರವಾಗುತ್ತವೆ. ಅವುಗಳನ್ನು ಮೀರುವ, ಬದಲಾಗುವ ಕ್ರಿಯೆ ಹಾಗೂ ನಿರಂತರವಾದ ಜೀವಪರ ವೈಚಾರಿಕ ನಿಲುವುಗಳು ಚಲನಶೀಲವಾಗುತ್ತವೆ. ಅಂಬೇಡ್ಕರ್ ಅವರು ಬೌದ್ಧಧರ್ಮದತ್ತ ಚಲಿಸುವುದು ಈ ಬಗೆಯ ಗಯಣಾತ್ಮಕ ನಡಿಗೆಯಾಗಿದೆ. ಇವನ್ನು ಸಾಂಕೇತಿಕವಾಗಿ ಹೇಳುವುದಾದರೆ ಹಿಂದೂ ಧರ್ಮವೆಂಬ ಸ್ಥಾವರಸ್ಥಿತಿಯನ್ನು ನಿರಾಕರಿಸಿ ಬೌದ್ಧಧರ್ಮವೆಂಬ ಜಂಗಮದತ್ತ ಸಾಗಿದ ಮಹಾಪ್ರಯಾಣ ಎನ್ನಬಹುದು. ಇದು ಚಾರಿತ್ರಿಕವಾಗಿಯೂ ಮಹತ್ವದ ಘಟನೆಯಾಗಿದೆ. ಅಂಬೇಡ್ಕರ್ ಅವರನ್ನು ಅರ್ಥೈಸಿಕೊಂಡ ದಲಿತರು ಬೌದ್ಧಧರ್ಮದತ್ತ ಹೋಗುತ್ತಿರುವುದೂ ಈ ಕಾರಣವಾಗಿಯೇ ಬಸವಣ್ಣ ಮತ್ತು ಅಂಬೇಡ್ಕರ್ ಈ ಇಬ್ಬರಿಗೂ ಅಪಾರವಾದ ಧಾರ್ಮಿಕ ನಂಬಿಕೆ ಇದೆ. ಆದರೆ ಅಂತಹ ಧರ್ಮ ದಯೆ, ನೈತಿಕತೆ , ವೈಚಾರಿಕ-ವೈಜ್ಞಾನಿಕ ಮನೋಭಾವ ಹಾಗೂ ಎಂದಿಗೂ ಯಾರಿಗೂ ಕೇಡೆಣಿಸದ ಬದ್ಧತೆಯನ್ನು ಒಳಗೊಂಡಿರಬೇಕು ಎಂಬುದಾಗಿ ಇಬ್ಬರೂ ನಂಬಿದವರಾಗಿದ್ದಾರೆ.

ಸ್ಥಾಪಿತ ದೇವಾಲಯವನ್ನು ಖಡಾಖಂಡಿತವಾಗಿ ನಿರಾಕರಿಸಿದ ಬಸವಣ್ಣನ ಹೆಸರಿನಲ್ಲಿ ಹಲವಾರು ದೇವಾಲಯಗಳು, ಮಠಗಳು ಸ್ಥಾಪನೆಗೊಂಡಿವೆ. ಬಸವ ತತ್ವಕ್ಕೇ ಅಪಮಾನವೆಸಗುವ ರೀತಿಯಲ್ಲಿ ಹಲವು ಬಸವ ಅನುಯಾಯಿಗಳು ಪುರೋಹಿತಶಾಹಿಯ ಭಾಗವಾಗಿರುವುದನ್ನು ನೋಡಿದಾಗ ಇದು ಚರಿತ್ರೆಯ ದುರಂತವೆನಿಸುತ್ತದೆ. ಅಸ್ಪೃಶ್ಯತೆಯ ಆಚರಣೆ, ಜಾತಿಪದ್ಧತಿಯ ಸಮರ್ಥನೆ, ಮತಾಂತರಕ್ಕೆ ವಿರೋಧ ಇವು ಕೆಲವು ಬಸವ ಅನುಯಾಯಿಗಳಲ್ಲಿ ಹೆಚ್ಚಾಗುತ್ತಿದೆ. ಈ ಮೂಲಕ ಬಸವಣ್ಣನಂತಹ ಮೇರು ವ್ಯಕ್ತಿತ್ವವನ್ನು ಕೇವಲ ಮೂರ್ತಿಯನ್ನಾಗಿಸಿ ಸ್ಥಾವರಗೊಳಿಸಲಾಗುತ್ತಿದೆ. ಆದರೆ ಇಂತಹ ಅನಿಕೇತನ ವ್ಯಕ್ತಿತ್ವದ ಚೇತನಗಳನ್ನು ಯಾವುದೇ ಕಟ್ಟುಬಂಧನಗಳಲ್ಲಿ ಅಥವಾ ಗೋಡೆಗಳಲ್ಲಿ ಬಂಧಿಸಿ ಇಡಲಾಗದು ಎಂಬುದೂ ಚರಿತ್ರೆಯಿದಂಲೆ ತಿಳಿದುಬಂದಿದೆ. □

ಮಾರುಕಟ್ಟೆಗೋಸ್ಕರ ಆಸ್ಕರ್!?

(೧೫ನೇ – ಪುಟದಿಂದ)

ತಿಯ ಚಿತ್ರೋದ್ಯಮದ ಸಹಕಾರದೊಂದಿಗೆ ಹಾಲಿವುಡ್ಡಿನ ಜಾಗತೀಕರಣವೂ ಯಶಸ್ವಿಯಾಗುತ್ತದೆ ಮತ್ತು ಲಾಭಕರ ವಾಗುತ್ತವೆ.

ಇದರ ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಣಾಮ ಗಳು ಚಿತ್ರೋದ್ಯಮದ ಮೇಲೂ ಮತ್ತು ಸಮಾಜದ ಮೇಲೂ ಘೋರವಾಗಿ ತಟ್ಟಲಿದೆ. ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ಚಿತ್ರನಿರ್ಮಾಣ, ಪ್ರದರ್ಶನ, ವಿತರಣೆ ಎಲ್ಲ ಕ್ಷೇತ್ರಗಳಲ್ಲೂ ವಿದೇಶಿ ಬಂಡವಾಳಕ್ಕೆ ಮುಕ್ತ ಪರವಾನಗಿ ಕೊಟ್ಟಿರುವುದರಿಂದ ರಿಲಯನ್ಸ್‌ನ ಅಂಬಾನಿ ಮತ್ತಿತರ ದೊಡ್ಡ ಉದ್ಯಮಿಗಳ ಸಹಯೋಗದೊಂದಿಗೆ ಹಾಲಿವುಡ್ಡಿನ ದೈತ್ಯರು ಚಿತ್ರಮಂದಿರ, ಸ್ಟುಡಿಯೋ, ಮತ್ತು ಚಿತ್ರನಿರ್ಮಾಣ ಸಂಸ್ಥೆಗಳ ನಿರ್ಮಾಣ ಎಲ್ಲದರಲ್ಲೂ ದೊಡ್ಡ ಮಟ್ಟದ ಹೂಡಿಕೆ ಮಾಡುತ್ತಿದ್ದಾರೆ. ಈವರೆಗೆ ಸಣ್ಣ ಪುಟ್ಟ ಬಂಡವಾಳ ಹೂಡುತ್ತಿದ್ದವರನ್ನೂ ಒಳಗೊಂಡಂತೆ ಲಕ್ಷಾಂತರ ಭಾರತೀಯರ ಹೊಟ್ಟೆಪಾಡಿಗೆ ಆಸರೆಯಾಗಿದ್ದ ಚಿತ್ರೋದ್ಯಮ ಕೆಲವೇ ದೈತ್ಯ ಕಂಪನಿಗಳ ಏಕಸ್ವಾಮ್ಯವಾ ಗುತ್ತಾ ಹೊರಟಿದೆ. ೧೯೪೦ರ ಹಿಂದೆ ಅಮೆರಿಕದಲ್ಲೂ ಸಹ ಇದೇ ರೀತಿ ದೊಡ್ಡ ಸಿನಿಮಾ ನಿರ್ಮಾಣ ಸಂಸ್ಥೆ ಗಳೇ ಪ್ರದರ್ಶನ ಮತ್ತು ವಿತರಣೆ ಕ್ಷೇತ್ರಗಳಲ್ಲೂ ಏಕಸ್ವಾಮ್ಯ ಹೊಂದಿದ್ದರು. ಇದರಿಂದಾಗಿ ಈ ಸಂಸ್ಥೆಗಳು ತೆಗೆದ ಕುಲ ಗೆಟ್ಟ ಚಿತ್ರಗಳನ್ನೂ ಪ್ರೇಕ್ಷಕ ನೋಡಲೇ ಬೇಕಾದ ಅನಿವಾ ರ್ಯತೆ ಉಂಟಾದರೆ ಮತ್ತೊಂದೆಡೆ ಸಣ್ಣ ಬಜೆಟ್ಟಿನಲ್ಲಿ ಉತ್ತಮ ಚಿತ್ರ ತೆಗೆಯುತ್ತಿದ್ದ ಸ್ವತಂತ್ರ ನಿರ್ಮಾಪಕರಿಗೆ ಅವ ಕಾಶವೇ ಇಲ್ಲದಂತಾಗಿ ಹೋಯಿತು. ಹೀಗಾಗಿ ಅಮೆರಿ ಕದ ಸುಪ್ರೀಂ ಕೋರ್ಟು ಆಂಟಿ ಟ್ರಸ್ಟ್ ಲಾ ಪ್ರಕಾರ ಈ ರೀತಿ ನಿರ್ಮಾಣ ಸಂಸ್ಥೆಗಳು ಪ್ರದರ್ಶನ ವಲಯದಲ್ಲಿ ಏಕ ಸ್ವಾಮ್ಯ ಹೊಂದುವಂತಿಲ್ಲ ಎಂದು ತೀರ್ಮಾನ ನೀಡಿತು. ಆ ನಂತರವಷ್ಟೆ ಅಮೆರಿಕದಲ್ಲಿ, ಹೆಚ್ಚು–ಕಡಿಮೆ ೭೦–೮೦ರ ದಶಕದ ತನಕ ಒಳ್ಳೆ ಚಿತ್ರಗಳು ಬರಲು ಸಾಧ್ಯವಾಯಿತು. ಆದರೆ ರೇಗನ್ ಕಾಲದಲ್ಲಿ ಪ್ರಾರಂಭವಾದ ಬಂಡವಾಳ ಶಾಹಿ ಪರ ಆರ್ಥಿಕ ನೀತಿಗಳು ಈ ಕಾನೂನಿನ ಆಶಯದ ವಿರುದ್ಧವಾದ ನೀತಿಗಳನ್ನೇ ಜಾರಿಗೆ ತಂದಿದ್ದರಿಂದ ಇಂದು ಇಡೀ ಅಮೆರಿಕದ ಚಿತ್ರೋದ್ಯಮ ಮೇಲೆ ಹೇಳಿದ ಆರೇಳು ದೈತ್ಯ ಸಂಸ್ಥೆಗಳ ಮುಷ್ಟಿಯಲ್ಲಿ ಸಿಲುಕಿದೆ. ಸೃಜನ ಶೀಲತೆ ಕೊನೆ ಉಸಿರನ್ನು ಎಳೆಯುತ್ತಿದೆ. ಜಾಗತೀಕರಣ ನೀತಿಗಳು ಜಾರಿಯಾದ ನಂತರ ಭಾರತದಲ್ಲಿ ಏಕಸ್ವಾಮ್ಯತೆಯನ್ನು ತಡೆಯಲು ರಚಿತವಾಗಿದ್ದ ಎಂಆರ್‌ಟಿಪಿ (ಮಾನೋಪಲಿ ರೆಸ್ಟ್ರಿಕ್ಟಿವ್ ಟ್ರೇಡ್ ಪ್ರಾಕ್ಟೀಸ್) ಇನ್ನಿತ್ಯಾದಿ ಕಾನೂನುಗಳನ್ನೂ ಮತ್ತು ವಿದೇಶಿ ಬಂಡವಾಳವನ್ನು ನಿಯಂತ್ರಿಸುತ್ತಿದ್ದ ಕಾನೂನುಗಳನ್ನು ತೆಗೆದುಹಾಕಲಾಗಿದೆ. ಹೀಗಾಗಿ ಭಾರತದ ಚಿತ್ರೋದ್ಯಮದಲ್ಲೂ ಕ್ರಮೇಣ ೧೯೪೦ರ ಹಿಂದೆ ಅಮೆರಿಕ ದಲ್ಲಿದ್ದ ಪರಿಸ್ಥಿತಿಯೇ ಉಂಟಾಗುತ್ತಿದೆ. ಇದರಿಂದ ಕಲಾ ತ್ಮಕ ಸೃಜನಶೀಲತೆಯ ಅಭಿವ್ಯಕ್ತಿಯೇ ಕಮರಿ ಹೋಗಿ ಆ ದೈತ್ಯ ಸಂಸ್ಥೆಗಳ ಮಾರುಕಟ್ಟೆ ಅಗತ್ಯಗಳೇ ಚಿತ್ರ ನಿರ್ಮಾ ಣವನ್ನು ನಿರ್ದೇಶಿಸ ತೊಡಗುತ್ತದೆ. ಹಾಗೂ ಕಲಾ ಸ್ವಾತಂತ್ರ್ಯ ಸಂಪೂರ್ಣವಾಗಿ ಮಾರುಕಟ್ಟೆ ನಿಯಮಗಳ ಅಧೀನವಾಗಿಬಿಡುತ್ತದೆ. ಸಣ್ಣ ಪುಟ್ಟ ಚಿತ್ರ ನಿರ್ಮಾಪಕರು–ನಿರ್ದೇಶಕರು–ತಂತ್ರಜ್ಞರು ಮೂಲೆ ಗುಂಪಾಗುತ್ತಾರೆ.

ಈ ದೈತ್ಯರು ಬಳಸಬೇಕೆಂದಿರುವ ತಂತ್ರ ಜ್ಞಾನವೂ ಸಹ ವೀಕ್ಷಕರಿಗೆ ಆಯ್ಕೆಯನ್ನು ಕಡಿಮೆ ಮಾಡುತ್ತದೆ. ಉದಾಹರಣೆಗೆ ಚಿತ್ರೋದ್ಯಮದಲ್ಲಿ ಅದರಲ್ಲೂ ವಿಶೇಷ ವಾಗಿ ಅಮೆರಿಕದಲ್ಲಿ ಥಿಯೇಟರ್‌ಗಳಲಿ ಚಿತ್ರ ಬಿಡುಗಡೆ ಮಾಡುವುದರಿಂದ ಬರುತ್ತಿದ್ದ ಲಾಭದ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ. ಹೋಮ್ ಥಿಯೇಟರ್, ಟಿವಿ ಇನ್ನಿತ್ಯಾದಿಗಳೇ ಬರಲಿರುವ ಜಮಾನದ ಪ್ರಮುಖ ಚಿತ್ರವೀಕ್ಷಣಾ ಮಾದರಿಗಳಾಗಲಿವೆ. ಯಾವ ಚಿತ್ರನಿರ್ಮಾಣ ಸಂಸ್ಥೆಗೆ ಈ ಹೊಸ ಸಂವಹನದ ಮಾಧ್ಯಮದ ಮೇಲೆ ನಿಯಂತ್ರಣವಿರುತ್ತದೋ ಅವರು ಮಾತ್ರ ಮಾರುಕಟ್ಟೆಯ ದೊಡ್ಡ ಪಾಲನ್ನು ಪಡೆಯಲಿದ್ದಾರೆ. ಈ ಬೃಹತ್ ಮಾರು ಕಟ್ಟೆ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡೇ ಹಾಲಿವುಡ್ಡಿ ನಲ್ಲಿ ಸೋನಿಯಂತಹ ಎಲೆಕ್ಟ್ರಾನಿಕ್ಸ್ ಉದ್ಯಮ ದೈತ್ಯ ಕೊಲಂಬಿಯಾ ಮತ್ತು ಎಂಜಿಎಂನಂತ ಬೃಹತ್ ಚಿತ್ರನಿ ರ್ಮಾಣ ಸಂಸ್ಥೆಗಳನ್ನು ಕೊಂಡಿದ್ದು, ಟಿವಿ ದೈತ್ಯ ಫಾಕ್ಸ್, ಟೈಂ ಇನ್ನಿತ್ಯಾದಿಗಳು ಚಿತ್ರೋದ್ಯಮದಲ್ಲಿ ಏಕಸ್ವಾಮ್ಯ ಸ್ಥಾಪಿ ಸಿರುವುದು. ಭಾರತದಲ್ಲಿ ಈ ತಂತ್ರಜ್ಞಾನ ಕಣ್ಣು ಬಿಡುವ ಮುನ್ನವೇ ಈ ಹಾಲಿವುಡ್ ಸಂಸ್ಥೆಗಳು ಅದರ ಮೇಲೆ ಅಧಿಪತ್ಯ ಸಾಧಿಸಿರುತ್ತವಾದ್ದರಿಂದ ಭಾರತದ ಚಿತ್ರೋದ್ಯಮ ತಂತ್ರಜ್ಞಾನದ ದೃಷ್ಟಿಯಲ್ಲೂ ಹಾಲಿವುಡ್ಡಿನ ಜೀತ ಮಾಡ ಬೇಕಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾದದ್ದು ಈ ಬಗೆಯಲ್ಲಿ ಒಂದು ಕಲಾ ಮಾಧ್ಯಮದಲ್ಲಿ ಲಾಭಕೋರ ಬಂಡವಾಳಶಾಹಿ ಉದ್ಯಮಗಳು ಏಕಸ್ವಾಮ್ಯ ಸೃಷ್ಟಿಸಿಕೊಂಡಾಗ ಅವು ಸಮಾ ಜದಲ್ಲಿ ಬಿತ್ತುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯ ಗಳು ಎಂತವು? ಹಾಲಿವುಡ್ಡಿನ ಚಿತ್ರಗಳು ಪ್ರಧಾನವಾಗಿ ಅಮೆರಿಕನ್ ಕನಸನ್ನು ಮತ್ತು ಅಮೆರಿಕನ್ ಜೀವನ ಮೌಲ್ಯ ಗಳನ್ನು ಅಂದರೆ ಅಲ್ಲಿನ ಶ್ರೀಮಂತ ಬಿಳಿಯ ಜನರಜೀವನ ಮೌಲ್ಯಗಳನ್ನೇ ಸಾರ್ವತ್ರಿಕಗೊಳಿಸುತ್ತವೆ ಮತ್ತು ಶ್ರೇಷ್ಠ ವೆಂದು ಬಿಂಬಿಸುತ್ತವೆ. ಈವರೆಗಿನ ಬಹುಪಾಲು ಹಾಲಿ ವುಡ್ ಚಿತ್ರಗಳು ಹಣ–ಯಶಸ್ಸೇ ಮುಖ್ಯವಾದ ಜೀವನ ಮೌಲ್ಯಗಳೆಂದು ಸಾರುತ್ತಾ ಬಂದಿವೆ. ಮದುವೆ ಮತ್ತು ಮನೆಗಳೇ ಮುಖ್ಯವಾದ ಸಾಮಾಜಿಕ ರಚನೆಗಳೆಂದು ಸಾರುತ್ತವೆ. ಪ್ರಭುತ್ವ, ಪೊಲೀಸ್ ಮಾನ್ಯತೆಯುಳ್ಳ ಅಧಿಕಾರ ಕೇಂದ್ರಗಳು, ಅದರ ವಿರುದ್ಧ ಬಂಡಾಯ ಅಮಾನ್ಯ ಎಂದು ಸಾರುತ್ತವೆ. ಅಮೆರಿಕನ್ ವ್ಯವಸ್ಥೆಗೆ ಧಕ್ಕೆಯುಂಟಾ ದಾಗ ಯಾವುದೇ ಬಗೆಯ ಹಿಂಸೆಯನ್ನಾದರೂ ಬಳಸಬ ಹುದು ಎಂದು ಒಪ್ಪಿಸುತ್ತವೆ. ಆದರೆ ಕಳೆದ ಇಪ್ಪತ್ತು ವರ್ಷ ಗಳಲ್ಲಿ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳು ಅಮೆರಿಕದ ವಿರುದ್ಧ ಮಾತ್ರವಲ್ಲದೆ ಅದನ್ನು ಅನುಸರಿಸುವ ಎಲ್ಲಾ ದೇಶಗಳ ಸರ್ಕಾರದ ವಿರುದ್ಧ ಬಂಡಾಯವನ್ನು ಮತ್ತು ಅವುಗಳ ಸಮಾಜದಲ್ಲಿ ಸಂಕ್ಷೋಭೆಯನ್ನು ಹುಟ್ಟಿ ಹಾಕಿವೆ. ರಷ್ಯಾದ ಕುಸಿತದ ನಂತರ ಪರ್ಯಾಯದ ಸೈದ್ಧಾಂತಿಕ ಭರವಸೆಯೂ ಇಲ್ಲದಂತಾಗಿ ಸಾರ್ವಜನಿಕ ಜೀವನದಲ್ಲಿ ಸಾಮೂಹಿಕ ಪ್ರತಿಭಟನೆ, ಸಹಕಾರ, ಸಹಜೀವನ, ಸೌಹಾರ್ದತೆ ಎಂಬ ಮೌಲ್ಯಗಳು ಇಲ್ಲವಾಗುತ್ತಿವೆ. ಅದರ ಬದಲಿಗೆ ಆತಂಕ, ಅನಿಶ್ಚತತೆ, ಅಭದ್ರತೆ, ಭೀತಿ, ಸಿನಿಕತೆ ತಾಂಡವವಾಡುತ್ತದೆ. ಈ ಹೊಸ ಸನ್ನಿವೇಶದಲ್ಲಿ ಹಳೆಯ ರೀತಿಯ ಹಾಲಿವುಡ್ ಚಿತ್ರಗಳ ಜೊತೆಜೊತೆಗೆ ಸಮಾಜದಲ್ಲಿರುವ ಈ ಬಗೆಯ ಸಿನಿಕತೆಯನ್ನು ಮತ್ತಷ್ಟು ಹೆಚ್ಚಿಸುವ ಚಿತ್ರಗಳೇ ಬರುತ್ತಿವೆ. ಮೇಲ್ನೋಟಕೆ ಅವು ವಸ್ತುಸ್ಥಿತಿಯ ಯಥಾರ್ಥ ಚಿತ್ರಣದಂತೆ ಕಂಡರೂ ಸಾರಾಂಶದಲ್ಲಿ ಅವು ಜನರನ್ನು ಸಮಾಜದಿಂದ ದೂರ ಉಳಿಸುವ, ವೈಯಕ್ತಿಕ ಪರಿಹಾರಗಳನ್ನು ಹುಡುಕುವಂತ, ಅಥವಾ ಸಮಸ್ಯೆಯ ಆಳಕ್ಕೆ ಹೋಗದೆ ಭ್ರಾಮಕ ಪವಾಡ ಸದೃಶ ಪರಿಹಾರ ಕಂಡುಕೊಳ್ಳುವಂತ ಪಲಾಯನವಾದಿ ಅಥವಾ ಯಥಾಸ್ಥಿತಿ ವಾದಿ ಚಿತ್ರಗಳೇ ಆಗಿವೆ.

ಹಾಲಿವುಡ್‌ನ ಇತ್ತೀಚಿನ ಚಿತ್ರಗಳನ್ನು ಅಧ್ಯಯನ ಮಾಡಿರುವ CARL BOGGS & TOM POLLARD ಎಂಬುವರು ತಮ್ಮ "Postmodern Cinema and Hollywood Culture in an Age of Corporate Colonization" ಎಂಬ ಲೇಖನದಲ್ಲಿ ಹಾಲಿವುಡ್ಡಿನ ಹೊಸ ಚಿತ್ರ ಗಳ ಬಗ್ಗೆ ಹೀಗೆ ಹೇಳುತ್ತಾರೆ:

"ಆಳವಾಗಿ ನೋಡಿದರೆ ಹಾಲಿವುಡ್ಡಿನ ಈ ಕಾಲದ ಸಿನಿಮಾಗಳು ಸಾರ್ವಜನಿಕ ಜೀವನವನ್ನು ಮತ್ತು ಸಾಮೂಹಿಕ ಬದುಕನ್ನು ನಗಣ್ಯವಾಗುವಂತೆ ಅಥವಾ ಮರೆಯುವಂತೆ ಮಾಡುತ್ತವೆ. ಯಾವುದೇ ವಿಷಯವನ್ನು ರಾಜಕೀಯ ರಹಿತಗೊಳಿಸುವುದು ಅದರ ಒಳ ಉದ್ದೇಶವಾಗಿರುತ್ತದೆ. ಪ್ರತಿನಿತ್ಯದ ಬದುಕಿನಲ್ಲಿ ಖಾಸಗಿ ಜೀವನಕ್ಕೆ ಸಾರ್ವಜನಿಕ ಆಯಾಮವೇ ಇಲ್ಲವೆಂಬಂತೆ ತೋರಿಸುವುದರಿಂದ ಸಾಮಾಜಿಕ ಬಂಧನ ಮತ್ತು ಒಂದು ಸಮುದಾಯಕ್ಕೆ ಸೇರಿದವರೆಂಬ ಭಾವನೆ ಮಾಯವಾಗುತ್ತದೆ. ಎಲ್ಲಾ ಬಗೆಯ ರಾಜಕೀಯವು ಅನುಮಾನ, ಅವಿಶ್ವಾಸ, ಭಯ ಮತ್ತು ಹಿಂಸೆಗಳನ್ನು ವ್ಯಕ್ತಪಡಿಸುವ ಕ್ಷೇತ್ರವೆಂಬಂತೆ ಕಾಣ ತೊಡಗುತ್ತದೆ. ಈ ಬಗೆಯ ಸಂಕುಚಿತಗೊಳ್ಳುತ್ತಿರುವ ರಾಜಕೀಯ ದೃಷ್ಟಿಯು ಕಾರ್ಪೊರೇಟ್ ವಸಾಹತೀಕರಣವನ್ನು ಹಿಮ್ಮೆಟ್ಟಿಸುವಷ್ಟು ಸಾಮರ್ಥ್ಯ ಇರುವ ಯಾವುದೇ ಪ್ರತಿರೋಧ ಶಕ್ತಿಗಳು ಇಲ್ಲದಿರುವ ಸಂದರ್ಭದಲ್ಲಿ ಚಾಲ್ತಿಯನ್ನು ಪಡೆದುಕೊಂಡಿದೆ. ಇಂಥ ಸಂದರ್ಭದಲ್ಲಿ ನಮ್ಮ ದುರಿಗೆ ಉಳಿಯುವುದು ಈ ಹಾಲಿವುಡ್ ಚಿತ್ರಗಳು ತೋರಿಸುವ ಕಾರ್ಪೊರೇಟ್ ಸಂಸ್ಕೃತಿಯ ಮೂಲ ಗುಣಗಳೇ ಆದ ಸ್ವಾರ್ಥ, ಆಸ್ತಿ ಮತ್ತು ಅಧಿಕಾರ ಲಾಲಸೆ ಮತ್ತು ಅದು ಸಮಾಜದಲ್ಲಿ ಹುಟ್ಟಿಹಾಕುವ ಅರಾಜಕತೆ, ಹಿಂಸೆ, ಅಭದ್ರತೆ ಅವಿಶ್ವಾಸಗಳ ಚಿತ್ರಣಗಳಷ್ಟೆ"

ಸ್ಲಂಡಾಗ್ ಚಿತ್ರಕ್ಕೆ ಆಸ್ಕರ್ ಸಿಕ್ಕ ಖುಷಿ ಕರಗಿದ ನಂತರ ನಮ್ಮ ಮುಂದೆ ಉಳಿಯುವ ಚಿತ್ರಣವೂ ಅಷ್ಟೆಯಲ್ಲವೇ? ಆದ್ದರಿಂದಲೇ ಬಾಲಿವುಡ್ ಬೇಜವಾಬ್ದಾರಿ ಯಥಾಸ್ಥಿತಿ ವಾದಕ್ಕೆ ಸಂಕೇತವಾಗಿದ್ದರೆ ಬಾಲಿವುಡ್ಡಿನ ಹಾಲಿವುಡ್ಡೀಕರಣ ದುರಂತದ ಸಂಭ್ರಮಕ್ಕೆ, ರಾಜಕೀಯ ಸಿನಿಕತನಕ್ಕೆ ಮತ್ತು ಒಟ್ಟಾರೆ ರಾಜಕೀಯ,ಆರ್ಥಿಕ್ ಮತ್ತು ಸಾಂಸ್ಕೃತಿಕ ದಾಸ್ಯಕ್ಕೆ ಸಂಕೇತವಾಗುತ್ತದೆ. ಇದು ಹೆಚ್ಚು ಅಪಾಯಕಾರಿ. □

ವೈಚಾರಿಕ ಶೂನ್ಯ
ತುಂಬುತ್ತಿರುವ ಸಂವಾದ ಕ್ಕೆ

ತುಂಬು ಹೃದಯದ
ಶುಭ ಹಾರೈಕೆಗಳು

ಶ್ರೀ ಯೊಗೇಶ್, ಗುತ್ತಿಗೆದಾರರು
ಮಂಡ್ಯ

ಏಳಕ್ಕೆ ಕಾಲಿಟ್ಟ ಸಂವಾದ ಕ್ಕೆ

ಶುಭ ಹಾರೈಸುವವರು

ಶ್ರೀ ಎಸ್.ಸೋಮಶೇಖರ್,
ಗುತ್ತಿಗೆದಾರರು, ಮೈಸೂರ್

ಕೃಷ್ಣಮೂರ್ತಿ ಬಿಳಿಗೆರೆ ಅವರ ನಾಲ್ಕು ಕೃಷಿ ಪದ್ಯಗಳು

ಎಳನೀರಿನ ಕೊಡ ತಲಪರಿಗೆ

ಗುಡ್ಡದ ಘಟ್ಟದ ಕೆಳಗೆ
ಬೇರುಗಾಡಿನ ಒಳಗೊಳಗೆ
ಮರಳಿನ ಒಳಗೆ ಒಳಗೊಳಗೆ
ಅಂತರಗಂಗೆ ತಪಲರಿಗೆ

ನೋಡಲು ಚಿಕ್ಕ ಅಡಕದ ಚಂದ
ಎಂದೂ ಮುಗಿಯದ ಜಲಬಂಧ
ಗಾವುದ ಗಾವುದ ಕಾಲುವೆಯಲ್ಲಿ
ಹರಿಯಿತು ಹಬ್ಬಿತು ಬಯಲಲ್ಲಿ

ತಲತಲಾಂತರ ಅಂತರದೊಳಗೆ
ಅಪಾರ ಅನಂತ ಕಾಲದ ಕೆಳಗೆ
ಇಳಿಯಿತಿಳಿಯಿತು ಹೊಲದಾ ಕಡೆಗೆ
ಅನ್ನದ ದಾರಿ ತಲಪರಿಗೆ

ಕೆರೆಗಳು ಕಟ್ಟೆಗಳುಟ್ಟುವ ಮುನ್ನ
ಕಪಿಲೆ ಏತಗಳೇಳುವ ಮುನ್ನ
ಊರ ಉಳಿವಿನ ನೀರ ಪದವಿಗೆ
ಏರಿತು ತಾಯಿ ತಲಪರಿಗೆ

ಜಿನುಗಿ ಜಿನುಗಿ ಜಿನುಜಿನುಗಿ
ಕತ್ತಲ ದಾರಿಯ ತಿರುತಿರುಗಿ
ಬೆಳ್ಳಂ ಬೆಳಕಿಗೆ ಸಾಗಿ
ಎಳನೀರಿನ ಕೊಡ ತಲಪರಿಗೆ

ನೀರಿನ ಜಾಲ ಊರಿನ ಕಾಲ
ಜಾನುವಾರು ಜನ ಸಮಪಾಲ
ಹೊಂಗೆ ಮರಗಳ ನೆರಳಿನ ಜಾಲ
ನೀರೇ ಊರು ಭಲಾಭಲ

ತಲೆಕೆಟ್ಟಿತು ಬೆಂಕಿ ಇಟ್ಟಿತು
ನರನಾಡಿಗಳಲ್ಲಿ ವಿಷಾ ಹಬ್ಬಿತು
ನೆನಪಿನ ಗಣಿಯು ಬತ್ತಿ ಹೋಯಿತು
ನೀರಿನ ಊರು ಹೊತ್ತಿ ಉರಿಯಿತು

ಬಿಸಿಲುಗುದುರೆಯ ಬೆನ್ನನ್ನೇರಿ
ಆಕಾಶಕ್ಕೆ ಕಾಲನು ಊರಿ
ಪಾತಾಳಕ್ಕೆ ಲಗ್ಗೆ ಇಟ್ಟರೋ
ಲಾವಾರಸವ ಕುಡಿದು ಕೆಟ್ಟರೋ

ತಲಪರಿಗೆಗಳ ತಲೆದೆಸೆಯಲ್ಲೇ
ಬೆಟ್ಟದ ಜೀವದ ಬಗಲಲ್ಲೇ
ಬಾವಿತೋಡಿದರು ಉಳ್ಳವರು
ಬೋರು ಕೊರೆದರು ಖದೀಮರು

ಜಲದ ಕಣ್ಣನು ಮುಚ್ಚಿದರೋ
ತಮ್ಮ ಕಣ್ಣನೆ ಚುಚ್ಚಿಕೊಂಡರೋ
ಹಳ್ಳದ ಕತ್ತ ಹಿಸುಕಿದರೋ
ಗುಡ್ಡದ ಕೆಚ್ಚಲು ಕೊಚ್ಚಿದರೋ

ಇನ್ನೂ ಅನ್ನವ ತಿನ್ನುವ ಜನರೆ
ಇನ್ನೂ ನೀರನೆ ಕುಡಿಯುವ ಊರೇ
ಕಲ್ಲಿನೆದೆಗಳು ಕರಗುವ ಹಾಗೆ
ನೀವೇ ಆಗಿರಿ ತಲಪರಿಗೆ



ಮಗ್ಗುಲ ಸೊಪ್ಪಿನ ಪದ

ತಂಗಡಿಸೊಪ್ಪು ಲೆಕ್ಕಿಸೊಪ್ಪು
ಮಗ್ಗುಲ ಸೊಪ್ಪು ಎಲ್ಲೋದು
ಸ್ಕೂಲಿನೊಳಗೆ ಲೆಕ್ಕ ತಪ್ಪು
ಅಲ್ಲೆ ಎಲ್ಲೊ ಕಳೆದೋದು

ಅಪ್ಪ ಸೆಣಬು ಹುರುಳಿ ಸೊಪ್ಪು
ಎಲ್ಲೋದು ಎಲ್ಲೋದು
ತಲೆಯ ಒಳಗೆ ಗೋಣಿ ಸೊಪ್ಪು
ಕಾಲೇಜೊಳಗೆ ಕಳೆದೋದು

ರೈತರ ಅನುಭವ ಚಿಂದಿಯಾಯಿತು
ಲ್ಯಾಬಿನ ಲೋಕ ಮಂಗನ ಮೂಡಿತು
ಮಣ್ಣಿನ ಬಣ್ಣ ಕಳೆದೇ ಹೋಯಿತು
ನೀರಿನ ಊರು ಬೆತ್ತಲಾಯಿತು

ದನಾ ಕರುಗಳ ಮಾರಿಕೊಂಡರು
ತಿಪ್ಪೆಸ್ವಾಮಿಯ ತಿಪ್ಪೆಗೆಸೆದರು
ಗೋಡಿನ ಗಾಡನು ಕ್ಯಾರೇ ಎನ್ನದೆ
ಕೇಡಿನ ಕೆರೆಯಲಿ ಮುಳುಗಿದರು

ಸೊಪ್ಪು ಎಂದರೆ ಸಪ್ಪಲಲ್ಲ
ಸಾರಜನಕದ ನೊರೆಹಾಲು
ಅಪಾರ ಅನ್ನದ ಅಪಾರ ರುಚಿಗೆ
ಹಸಿರು ಗೊಬ್ಬರ ಸವಿಜೇನು

ಸಗಣಿ ದೇವರ ಕೈ ಕಾಲಿಡಿಯಿರಿ
ಚೀಲದ ಗೊಬ್ಬರ ಛಿ ಥೂ ಉಗಿಯಿರಿ
ಹೊಂಗೆಯ ಸೊಪ್ಪನ್ನು ಗದ್ದೆಗೆ ತುಳಿಯಿರಿ
ತೊನೆಯುವ ತೆನೆಯನು ಕಂಡು ಕುಣಿಯಿರಿ.



ಕೃಷ್ಣಮೂರ್ತಿ ಬಿಳಿಗೆರೆ ಅವರ ನಾಲ್ಕು ಕೃಷಿ ಪದ್ಯಗಳು

ಕೃಷ್ಣಮೂರ್ತಿ ಬಿಳಿಗೆರೆ ಅವರ ನಾಲ್ಕು ಕೃಷಿ ಪದ್ಯಗಳು

ತೋಟಗಳಲ್ಲ ಗೂಟಗಳು



ಬೆಳಕಿನ ಹುಳುಗಳು ನೀರಿನ ಗೊನೆಗಳು
ಹುಲ್ಲಿನ ಮಂಚ ಅವರೆಯ ಗೊಂಚಲು
ಇಲ್ಲದಿರುವ ಆ ತೋಟಗಳು
ತೋಟಗಳಲ್ಲ ಗೂಟಗಳು.

ಹೊಂಗೆಯ ಸಾಲಿಗೆ ಜಾಗ
ತೆಂಗಿನ ನಡುವೆಯ ತೇಗ
ಇಲ್ಲದಿರುವ ಆ ತೋಟಗಳು
ತೋಟಗಳಲ್ಲ ಗೂಟಗಳು

ಬೇರಿನ ಊರಿನ ಚಿಲುಮೆ
ಎರೆಯ ಹುಳದ ಉಳುಮೆ
ಇಲ್ಲದಿರುವ ಆ ತೋಟಗಳು
ತೋಟಗಳಲ್ಲ ಗೂಟಗಳು

ತೋಟಕ್ಕೆ ಹಕ್ಕಿ ಬರಬೇಕು
ಹಾಡುತ ಇಲ್ಲೆ ಇರಬೇಕು
ಇಲ್ಲದಿರುವ ಆ ತೋಟಗಳು
ತೋಟಗಳಲ್ಲ ಗೂಟಗಳು

ಹೂವಿನ ತೇರಿನ ಬೇಲಿ
ಬೇಲಿಯ ಒಳಗೆ ಜೇನಿನ ಲಾಲಿ
ನೆಲದ ಮೇಲೆ ಬಳ್ಳಿಯ ಹಾಸು
ನೆಲದ ಒಳಗೆ ಗೆಡ್ಡೆ ಗೆಣಸು

ಇಲಿಗೆ ನೀರನು ಇಡಬೇಕು
ಅಳಿಲಿಗೆ ಹಣ್ಣನು ಬಿಡಬೇಕು
ಸೀಬೆ ಸಪೋಟ ತೋಟದ ಆಟ
ಸೀತಾಫಲದ ಬೇಲಿಯ ಕೂಟ

ಮಾವು ಹಲಸು ಬೇವಿನ ಬೆಳಕು
ನಿಂಬೆಯ ವನವೆ ಇರಬೇಕು
ಇಲ್ಲದಿರುವ ಆ ತೋಟಗಳು
ತೋಟಗಳಲ್ಲ ಗೂಟಗಳು

ಹಸಿರಿಗೆ ಹೆಸರು ನೂರುತರ
ತರತರ ತರತರ ತರಂತರ

ಇದು ಭತ್ತದ ಹಾಡು
ಎಂದೂ ಬತ್ತದ ಹಾಡು ||ಪ||

ತುಂಬಿದ ಕೆರೆಯ ಹಿಂದೆ
ಕೆಂದೆತ್ತಿನ ಬಾಲದ ಬೀಸು
ಚಿನ್ನದ ಬಣ್ಣದ ಮುಂದೆ
ಅನ್ನದ ದಾರಿ ಸಲೀಸು

ಗದ್ದೆಯ ಒಳಗೆ ನಿಂತರೆ ನೀರು
ತೆಂಡೆ ಒಡೆಯದು ಭತ್ತದ ಪೈರು
ನೀರಿನ ಊರಲಿ ಮಣ್ಣಿನ ಸಾವು
ಕಣ್ಣಿದ್ದವರೆ ತಿಳಿಯಿರಿ ನೀವು

ತೇವದ ತಾವಲಿ ಭತ್ತ ಹೆಬ್ಬುಲಿ
ನೀರಿನ ಗ್ಯಾನ ಎಲ್ಲೆಡೆ ಹಬ್ಬಲಿ
ನೀರು ಉಳಿಯಲಿ ಕಾಳು ಹೆಚ್ಚಲಿ
ಸೊಪ್ಪು ಸೆದೆಗಳು ನೆಲಕೆ ಸಿಕ್ಕಲಿ

ರಸಗೊಬ್ಬರವೊ ವಿಷಗೊಬ್ಬರವೊ
ಹೊಂಗೆಯ ಸೊಪ್ಪೊ ಸಗಣಿ ದೇವರೋ
ಬೀಟಿ ತಳಿಯೋ ನಾಟಿ ತಳಿಯೋ
ಒಳ್ಳೆ ದಾರಿಯ ನೀ ತುಳಿಯೋ

ರುಚಿಯಲಿ ಏವನ್ ಮೈಸೂರ್ ಸಣ್ಣ
ದೊಡ್ಡಿ ಭತ್ತಕ್ಕೆ ಮಳೆ ಸಾಕಣ್ಣ
ದೇವ ಮಲ್ಲಿಗೆ ಕರಿ ಮುಂಡಗ
ಮೊಸರಿನ ಜೊತೆಗೆ ಹೊಡೆಯಣ್ಣ

ಉಣ್ಣಲು ಚಂದ ಜೀರಿಗೆ ಸಣ್ಣ
ನೀರಾವರಿಯಲಿ ಬೆಳೆಯಮ್ಮ
ಬಾಸುಮತಿಯ ಮೈಮೆಲ್ಲ ಘಮಘಮ
ಜೇಬಿನ ಒಳಗೆ ಹಣವೂ ಝಣ ಝಣ

ನೀರಿನ ಒಳಗೆ ನೀರಿನ ಕೆಳಗೆ
ನೀರು ಮುಳುಗು ಭತ್ತ

ಹರಿಯುವ ನೀರಿನ ಎದುರಲ್ಲಿ
ನೆರೆಗುಳಿ ಬೆಳೆಯಿತು ಊರು ಉಳಿಯಿತು

ಜೌಗಿನಲ್ಲಿ ಬೆಳೆಯೋ ದೊಡ್ಡ ಬೈರನೆಲ್ಲ
ದೊಡ್ಡ ಹೊಟ್ಟೆಗಳಿಗೆ ಬೇಕಾದಷ್ಟು ಹುಲ್ಲು
ಗದ್ದೆಯೆಂದರೆ ನೀರಲ್ಲ ಗದ್ದೆಯೆಂದರೆ ಕೆಸರಲ್ಲ
ಗದ್ದೆಯು ಕಾಳಿನ ಕಲ್ಯಾಣಿ

ಲೋಕದ ತುಂಬ ಹಬ್ಬಿ ಬೆಳೆಯಿತು
ಮೈಸೂರ್ ಮಲ್ಲಿಗೆ ಮಾದೇವ
ತಳಿಯೇ ಬಳುವಳಿ ಮೆಲ್ಲಗೆ ತೆವಳಿತು
ಅನ್ನದ ದಾರಿಯ ತುಳಿಯುವುದೊಳಿತು

ಕೃಷ್ಣಮೂರ್ತಿ ಬಿಳಿಗೆರೆ ಅವರ ನಾಲ್ಕು ಕೃಷಿ ಪದ್ಯಗಳು

ಅವರು ತಲ್ಲಣಗಳಲ್ಲೇ ತೀರಿಕೊಂಡರು

ಶಿವರುದ್ರಯ್ಯ ಸದಾಶಿವಯ್ಯ ಹಿರೇಮಠ. ಹಾಗೆಂದರೆ ಯಾರಿಗೂ ಗೊತ್ತಾಗುವುದಿಲ್ಲ. ಕಾರಣ ಅವರು ಎಸ್.ಎಸ್. ಹಿರೇಮಠ ಎಂದೇ ಹೆಸರಾದವರು. ಕನ್ನಡದ ಸಂಸ್ಕೃತಿ ಚಿಂತಕರೂ ಹಿರಿಯ ವಿದ್ವಾಂಸರೂ ಜನಪ್ರಿಯ ಪ್ರಾಧ್ಯಾಪಕರೂ ಆಗಿದ್ದ ಪ್ರೊ. ಹಿರೇಮಠರು (೧೯೫೦-೨೦೦೯)ಈಚೆಗೆ ತೀರಿ ಕೊಂಡರು. ಅದೊಂದು ನಿರೀಕ್ಷಿತ ಸಾವಾಗಿತ್ತು. ಕಾರಣ, ಕಳೆದೆರಡು ವರುಷಗಳಿಂದ ಅವರು ಕ್ಯಾನ್ಸರ್‌ನಿಂದ ನವೆಯುತ್ತಿದ್ದರು. ಅವರು ಕೊಟ್ಟೂರಿನ ಕಾಲೇಜಿನಿಂದ ನಿವೃತ್ತರಾದ ಬಳಿಕ, ಪ್ರಾಣವನ್ನು ಹುಟ್ಟೂರಿನಲ್ಲೇ ಬಿಡಲು ನಿರ್ಧರಿಸಿದರು. ಒಂದು ದಿನ ಬೆಳಗ್ಗೆ ಅವರ ಸಾವಿನ ಸುದ್ದಿಬಂತು. ರೋಗಗ್ರಸ್ತ ದೇಹವು ಕೊಡುತ್ತಿದ್ದ ಯಾತನೆಯಿಂದಲೂ ಹಣಕಾಸಿನ ಕಷ್ಟದಿಂದಲೂ ಕಣ್ಮರೆಯಾದ ಮಗನ ಅಗಲಿಕೆಯಿಂದಲೂ ಒದ್ದಾಡುತ್ತ, 'ಉಸಿರಿಗೆ ಒಮ್ಮೆ ಜನನಾ ಮರಣಾ' ಮಾಡುತ್ತಿದ್ದ ಅವರಿಗೆ, ಸಾವು ಪರಿಹಾರವಾಗಿತ್ತೇನೊ ಎಂಬಂತೆ ಪರಿಸ್ಥಿತಿ ದಾರುಣವಾಗಿತ್ತು.

ಡಾ. ರಹಮತ್ ತರೀಕೆರೆ

ಶಿವರುದ್ರಯ್ಯ ಸದಾಶಿವಯ್ಯ ಹಿರೇಮಠ. ಹಾಗೆಂದರೆ ಯಾರಿಗೂ ಗೊತ್ತಾಗುವುದಿಲ್ಲ. ಕಾರಣ ಅವರು ಎಸ್.ಎಸ್. ಹಿರೇಮಠ ಎಂದೇ ಹೆಸರಾದವರು. ಕನ್ನಡದ ಸಂಸ್ಕೃತಿ ಚಿಂತಕರೂ ಹಿರಿಯ ವಿದ್ವಾಂಸರೂ ಜನಪ್ರಿಯ ಪ್ರಾಧ್ಯಾಪಕರೂ ಆಗಿದ್ದ ಪ್ರೊ. ಹಿರೇಮಠರು(1950–2009)ಈಚೆಗೆ ತೀರಿಕೊಂಡರು. ಅದೊಂದು ನಿರೀಕ್ಷಿತ ಸಾವಾಗಿತ್ತು. ಕಾರಣ, ಕಳೆದೆರಡು ವರುಷಗಳಿಂದ ಅವರು ಕ್ಯಾನ್ಸರ್‌ನಿಂದ ನವೆಯುತ್ತಿದ್ದರು. ಅವರು ಕೊಟ್ಟೂರಿನ ಕಾಲೇಜಿನಿಂದ ನಿವೃತ್ತರಾದ ಬಳಿಕ, ಪ್ರಾಣವನ್ನು ಹುಟ್ಟೂರಿನಲ್ಲೇ ಬಿಡಲು ನಿರ್ಧರಿಸಿದವರಂತೆ, ಇದ್ದಕ್ಕಿದ್ದಂತೆ ಬೆಳಗಾವಿ ಜಿಲ್ಲೆಯ ಸಾಣಿಕೊಪ್ಪಕ್ಕೆ ಹೋಗಿಬಿಟ್ಟರು. ಒಂದು ದಿನ ಬೆಳಿಗ್ಗೆ ಅವರ ಸಾವಿನ ಸುದ್ದಿಬಂತು. ರೋಗಗ್ರಸ್ತ ದೇಹವು ಕೊಡುತ್ತಿದ್ದ ಯಾತನೆಯಿಂದಲೂ ಹಣಕಾಸಿನ ಕಷ್ಟದಿಂದಲೂ ಅನಿರೀಕ್ಷಿತವಾಗಿ ಕಣ್ಮರೆಯಾದ ಮಗನ ಅಗಲಿಕೆಯಿಂದಲೂ ಒದ್ದಾಡುತ್ತ, 'ಉಸಿರಿಗೆ ಒಮ್ಮೆ ಜನನಾ ಮರಣಾ' ಮಾಡುತ್ತಿದ್ದ ಅವರಿಗೆ, ಸಾವು ಬಹುಶಃ ಪರಿಹಾರವಾಗಿತ್ತೇನೊ ಎಂಬಂತೆ ಪರಿಸ್ಥಿತಿ ದಾರುಣವಾಗಿತ್ತು.

ಆದರೆ ನರಳಿಕೆ ನೋವುಗಳಿಂದ ಬದುಕನ್ನು ಕೊನೆಗಾಣಿಸಿದ ಹಿರೇಮಠರ ಜೀವನ ಮಾತ್ರ ಹೋರಾಟ ಓದು ತಿರುಗಾಟ ಚರ್ಚೆ ಹಾಗೂ ತಾತ್ವಿಕ ಜಗಳಗಳಿಂದ ಕೂಡಿ ವರ್ಣರಂಜಿತವಾಗಿತ್ತು. ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ನಾನು ಅವರ ಹೆಸರನ್ನು ಕೇಳಿದ್ದೆ. ಸಭೆಗಳಲ್ಲಿ ನೋಡಿದ್ದೆ. ಆದರೆ ಅವರ ವ್ಯಕಿತ್ವದ ಪರಿಚಯವಾಗಿದ್ದು ಮಾತ್ರ ಕನ್ನಡ ವಿಶ್ವವಿದ್ಯಾಲಯಕ್ಕೆಂದು ಹಂಪಿಗೆ ಹೋದಾಗಲೇ (1992). ಆ ಹೊತ್ತಿಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಅವರ ಬಗ್ಗೆ ಅನೇಕ ದಂತಕತೆಗಳು ಹಬ್ಬಿದ್ದವು. ಸರ್ಕಾರಿ ಕಾರ್ಯಕ್ರಮಗಳಿಗೆ ಹೋದಾಗ, ಪ್ರಥಮದರ್ಜೆ ರೈಲ್ವೆ ಪ್ರಯಾಣದ ಹಣವನ್ನು ಸ್ವೀಕರಿಸಲು ನಿರಾಕರಿಸಿ, ಬಸ್‌ಛಾರ್ಜನಷ್ಟೇ ಸ್ವೀಕರಿಸಿ ಬರುತ್ತಾರೆ; ವಿದ್ಯಾರ್ಥಿಗಳನ್ನು ಕೂಡಿಸಿಕೊಂಡು ಅನ್ಯಾಯಗಳ ವಿರುದ್ಧ ಚಳುವಳಿ ಮಾಡಿಸುತ್ತಾರೆ; ಬಳ್ಳಾರಿಯಲ್ಲಿರುವ ಎಡಪಂಥೀಯ ಚಳುವಳಿಗೆ ತಮ್ಮ ಜೀವನವನ್ನೇ ತ್ಯಾಗಮಾಡಿದ್ದಾರೆ ಇತ್ಯಾದಿ. ತಾವು ಹೋದೆಡೆಯಲ್ಲೆಲ್ಲ ತಮ್ಮ ಮಾರ್ಕ್ಸ್‌ವಾದಿ ಚಿಂತನೆಯಿಂದ ವಿದ್ಯಾರ್ಥಿಗಳ ಲೋಕದೃಷ್ಟಿಯನ್ನೇ ಬದಲಿಸುತ್ತಿದ್ದ ಹಿರೇಮಠರು ಜಿಲ್ಲೆಯ ತುಂಬ ಶಿಷ್ಯರನ್ನು ಹೊಂದಿದ್ದರು. ಸಿಪಿಎಂ ನಾಯಕರಾದ ಗುರುಶಾಂತ್, ಪ್ರಸನ್ನಕುಮಾರ್ ಸೇರಿದಂತೆ ಈ ಭಾಗದ ಬಹುತೇಕ ಸಿಪಿಎಂ ಕಾರ್ಯಕರ್ತರು ಅವರ ಗರಡಿಯಲ್ಲಿ ಪಳಗಿದವರು. ಜತೆಗೆ ಚಿಂತಕ ಕೆ. ಫಣಿರಾಜ್, ಪತ್ರಕರ್ತ ಗುಡಿಹಳ್ಳಿ ನಾಗರಾಜ, ಕವಿಗಳಾದ ಪರಶುರಾಮ ಕಲಾಲ್, ನಿಂಗಪ್ಪ ಮುದೇನೂರು, ಬಿ.ಪೀರಬಾಶಾ–ಹೀಗೆ ಅವರ ಶಿಷ್ಯ ಬಳಗ ಅನೇಕ ಕ್ಷೇತ್ರಗಳಲ್ಲಿದೆ. ಹಲವಾರು ವಿದ್ಯಾರ್ಥಿಗಳಿಗೆ ಹಣ ಕಳಿಸಿ ಓದಿಸುತ್ತಿದ್ದ ಹಿರೇಮಠರ ಮನೆ ಒಂದು ಬಗೆಯ ವಿದ್ಯಾರ್ಥಿ ನಿಲಯದಂತಿತ್ತು. ಶಿಷ್ಯರನ್ನು ತಾಯಂತೆ ಪ್ರೀತಿಸುತ್ತಿದ್ದ ಅವರು ಶಿಷ್ಯರ ಕವನಗಳನ್ನು ಸ್ವತಃ ಪ್ರಕಟಿಸುತ್ತಿದ್ದರು. ಅವರ ಜತೆ ಗೂಡಿ ತಿರುಗುತ್ತಿದ್ದರು. ತಮ್ಮ ಪುಸ್ತಕಗಳಿಗೆ ಅವರಿಂದ ಮುನ್ನುಡಿ ಬರೆಯಿಸುತ್ತಿದ್ದರು. ಒಬ್ಬ ಗುರುವೊಬ್ಬ ತನ್ನ ಅಧ್ಯಾಪನ ಕರ್ತವ್ಯದ ಜತೆಗೆ ಸಮಾಜವನ್ನು ಕಟ್ಟಲು ಹೇಗೆ ಯುವ ಮನಸ್ಸುಗಳನ್ನು ಸಿದ್ಧಗೊಳಿಸಬಹುದು ಎಂಬುದಕ್ಕೆ ಅವರೊಬ್ಬ ಅಪೂರ್ವ ಸಾಕ್ಷಿಯಂತಿದ್ದರು.

ವೀರಶೈವ ವಿದ್ಯಾವರ್ಧಕ ಸಂಘವು ಬಳ್ಳಾರಿ ಜಿಲ್ಲೆಯ ಸಣ್ಣ ಪಟ್ಟಣ ಕೇಂದ್ರಗಳಲ್ಲಿ ನಡೆಸುತ್ತಿದ್ದ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಹಿರೇಮಠರು, ಕನ್ನಡ ವಿವಿಗೆ ಬಂದರು. ಬರುವ ಮೊದಲೇ ಕರ್ನಾಟಕ ಸಂಸ್ಕೃತಿಯ ಅಧ್ಯಯನಕ್ಕಾಗಿ ಅದು ಏನೆಲ್ಲ ಮಾಡಬೇಕು ಎಂದು ಪ್ರಣಾಳಿಕೆ ರೂಪದ ಪುಸ್ತಿಕೆ ಪ್ರಕಟಿಸಿದ್ದರು. ಸದಾ ಓದು ಬರೆಹ ಚಿಂತನೆ ಮಾಡುತ್ತಿದ್ದ ಅವರಿಗೆ ಬಳ್ಳಾರಿ ಜಿಲ್ಲೆಗೆ ಸಂಶೋಧನ ವಿಶ್ವ ವಿದ್ಯಾಲಯವೊಂದು ಬಂದಿದ್ದು, 'ಅರಲುಗೊಂಡ ಗಿಡಕೆ ತೊರೆ ಬಂದು ಹೊಯ್ದಂತೆ' ಸಂತೋಷವಾಗಿತ್ತು. ಅವು ಕನ್ನಡ ವಿವಿಯ ಮೊದಲ ದಿನಗಳು. ಆಗ ನಮಗೆ ಸ್ವಂತ ಕಟ್ಟಡವಿರಲಿಲ್ಲ. ಮೇಜು ಕುರ್ಚಿ ಸರಿಯಾಗಿ ಕೂಡ ಇರಲಿಲ್ಲ. ಕೆಲವರು ಹಂಪಿಯ ಪುರಾತತ್ವ ಇಲಾಖೆಯ ಮಂಟಪಗಳಿಲ್ಲಿದ್ದರೆ, ನಾನು, ಪುರುಷೋತ್ತಮ ಬಿಳಿಮಲೆ, ಹಿರೇಮಠ ಮುಂತಾದವರು ಕಾಮಲಾಪುರದ ಪಿಡಬ್ಲುಡಿ ಪ್ರವಾಸಿ ಮಂದಿರದ ಒಂದು ಭಾಗದಲ್ಲಿದ್ದುಕೊಂಡು ಕೆಲಸ ಮಾಡುತ್ತಿದ್ದೆವು. ವಿಶ್ವವಿದ್ಯಾಲಯವು ಕೊಟ್ಟ ಎಲ್ಲ ಕೆಲಸಗಳಲ್ಲಿ ತೊಡಗಿಕೊಂಡು ಹಿರೇಮಠರು ಶ್ರದ್ಧೆಯಿಂದ ದುಡಿಯಲಾರಂಭಿಸಿದರು. ಅವರಿಗೆ ಗ್ರಾಮದೇವತೆಗಳ ದಾಖಲಾತಿಗಳನ್ನು ಆಧರಿಸಿ ವಿಶ್ವ ಕೋಶವೊಂದಕ್ಕೆ ಟಿಪ್ಪಣಿಗಳನ್ನು ಸಿದ್ಧಪಡಿಸುವ ಕೆಲಸ ವಹಿಸಲಾಗಿತ್ತು. ಅವರು ಅದನ್ನು ಬರೆಯುತ್ತ ಕೈನೋವಾದಾಗ ಪೆನ್ನಿಗೆ ಕರ್ಚಿಫು ಕಟ್ಟಿ ಅದನ್ನು ದಪ್ಪಮಾಡಿ ಕಂಠಪತ್ರದಂತೆ ಹಿಡಿದು ಕೆಲಸ ಮಾಡುತ್ತಿದ್ದರು. ಹಳೆಯ ವೈಷ್ಣವಗುಡಿಯನ್ನೇ ಪ್ರವಾಸಿ ಮಂದಿರ ಮಾಡಿದ್ದರಿಂದ, ಅದರ ಕಂಬಕ್ಕೆ ಒರಗಿ ಸೆಖೆಗೆ ಶರಟನ್ನು ತೆಗೆದಿಟ್ಟು ಬರೆಯುತ್ತಿದ್ದ ಅವರು, ಪ್ರಾಚೀನ ಕವಿಗಳ ಕಥೆಗಳನ್ನು ನೆನಪಿಸುತ್ತಿದ್ದರು.



ಅವರು ಹೊಸಪೇಟೆಯಲ್ಲಿ ನನ್ನ ಮನೆಗೆ ಸಮೀಪದಲ್ಲೇ ಮನೆ ಹಿಡಿದಿದ್ದರು. ಅವರ ಸ್ವಂತ ಗ್ರಂಥಸಂಗ್ರಹ ಕಂಡು ನನಗೆ ಬೆರಗಾಗಿತ್ತು. ನಾನು ಕಂಡಂತೆ ಹೀಗೆ ದೊಡ್ಡ ಸ್ವಂತ ಗ್ರಂಥಾಲಯ ಹೊಂದಿರುವ ವಿದ್ವಾಂಸರೆಂದರೆ ಪುಣೆಯ

ರಾಚಿಂಥೇರೆ. ಹಿರೇಮಠರು ಯಾವಾಗ ಮನೆಗೆ ಹೋದರೂ ದಪ್ಪಕಟ್ಟಿನ ಕನ್ನಡಕ ಹಾಕಿಕೊಂಡು, ಕುರ್ಚಿಯ ಕೈಗಳ ಮೇಲೆ ಅಡ್ಡ ಹಲಗೆ ಇಟ್ಟುಕೊಂಡು ಏನಾದರೂ ಓದು ಬರವಣಿಗೆಯಲ್ಲಿ ತೊಡಗಿರುತ್ತಿದ್ದರು. ಅವರಿಗೆ ಪುಸ್ತಕಗಳ ಮೈತುಂಬ ಬರೆಯುವ ಚಾಳಿಯಿತ್ತು. ಎರೇಹುಳುಗಳು ನಿಂತು ಕುಣಿಯುತ್ತಿರುವಂತಹ ಅಕ್ಷರಗಳಲ್ಲಿ ಪುಸ್ತಕಗಳ ಮಾರ್ಜಿನಿನ ಉದ್ದಕ್ಕೂ ಟಿಪ್ಪಣಿಗಳು. ಹಿರೇಮಠರು ವಿದ್ವತ್ತಿನ ವಿಷಯದಲ್ಲಿ ತಮ್ಮ ಬೆಳಗಾವಿ ಸೀಮೆಯ ಶಂಬಾ ಪರಂಪರೆಯನ್ನು ಉತ್ತರಾಧಿಕಾರಿಯಂತಿದ್ದರು. ಮಹಾ ಅಧ್ಯಯನಶೀಲರಾದ ಅವರು ಶಂಬಾರಂತೆಯೇ ಸಂವಹನವಿಲ್ಲದ ವಿಷಯದಲ್ಲಿ ತಲೆಕೆಡಿಸಿಕೊಳ್ಳದೆ ಬರೆಯುತ್ತಿದ್ದರು. ದಮನಿತ ಸಮುದಾಯಗಳ ಸಾಂಸ್ಕೃತಿಕ ಅಧ್ಯಯನ ಮಾಡುತ್ತಿದ್ದರು. ವ್ಯತ್ಯಾಸವೆಂದರೆ, ಶಂಬಾರ ಬರೆಹಕ್ಕೆ ಇಲ್ಲದ ರಾಜಕೀಯ ಕ್ರಿಯಾಶೀಲತೆ ಹಿರೇಮಠರಿಗಿತ್ತು. ಶಂಬಾ ಬಿಟ್ಟರೆ ಹಿರೇಮಠರ ಮೇಲೆ ಬಹಳ ಪ್ರಭಾವ ಬೀರಿದ ವಿದ್ವಾಂಸರೆಂದರೆ, ದೇವಿಪ್ರಸಾದ್ ಚಟ್ಟೋಪಾಧ್ಯಾಯ. ದೇವೀಪ್ರಸಾದರ 'ಲೋಕಾಯತ'ವು ಅವರ ಪಾಲಿಗೆ ಭಕ್ತನೊಬ್ಬನ ಧಾರ್ಮಿಕ ಗ್ರಂಥದ ಪಠಣದಂತಿತ್ತು. ಈ ಕಾರಣಕ್ಕೆ ಅವರನ್ನು ಕನ್ನಡದ ದೇವಿ ಪ್ರಸಾದರೆಂದೂ ಕರೆಯಬಹುದು. ಭಾರತದ ಜನಪರ ಸಮಾಜವಾದಿ ದರ್ಶನಗಳು ಸಮುದಾಯಗಳ ಬದುಕಿನಲ್ಲಿ ರೂಪಾಂತರಗೊಂಡು ಸುಪ್ತವಾಗಿರುವ ಬಗೆಯ ಹುಡುಕಾಟವನ್ನು ಅವರು ಮಾಡುತ್ತಿದ್ದರು. ಈ ಹುಟುಕಾಟದ ಫಲವೇ ಅವರು ತಮ್ಮ ಬದುಕಿನ ಕೊನೆಗೆ ಪ್ರಕಟಿಸಿದ ಪಾಶುಪತ, ಸಾಂಖ್ಯ, ಕಾಳಾಮುಖ, ಲೋಕಾಯತ ಮುಂತಾದ ದರ್ಶನಗಳ ಮೇಲಿನ ಪುಸ್ತಕಗಳು. ಯೋಗ ಮತ್ತು ತಂತ್ರದರ್ಶನದ ಬಗ್ಗೆ ಅವರು ಪುಸ್ತಕ ಸಿದ್ಧಮಾಡುತ್ತಿದ್ದರು. ಈ ಪುಸ್ತಕಗಳ ಮೇಲೆ ಕನ್ನಡದ ವಿದ್ವತ್‌ಲೋಕ ಇನ್ನೂ ಚರ್ಚೆಯನ್ನೇ ಮಾಡಿರಲಿಲ್ಲ. ಅಷ್ಟರಲ್ಲೇ ಸಾವು 'ಬರೆದದ್ದು ಸಾಕು ಬಾ' ಎಂದು ಅವರನ್ನು ಎಳೆದುಕೊಂಡು ಹೋಗಿಬಿಟ್ಟಿತು.

ಒಮ್ಮೊಮ್ಮೆ ಅನಿಸುತ್ತದೆ: ಹಿರೇಮಠರಿಗಿದ್ದ ಜನಪರ ಕಾಳಜಿ, ಅಧ್ಯಯನ ಮತ್ತು ಶ್ರಮಗಳಿಗೆ ತಕ್ಕ ಅಚ್ಚುಕಟ್ಟುತನ ಅವರ ಬರವಣಿಗೆಯಲ್ಲಿ ಇರಲಿಲ್ಲ ಎಂದು; ತಮ್ಮ ಅಪಾರ ಅಧ್ಯಯನದ ಬಲದಿಂದಲೇ ತರ್ಕಬದ್ಧವೂ ವ್ಯವಸ್ಥಿತವೂ ಆದ ಸಿದ್ಧಾಂತ ಕಟ್ಟಲು ಬೇಕಾದ ಕುಶಲತೆ ಅವರಿಗಿರಲಿಲ್ಲ ಎಂದು; ಅವರ ಚಿಂತನೆ ಕೆಲಮಟ್ಟಿಗೆ ಅಸ್ತವ್ಯಸ್ತ ಅಥವಾ ಇನ್ನೂ ಅದು ಹರಳುಗಟ್ಟುವ ಮೊದಲೇ ಅವನ್ನು ತೆಗೆದುಕೊಡುತ್ತಿದ್ದರು. ತಾವು ಆರಂಭಿಸಿದ ಪಯಣವನ್ನು ಮತ್ತೊಬ್ಬರು ಮುಂದುವರೆಸಬೇಕು ಎಂಬಂತೆ ಅವರು ಅರೆಸಾಧಿತ ಟಿಪ್ಪಣಿಗಳನ್ನು ಬರೆಯುತ್ತಿದ್ದರು. ಪುಸ್ತಕ ಪ್ರಕಟಣೆಯಲ್ಲಿ ಕೂಡ ಅಂತಹ ಸೌಂದರ್ಯವಿರಲಿಲ್ಲ. ಕೈಗೆ ಸಿಕ್ಕ ಪೇಪರ್ ಬಳಸಿ ಕಣ್ಣಿಗೆ ಕಂಡ ಪ್ರೆಸ್ಸಿನಲ್ಲಿ ಪ್ರಕಟವಾದ ಪುಸ್ತಕಗಳು. ಅವರ ಹಬ್ಬಗಳನ್ನು ಕುರಿತ ಅಮೂಲ್ಯ ಪುಸ್ತಕವು ನ್ಯೂಸ್‌ಪ್ರಿಂಟಿನಲ್ಲಿ ಪ್ರಕಟವಾಗಿದೆ. ಕೆಲಸವನ್ನು ಮುಗಿಸುವ ಅವಸರವಿದ್ದ ಅವರಿಗೆ ಫಿನಿಶಿಂಗ್ ಟಚ್ ಕೊಡುವುದು ಸಾಧ್ಯವಾಗುತ್ತಿರಲಿಲ್ಲ. ಅವರ ಪುಸ್ತಕ ಮತ್ತು ಲೇಖನಗಳು ಕೆಲವೊಮ್ಮೆ ತಟ್ಟನೆ ಮುಗಿಯುತ್ತವೆ. ಈ ಪ್ರವೃತ್ತಿಯನ್ನು ಅವರು ತಮ್ಮ ಕುಟುಂಬ ಹಾಗೂ ಆರೋಗ್ಯದ ವಿಷಯದಲ್ಲೂ ತೋರಿದರೂ ಏನೊ?

ಕರ್ನಾಟಕ ವಿವಿಯಿಂದ ಚಿನ್ನದ ಪದಕ ಪಡೆದು ಹೊರಬಂದ ಹಿರೇಮಠರು ಬರೆಹ ಆರಂಭಿಸಿದ್ದು ಕವಿತೆ

ಕರ್ನಾಟಕ ವಿವಿಯಿಂದ ಚಿನ್ನದ ಪದಕ ಪಡೆದು ಹೊರಬಂದ ಹಿರೇಮಠರು ಬರೆಹ ಆರಂಭಿಸಿದ್ದು ಕವಿತೆಯಿಂದ. ಅವರು ತಮ್ಮ ಮತ್ತು ಶಿಷ್ಯರ ಕವಿತೆಗಳನ್ನು ಸ್ವಂತ ಪ್ರಕಾಶನದಿಂದ ಪ್ರಕಟಿಸುತ್ತಿದ್ದರು. ಅವರ ಪ್ರಕಾಶನದ ಹೆಸರು ಸಮತಾ. (ತಮ್ಮ ಮಕ್ಕಳಿಗೆ ಸಂಘರ್ಷ ಸಂಗ್ರಾಮ ಎಂಬ ವರ್ಗ ಹೋರಾಟಕ್ಕೆ ಸಮೀಪದ ಹೆಸರುಗಳನ್ನು ಇಟ್ಟಿದ್ದರು.) ಈ ಪ್ರಕಾಶನವು ಕೊಟ್ಟೂರು, ಹೊಸಪೇಟೆ, ಹರಪನಹಳ್ಳಿ, ಹಡಗಲಿ– ಹೀಗೆ ಅವರು ವರ್ಗವಾಗಿ ಹೋಗುತ್ತಿದ್ದ ಎಲ್ಲ ಊರುಗಳ ಹೆಸರಲ್ಲಿದೆ. ಕರ್ನಾಟಕದಲ್ಲಿ ಮೂರು ವರ್ಷಕ್ಕೊಮ್ಮೆ ತನ್ನ ಸ್ಥಳ ಬದಲಿಸಿದ (ಪ್ರಕಾಶನ ಇದೇ ಇರಬೇಕು.) ಅವರ ಮೊದಲ ಸಂಕಲನ 'ಕೆಂಪುಕವನಗಳು' ಎರಡನೆಯದು 'ಮನುಷ್ಯ ನೆಲ್ಲಿ?'. ಹೆಸರೇ ಸೂಚಿಸುವಂತೆ ಅವರು ಎಡ ಪಂಥೀಯ ನಿಲುವಿನಲ್ಲಿ ಮನುಷ್ಯತ್ವದ ಹುಡುಕಾಟ ಮಾಡುತ್ತಿದ್ದರು.

ಯಿಂದ. ಅವರು ತಮ್ಮ ಮತ್ತು ಶಿಷ್ಯರ ಕವಿತೆಗಳನ್ನು ಸ್ವಂತ ಪ್ರಕಾಶನದಿಂದ ಪ್ರಕಟಿಸುತ್ತಿದ್ದರು. ಅವರ ಪ್ರಕಾಶನದ ಹೆಸರು ಸಮತಾ. (ತಮ್ಮ ಮಕ್ಕಳಿಗೆ ಸಂಘರ್ಷ ಸಂಗ್ರಾಮ ಎಂಬ ವರ್ಗಹೋರಾಟಕ್ಕೆ ಸಮೀಪದ ಹೆಸರುಗಳನ್ನು ಇಟ್ಟಿದ್ದರು.) ಈ ಪ್ರಕಾಶನವು ಕೊಟ್ಟೂರು, ಹೊಸಪೇಟೆ, ಹರಪನಹಳ್ಳಿ, ಹಡಗಲಿ– ಹೀಗೆ ಅವರು ವರ್ಗವಾಗಿ ಹೋಗುತ್ತಿದ್ದ ಎಲ್ಲ ಊರುಗಳ ಹೆಸರಲ್ಲಿದೆ. ಕರ್ನಾಟಕದಲ್ಲಿ ಮೂರು ವರ್ಷಕ್ಕೊಮ್ಮೆ ತನ್ನ ಸ್ಥಳ ಬದಲಿಸಿದ (ಪ್ರಕಾಶನ ಇದೇ ಇರಬೇಕು.) ಅವರ ಮೊದಲ ಸಂಕಲನ 'ಕೆಂಪು ಕವನಗಳು' ಎರಡನೆಯದು 'ಮನುಷ್ಯನೆಲ್ಲಿ?'. ಹೆಸರೇ ಸೂಚಿಸುವಂತೆ ಅವರು ಎಡಪಂಥೀಯ ನಿಲುವಿನಲ್ಲಿ ಮನುಷ್ಯತ್ವದ ಹುಡುಕಾಟ ಮಾಡುತ್ತಿದ್ದರು.

ಉಚ್ಚಸಾಮಾಜಿಕ ಸ್ತರದಲ್ಲಿ ಹುಟ್ಟಿದ ಅವರು ಜೀವನವಿಡೀ ಮಿಡಿದಿದ್ದು ಬಡವರಿಗೆ ಮತ್ತು ದಲಿತರಿಗೆ. ಅವರಲ್ಲಿದ್ದ ಬದ್ಧತೆ ಅವರ ದೇಹವನ್ನು ದಣಿವಿಲ್ಲದ ದುಡಿಮೆಗಳಿಗೆ ದೂಡುತ್ತಿತ್ತು. ಒಮ್ಮೆ ಬಂಡಾಯ ಸಾಹಿತ್ಯ ಸಂಘಟನೆ ಅವರಿಗೆ ಪುಸ್ತಕ ಜಾಥಾ ನಡೆಸಿಕೊಡುವ ಹೊಣೆ ಹೊರಿಸಿತು. ಅದು ಕತ್ತೆಕೆಲಸ. ಹಡಗಲಿಯಿಂದ ಹೊರಟು ಇಡೀ ಕರ್ನಾಟಕವನ್ನು ಪುಸ್ತಕದ ಬಂಡಲುಗಳೊಂದಿಗೆ ಹಿರೇಮಠರು ಸುತ್ತುಹಾಕಿದರು. ನಾನು ಶಿವಮೊಗ್ಗೆಯಲ್ಲಿದ್ದಾಗ ಅವರ ಜಾಥಾ ಬಂದಿತ್ತು. ನಾನೂ ಗೆಳೆಯರೂ ರಾತ್ರಿಯೆಲ್ಲ ಪುಸ್ತಕ ಯಾತ್ರೆಯ ಪೋಸ್ಟರುಗಳನ್ನು ಅಂಟಿಸಿ ಅವರ ಜತೆ ಪುಸ್ತಕದ ಬಂಡಲುಗಳ ನಡುವೆ ಮಲಗಿ, ರಾತ್ರಿಯೆಲ್ಲ ಚರ್ಚಿಸಿದ್ದು ನೆನಪಿದೆ. ಯಾವುದೇ ಕೆಲಸವನ್ನು ಮೇಲುಕೀಳೆನ್ನದೆ ಮಾಡುತ್ತಿದ್ದ ಹಿರೇಮಠರು ಪುಸ್ತಕದ ಬಂಡಲುಗಳನ್ನು ಹೆಗಲಲ್ಲಿ ಹೊತ್ತು ಕಾರ್ಯಕ್ರಮದ ಜಾಗಕ್ಕೆ ಹೋಗುತ್ತಿದ್ದರು. ಮೂಲತಃ ಚಳುವಳಿಗಾರರಾಗಿದ್ದ ಅವರು ಬಳ್ಳಾರಿ ಜಿಲ್ಲೆಯಲ್ಲಿದ್ದಾಗ ಅನೇಕ ಹೋರಾಟಗಳನ್ನು ರೂಪಿಸುತ್ತಿದ್ದರು. ಒಮ್ಮೆ ಕನ್ನಡ ವಿವಿಯ ಸೆಮಿನಾರಿಗೆಂದು ಬಂದವರು, ಅಲ್ಲಿನ ನೌಕರರು ಮುಷ್ಕರಕ್ಕೆ ಕುಳಿತಿದ್ದಾರೆ ಎಂದು ಕೇಳಿದವರೆ ಸೆಮಿನಾರು ಬಿಟ್ಟು ಅವರ ಜತೆ ಹೋಗಿ ಕೂತುಬಿಟ್ಟಿದ್ದರು. ಬೀದಿಯಲ್ಲಿ ಕೊಲೆಯಾದ ಸಫ್ದರ್ ಹಶ್ಮಿಯ ಮೇಲೆ ಅವರು ನಾಟಕ ಬರೆದಿದ್ದು ಕೂಡ ತಮ್ಮ ಇಂತಹ ಕಮಿಟ್‌ಮೆಂಟಿನ ಭಾಗವಾಗಿಯೇ. ವಿದ್ವಾಂಸರಾದ ಅವರು ಓದುವ ಕೋಣೆಗಿಂತ ಹೆಚ್ಚು ಸಮಯವನ್ನು ಬೀದಿಯಲ್ಲೇ ಹೆಚ್ಚು ಕಳೆದುಬಿಟ್ಟರು.

ಸಂಕೋಚದ ಸ್ವಭಾವದ ಮೆದುಮಾತಿನ ಹಿರೇಮಠ ಅವರು ಸೈದ್ಧಾಂತಿಕ ಚರ್ಚೆ ಬಂದಾಗ ಮಾತ್ರ, ಅದು ಭಾಷಣವಿರಲಿ, ಬರವಣಿಗೆಯಿರಲಿ, ಕಿರುಚುರಲಿ, ಮಹಾ ನಿಷ್ಠುರ. ಚಾಟಿಯಲ್ಲಿ ಹೊಡೆದಂತೆ ಮಾತಾಡುತ್ತಿದ್ದರು. ಹಿಪಾಕ್ರಸಿಯಿಲ್ಲದ ಅವರ ವ್ಯಕ್ತಿತ್ವ ಪಾರದರ್ಶಕವಾಗಿತ್ತು. ವೈಯಕ್ತಿಕವಾಗಿ ನನ್ನನ್ನು ಪ್ರೀತಿಸುತ್ತಿದ್ದ ಅವರು ನನ್ನೆಲ್ಲ ಪುಸ್ತಕಗಳನ್ನು ಗಂಭೀರವಾಗಿ ಓದಿ ವಿಮರ್ಶಿಸುತಿದ್ದರು. 'ನಿಮ್ಮ ಭಾಷೆ ಅಕರ್ಷಕವಾಗಿದೆ. ಆದರೆ ಅದರೊಳಗೆ ಮೈಮರೆತು ವಿಚಾರಕ್ಕೆ ಅಪಚಾರ ಮಾಡುತ್ತಿದ್ದೀರಿ. ತಮಾಶೆಯ ಮಾತಾಡಿ ಗಂಭೀರ ವಾಗ್ವಾದದಿಂದ ತಪ್ಪಿಸಿಕೊಳ್ಳುತ್ತೀರಿ' ಎಂದು ನನ್ನ ಮೇಲೆ ಹರಿಹಾಯುತ್ತಿದ್ದರು. ಇದನ್ನು ಕೇಳಿಕೇಳಿ ಒಮ್ಮೆ ನಾನು ಅವರ ಪ್ರಶ್ನೆಗಳನ್ನು ಮುಖಾಮುಖಿ ಮಾಡಲೆಂದೇ ಹರಪನಹಳ್ಳಿಯ ಅವರ ಮನೆಗೆ ಹೋಗಿದ್ದೆ. ಅವರು ಊಟ ಕೊಟ್ಟು, ನನ್ನ ಬರೆಹದ ಬಗ್ಗೆ ಅವರಿಗಿದ್ದ ಅನುಮಾನಗಳನ್ನು ಹೇಳಿ, ನಂತರ ಸಮೀಪದಲ್ಲಿದ್ದ ಬೆಟ್ಟಕ್ಕೆ ಅಲ್ಲಿರುವ ಭೈರವನ ಗುಹೆಯನ್ನು ತೋರಿಸಲು ಕರೆದುಕೊಂಡು ಹೋಗಿದ್ದರು.

ಅತಿ ಆದರ್ಶಗಳಿಂದಲೂ ಒಂದು ಬಗೆಯ ಮುಗ್ಧತೆಯಿಂದಲೂ ತುಂಬಿದ್ದ ಹಿರೇಮಠರಿಗೆ ಸ್ವಂತಕ್ಕೆ ಬದುಕುವ ಜಾಣ್ಮೆ ಮತ್ತು ವ್ಯವಹಾರ ಪ್ರಜ್ಞೆ ಕಡಿಮೆಯಿತ್ತು. ಎಂದೂ ಒಳುಪಾಯಗಳನ್ನು ಅನುಸರಿಸದ ಅವರು ತಮ್ಮ ನೇರಮಾತುಗಳಿಂದ ದೊಡ್ಡವರನ್ನು ಎದುರು ಹಾಕಿಕೊಳ್ಳುತ್ತಿದ್ದರು. ಅವರೊಮ್ಮೆ ಕೊಪ್ಪಳದ ಒಂದು ಸಭೆಯಲ್ಲಿ ಬರಗೂರು ಚಂಪಾ ಅವರ ಎದುರಿಗೆ. ನೀವು ಸಂಘಟನೆಯ ನಾಯಕರು ದಾರಿತಪ್ಪುತ್ತಿದ್ದೀರಿ. ನಿಮಗೆ ಕಿರಿಯರಾಗಿ ನಾವು ದಾರಿತೋರಿಸಬೇಕಾದ ಅಗತ್ಯವಿದೆ ಎಂದು ತೀಕ್ಷ್ಣವಾಗಿ ಮಾತಾಡಿಬಿಟ್ಟರು. ಹೂವಿನ ಹಡಗಲಿಯಲ್ಲಿ ಅಂಬೇಡ್ಕರ್ ಪ್ರತಿಮೆಗೆ ಅಪಮಾನವಾದ ಸಂದರ್ಭದಲ್ಲಿ ದಲಿತ ಸಂಗಾತಿಗಳ ಜತೆ ಕೂಡಿ ದೊಡ್ಡ ಹೋರಾಟವನ್ನೇ ಮಾಡಿದರು. ಅದು ಎಂ.ಪಿ. ಪ್ರಕಾಶರ ರಾಜಕೀಯ ಬದುಕಿನಲ್ಲಿ ದುರಂತ ತಿರುವನ್ನು ತರಬಹುದಾಗಿದ್ದ ಪ್ರಕರಣವಾಗಿತ್ತು. ಇದು ಮುಂದೆ ಕನ್ನಡ ವಿವಿಯಲ್ಲಿ ಉಳಿಯುವ ಅವರ ಮಹದಾಸೆ ಕೈಗೂಡದಿರಲೂ ಕಾರಣವಾಯಿತು. ಪ್ರಕಾಶ್ ತಮ್ಮ ರಾಜಕೀಯ ಜೀವನಕ್ಕೆ ಹಿರಮಠರ ಚಳುವಳಿಗಾರತನವು ಒಂದು ಅಪಾಯಕರ ಎಂದು ಭಾವಿಸಿದರೇ? ಮಾರ್ಕ್ಸ್‌ವಾದದ ಬಗ್ಗೆ ಲೋಹಿಯಾ ವಾದಿಗಳಿಗೆ ಸಹಜವಾಗಿಯೆ ಇರುವ ವಿರೋಧವು ಇಲ್ಲಿ ಕೆಲಸ ಮಾಡಿತೇ? ತಿಳಿಯದು.

ಹಿರೇಮಠರು ಒಬ್ಬ ಸಂಶೋಧಕರಾಗಿ ಹೊಸ

ಹೊಸ ಚಿಂತನೆಗಳನ್ನು ಮಂಡಿಸುತ್ತಿದ್ದರು; ತಂತಪಂಥವನ್ನು ಅರಿತರೆ ಕರ್ನಾಟಕ ಸಂಸ್ಕೃತಿಯ ಗೂಢವನ್ನೇ ಅರಿತಂತೆ ಎಂದು ಹೇಳುತ್ತಿದ್ದರು. ದಲಿತ ಸಂಸ್ಕೃತಿಯಲ್ಲಿ ಇದರ ಮೂಲವಿದೆಯೆಂದು ನಂಬಿದ್ದರು. ಇದಕ್ಕಾಗಿ ಅವರು ಇಡೀ ದಲಿತ ಸಂಸ್ಕೃತಿಯನ್ನು ಅದರ ಜಾತ್ರೆ ಹಬ್ಬ ಕಸುಬು ಕೃಷಿ ಭಾಷೆಗಳನ್ನು ಅಧ್ಯಯನ ಮಾಡುತ್ತಿದ್ದರು. ಕರ್ನಾಟಕದಲ್ಲಿ ದರ್ಶನಗಳ ಚರಿತ್ರೆಯನ್ನು ಕಟ್ಟಿಕೊಳ್ಳುವುದು ಎಲ್ಲ ಬಗೆಯ ಹೋರಾಟಗಳಿಗೆ ಬುನಾದಿ ಎಂದು ಹೇಳುತ್ತಿದ್ದರು; ನಾಶವಾಗಬೇಕಿದ್ದು ದುಡಿಯುವ ಜನರ ಸಾಂಸ್ಕೃತಿಕ ಲೋಕಗಳಿರುವ ಕುಲಗಳಲ್ಲ, ಉಳ್ಳವರ ಪರವಾದ ಚಿಂತನೆ ಇರುವ ಧರ್ಮಗಳು ಎಂದು ಹೇಳುತ್ತಿದ್ದರು. ಅವರು ಹೊಸ ಸಾಂಸ್ಕೃತಿಕ ಪರ್ಯಾಯದ ಚಿಂತನೆಗಳನ್ನು ಮಂಡಿಸತೊಡಗಿದರು. **'ಕರ್ನಾಟಕ ಸಂಸ್ಕೃತಿ ಪರಂಪರೆ: ಹಬ್ಬಗಳು' ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ: ಜಾತ್ರೆಗಳು'** 'ಮಾದಾರ ಚನ್ನಯ್ಯನ ನಾಡಿನಲ್ಲಿ' 'ದಲಿತ ಸಂಸ್ಕೃತಿ' 'ಮಾನವಪದ ಶಾಸ್ತ್ರ' ಮುಂತಾದ ಕೃತಿಗಳಲ್ಲಿ ಅವರ ಹೊಸಹೊಸ ಚಿಂತನೆಗಳಿವೆ. ಈ ಮೂಲಕ ಹಿರೇಮಠರ ವಿದ್ವತ್ತು ಮತ್ತು ಆಕ್ಟಿವಿಸಂ ಹೊಸ ತಿರುವನ್ನು ಪಡೆದುಕೊಳ್ಳುತ್ತಿತ್ತು. ಹಾಗೆ ಕಂಡರೆ ಕೊಂಚ ಸಾಂಪ್ರದಾಯಕ ಎನ್ನಬಹುದಾದ ಅವರ ಮಾರ್ಕ್ಸ್‌ವಾದಿ ನಿಷ್ಠೆಗೆ ಇದು ಅವರೇ ಜೋಡಿಸಿಕೊಳ್ಳುತ್ತಿದ್ದ ಹೊಸ ಅರ್ಥಪೂರ್ಣ ವಿಸ್ತರಣೆಯಾಗಿತ್ತು. ಹಿರೇಮಠರ ದಲಿತ ಸಂಸ್ಕೃತಿಯ ಶೋಧವನ್ನು ದಲಿತ ಸಂಘಟನೆಗಳು ಮತ್ತು ಚಿಂತಕರು ಆಸಕ್ತಿಯಿಂದ ಸ್ವಾಗತಿಸಿದರು. ಆದರೆ ಪಾರ್ಟಿ ಮಾರ್ಕ್ಸಿಸ್ಟರು ಇದನ್ನು ಅರ್ಥ ಮಾಡಿಕೊಳ್ಳಲಿಲ್ಲ ಮತ್ತು ಇದನ್ನು ಅವರು ಪಕ್ಷಸಿದ್ಧಾಂತಕ್ಕೆ ಮಾಡಿದ ದ್ರೋಹವೆಂಬಂತೆ ನೋಡಿದರು. ಹಿರೇಮಠರಿಂದ ಕಲಿತು ಬೆಳೆದ ಶಿಷ್ಯರೇ ಅವರನ್ನು 'ದಾರಿ ತಪ್ಪಿದ ಕಾಮ್ರೇಡ್' ಎಂದು ಅಸ್ಪೃಶ್ಯವಾಗಿಸಿದರು. ಕಾಲುಶತಮಾನ ಕಾಲ ತಮ್ಮಿಡೀ ಬದುಕನ್ನು ಎಡಚಳುವಳಿಗಾಗಿ ತೇದ ಹಿರೇಮಠರಿಗೂ ಪಕ್ಷ ರಾಜಕಾರಣದಲ್ಲಿ ನಂಬಿಕೆ ಹೋಗಿಬಿಟ್ಟಿತ್ತು. ಹಿರೇಮಠರು ವರ್ಗಕಲ್ಪನೆಯನ್ನು ಬಿಟ್ಟು ಕೊಟ್ಟರೇ? ಅವರ ಪ್ರಿಯ ಚಿಂತಕರಾಗಿದ್ದ ದೇವಿಪ್ರಸಾದ ಚಟ್ಟೋಪಾಧ್ಯಾಯರೇ ಅವರ ಹುಡುಕಾಟಕ್ಕೆ ಮಿತಿಯಾದರೇ? ಅವರ ದಲಿತ ಸಂಸ್ಕೃತಿಯ ಶೋಧದಿಂದ ಕರ್ನಾಟಕದ ರಾಜಕಾರಣಕ್ಕೆ ಹೊಸ ಆಯಾಮ ಸಿಗುವ ಬಗೆ ಯಾವುದು? ಈ ಬಗ್ಗೆ ಸರಿಯಾದ ಸೈದ್ಧಾಂತಿಕವಾದ ಚರ್ಚೆಯೇ ಏರ್ಪಡಲಿಲ್ಲ. ಇದಕ್ಕೆ ಹಿರೇಮಠರು ಮಾತ್ರ ಕಾರಣರಲ್ಲ.

ಹಿರೇಮಠರ ಕೊನೆಯ ದಿನಗಳು ದುಗುಡದಾಯಕವಾಗಿದ್ದವು. ಕೊನೆಯ ದಿನಗಳಲ್ಲಿ ಅವರು ರಾಜಕೀಯ ವಶೀಲಿ ಮಾಡಿದರು. ಪ್ರಿನ್ಸಿಪಾಲರಾಗಲು ಹಿಂದೆ ತಾವೇ ತಾತ್ವಿಕವಾಗಿ ವಿರೋಧಿಸಿದ ರಾಜಕಾರಣಿಗಳ ಮೂಲಕವೇ ಒಂದು ಮಾತು ಹೇಳಿಸಿದರೆಂದೂ ಕೇಳಿದೆ. ಅವರಂತಹ ವಿದ್ವಾಂಸರು ಪ್ರಿನ್ಸಿಪಾಲಗಿರಿಯನ್ನು ಒಪ್ಪಿಕೊಂಡಿದ್ದು ನನಗಂತೂ ಸೋಜಿಗ ತಂದಿತ್ತು. ಕೊನೆಯ ದಿನಗಳಲ್ಲಿ ಮೇಷ್ಟರು ತಮ್ಮ ಕೌಟುಂಬಿಕ, ಮತ್ತು ತಾತ್ವಿಕ ತಾಕಲಾಟಗಳಿಂದ ಕಂಗೆಟ್ಟು ಕೆಲವು ರಾಜಿಗಳಿಗೆ ಒಳಗಾದರೇ? ಅವರ ಇಬ್ಬರು ಗಂಡುಮಕ್ಕಳಲ್ಲಿ ಒಬ್ಬ-ಸಂಗ್ರಾಮ-ಮಾನಸಿಕವಾಗಿ ಅದೃಢ; ಮತ್ತೊಬ್ಬ ಮಗ ಸಂಘರ್ಷ, ಕನ್ನಡ ವಿಶ್ವ ವಿದ್ಯಾಲಯದಲ್ಲಿ ಉದ್ಯೋಗಿಯಾಗಿದ್ದವನು ಇದ್ದಕ್ಕಿದ್ದಂತೆ ಕಣ್ಮರೆಯಾಗಿಬಿಟ್ಟ, ನಾಸ್ತಿಕರಾಗಿದ್ದ ಹಿರೇಮಠರ ಮಗನಾಗಿ ಅವನು ದೊಡ್ಡದಾಗಿ ಕುಂಕುಮ ಇಟ್ಟುಕೊಂಡು ಬರುತ್ತಿದ್ದುದು ಅಪ್ಪನ ವಿರುದ್ಧ ವಿಚಿತ್ರ ಸೇಡು ತೀರಿಸಿಕೊಳ್ಳಲೊ ಎಂಬಂತಿತ್ತು. ಸಾರ್ವಜನಿಕ ಜೀವನದಲ್ಲಿ ಎದುರಿಸಿದ ಸಂಗ್ರಾಮ, ಸಂಘರ್ಷಗಳಿಗಿಂತ, ಮಕ್ಕಳ ವಿಷಯದಲ್ಲಿ ಎದುರಿಸಿದ ಕಷ್ಟಗಳೇ ಅವರನ್ನು ಹೆಚ್ಚು ಮೆತ್ತಗಾಗಿಸಿದವು. ಎಲ್ಲ ಸಾರ್ವಜನಿಕ ವ್ಯಕ್ತಿಗಳಂತೆ ಕುಟುಂಬದ ಕಡೆ ಹೆಚ್ಚು ಗಮನ ಕೊಡಲು ಅವರಿಗೆ ಸಾಧ್ಯವಾಗಲಿಲ್ಲ; ತಮ್ಮ ವಿದ್ವತ್ತು ಚಳುವಳಿ ಹೋರಾಟದಂತಹ ಕೆಲಸಗಳಲ್ಲಿ ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದ ಅಪ್ಪಂದಿರ ಸಾಲಿಗೆ ಅವರೂ ಸೇರಿಬಿಟ್ಟಿದ್ದರು ಅವರಿಗೆ ಈ ವಿಷಯದಲ್ಲಿ ಉಂಟಾದ ಪರಿತಾಪವು ಕೊನೆಯ ದಿನಗಳಲ್ಲಿ ಕಾಡುತ್ತಿತ್ತು ಅನಿಸುತ್ತದೆ. ಮಗನನ್ನು ಕಳೆದುಕೊಂಡು ಹುಡುಕಲು ಮಾಡುತ್ತಿದ್ದ ಅವರ ಯತ್ನಗಳು ದಾರುಣವಾಗಿದ್ದವು. ನಾನು ಪಂಥಗಳ ಅಧ್ಯಯನಕ್ಕೆ ಬೆಟ್ಟಗುಡ್ಡ ಅಲೆಯುತ್ತೇನೆಂದು ಭಾವಿಸಿ ಅಲ್ಲೆಲ್ಲಿಯಾದರೂ ಅವನು ಸನ್ಯಾಸಿಯಾಗಿ ಸೇರಿಕೊಂಡಿದ್ದಾನೆಯೇ ನೋಡಿರಿ ಎಂದು ಅವರು ಕೇಳುತ್ತಿದ್ದರು. ಅವರೀಗ ಸಮಾಜವನ್ನು ಕ್ರಾಂತಿಕಾರಕವಾಗಿ ಬದಲಿಸುವ ಹಠವಾದಿ ಚಳುವಳಿಗಾರನ ಪಾತ್ರದಿಂದ ಅಸಹಾಯಕ ಅಪ್ಪನಾಗಿ ಬದಲಾಗಿದ್ದರು. ನೋವು ಕಷ್ಟವನ್ನು ಯಾರಲ್ಲೂ ಹೇಳಿಕೊಳ್ಳದೆ ನುಂಗುತ್ತಿದ್ದ ಅವರು ಮಗನನ್ನು ಹುಡುಕಿ ಕೊಡುವಂತೆ ಎಲ್ಲ ಪರಿಚಿತರಲ್ಲಿ ಬೇಡುತ್ತಿದ್ದರು. ಕಡೆಗೂ ತಂದೆ ಮಕ್ಕಳ ಮಿಲನವಾಗಲಿಲ್ಲ. ಆ ಮಗನಾದರೂ ಲೋಕದಲ್ಲಿ ಇದ್ದಾನೊ ಇಲ್ಲವೊ?

ಹಿರೇಮಠರ ಕೊನೆಯ ದಿನಗಳು ದುಗುಡದಾಯಕವಾಗಿದ್ದವು. ಕೊನೆಯ ದಿನಗಳಲ್ಲಿ ಅವರು ರಾಜಕೀಯ ವಶೀಲಿ ಮಾಡಿದರು. ಪ್ರಿನ್ಸಿಪಾಲರಾಗಲು ಹಿಂದೆ ತಾವೇ ತಾತ್ವಿಕವಾಗಿ ವಿರೋಧಿಸಿದ ರಾಜಕಾರಣಿಗಳ ಮೂಲಕವೇ ಒಂದು ಮಾತು ಹೇಳಿಸಿದರೆಂದೂ ಕೇಳಿದೆ. ಅವರಂತಹ ವಿದ್ವಾಂಸರು ಪ್ರಿನ್ಸಿಪಾಲಗಿರಿಯನ್ನು ಒಪ್ಪಿ ಕೊಂಡಿದ್ದು ನನಗಂತೂ ಸೋಜಿಗ ತಂದಿತ್ತು. ಕೊನೆಯ ದಿನಗಳಲ್ಲಿ ಮೇಷ್ಟರು ತಮ್ಮ ಕೌಟುಂಬಿಕ, ಮತ್ತು ತಾತ್ವಿಕ ತಾಕಲಾಟಗಳಿಂದ ಕಂಗೆಟ್ಟು ಕೆಲವು ರಾಜಿಗಳಿಗೆ ಒಳಗಾದರೇ? ಅವರ ಇಬ್ಬರು ಗಂಡುಮಕ್ಕಳಲ್ಲಿ ಒಬ್ಬ-ಸಂಗ್ರಾಮ-ಮಾನಸಿಕವಾಗಿ ಅದೃಢ; ಮತ್ತೊಬ್ಬ ಮಗ ಸಂಘರ್ಷ, ಕನ್ನಡ ವಿಶ್ವ ವಿದ್ಯಾಲಯದಲ್ಲಿ ಉದ್ಯೋಗಿಯಾಗಿದ್ದವನು ಇದ್ದಕ್ಕಿದ್ದಂತೆ ಕಣ್ಮರೆಯಾಗಿಬಿಟ್ಟ. ನಾಸ್ತಿಕರಾಗಿದ್ದ ಹಿರೇಮಠರ ಮಗನಾಗಿ ಅವನು ದೊಡ್ಡದಾಗಿ ಕುಂಕುಮ ಇಟ್ಟುಕೊಂಡು ಬರುತ್ತಿದ್ದುದು ಅಪ್ಪನ ವಿರುದ್ಧ ವಿಚಿತ್ರ ಸೇಡು ತೀರಿಸಿಕೊಳ್ಳಲೊ ಎಂಬಂತಿತ್ತು. ಸಾರ್ವಜನಿಕ ಜೀವನದಲ್ಲಿ ಎದುರಿಸಿದ ಸಂಘರ್ಷಗಳಿಗಿಂತ, ಮಕ್ಕಳ ವಿಷಯದಲ್ಲಿ ಎದುರಿಸಿದ ಕಷ್ಟಗಳೇ ಅವರನ್ನು ಮೆತ್ತಗಾಗಿಸಿದವು.

ಅವರು ಕ್ಯಾನ್ಸರ್‌ನಿಂದ ನರಳುತ್ತ ಇರುವ ಸುದ್ದಿ ತಿಳಿದು ನಾನು ಕಾಣಲು ಕೊಟ್ಟೂರಿಗೆ ಹೋದೆ. ಅದು ನನ್ನ ಅವರ ನನ್ನ ಕೊನೆಯ ಭೇಟಿ. ಅವತ್ತು ಜಿಟಿಜಿಟಿ ಮಳೆ. ಊರ ಹೊರಗೆ ಬಡಾವಣೆಯ ತುದಿಯಲ್ಲಿ ಅರೆಗತ್ತಲಿನಲ್ಲಿ ಅವರ ಮನೆ. ಕೇಳಿಕೊಂಡು ನೆನೆದು ತೊಪ್ಪೆಯಾಗಿ ಹೋಗಿ ಬೆಲ್ ಮಾಡಿದೆ. ಅವರ ಮಡದಿ ಯೋಗಿತಾ ಬಾಗಿಲು ತೆಗೆದು ನನ್ನನ್ನು ಕಂಡು 'ಹ್ಞಾ! ತರಿಕೆರಿ, ಬರ್ರಿಬರ್ರಿ' ಎಂದು ಉದ್ಗರಿಸಿದರು. ನನ್ನ ಹೆಸರು ಕೇಳಿದ ಕೂಡಲೆ ಒಂದು ಆಕೃತಿ ಒಳಗಿಂದ ದಡಕ್ಕನೆ ಮಂಚದಿಂದ ಎದ್ದು ಹಾಲಿಗೆ ಬಂದಿತು. ಮೈಕೈಯೆಲ್ಲ ಒಣಗಿದ ಕಟ್ಟಿಗೆಯಂತಾಗಿದ್ದು ನಿಕ್ಕರಿನ ರೂಪದ ಅಂಡರವೇರೊಂದು ಬಿಟ್ಟು ಮೈಮೇಲೆ ಮತ್ತೇನೂ ಇರಲಿಲ್ಲ. ಬೆಳ್ಳಗಿದ್ದು ಕೆಂದುಟಿಯಿಂದ ಕೂಡಿದ ಸುಂದರ ಪುರುಷರಾಗಿದ್ದ ಹಿರೇಮಠರಿಗೆ ಡ್ರೆಸ್‌ಸೆನ್ಸೇ ಇಲ್ಲ ಎಂದು ನಾನು ಸದಾ ಅಂದುಕೊಳ್ಳುತ್ತಿದ್ದೆ; ಆದರೆ ಏನುಟ್ಟರೂ ಅವರು ಚೆಂದ ಕಾಣುತ್ತಿದ್ದರು. ಅವರಿಗೆ "ನಿಮ್ಮ ಯೌವನದಲ್ಲಿ ಬಹಳ ಹುಡುಗಿಯರ ಕನಸಿಗೆ ಹೋಗಿ ನೀವು ಕಾಡಿದ್ದೀರಿ" ಎಂದು ತಮಾಶೆ ಮಾಡುತ್ತಿದ್ದೆ. ಈಗ ನೋಡಿದರೆ ಆ ಸ್ಫುರದ್ರೂಪವೆಲ್ಲ ಕರಕಲಾಗಿ ಹೋಗಿತ್ತು. ಏನೂ ತೋಚದೆ ತೋಳುಚಾಚಿ ಅಪ್ಪಿಕೊಂಡೆ. ಬಿಸುಪಿಲ್ಲದ ತಣ್ಣನೆಯ ಎಲುಬು ಚಕ್ಕಳದ ರೂಹನ್ನು ತಬ್ಬಿದಂತಾಯಿತು. ಅವರಿಗೆ ಮೂತ್ರವು ಆಗಾಗ್ಗೆ ವಿಸರ್ಜನೆಯಾಗುವುದರಿಂದ ಬಚ್ಚಲು ಮನೆಗೆ ಸಮೀಪವಾಗಿಯೇ ಮಂಚ ಹಾಕಲಾಗಿತ್ತು. ಐದ್ಹತ್ತು ನಿಮಿಷಕ್ಕೆ ಒಂದು ಬಟ್ಟಲಿನಲ್ಲಿ ಲೋಳೆಯಂತಹ ಉಗುಳನ್ನು ಉಗಿಯುತ್ತ ಅದರ ಮೇಲೆ ಒಂದು ಚಿಕ್ಕರಟ್ಟನ್ನು ಮುಚ್ಚಿ ಹಾಸಿಗೆಯ ಪಕ್ಕ ಇಡುತ್ತಿದ್ದರು. ಇವು ಅವರ ಕೊನೆಯ ದಿನಗಳು ಎಂದು ನನಗೆ ಅನಿಸಿಬಿಟ್ಟಿತು. ನಾನು ಅವರ ಆರೋಗ್ಯದ ಬಗ್ಗೆ ಮಾತಾಡಲು ಯತ್ನಿಸಿದರೆ ಅವರು ತಾವು ಬರೆಯುತ್ತಿರುವ ಯೋಗದರ್ಶನದ ಮೇಲಿನ ಪುಸ್ತಕದ ಬಗ್ಗೆಯೇ ಮಾತಾಡಿದರು. ಜಾಸ್ತಿ ಮಾತಾಡಿದರೆ ಸುಸ್ತಾಗುತ್ತಿತ್ತು. ಆದರೆ ತಮ್ಮ ಬಗ್ಗೆ ಯಾರೂ ಕರುಣೆ ತೋರುವುದು ಅವರಿಗೆ ಬೇಡವಾಗಿತ್ತು. ಪುಸ್ತಕಗಳನ್ನೆಲ್ಲ ಗಂಟುಕಟ್ಟಿ ಮೇಲಿಟ್ಟಿದ್ದರೂ ಯೋಗದರ್ಶನ ಕುರಿತ ಪುಸ್ತಕವನ್ನು ಬರೆಯುವುದಕ್ಕೆ ಬೇಕಾದ ಸಾಮಗ್ರಿಗಳನ್ನು ಮಾತ್ರ ಕೆಳಗಿರಿಸಿಕೊಂಡಿದ್ದರು.

ವಿಷಾದದಿಂದ ಮರಳಿ ಮನೆಗೆ ಬಂದೆ. ಅವರು ಒಂದು ದಿನ ಕೊಟ್ಟೂರು ಬಿಟ್ಟು ತಮ್ಮೂರಿಗೆ ಇದ್ದಕ್ಕಿದ್ದಂತೆ ಹೊರಟುಹೋದರು ಎಂದು ತಿಳಿಯಿತು. ಹೋದ ಒಂದು ಮಾಸದ ಬಳಿಕ ಅವರು ನನ್ನ ಜತೆ ಫೋನಿನಲ್ಲಿ ಕ್ಷೀಣದನಿಯಲ್ಲಿ ಮಾತಾಡಿದರು. ಅದು ನನ್ನ ಅವರ ನಡುವೆ ನಡೆದ ಕೊನೆಯ ಮಾತುಕತೆ: "ಸಾರ್, ನಮಸ್ಕಾರ. ಆರಾಮಾಗಿದೀರಾ? ನಾನು ಹಿರೇಮಠ. ಈಗ ಹಳ್ಳಿಗೆ ಬಂದು ಕುರ್ಪಿ ಹಿಡಕೊಂಡು ಹೊಲದಾಗೆ ಕುಂತೀನಿ. ನನಗೆ ರೊಕ್ಕದ ಅಡಚಣಿ ಐತಿ. ನಿಮ್ಮದೊಂದು ಪುಸ್ತಕ ಹಾಕ್ತೀನಿ ಕೊಡ್ರಿ, ದಯವಿಟ್ಟು ಒಲ್ಲೆ ಅನಬ್ಯಾಡರಿ.

ಹೆಂಗಾದರೂ ಮಾರಿ ಹೊಳ್ಳಿ ಮುಟ್ಟಸತೀನಿ. ನಿಮ್ಮ ಹೊಸಾ ಪುಸ್ತಕ ಓದ್ತಾ ಅದೀನಿ". ಹುಡುಕಿಕೊಂಡು ಹೋದರೂ ಸಿಗದ ಹಳ್ಳಿಯಲ್ಲಿ ಕುಳಿತು ಇವರು ಪುಸ್ತಕ ಪ್ರಕಟಣೆ ಮಾಡುವುದುಂಟೇ? ನಾನು ನಂಬಲಿಲ್ಲ. ಅವರಿಗೆ ಬೇಸರವಾಗದಿರಲಿ ಎಂದು 'ಆಗಲಿ' ಎಂದೆ. ಕೊನೆಯ ಗಳಿಗೆಯಲ್ಲೂ ಬದುಕುವ ಆಸೆ ಮತ್ತು ಕೆಲಸ ಮಾಡುವ ಛಲ ಅವರ ದನಿಯಲ್ಲಿತ್ತು. ಆದರೆ ಸಮತಾ ಪ್ರಕಾಶನ ದಿಂದ ಪುಸ್ತಕ ಪ್ರಕಟಿಸುವ ಭಾಗ್ಯ ನನಗೆ ಒದಗಲಿಲ್ಲ.

ಹಿರೇಮಠರಿಗೆ ಪೆನ್‌ಶನ್ ಸೆಟಲ್ ಆಗದೆ 'ತಬರನ ಕಥೆ' ಆಗಿತ್ತು. ಹಣಕ್ಕಾಗಿ ಪರಿತಪಿಸುತ್ತಿದ್ದರು. ಸಾವಿರಾರು ಮಕ್ಕಳಿಗೆ ಅನ್ನ ಬಟ್ಟೆ ವಿದ್ಯೆ ವಿಚಾರ ಕೊಟ್ಟು ಸಾಕಿದ, ಕೆಲ ವೊಮ್ಮೆ ಲಗ್ನಮಾಡಿಸಿದ ಅವರು ಕೊನೆಯ ದಿನಗಳಲ್ಲಿ ಕಷ್ಟಕ್ಕೆ ಸಿಲುಕಿ ಎಲ್ಲರಲ್ಲೂ ಸಾಲ ಕೇಳುತ್ತಿದ್ದುದು ವಿಚಿತ್ರ ಎನಿಸುತ್ತಿತ್ತು. ಮೊದಲನೇ ದರ್ಜೆಯ ರೈಲು ಪ್ರಯಾಣ ವನ್ನು ಪಡೆಯಲು ನಿರಾಕರಿಸುತ್ತಿದ್ದ ಅವರ ನೈತಿಕ ಸೊಕ್ಕನ್ನು ಅಣಕಿಸಲು ಸಾವು ಈ ಕಷ್ಟವನ್ನು ಒಡ್ಡಿ ಪರೀಕ್ಷಿ ಸುತ್ತಿತ್ತೇ? ಅವರ ಮೇಲೆ ಅಭಿನಂದನ ಗ್ರಂಥ ತರಬೇಕು. ಅವರ ಪುಸ್ತಕಗಳ ಮೇಲೆ ಚರ್ಚೆ ಏರ್ಪಡಿಸಬೇಕು. ಸಾಧ್ಯ ವಾದರೆ ಒಂದು ಪುಟ್ಟಗಂಟು ಸೇರಿಸಿಕೊಡಬೇಕು ಎಂದೆಲ್ಲ ಅಂದುಕೊಳ್ಳುತ್ತಿದ್ದೆವು. ಆದರೆ ನಮ್ಮ ನೆರವಿನ ಹಂಗಿ ನಿಂದಲೂ ಸಾವು ಅವರನ್ನು ಪಾರು ಮಾಡಿಬಿಟ್ಟಿತು.

ಎಸ್. ಎಸ್. ಹಿರೇಮಠರ ಕೃತಿಗಳು

ಕಾವ್ಯ: ಕೆಂಪುಕವನಗಳು(1978), ಹಸಿರಿನುಸಿರು ಕವಿತೆಗಳು(1979), ಮನುಷ್ಯನೆಲ್ಲಿ ಕಾವ್ಯ(1980), ಚಂದ್ರನ ದಾರಿಗಳು(1980) ನಾಟಕ: ಹಕ್ಕಿ ಅಮರ ಜೋಗತಿಕಲ್ಲು (1981) ಸಂಸ್ಕೃತಿ ವಿಶ್ಲೇಷಣೆ: ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ 1 ಹಬ್ಬಗಳು(1992), ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ 2 ಜಾತ್ರೆಗಳು(1993), ಬಂಡಾಯ ಸಾಹಿತ್ಯ(1994), ಮೈಲಾರನ ಜಾತ್ರೆ(1994), ಮಾದಾರ ಚನ್ನಯ್ಯನ ನಾಡಿನಲ್ಲಿ(2005), ಪಂಚಗಣಾಧೀ ಶ್ವರರು(1996?) ದಲಿತ ಸಂಸ್ಕೃತಿ 2006 ದರ್ಶನ ಸರಣಿ: ಲೋಕಾಯತ ದರ್ಶನ(2006), ಲಾಕುಳ ದರ್ಶನ (2006), ಕಾಳಾಮುಖ ದರ್ಶನ(2004), ಸಾಂಖ್ಯ ದರ್ಶನ(2003), ಪಾಶುಪತ ದರ್ಶನ(2003) ಸಂಪಾ ದನೆ: ರಾಘವಾಂಕನ ವೀರೇಶಚರಿತೆ (1978), ಅಂಬವ್ವನ ಪದಗಳು (1978) ಕಿರುಪುಸ್ತಿಕೆ: ಮನುಸ್ಮೃತಿಯಲ್ಲಿ ಜಾತಿ ಮತ್ತು ವರ್ಗ (?), ಬಂಡಾಯ ಮತ್ತು ಲೈಂಗಿಕ ಪ್ರಶ್ನೆ ಬಂಡಾಯ ಸಾಹಿತ್ಯ ಸಂಘಟನೆ (1988), ರಾಷ್ಟ್ರೀಯ ಭಾವೈಕ್ಯ ಮತ್ತು ಉಪಸಂಸ್ಕೃತಿಗಳು (1990), ಹಂಪಿ ಕನ್ನಡ ವಿವಿ ಮತ್ತು ಕನ್ನಡ ಸಂಸ್ಕೃತಿ (1991). □

ಹುತಾತ್ಮರು



ಅರಣ್ಯದ
ಆ
ನಿಗೂಢತೆಯಲ್ಲಿ
ಮೊನ್ನೆ ನಾಲ್ಕು ಜನ ಸತ್ತರು!
ದಯವಿಟ್ಟು ಒಂದು ಎರಡು
ಮೂರೆಂದು ಅಂಕಿಗಳಲಿ ಅವರ
ಎಣಿಸುವುದು
ಬೇಡ!
ಸತ್ತವರನು ನಾನಾಗಲಿ
ನೀವಾಗಲಿ ನೋಡಿರಲಿಲ್ಲ;
ಸಾಯುವ ಮುಂಚೆಯಾಗಲಿ
ನಂತರವಾಗಲಿ;
ನೋಡಲೆ ಇಲ್ಲ ಸುರಿವ ಮಳೆಯಲಿ
ಅಳಿಸಿ ಹೋದ
ರಕ್ತದ ಕಲೆಗಳನ್ನು

ಸತ್ತವರಿಗೂ ಸಂಸಾರಗಳಿದ್ದಿರಬಹುದು
ನಮ್ಮ ಹಾಗೆ
ಕನಸುಗಳೂ ಇದ್ದಿರಬಹುದು ಅವರೊಳಗೆ
ಜೊತೆಗೊಂದು ಗುರಿ
ಸೇರಲು ಅದ ಅವರದೇ ಆದ ದಾರಿ
ಅವರು ಸತ್ತು ಬದುಕಿದರು
ಹೋರಾಟದ ಚರಿತ್ರೆಯಲಿ
ನಾವೋ ಬದುಕಿಯೂ ಸತ್ತವರು
ಕ್ರೂರ ವರ್ತಮಾನದಲಿ!

(ಮೆಣಸಿನ ಹಾಡ್ಯದಲಿ ಪೊಲಿಸರಿಗೆ ಬಲಿಯಾದವರಿಗೆ)

○ ಕು.ಸು. ಮಧುಸೂದನ



'ಸಂವಾದ' ದೊರೆಯುವ ಸ್ಥಳ

☞ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
✣ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ ಬೆಂಗಳೂರು- ೫೬೦ ೦೦೧, ☎ : ೨೨೨೦೩೫೮೦
✣ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೦೩೮೭, ✣ಸ್ಟೇಷನ್ ರಸ್ತೆ, ಗುಲ್ಬರ್ಗ-೨ ☎ : ೪೨೪೩೦೨
✣ಕೆ.ಎಸ್.ರಾವ್.ರಸ್ತೆ, ಮಂಗಳೂರು-೧, ☎ : ೨೪೪೧೦೦೧೬, ✣ರಾಮಸ್ವಾಮಿ ವೃತ್ತ ಮೈಸೂರು-೨೪, ☎ : ೨೪೨೪೯೪
☞ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ೧೧೮/೩ ಮೊದಲ ಮಹಡಿ ೨ನೇ ಮುಖ್ಯ ರಸ್ತೆ, (ನಟರಾಜ್ ಟಾಕೀಸ್ ಪಕ್ಕ) ಶೇಷಾದ್ರಿಪುರಂ ಬೆಂ-೨೦
☞ಕೆ.ಎಸ್.ಅರ್.ಟಿ.ಸಿ. ಬುಕ್ ಸ್ಟಾಲ್, ಫ್ಲಾಟ್ ಫಾಮ್ ನಂ.೧, ಸ್ಟಾಲ್ ನಂ.೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು
☞ಉದಯ ಕುಮಾರ್ ಅಶೋಕ ಸ್ಟೋರ್, ಹೋಟೆಲ್ ಅಶೋಕ, ವಿಜಯನಗರ ಬೆಂಗಳೂರು-೫೬೦೦೪೦

ಮಹಿಳಾ ಶಿಕ್ಷಣ ಮತ್ತು ಸಬಲೀಕರಣ

ಡಾ. ಬಿ. ಎಂ. ಪುಟ್ಟಯ್ಯ

(ಕಳೆದ ಸಂಚಿಕೆಯಿಂದ ಮುಂದುವರೆದುದು)

ನಿರ್ದಿಷ್ಟವಾಗಿ ಅತ್ಯಂತ ಕಡಿಮೆ ಸಂಬಳದ ಕೆಲವು ಕೌಶಲ್ಯಗಳನ್ನು ಮಹಿಳೆಯರಿಗೆ ಕೊಡಲಾಗುತ್ತಿದೆ. ಸಾಮಾಜಿಕ ಬದಲಾವಣೆಯು ಮಹಿಳೆಯರ ದುಡಿಮೆಯನ್ನು ಕಿತ್ತುಕೊಳ್ಳುತ್ತಿರುವುದಕ್ಕೆ ಒಂದು ಉದಾಹರಣೆ. ಎಸ್‌ಟಿಡಿ ಸೆಂಟರ್‌ಗಳಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದ ಹೆಣ್ಣುಮಕ್ಕಳು ಇಂದು ಕಾಯಿನ್ ಬೂತ್ ಮತ್ತು ಮೊಬೈಲ್ ಬಂದ ಮೇಲೆ ತಣ್ಣಗೆ ಆ ದುಡಿಮೆಯಿಂದ ಹೊರ ದೂಡಲ್ಪಟ್ಟರು. ಅದು ಅವರನ್ನು ಇಡಿಯಾಗಿ ವಿಮೋಚನೆ ಮಾಡುವಂತಿರಲಿಲ್ಲ ಎಂಬುದು ಬೇರೆ ಮಾತು. ಆದರೆ ಬಂಡವಾಳ ಶಾಹಿಯ ಉತ್ಪಾದನೆ ಮತ್ತು ಅದರ ಲಾಭದ ವಿಧಾನವೇ ಮಹಿಳೆಯರಿಗೆ ವಿರುದ್ಧವಾಗಿದೆ ಎಂಬುದು ಇಲ್ಲಿ ಮುಖ್ಯ.

ಹಾಗಿದ್ದರೆ ಇಂತಹ ಸಂದರ್ಭದಲ್ಲಿ ಮಹಿಳೆಯರ ಮುಂದಿರುವ ಸವಾಲುಗಳು ಯಾವುವು? ಒಂದು ಕಡೆ ಮಹಿಳೆಯರು ಹೊಸ ಉತ್ಪಾದನ ವಲಯಗಳನ್ನು ಪ್ರವೇಶಿಸಬೇಕು, ಅದಕ್ಕೆ ಬೇಕಾದ ತರಬೇತಿ ಪಡೆಯಬೇಕು ಎಂದು ಹೇಳಲಾಗುತ್ತಿದೆ. ಅದೇ ಕಾಲಕ್ಕೆ ಹೊಸ ಉತ್ಪಾದನೆಯ ವಲಯಗಳು ಗೊತ್ತಿಲ್ಲದಂತೆ ಮಹಿಳೆಯರ ದುಡಿಮೆಯ ಅವಕಾಶಗಳನ್ನು ನಯವಾಗಿ ಕಿತ್ತುಕೊಳ್ಳುತ್ತಿವೆ. ಅಥವ ಉತ್ಪಾದನ ವಲಯವು ಮಹಿಳೆಯರನ್ನು ದುಡಿಮೆಯಿಂದ ಹೊರಗಿಡುತ್ತಿದೆ. ಇದನ್ನು ಇನ್ನೊಂದು ಕೋನದಲ್ಲಿ ಹೇಳುವುದಾದರೆ, ತಾಂತ್ರಿಕ ಬೆಳವಣಿಗೆ ಎಂಬುದು ಮಹಿಳೆಯರ ಇಲ್ಲವೇ ಶೋಷಿತರ ದುಡಿಮೆಯ ವ್ಯಾಪ್ತಿಯನ್ನು ಕಡಿಮೆ ಮಾಡುತ್ತಿದೆ, ಅವುಗಳಲ್ಲೆ ಕೆಲವನ್ನು ಕಿತ್ತುಕೊಳ್ಳುತ್ತಿದೆ.

ಭಾಗ ಎರಡು

ಮಹಿಳಾ ಸಬಲೀಕರಣ

ವ್ಯಾಪ್ತಿ ಮತ್ತು ಸ್ವರೂಪ

ವಾಸ್ತವವಾಗಿ ಮಹಿಳಾ ಸಬಲೀಕರಣ ಎಂದರೆ ಏನು? ಅದರ ಸ್ವರೂಪ ಮತ್ತು ಸಮಸ್ಯೆಯ ವಿನ್ಯಾಸ ಯಾವುದು ಎಂಬುದನ್ನು ಪರಿ ಶೀಲಿಸಬೇಕು. ಸಬಲೀಕರಣ ಅಂದರೆ ಶಕ್ತಗೊಳಿಸುವುದು ಹಾಗೂ ಬಲಗೊಳಿಸುವುದು ಎಂಬ ಅರ್ಥ ವಿವರಣೆ ಸಾಧ್ಯ. ಹಾಗೆ ನೋಡಿದರೆ ಸಬಲೀಕರಣ ಎಂಬುದು ಅದನ್ನು ಕುರಿತು ನಿರೂಪಿಸುವವರ ದೃಷ್ಟಿ ಕೋನ ಹಾಗೂ ಧೋರಣೆಗೆ ಅನುಗುಣವಾಗಿ ಭಿನ್ನ ಭಿನ್ನ ನೆಲೆಗಳಲ್ಲಿ ಅನಾವರಣಗೊಳ್ಳುತ್ತ ಹೋಗುತ್ತದೆ. ಮಹಿಳಾ ಸಬಲೀಕರಣ ಅಂದರೆ ಅದು ಮಹಿಳೆಯರನ್ನು ಶಕ್ತಗೊಳಿಸುವುದು ಹಾಗೂ ಬಲಗೊಳಿಸು ವುದು ಎಂಬ ಅರ್ಥ ವಿವರಣೆಯ ಒಳಗೆ ಬರುತ್ತದೆ. ಧೋರಣೆಗೆ ಅನುಗುಣವಾಗಿ ಇದು ಬದಲಾಗುತ್ತ ಹೋಗುತ್ತದೆ.

ಮಹಿಳೆಯರಲ್ಲಿ ವರ್ಗ ವಿಭಜನೆ

ಮಹಿಳೆಯರ ಸಬಲೀಕರಣವನ್ನು ಕುರಿತು ಮಾತಾಡುವಾಗ ಮೊದಲಿಗೇ ಎದುರಾಗುವ ಪ್ರಶ್ನೆ ಯಾವ ಮಹಿಳೆಯರು ಸಬಲೀಕರಣ ಆಗಬೇಕು ಅಥವ ಯಾವ ಮಹಿಳೆಯರನ್ನು ಸಬಲೀಕರಣ ಮಾಡಬೇಕು ಎಂಬುದು. ಯಾಕೆಂದರೆ ಸಮಾಜದಲ್ಲಿ ಎಲ್ಲಾ ಮಹಿಳೆಯರೂ ಒಂದೇ ರೀತಿ ಇಲ್ಲ. ಒಂದು ಕಡೆ, ರಾಷ್ಟ್ರಪತಿಯಿಂದ ಹಿಡಿದು ಮುಖ್ಯ ಮಂತ್ರಿಯವರೆಗೆ, ಇನ್‌ಫೋಸಿಸ್‌ನಿಂದ ಹಿಡಿದು ಹಳ್ಳಿಗಳ ಭೂಮಾಲೀಕ ಯಜಮಾನತಿಯರವರೆಗೆ ಅವರ ವಿಸ್ತಾರ ಇದೆ. ಅಲ್ಲೆಲ್ಲ ಅವರು ಉಳ್ಳವರಾಗಿ, ಶ್ರೀಮಂತರಾಗಿ, ಶೋಷಕ ವರ್ಗದವರಾಗಿದ್ದಾರೆ. ಮತ್ತೊಂದು ಕಡೆ, ಜೀತ ಮಾಡುವುದರಿಂದ ಹಿಡಿದು ಕಸಮುಸುರೆ ಮಾಡುವವರೆಗೂ ಅವರ ವಿಸ್ತಾರ ಇದೆ. ವಿವಿಧ ವಿಷಯಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಹೆಣ್ಣು ಮಕ್ಕಳು, ಶಿಕ್ಷಣ ಪಡೆದು ಸಣ್ಣಪುಟ್ಟ ಕೆಲಸ ಮಾಡಿಕೊಂಡಿರುವ ಹೆಣ್ಣು ಮಕ್ಕಳು- ಇವರಲ್ಲಿ ಯಾವ ವರ್ಗದ ಮಹಿಳೆಯರ ಸಬಲೀಕರಣ ಆಗಬೇಕು ಎಂಬ ಮುಖ್ಯ ಪ್ರಶ್ನೆಯನ್ನು ಚರ್ಚಿಸಬೇಕು. ಪುರುಷ ಪ್ರಧಾನ ಮೌಲ್ಯಗಳ ದೃಷ್ಟಿಯಿಂದ, ಕೆಲವು ಜೈವಿಕ ಹಾಗೂ ದೈಹಿಕ ಸಂಬಂಧದ ಅಂಶಗಳ ಆಧಾರದ ಮೇಲೆ

ಮಹಿಳೆಯರ ಸಬಲೀಕರಣವನ್ನು ಕುರಿತು ಮಾತಾಡುವಾಗ ಮೊದಲಿಗೇ ಎದುರಾಗುವ ಪ್ರಶ್ನೆ ಯಾವ ಮಹಿಳೆಯರು ಸಬಲೀಕರಣ ಆಗಬೇಕು ಅಥವ ಯಾವ ಮಹಿಳೆಯರನ್ನು ಸಬಲೀಕರಣ ಮಾಡಬೇಕು ಎಂಬುದು. ಯಾಕೆಂದರೆ ಸಮಾಜದಲ್ಲಿ ಎಲ್ಲಾ ಮಹಿಳೆಯರೂ ಒಂದೇ ರೀತಿ ಇಲ್ಲ. ಒಂದು ಕಡೆ, ರಾಷ್ಟ್ರಪತಿಯಿಂದ ಹಿಡಿದು ಮುಖ್ಯ ಮಂತ್ರಿಯವರೆಗೆ, ಇನ್‌ಫೋಸಿಸ್‌ನಿಂದ ಹಿಡಿದು ಹಳ್ಳಿಗಳ ಭೂಮಾಲೀಕ ಯಜಮಾನತಿಯರವರೆಗೆ ಅವರ ವಿಸ್ತಾರ ಇದೆ. ಅಲ್ಲೆಲ್ಲ ಅವರು ಉಳ್ಳವರಾಗಿ, ಶ್ರೀಮಂತರಾಗಿ, ಶೋಷಕ ವರ್ಗದವರಾಗಿದ್ದಾರೆ. ಮತ್ತೊಂದು ಕಡೆ, ಜೀತ ಮಾಡುವುದರಿಂದ ಹಿಡಿದು ಕಸಮುಸುರೆ ಮಾಡುವವರೆಗೂ ಅವರ ವಿಸ್ತಾರ ಇದೆ. ವಿವಿಧ ವಿಷಯಗಳಲ್ಲಿ ಶಿಕ್ಷಣ ಪಡೆದು ಸಣ್ಣಪುಟ್ಟ ಕೆಲಸ ಮಾಡಿಕೊಂಡಿರುವ ಹೆಣ್ಣು ಮಕ್ಕಳು- ಇವರಲ್ಲಿ ಯಾವ ವರ್ಗದ ಮಹಿಳೆಯರ ಸಬಲೀಕರಣ ಆಗಬೇಕು ಎಂಬ ಮುಖ್ಯ ಪ್ರಶ್ನೆಯನ್ನು ಚರ್ಚಿಸಬೇಕು.

ಎಲ್ಲಾ ಮಹಿಳೆಯರನ್ನೂ ಒಂದೇ ಚೌಕಟ್ಟಿನಲ್ಲಿ ಗ್ರಹಿಸಬಹುದು. ಆ ಮಾತು ಬೇರೆ. ಆದರೆ ನಮಗಿಲ್ಲಿ ಮುಖ್ಯವಾಗುವುದು ಶೋಷಕ ವರ್ಗದಲ್ಲೂ ಮಹಿಳೆಯರಿದ್ದಾರೆ ಮತ್ತು ಶೋಷಿತ ವರ್ಗದಲ್ಲೂ ಮಹಿಳೆಯರಿದ್ದಾರೆ ಎಂಬುದು. ಈ ಎರಡೂ ವರ್ಗಗಳ ಮಹಿಳೆಯರ ಹಿತಾಸಕ್ತಿಗಳು, ಅಪೇಕ್ಷೆಗಳು, ಅಗತ್ಯಗಳು, ಬೇಡಿಕೆಗಳು, ಸಮಸ್ಯೆಗಳು ಹಾಗೂ ಹಕ್ಕೊತ್ತಾಯಗಳು ಒಂದೇ ಆಗಿರಲು ಸಾಧ್ಯವಿಲ್ಲ. ಎರಡೂ ವರ್ಗಗಳ ಅಗತ್ಯಗಳು ಒಂದೇ ಎಂದು ಯಾರಾದರೂ ಹೇಳಿದರೆ ಅದು ವಸ್ತುಸ್ಥಿತಿಯ ನಿಜರೂಪ ಆಗಿರಲು ಸಾಧ್ಯವಿಲ್ಲ. ಮಹಿಳಾ ಜಗತ್ತಿನಲ್ಲಿರುವ ವರ್ಗ ವಿಭಜನೆ ಹಾಗೂ ಜಾತಿ ಶ್ರೇಣೀಕರಣಗಳನ್ನು ಮುಚ್ಚಿಡುವ ಅಪಾಯಕಾರಿ ಆಲೋಚನೆಯಾಗುತ್ತದೆ.

ಕೆಲವು ಅಧಿಕಾರದ ಹುದ್ದೆಗಳು ಹಾಗೂ ಪುರುಷರು ಮಾತ್ರ ದುಡಿಯುತ್ತಿದ್ದ ವಲಯಗಳಲ್ಲಿ(ಬಸ್ ಕಂಡಕ್ಟರ್, ಪೊಲೀಸ್, ಪೈಲಟ್, ಆಟೊ ಚಾಲಕರು ಇತ್ಯಾದಿ) ಮಹಿಳೆಯರ ಪ್ರವೇಶವನ್ನು ನೋಡಿ 'ಮಹಿಳೆಯರು ಅಬಲರಲ್ಲ, ಅವರು ಪುರುಷರಿಗೆ ಸರಿಸಮಾನವಾಗಿ ಕೆಲವು ದುಡಿಮೆಯ ವಲಯಗಳನ್ನು ಪ್ರವೇಶ ಮಾಡುತ್ತಿದ್ದಾರೆ' ಎಂಬುದನ್ನು ಮಹಿಳಾ ಸಬಲೀಕರಣ ಎಂಬುದಕ್ಕೆ ಪರ್ಯಾಯವಾಗಿ ಕೊಂಡಾಡಲಾಗುತ್ತಿದೆ. ಈ ಬಗೆಯ ಭಾವನಾತ್ಮಕವಾದ ದುರ್ಬಲ ಅಭಿಪ್ರಾಯಗಳನ್ನು ಮರುವಿಮರ್ಶೆ ಮಾಡಬೇಕಾಗಿದೆ. ಯಾಕೆಂದರೆ ಆಯಾ ನಿರ್ದಿಷ್ಟ ವಲಯಗಳಲ್ಲಿ ಮಹಿಳೆಯರು ಅನುಭವಿಸುತ್ತಿರುವ ಹೊಸರೂಪದ ಸಮಸ್ಯೆಗಳ ಕರಾಳ ಮುಖಗಳನ್ನು ಗಮನಿಸಬೇಕಾಗಿದೆ.

ಅಧಿಕಾರದ ಹುದ್ದೆಗಳು ಹಾಗೂ ಪುರುಷರು ಮಾತ್ರ ದುಡಿಯುತ್ತಿದ್ದ ವಲಯಗಳಲ್ಲಿ (ಬಸ್ ಕಂಡಕ್ಟರ್, ಪೊಲೀಸ್, ಪೈಲಟ್, ಆಟೊ ಚಾಲಕರು ಇತ್ಯಾದಿ) ಮಹಿಳೆಯರ ಪ್ರವೇಶವನ್ನು ನೋಡಿ 'ಮಹಿಳೆಯರು ಅಬಲರಲ್ಲ, ಅವರು ಪುರುಷರಿಗೆ ಸರಿಸಮಾನವಾಗಿ ಕೆಲವು ದುಡಿಮೆಯ ವಲಯಗಳನ್ನು ಪ್ರವೇಶ ಮಾಡುತ್ತಿದ್ದಾರೆ' ಎಂಬುದನ್ನು ಮಹಿಳಾ ಸಬಲೀಕರಣ ಎಂಬುದಕ್ಕೆ ಪರ್ಯಾಯವಾಗಿ ಕೊಂಡಾಡಲಾಗುತ್ತಿದೆ. ಈ ಬಗೆಯ ಭಾವನಾತ್ಮಕವಾದ ದುರ್ಬಲ ಅಭಿಪ್ರಾಯಗಳನ್ನು ಮರುವಿಮರ್ಶೆ ಮಾಡಬೇಕಾಗಿದೆ. ಯಾಕೆಂದರೆ ಆಯಾ ನಿರ್ದಿಷ್ಟ ವಲಯಗಳಲ್ಲಿ ಮಹಿಳೆಯರು ಅನುಭವಿಸುತ್ತಿರುವ ಹೊಸರೂಪದ ಸಮಸ್ಯೆಗಳ ಕರಾಳ ಮುಖಗಳನ್ನು ಗಮನಿಸಬೇಕಾಗಿದೆ.

ನಮ್ಮ ಮುಂದಿರುವ ಚಲನಶೀಲ ವಸ್ತುನಿಷ್ಠ ಪರಿಸ್ಥಿತಿ

ಇಡೀ ದೇಶದ ಎಲ್ಲಾ ಬಗೆಯ ಸಂಪತ್ತು, ವಿವಿಧ ಉತ್ಪಾದನ ವಲಯಗಳು, ಸೇವಾ ವಲಯಗಳು ಹಾಗೂ ಭಾರತದ ಸಂವಿಧಾನ ಮತ್ತು ಸಾರ್ವಭೌಮತೆಯನ್ನು ಸಾಮ್ರಾಜ್ಯಶಾಹಿಯ ನೇರ ಲೂಟಿಗೆ ಯಾವುದೆ ಷರತ್ತಿಲ್ಲದೆ ಆಳುವ ವರ್ಗಗಳು ಬಲಿಕೊಟ್ಟಿವೆ. ಇದರ ಪರಿಣಾಮವಾಗಿ ಕರ್ನಾಟಕವೂ ಸೇರಿದಂತೆ ಇಡೀ ಭಾರತದ ಆರ್ಥಿಕತೆ, ಉದ್ಯೋಗ ಮತ್ತು ಬಹುಸಂಖ್ಯಾತರ ದೈನಂದಿನ ಬದುಕು ದಿವಾಳಿಯೆದ್ದು ಹೋಗಿವೆ. ಉತ್ಪಾದನ ವಲಯಗಳು ಹಾಗೂ ಸೇವಾವಲಯಗಳನ್ನು ಬಂಡವಾಳ ಹೂಡುವರರ ಖಾಸಗಿ ಸೊತ್ತಾಗಿ ಮಾಡಲಾಗಿದೆ. ದುಡಿಮೆ ಅಥವ ಕೆಲಸಗಳ ಕಡಿತ, ನಿರುದ್ಯೋಗ, ಬೆಲೆ ಏರಿಕೆ ಮುಂತಾದುವು ನಮ್ಮ ಊಹೆಯನ್ನೂ ಮೀರಿ ಬೆಳೆದಿವೆ. ಆರ್ಥಿಕ ಅಭದ್ರತೆ ಮತ್ತು ಅತಂತ್ರತೆಗಳು ವಿವಿಧ ಜನ ವರ್ಗಗಳಲ್ಲಿ ಒಂದು ಕಡೆ ಅಸಹಾಯಕತೆ ಮತ್ತು ಹತಾಶೆಗಳನ್ನೂ ಮತ್ತೊಂದು ಕಡೆ ಪ್ರತಿರೋಧ ಹಾಗೂ ಹೋರಾಟಗಳನ್ನೂ ಹುಟ್ಟಿಸಿವೆ. ಇದರ ಲಾಭ ಪಡೆಯಲು ಆಳುವ ವರ್ಗ ಹಾಗೂ ಆಳುವ ಸರಕಾರಗಳನ್ನು ಸಾಮ್ರಾಜ್ಯಶಾಹಿ ಬಳಸಿಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಸರಕಾರ ಎಂಬುದು ಕೇವಲ ಸಾಮ್ರಾಜ್ಯಶಾಹಿಗೆ ಸೇವೆ ಸಲ್ಲಿಸುವ ಏಜೆಂಟ್ ಆಗಿದೆ. ಹೆಚ್ಚೆಂದರೆ ಬಹುರಾಷ್ಟ್ರೀಯ ಕಂಪನಿಗಳ ಹಾಗೂ ಕಾರ್ಪೊರೇಟ್ ಕುಟುಂಬಗಳ ಯೋಜನೆಗಳನ್ನು ಜಾರಿ ಮಾಡುವ ಮಧ್ಯವರ್ತಿಯಾಗಿದೆ. ರೈತರು, ಕಾರ್ಮಿಕರು, ಕೃಷಿಕೂಲಿಗಳು, ಮಹಿಳೆಯರು, ಉದ್ಯೋಗಿಗಳು, ಅರೆ ಉದ್ಯೋಗಿಗಳು, ನಿರುದ್ಯೋಗಿಗಳು, ದಲಿತರು, ಆದಿವಾಸಿಗಳು ಹಾಗೂ ವಿದ್ಯಾರ್ಥಿ ಯುವಜನರು ಎಂದಿಲ್ಲದ ಆರ್ಥಿಕ ಹಾಗೂ ಸಾಮಾಜಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದಾರೆ. ದಿನೇದಿನೇ ಇವರ ಬದುಕು ಅತಂತ್ರತೆಯ ಕಡೆಗೆ ಸಾಗುತ್ತಿದ್ದರೆ, ಶೋಷಕ ವರ್ಗ ತನ್ನ ಸುಲಿಗೆಯ ವಿಧಾನವನ್ನು ದಿನದಿಂದ ದಿನಕ್ಕೆ ಬದಲಾಯಿಸುತ್ತ ಸಾಗಿದೆ. ಅಷ್ಟು ಮಾತ್ರವಲ್ಲದೆ ಸುಲಿಗೆಯನ್ನು ಸುಧಾರಣೆ ಎಂತಲೂ, ವಿಗತಿಯನ್ನು ಪ್ರಗತಿ ಎಂತಲೂ, ತಾನು ಮಾಡುವ ಶೋಷಣೆಯನ್ನು ಹಕ್ಕು ಎಂತಲೂ, ಶೋಷಣೆಯ ವಿರುದ್ಧದ ಹೋರಾಟಗಳನ್ನು ಅಪರಾಧ ಎಂತಲೂ, ಹೋರಾಟಗಾರರನ್ನು ಅಪರಾಧಿಗಳು ಎಂತಲೂ ಪರಿಗಣಿಸುತ್ತಿದೆ, ಪ್ರಚಾರ ಮಾಡುತ್ತಿದೆ. ಹೋರಾಟಗಳು ಹಾಗೂ ಹೋರಾಟಗಾರರನ್ನು ಸೈನ್ಯ ಹಾಗೂ ಪೋಲೀಸನ್ನು ಬಳಸಿ ಅತ್ಯಂತ ಕ್ರೂರವಾಗಿ ಹತ್ತಿಕ್ಕಲಾಗುತ್ತಿದೆ. ಹೋರಾಟಗಳ ರಾಜಕೀಯ ಚಿಂತನೆಗಳನ್ನು ನಯವಾದ ವಿಧಾನಗಳಲ್ಲಿ ತಿರುಚುವ, ಭ್ರಷ್ಟಗೊಳಿಸುವ, ವಿಕೃತಗೊಳಿಸುವ ಮತ್ತು ದಾರಿ ತಪ್ಪಿಸುವ ಕೆಲಸ ನಡೆದಿದೆ. ಆ ಮೂಲಕ ಹೋರಾಟ ಹಾಗೂ ಅವುಗಳ ರಾಜಕೀಯ ಚಿಂತನೆಗಳು ಶೋಷಕ ವರ್ಗಕ್ಕೆ ಅನುಕೂಲವಾಗುಂತೆ ನೋಡಿಕೊಳ್ಳುವ ವಿಕೃತ ಪ್ರಯತ್ನ ಸಾಗಿದೆ. ಇದಕ್ಕೆ ಶಿಕ್ಷಣ, ಸಂಶೋಧನೆ ಹಾಗೂ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಬುದ್ಧಿ ಜೀವಿಗಳಿಗೆ ಕೊಡುವ ಪ್ರಶಸ್ತಿ, ಬಹುಮಾನ ಹಾಗೂ ಫೆಲೋಶಿಪ್‌ಗಳು ಇದರ ಪೂರಕ ಕೊಡುಗೆಗಳಾಗಿವೆ. ಈ ರಾಜಕೀಯ ಆರ್ಥಿಕ ಬಿಕ್ಕಟ್ಟನ್ನು ಗಂಭೀರವಾಗಿ ಪರಿಗಣಿಸದೆ ರೈತರಾಗಲಿ, ದಲಿತರಾಗಲಿ, ಮಹಿಳೆಯರಾಗಲಿ ಸಬಲೀಕರಣದ ಮಾತಾಡುವುದು ಸುಲಭದ ವಿಷಯವಲ್ಲ.

ಸಾಮ್ರಾಜ್ಯಶಾಹಿ ಮಾರುಕಟ್ಟೆ ಮತ್ತು ಶ್ರೀಮಂತ ಹಾಗೂ ಮೇಲು ಮಧ್ಯಮ ವರ್ಗದ ಮಹಿಳೆಯರು

ಶ್ರೀಮಂತ ಹಾಗೂ ಮೇಲು ಮಧ್ಯಮ ವರ್ಗದ ಮಹಿಳೆಯರು ಸಾಮ್ರಾಜ್ಯಶಾಹಿ ಮಾರುಕಟ್ಟೆಯ ನೇರ ಗ್ರಾಹಕರಾಗಿದ್ದಾರೆ. ಇದನ್ನು ಆಧುನಿಕತೆ ಎಂತಲೂ, ಆಧುನಿಕ ಸಂಸ್ಕೃತಿ ಎಂತಲೂ ಕರೆಯಲಾಗುತ್ತಿದೆ. ಜಾಗತಿಕ ಮಾರುಕಟ್ಟೆಯು ತನ್ನ ಉತ್ಪಾದನೆಯ ಸರಕುಗಳನ್ನು ಮಾರಾಟ ಮಾಡಲು ಹಾಗೂ ಲಾಭವನ್ನು ಹೆಚ್ಚಿಸಿಕೊಳ್ಳಲು ಈ ವರ್ಗದ ಮಹಿಳೆಯರನ್ನು ನೇರವಾಗಿ ಬಳಸಿಕೊಳ್ಳುತ್ತಿದೆ. ಈ ಮಹಿಳೆಯರ ದೈನಂದಿನ ಚಟುವಟಿಕೆಗಳನ್ನು, ಆಂಗಿಕ ಚಲನವಲನಗಳನ್ನು, ಹಾವಭಾವಗಳನ್ನು, ಹವ್ಯಾಸ, ಅಭಿರುಚಿ ಹಾಗೂ ಆಸಕ್ತಿಗಳನ್ನು ಜಾಗತಿಕ ಮಾರುಕಟ್ಟೆಯು ನಿರ್ಧಾರ ಮಾಡುತ್ತಿದೆ. ಆಧುನಿಕ ವಿನ್ಯಾಸದ ಉಡುಪು, ಒಡವೆ, ಹೆಚ್ಚೆಚ್ಚು ಪ್ರಸಾದನ ಸಾಮಗ್ರಿಗಳನ್ನು ಬಳಸುವುದೇ ನಾಗರೀಕತೆ, ಆಧುನಿಕತೆ ಎಂಬ ಮಾರುಕಟ್ಟೆಯ ಭ್ರಮೆಯನ್ನು ಇವರ ತಲೆಗೆ ತುಂಬಲಾಗಿದೆ. ಮಾರುಕಟ್ಟೆಯ ಹಿತಾಸಕ್ತಿಗಳನ್ನು ತಮ್ಮ ಹಿತಾಸಕ್ತಿ ಎಂತಲೂ, ಮಾರುಕಟ್ಟೆಯ ಅಗತ್ಯಗಳನ್ನು ತಮ್ಮ ಅಗತ್ಯ ಎಂತಲೂ ಈ ವರ್ಗದ ಮಹಿಳೆಯರು ನಂಬಿ ನಡೆಯುತ್ತಿದ್ದಾರೆ. ಇವರಿಂದ ಲಾಭಗಳಿಸುತ್ತಿರುವ ಮಾರುಕಟ್ಟೆಯು ತನ್ನ ಆಕರ್ಷಣೆ ಮತ್ತು ತಂತ್ರಗಳನ್ನು ಮೇಲು ಮಧ್ಯಮ ವರ್ಗದ ಕೆಳಸ್ತರಗಳಿಗೂ ವಿಸ್ತರಿಸಲು ಪ್ರಯತ್ನ ನಡೆಸಿದೆ. ಅಥವ ಈ ಸ್ತರದ ಮಹಿಳೆಯರು 'ತಾವೂ ಮಾರುಕಟ್ಟೆಯ ಗ್ರಾಹಕರಾಗಬೇಕು' ಎಂಬ ನೇರ ಸ್ಪರ್ಧೆಗೆ ಇಳಿದಿದ್ದಾರೆ. ಮಾರುಕಟ್ಟೆಯು ಇವರಲ್ಲಿ ಪರೋಕ್ಷವಾದ ಸ್ಪರ್ಧೆಯನ್ನು ನಿರ್ಮಾಣ ಮಾಡಿದೆ. ಮಾರುಕಟ್ಟೆಯ ಗ್ರಾಹಕರಾಗುವುದರಲ್ಲಿ ಯಾರು ಹಿಂದೆ ಬೀಳುತ್ತಾರೊ ಅವರು ಕೀಳರಿಮೆ ಅನುಭವಿಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕೀಳರಿಮೆಯಿಂದ ಹೊರಬರಲು ಕೌಟುಂಬಿಕ ಸಂಬಂಧಗಳಲ್ಲಿ ಹೊಸಬಗೆಯ ಸಮಸ್ಯೆಗಳು ಸೃಷ್ಟಿಯಾಗಿವೆ. ಈ ಸಮಸ್ಯೆಗಳು ಮೂಲತಃ ಅನ್ನ, ಬಟ್ಟೆ ಹಾಗೂ ವಸತಿಯ ಸಮಸ್ಯೆಗಳಾಗಿಲ್ಲ. ಇವನ್ನು ಹೊರತುಪಡಿಸಿದ ಹೊಸರೂಪದ ಕೆಲವು ಸಮಸ್ಯೆಗಳನ್ನು ಸೃಷ್ಟಿಸಲಾಗಿದೆ. ಕೆಲವು ವಕೀಲರು ಮತ್ತು ಕೆಲವು ವೈದ್ಯರು ಇವುಗಳ ಲಾಭ ಪಡೆಯುತ್ತಿದ್ದಾರೆ. ಮೇಲು ಮಧ್ಯಮ ವರ್ಗದ ಕೆಳಸ್ತರ ಹಾಗೂ ಮಧ್ಯಮ ವರ್ಗ ಆರ್ಥಿಕವಾಗಿ ಸಮೀಪ ಇವೆ. ಇದರಿಂದ ಮಧ್ಯಮ ವರ್ಗದ ಮಹಿಳೆಯರು ಮೇಲು ಮಧ್ಯಮವರ್ಗದ ಕೆಳಸ್ತರದ ಮಹಿಳೆಯರೊಂದಿಗೆ ತಮ್ಮನ್ನು ಸಮೀಕರಿಸಿ ನೋಡುವ ಸ್ಪರ್ಧಾತ್ಮಕ ಒತ್ತಡವನ್ನು ಮಾರುಕಟ್ಟೆ ಅವರ ಮೇಲೆ ಹೇರಿದೆ. ಮಾರುಕಟ್ಟೆ ತನ್ನ ಲಾಭಕ್ಕಾಗಿ ಹೇರಿರುವ ಈ ಒತ್ತಡವನ್ನು ಇವರು ತಮ್ಮ ಸಹಜ ಅಗತ್ಯ ಎಂದು ನಂಬಿದ್ದಾರೆ. ಈ ಅಗತ್ಯಗಳು ಪೂರೈಕೆಯಾಗದ ಸಂದರ್ಭಗಳಲ್ಲಿ ಕೌಟುಂಬಿಕ ಹೊಸ ಬಿಕ್ಕಟ್ಟುಗಳು ಸೃಷ್ಟಿಯಾಗಿವೆ. ಅನಗತ್ಯ ಹಾಗೂ ಕೃತಕ ಸಮಸ್ಯೆಗಳು ಈ ವರ್ಗದ ಗಂಭೀರ ಸಮಸ್ಯೆಗಳಾಗಿ ರೂಪುಗೊಂಡಿವೆ. ಮತ್ತೊಂದು ಕಡೆ ಈ ವರ್ಗದ ಮಹಿಳೆಯರು ತಮ್ಮ ಮನೆಗಳಲ್ಲಿ ಕೆಲಸ ಮಾಡುವ ದುಡಿವ ವರ್ಗದ ಮಹಿಳೆಯರನ್ನು ಕ್ರೂರವಾಗಿ ಶೋಷಣೆ ಮಾಡುತ್ತಿದ್ದಾರೆ, ವಿಕೃತವಾಗಿ ಹಿಂಸಿಸುತ್ತಿದ್ದಾರೆ. ಇಲ್ಲಿ ಜಾಗತಿಕ ಮಾರುಕಟ್ಟೆಯ ಸುಲಿಗೆಯ ವಿಧಾನ, ಈ ವರ್ಗದ ಮಹಿಳೆಯರ ದರ್ಪ ಮತ್ತು ದುಡಿವ ಮಹಿಳೆಯರ ಆರ್ಥಿಕ ದುಃಸ್ಥಿತಿ ಈ ಮೂರು ಒಟ್ಟು ಸೇರಿವೆ. ಇಂತಹ ಸ್ಥಿತಿಯಲ್ಲಿ ದುಡಿವ ವರ್ಗದ ಮಹಿಳೆಯರ ಸಬಲೀಕರಣವನ್ನು ಕುರಿತು ಆಲೋಚನೆ ಮಾಡಬೇಕಿದೆ.

ದಲಿತ ಹಾಗೂ ದುಡಿವ ವರ್ಗದ ಮಹಿಳೆಯರು

ಒಟ್ಟು ಮಹಿಳಾ ಸಮೂಹದಲ್ಲಿ ದಲಿತ ಹಾಗೂ

ದುಡಿವ ವರ್ಗದ ಮಹಿಳೆಯರ ಪ್ರಮಾಣ ಬಹಳ ದೊಡ್ಡದು. ಈ ವರ್ಗದ ಮಹಿಳೆಯರ ವಸ್ತುಸ್ಥಿತಿ ಅಥವ ಸಮಸ್ಯೆಯ ಸ್ವರೂಪ ಯಾವುದು ಎಂಬುದನ್ನು ಪರಿಶೀಲಿಸಬೇಕು. ಸಾಕ್ಷರತೆ, ಸ್ವಂತ ಆಸ್ತಿ, ಜಮೀನು, ಇನ್ನಿತರೆ ಉತ್ಪಾದನೆಯ ಸ್ವತಂತ್ರ ಮೂಲಗಳು ಇವರಿಗಿಲ್ಲ. ಆದ್ದರಿಂದ ಇವರೆಲ್ಲ ಕೂಲಿ ಮತ್ತಿತರೆ ಕೆಲಸ ಮಾಡಿ ಬದುಕುತ್ತಿದ್ದಾರೆ. ರಟ್ಟೆ ಆಡಿದರೆ ಮಾತ್ರ ಹೊಟ್ಟೆ ತುಂಬುವ ಪರಿಸ್ಥಿತಿ ಇವರದು. ಕೃಷಿ ವಲಯದಲ್ಲಿ ಪ್ರಧಾನವಾಗಿ ಕೃಷಿ ಕೂಲಿಗಳಾಗಿ, ಉಳಿದಂತೆ ಸಣ್ಣಪುಟ್ಟ ಉಪವೃತ್ತಿ (ಬೀಡಿ ಕಟ್ಟುವುದು, ಸಣ್ಣಪುಟ್ಟ ವ್ಯಾಪಾರ, ದೇವದಾಸಿಯರು, ಪಾತರದವರು ಇತ್ಯಾದಿ)ಗಳಲ್ಲಿ ಇವರು ತೊಡಗಿದ್ದಾರೆ. ಇವರ ಸಬಲೀಕರಣದ ದಾರಿ ಯಾವುದು ಎಂಬುದು ಸರಳವಾದುದಲ್ಲ. ಪ್ರಜಾಪ್ರಭುತ್ವದ ಸಾಮಾನ್ಯ ಆಶಯದ ಪ್ರಕಾರ ಇವರ ಸಬಲೀಕರಣ ಎಂದರೆ ಸರಳ ನಿರೂಪಣೆಯಲ್ಲಿ 'ನ್ಯಾಯೋಚಿತ ದುಡಿಮೆಗೆ ನ್ಯಾಯೋಚಿತ ಕೂಲಿ/ಸಂಬಳ' ಎಂದು ಹೇಳಬಹುದು. ಆದರೆ ಇವರ ಪಾಲಿಗೆ ಇದು ಈಡೇರಿದೆಯೇ ಎಂದರೆ ಖಂಡಿತಾ ಈಡೇರಿಲ್ಲ. ದಕ್ಷಿಣ ಕರ್ನಾಟಕ ಹಾಗೂ ಮಲೆನಾಡಿನಲ್ಲಿ ಕೃಷಿಕೂಲಿಗಳ ದಿನಗೂಲಿ ೬೦ ರಿಂದ ೭೦, ೮೦ ರೂಪಾಯಿವರೆಗೆ ಇದೆ. ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ಇವರ ದಿನಗೂಲಿ ೨೦, ೩೦ ಹೆಚ್ಚೆಂದರೆ ೪೦ ರೂ. ಇದೆ. ಪೌಷ್ಟಿಕ ಆಹಾರದ ಕೊರತೆ, ಮಾಡುವ ಕೆಲಸಗಳಲ್ಲಿ ರಾಸಾಯನಿಕಗಳನ್ನು ಬಳಸುವುದರಿಂದ ಇವರಿಗೆ ಬರುತ್ತಿರುವ ಹೊಸ ಮತ್ತು ಗಂಭೀರ ಕಾಯಿಲೆಗಳು ಇವರನ್ನು ಮತ್ತಷ್ಟು ಅತಂತ್ರರನ್ನಾಗಿ ಮಾಡಿವೆ. ಪರಿಣಾಮವಾಗಿ ಸಾವು ನೋವುಗಳು ಹೆಚ್ಚುತ್ತಲೆಸಾಗಿವೆ. ಅನೇಕ ಕುಟುಂಬಗಳು ಮಹಿಳೆಯರ ದುಡಿಮೆಯನ್ನು ಮಾತ್ರ ಅವಲಂಬಿಸಿವೆ. ಇವರ ಸಮಸ್ಯೆಯನ್ನು ಕೇವಲ ಕುಟುಂಬದ ಸಮಸ್ಯೆ ಮಾತ್ರ ಎಂದು ಪರಿಗಣಿಸುವ ಆಲೋಚನೆಗಳು ಸಾಕಷ್ಟಿವೆ. ಈ ಸಂಕುಚಿತ ವಿಧಾನವು ಮಹಿಳೆಯರ ಎದುರು ಪುರುಷರು ಶತ್ರುಗಳು ಎಂದು ಪರಿಗಣಿಸಿದೆ. ಸರಕಾರಿ ಸವಲತ್ತುಗಳಲ್ಲಿ ಮಹಿಳೆಯರಿಗೆ ಸಿಗಬೇಕಿದ್ದ ಸವಲತ್ತುಗಳು ಸಿಕ್ಕಿವೆಯೆ, ಇಲ್ಲವೆ ಎಂಬ ಆಧಾರದಲ್ಲಿ ಇವರ ಸಬಲೀಕರಣವನ್ನು ಲೆಕ್ಕ ಹಾಕುವ ವಿಧಾನ ರೂಢಿಯಲ್ಲಿದೆ. ಹೀಗಾಗಿ ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿ ಕೆಲವು ಯೋಜನೆಗಳನ್ನೂ, ಪ್ಯಾಕೇಜುಗಳನ್ನೂ ಸೂಚಿಸುವ ಪರಿಪಾಠವಿದೆ. ಕೆಲವು ಮಹಿಳಾ ಸಂಘಟನೆಗಳು ಕೆಲವು ಸರಕಾರಿ ಸವಲತ್ತುಗಳನ್ನು ಮಹಿಳೆಯರಿಗೆ ಕೊಡಿಸಲು ಮಧ್ಯವರ್ತಿಗಳಾಗಿ ಕೆಲಸ ಮಾಡುತ್ತಿವೆ. ಇವು ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿಲ್ಲ. ಈ ವಲಯದಲ್ಲಿ ಕೆಲಸ ಮಾಡುತ್ತಿರುವ ಎನ್‌ಜಿಓಗಳು ಮಹಿಳೆಯರನ್ನು ಪುರುಷರ ಎದುರು ಎತ್ತಿ ಕಟ್ಟುತ್ತಿವೆ. ಮಹಿಳಾ ಸ್ವಾತಂತ್ರ್ಯ ಎಂಬುದನ್ನು ವಿಕೃತ ಸ್ವರೂಪಕ್ಕೆ ಕೊಂಡೊಯ್ದಿವೆ. ಈ ಬೆಳವಣಿಗೆ ಅನೇಕ ಕುಟುಂಬಗಳ ಸಂಬಂಧಗಳಲ್ಲಿ ಹೊಸ ಸಮಸ್ಯೆಗಳನ್ನು ಸೃಷ್ಟಿ ಮಾಡಿದೆ. ಈ ಒಟ್ಟು ಪರಿಸ್ಥಿತಿಯು ದುಡಿವ ವರ್ಗದ ಮಹಿಳೆಯರ ನಿಜವಾದ ಶತ್ರುವನ್ನು ಗ್ರಹಿಸದಂತೆ ಮಾಡಿದೆ. ಆರ್ಥಿಕ ಶೋಷಣೆಯ ಸಂಬಂಧಗಳನ್ನು ಅರಿಯದಂತೆ ಮಾಡಿದೆ. ಕೃಷಿ ವಲಯದಲ್ಲಿ ಭೂಮಾಲೀಕರೆ ದುಡಿವ ವರ್ಗದ ಮಹಿಳೆಯರ ಶತ್ರುಗಳು. ಊಳಿಗಮಾನ್ಯ ಶಾಹಿಯೇ ಇವರ ಕ್ರೂರ ಪರಿಸ್ಥಿತಿಗೆ ಕಾರಣ. ಊಳಿಗ ಮಾನ್ಯಶಾಹಿಯ ಶೋಷಣೆ ಇರುವ ತನಕ ಈ ವರ್ಗದ ಮಹಿಳೆಯರ ಸಬಲೀಕರಣ ಸಾಧ್ಯವಿಲ್ಲ. ಇದು ನಿಜವಾದ ವಸ್ತುಸ್ಥಿತಿ. ಆದರೆ ಇದನ್ನು ಮುಚ್ಚಿಟ್ಟು 'ಈ ವರ್ಗದ ಮಹಿಳೆಯರ ಸಮಸ್ಯೆಗಳಿಗೆ ನಿಮ್ಮ ನಿಮ್ಮ ಕುಟುಂಬದ ಪುರುಷರು ಕಾರಣ' ಎಂದು ತೋರಿಸುವ ಎನ್‌ಜಿಓಗಳು ಊಳಿಗಮಾನ್ಯಶಾಹಿ ಶೋಷಣೆಯನ್ನು ಸಮರ್ಥಿಸಿ ರಕ್ಷಿಸುತ್ತಿವೆ. ಈ ವಲಯದ ಮಹಿಳೆಯರನ್ನು ಊಳಿಗಮಾನ್ಯಶಾಹಿಯ ವಿರುದ್ಧದ ಹೋರಾಟಕ್ಕೆ ಎಲ್ಲ ಬಗೆಗಳಲ್ಲಿ ಅಣಿಗೊಳಿಸಬೇಕಾಗಿದೆ. ಈ ಹೋರಾಟವನ್ನು ಪುರುಷಾಧಿಪತ್ಯದ ವಿರೋಧಿ ಹೋರಾಟವನ್ನಾಗಿ ಮಾರ್ಪಡಿಸಬೇಕಿದೆ.

ಬುಡಕಟ್ಟು, ಆದಿವಾಸಿ, ಅಲೆಮಾರಿ ಸಮೂಹದ ಮಹಿಳೆಯರು

ಈ ಸಮೂಹದ ಮಹಿಳೆಯರು ಎಂದಿಲ್ಲದ ದುಃಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಇವರ ಕುಲಕಸುಬು ಹಾಗೂ ವೃತ್ತಿ ಕಸುಬುಗಳ ಉತ್ಪಾದನೆಗಳಿಗೆ ಬೇಡಿಕೆ ಇಲ್ಲದಂತಾಗಿದೆ. ಹಾಗಾಗಿ ಅವುಗಳ ಉತ್ಪಾದನೆ ಈಗ ನಡೆಯುತ್ತಿಲ್ಲ. ಇವರ ಎಲ್ಲಾ ಬಗೆಯ ಉತ್ಪನ್ನಗಳ ಜಾಗದಲ್ಲಿ ಬಂಡವಾಳಶಾಹಿ ಮಾರುಕಟ್ಟೆಯ ಉತ್ಪನ್ನಗಳು ಬಂದಿವೆ. ಸಣ್ಣಪುಟ್ಟ ಸ್ವತಂತ್ರ ವೃತ್ತಿ ಕಸುಬುಗಳನ್ನು ಹೊಸ ಮಾರುಕಟ್ಟೆಯ ಉತ್ಪನ್ನಗಳು ನೇರವಾಗಿ ಕಿತ್ತುಕೊಂಡಿವೆ. ಇವರಿಗೆ ಬದಲಿ ದುಡಿಮೆಯ ಯಾವ ದಾರಿಗಳೂ ಇಲ್ಲ. ತಮ್ಮ ಸಾಂಪ್ರದಾಯಿಕ ಉತ್ಪನ್ನಗಳನ್ನೆ ಅಲ್ಪಸ್ವಲ್ಪ ಪರಿವರ್ತಿಸುವ ಪ್ರಯತ್ನಗಳು ಬಿಡಿಬಿಡಿಯಾಗಿ ಸಾಗಿವೆ. ಆದರೆ ಅವು ಇಡಿಯಾಗಿ ಇವರ ಆರ್ಥಿಕ ಅಗತ್ಯಗಳನ್ನು ಪೂರೈಸುತ್ತಿಲ್ಲ. ಹಾಗಾಗಿ ಈ ಸಮೂಹದಲ್ಲಿ ಅಗೋಚರ ರೂಪದ ನಿರುದ್ಯೋಗ ಬಲವಾಗಿ ಬೆಳೆದು ನಿಂತಿದೆ. ಈ ವಲಯದಲ್ಲಿ ಕೆಲವು ಎನ್‌ಜಿಓಗಳು ಕೆಲಸ ಮಾಡುತ್ತಿದ್ದು ಅವು ಮಹಿಳೆಯರನ್ನು ಪ್ರತ್ಯೇಕವಾಗಿ ಕೇಂದ್ರೀಕರಿಸಿವೆ. ಬುಡಕಟ್ಟು, ಆದಿವಾಸಿ ಮತ್ತು ಅಲೆಮಾರಿಗಳನ್ನು ಜಾಗತೀಕರಣದ ನೀತಿಗಳು ಸಂಪೂರ್ಣ ಎತ್ತಂಗಡಿ ಮಾಡುತ್ತಿವೆ. ಸಾಮ್ರಾಜ್ಯಶಾಹಿಯ ಈ ಆರ್ಥಿಕ ಉಗ್ರದಾಳಿಯಲ್ಲಿ ಈ ಸಮುದಾಯಗಳು ತತ್ತರಿಸಿ ಹೋಗಿವೆ. ಈ ಪರಿಸ್ಥಿತಿಯಲ್ಲಿ ಎನ್‌ಜಿಓಗಳಿಂದ ಈ ಸಮುದಾಯಗಳ ಸಬಲೀಕರಣ ಸಾಧ್ಯವಿಲ್ಲ. ಸಾಮ್ರಾಜ್ಯಶಾಹಿಯ ಮೀಸಲು ಅರಣ್ಯ, ರಾಷ್ಟ್ರೀಯ ಉದ್ಯಾನವನ, ಎಸ್‌ಇಜೆಡ್, ಟೌನ್‌ಶಿಪ್, ಮಾಸ್ಟರ್‌ಪ್ಲ್ಯಾನ್, ಅಣುಸ್ಥಾವರ ಮುಂತಾದ ಯೋಜನೆಗಳು ಈ ಸಮುದಾಯಗಳನ್ನು ನೇರವಾಗಿ ಒಕ್ಕಲೆಬ್ಬಿಸುತ್ತಿವೆ. ಸರಕಾರಗಳೇ ಮುಂದೆ ನಿಂತು ಸಾಮ್ರಾಜ್ಯಶಾಹಿಯ ಏಜೆಂಟಾಗಿ ಈ ಕೆಲಸ ಮಾಡುತ್ತಿವೆ. ಈ ಸಮುದಾಯಗಳ ಕನಿಷ್ಠ ಬದುಕುವ ಹಕ್ಕನ್ನು ಕಿತ್ತುಕೊಂಡು ಅವರನ್ನು ಅತಂತ್ರರನ್ನಾಗಿ ಮಾಡಿವೆ. ಅವರ ಹತಾಶೆ ಮತ್ತು ಅಭದ್ರತೆಗಳು ಅವರಲ್ಲಿ ಅಸಾಮಾನ್ಯ ಪ್ರತಿರೋಧ ಹಾಗೂ ಹೋರಾಟಗಳನ್ನು ಹುಟ್ಟಿಸಿವೆ. ಎನ್‌ಜಿಓಗಳು ಅವುಗಳ ಶಮನದಲ್ಲಿ ತೊಡಗಿವೆ. ಮತ್ತೆ ಕೆಲವು ಕಡೆ ವರ್ಗ ಹೋರಾಟವನ್ನು ಬದಿಗೊತ್ತಿದ, ಕೇವಲ ಸಶಸ್ತ್ರ ಹೋರಾಟಗಳು ಇವರನ್ನು ದಿಕ್ಕೆಡಿಸಿವೆ. ಹಾಗಾಗಿ ಈ ಸಮುದಾಯಗಳಲ್ಲಿ ಮಹಿಳೆಯರ ಸಮಸ್ಯೆಯನ್ನು ಪ್ರತ್ಯೇಕ ಮಾಡಿ ನೋಡಲು ಬರುವುದಿಲ್ಲ. ಒಟ್ಟಾರೆ ಈ ಸಮುದಾಯಗಳ ಮಹಿಳೆಯರ ಸಬಲೀಕರಣ ಎಂಬುದು ಈ ಸಮುದಾಯಗಳ ವಿಮೋಚನೆಯ ಹೋರಾಟದಿಂದ ಮಾತ್ರ ಸಾಧ್ಯವಾಗುವಂತಹದ್ದು. ಕೇವಲ ಶಿಕ್ಷಣ ಕೊಡಿಸುವುದು, ಸರಕಾರಿ ಸವಲತ್ತುಗಳಲ್ಲಿ ಪಾಲು ಕೇಳುವುದು ಇವೆಲ್ಲ ಇವರ ನಿಜ ಪರಿಸ್ಥಿತಿಯ ಎದುರು ವ್ಯರ್ಥ ಪ್ರಯತ್ನಗಳಂತೆ ಕಾಣುತ್ತಿವೆ.

ಶಿಕ್ಷಣ ಪಡೆದ ಹೆಣ್ಣು ಮಕ್ಕಳು

ದುಡಿವ ವರ್ಗ ಹಾಗೂ ಕೆಳ ಮಧ್ಯಮ ವರ್ಗದಲ್ಲಿ ಶಿಕ್ಷಣ ಪಡೆದ ಹೆಣ್ಣು ಮಕ್ಕಳಿದ್ದಾರೆ. ಪಿಯುಸಿ, ಡಿಗ್ರಿ, ಸ್ನಾತಕೋತ್ತರ, ತಾಂತ್ರಿಕ, ವೈದ್ಯಕೀಯ, ಪಶುವೈದ್ಯಕೀಯ, ವೃತ್ತಿಪರ, ಎಂಫಿಲ್, ಪಿಎಚ್.ಡಿ. ವರೆಗಿನ ಶಿಕ್ಷಣ ಪಡೆದವರಿದ್ದಾರೆ. ಇವರ ಸಬಲೀಕರಣ ಹೇಗೆ? ಒಂದು ಸಾಧ್ಯತೆ ಎಂದರೆ ಇವರು ಪಡೆದಿರುವ ಶಿಕ್ಷಣಕ್ಕೆ ಸೂಕ್ತ ನೌಕರಿ ಪಡೆಯುವುದು. ಆದರೆ ಐಎಂಎಫ್‌ನ ಆದೇಶದ ಮೇರೆಗೆ ಸರಕಾರದ ವಿವಿಧ ಇಲಾಖೆಗಳು ನೌಕರಿ ಕಡಿತ ಮಾಡಿವೆ. ಸೇವಾವಲಯದಲ್ಲಿ ಸರಕಾರದ ಗಾತ್ರ ಮತ್ತು ವ್ಯಾಪ್ತಿ ಸಂಪೂರ್ಣ ಸಣ್ಣದಾಗಿದೆ. ಅದರ ಜಾಗದಲ್ಲಿ ಅನೇಕ ಇಲಾಖೆಗಳನ್ನು ನೇರವಾಗಿ ಅರೆ ಸರಕಾರಿ ಇಲ್ಲವೆ ಖಾಸಗಿಯಾಗಿ ಮಾರ್ಪಡಿಸಲಾಗಿದೆ. ನೌಕರರ ಪ್ರಮಾಣವನ್ನು ಕುಗ್ಗಿಸಲಾಗಿದೆ. ಸಾರ್ವಜನಿಕ ವಲಯದ ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಅಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಕೆಲಸ ಕಳೆದುಕೊಂಡಿದ್ದಾರೆ. ಅಮೇರಿಕಾ ಸಾಮ್ರಾಜ್ಯಶಾಹಿಯ ಹೊಸ ಆರ್ಥಿಕ ಬಿಕ್ಕಟ್ಟಿನ ದುಷ್ಪರಿಣಾಮ ಐ.ಟಿ., ಬಿ.ಟಿ.ಗಳಲ್ಲಿ ಭಾರೀ ಪ್ರಮಾಣದ ನಿರುದ್ಯೋಗವನ್ನು ಸೃಷ್ಟಿ ಮಾಡಿದೆ. ಇದು ಇನ್ನೂ ಮುಂದುವರಿಯುತ್ತದೆ. ವಿವಿಧ ಹಂತದ ಶಿಕ್ಷಣ ಪಡೆದ ಹೆಣ್ಣು ಮಕ್ಕಳಲ್ಲಿ ಕೆಲವರು ನೌಕರಿಗಾಗಿ ಕಾಯುತ್ತ ತಮ್ಮ ಮದುವೆಯ ಅವಧಿಯನ್ನು ಮುಂದೂಡುತ್ತಿದ್ದಾರೆ. ಒಂದು ಕಡೆ ನೌಕರಿಯೂ ಇಲ್ಲ, ಮತ್ತೊಂದು ಕಡೆ ಸೂಕ್ತ ಅವಧಿಯಲ್ಲಿ ಮದುವೆಯೂ ಇಲ್ಲದಂತಹ ಇಕ್ಕಟ್ಟಿನ ಸಮಸ್ಯೆ ಯನ್ನು ಅನೇಕರು ಎದುರಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳ ಅನೇಕ ನಿರುದ್ಯೋಗಿ

ಒಟ್ಟು ಮಹಿಳಾ ಸಮೂಹದಲ್ಲಿ ದಲಿತ ಹಾಗೂ ದುಡಿವ ವರ್ಗದ ಮಹಿಳೆಯರ ಪ್ರಮಾಣ ಬಹಳ ದೊಡ್ಡದು. ಈ ವರ್ಗದ ಮಹಿಳೆಯರ ಸಮಸ್ಯೆಗಳು ಯಾವುದು ಎಂಬುದನ್ನು ಪರಿಶೀಲಿಸಬೇಕು. ಸಾಕ್ಷರತೆ, ಸ್ವಂತ ಆಸ್ತಿ, ಜಮೀನು, ಇನ್ನಿತರೆ ಉತ್ಪಾದನೆಯ ಸ್ವತಂತ್ರ ಮೂಲಗಳು ಇವರಿಗಿಲ್ಲ. ಆದ್ದರಿಂದ ಇವರೆಲ್ಲ ಕೂಲಿ ಮತ್ತಿತರೆ ಕೆಲಸ ಮಾಡಿ ಬದುಕುತ್ತಿದ್ದಾರೆ. ರಟ್ಟೆ ಆಡಿದರೆ ಮಾತ್ರ ಹೊಟ್ಟೆ ತುಂಬುವ ಪರಿಸ್ಥಿತಿ ಇವರದು. ಕೃಷಿ ವಲಯದಲ್ಲಿ ಪ್ರಧಾನವಾಗಿ ಕೃಷಿಕೂಲಿಗಳಾಗಿ, ಉಳಿದಂತೆ ಸಣ್ಣಪುಟ್ಟ ಉಪವೃತ್ತಿಗಳಲ್ಲಿ ಇವರು ತೊಡಗಿದ್ದಾರೆ. ಇವರ ಸಬಲೀಕರಣದ ದಾರಿ ಯಾವುದು ಎಂದು ಸರಳವಾದುದಲ್ಲ. ಪ್ರಜಾಪ್ರಭುತ್ವದ ಪ್ರಕಾರ ಇವರ ಸಬಲೀಕರಣ ಎಂದರೆ ಸರಳ ನಿರೂಪಣೆಯಲ್ಲಿ 'ನ್ಯಾಯೋಚಿತ ದುಡಿಮೆಗೆ ನ್ಯಾಯೋಚಿತ ಕೂಲಿ/ಸಂಬಳ ಎಂದು ಹೇಳಬಹುದು.

ಹೆಣ್ಣು ಮಕ್ಕಳು ಆರ್ಥಿಕ ಅಭದ್ರತೆ, ಕೌಟುಂಬಿಕ ಸಮಸ್ಯೆಗಳು ಹಾಗೂ ಸಾಮಾಜಿಕ ಕೀಳರಿಮೆಗಳನ್ನು ಸಹಿಸಲಾರದ ಕ್ರೂರ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಇದರಿಂದ ತಾತ್ಕಾಲಿಕವಾಗಿಯಾದರೂ ಬಿಡಿಸಿಕೊಳ್ಳುವ ಸಲುವಾಗಿ ಕೆಲವರು ಎನ್‌ಜಿಒಗಳಲ್ಲಿ, ಕೆಲವರು ನಗರ ಹಾಗೂ ಪಟ್ಟಣಗಳಲ್ಲಿ ಸಣ್ಣಮಟ್ಟ(ಗಾರ್ಮೆಂಟ್ಸ್, ಕಂಪ್ಯೂಟರ್, ಜೆರಾಕ್ಸ್ ಸೆಂಟರ್, ವಿವಿಧ ವ್ಯಾಪಾರಿ ಮಳಿಗೆಗಳು ಇತ್ಯಾದಿ) ಕೆಲಸಗಳಲ್ಲಿ ತೊಡಗಿದ್ದಾರೆ. ಇದು ಕೇವಲ ತಾತ್ಕಾಲಿಕ ಉಪಶಮನವಾಗಿದ್ದು ಅವರಿಗೆ ಬದುಕಿನ ಭದ್ರ ತೆಯನ್ನು ಖಾಯಂ ಆಗಿ ಒದಗಿಸು ವಂತಹದ್ದಾಗಿಲ್ಲ. ಮಾಲೀಕರ ವಿಚಿತ್ರ ಕಿರುಕುಳ, ನಿಂದನೆ ಮುಂತಾದವುಗಳಿಂದ ಅವರು ಬೇಸತ್ತು ಹೋಗಿದ್ದಾರೆ. ನಿರಂತರ ಅತಂತ್ರ ಸ್ಥಿತಿಯಲ್ಲೆ ಇವರು ಕಾಲ ತಳ್ಳುತ್ತಿದ್ದಾರೆ. ಸಂಪೂರ್ಣ ಅಸಂಘಟಿತ ವಲಯಗಳಲ್ಲಿ ಹಂಚಿಹೋಗಿರುವ ಇವರ ಕಷ್ಟಸುಖಗಳನ್ನು, ದುಃಖ ದುಮ್ಮಾನಗಳನ್ನು ವಿಚಾರಿಸುವ ಸಾಮಾನ್ಯ ಮಾನವೀಯ ವಾತಾವರಣ ಕೂಡ ಇವರಿಗೆ ಇಲ್ಲದಂತಾಗಿದೆ. ಹಳ್ಳಿಗಳ ದಟ್ಟ ಊಳಿಗಮಾನ್ಯ ಶೋಷಣೆ ಹಾಗೂ ತೀವ್ರ ಅಪಮಾನಗಳನ್ನು ಒಡಲಲ್ಲಿ ಹೊತ್ತುಕೊಂಡು ಪೇಟೆ ಪಟ್ಟಣಗಳನ್ನು ಸೇರಿರುವ ಇವರು ಇಲ್ಲಿಯೂ ಕೂಡ ಒಂದು ನೆಲೆ ಕಾಣದಂತಹ ದೀನ ಬದುಕನ್ನೇ ಬದುಕುತ್ತಿದ್ದಾರೆ. ಉಡುಮ, ಒಡವೆ, ಕಾಸ್ಮೆಟಿಕ್ಸ್ ಮುಂತಾದ ಮಾರುಕಟ್ಟೆಯ ತೀವ್ರ ಸೆಳೆತಕ್ಕೆ ಒಳಗಾಗಿರುವ ಇವರು ಅವನ್ನು ಪಡೆಯಲಾಗದೆ ಒಳಗೊಳಗೇ ಕೊರಗಿ ಕರಗಿ ಹೋಗುತ್ತಿದ್ದಾರೆ. ಹೊಟ್ಟೆಗಾದರೆ ಬಟ್ಟೆಗಿಲ್ಲ; ಬಟ್ಟೆಗಾದರೆ ಹೊಟ್ಟೆಗಿಲ್ಲದಂತಹ ಕನಿಷ್ಠ ಸಂಬಳದಲ್ಲಿ ಜೀವತೇಯುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿರುವ ಇವರ ಸಬಲೀಕರಣ ಹೇಗೆ? ಇವರು ಪಡೆದಿರುವ ಶಿಕ್ಷಣಕ್ಕೆ ಉದ್ಯೋಗ ಕೊಡದಂತಹ ಸರಕಾರ ಒಂದು ಕಡೆ, ಸ್ವತಂತ್ರ ದುಡಿಮೆ ಮಾಡಲು ಯಾವುದೇ ಅವಕಾಶ ಇಲ್ಲದಂತಹ ಸ್ಥಿತಿ ಇನ್ನೊಂದು ಕಡೆ. ಒಂದು ಕಡೆ ಜಾಗತೀಕರಣ ನೀತಿಗಳು ಮತ್ತೊಂದು ಕಡೆ ಹಳ್ಳಿಗಳ ಊಳಿಗಮಾನ್ಯಶಾಹಿ ಶೋಷಣೆ. ಇವೇ ಇವರ ನೇರ ಶತ್ರುಗಳು. ಈ ವಸ್ತುಸ್ಥಿತಿಯನ್ನು ಸಂಘಟನಾತ್ಮಕ ರೂಪದಲ್ಲಿ ಅರಿಯುವುದರ ಮೂಲಕ ಮೊದಲ ಹಂತದಲ್ಲಿ ಇವರು ಆತ್ಮ ವಿಶ್ವಾಸವನ್ನು ತಂದುಕೊಳ್ಳಬೇಕಿದೆ. ಈ ಆತ್ಮ ವಿಶ್ವಾಸವು ಮುಂದೆ ಅವರ ಬದುಕಿಗೆ ಕೆಲವು ದಾರಿಗಳನ್ನು ತೋರಿಸುತ್ತದೆ.

> **ಮಹಿಳೆಯರಿಗೆ ಶಿಕ್ಷಣ ಕೊಡುವುದರಿಂದ ಅಥವ ಅವರನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಅಕ್ಷರಸ್ಥರನ್ನಾಗಿ ಮಾಡುವುದರಿಂದ ಅವರ ಸಬಲೀಕರಣ ಸಾಧ್ಯವೆಂಬುದು ಒಂದು ಸಾಮಾನ್ಯ ಅಭಿಪ್ರಾಯ ಹಾಗೂ ಜನಪ್ರಿಯ ಧೋರಣೆ. ಇದು ವಾಸ್ತವವಾಗಿ ಸುಧಾರಣಾವಾದಿ ಧೋರಣೆ.**

ಭಾಗ ಮೂರು

ಮಹಿಳಾ ಶಿಕ್ಷಣ ಹಾಗೂ ಮಹಿಳಾ ಸಬಲೀಕರಣ: ತಾತ್ವಿಕ ಸಂಬಂಧ

ಮಹಿಳೆಯರಿಗೆ ಶಿಕ್ಷಣ ಕೊಡುವುದರಿಂದ ಅಥವ ಅವರನ್ನು ಹೆಚ್ಚೆಚ್ಚು ಪ್ರಮಾಣದಲ್ಲಿ ಅಕ್ಷರಸ್ಥರನ್ನಾಗಿ ಮಾಡುವುದರಿಂದ ಅವರ ಸಬಲೀಕರಣ ಸಾಧ್ಯವೆಂಬುದು ಒಂದು ಸಾಮಾನ್ಯ ಅಭಿಪ್ರಾಯ ಹಾಗೂ ಜನಪ್ರಿಯ ಧೋರಣೆ. ಇದು ವಾಸ್ತವವಾಗಿ ಸುಧಾರಣಾವಾದಿ ಧೋರಣೆ.

ಮಹಿಳಾ ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ

ಮಹಿಳೆಯರು ಪಡೆಯುತ್ತಿರುವ ಶಿಕ್ಷಣವು ಮಹಿಳೆಯರ ಶಿಕ್ಷಣ ಅಲ್ಲ. ಇಡೀ ಶಿಕ್ಷಣವನ್ನು ಬಂಡವಾಳಶಾಹಿ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸಲು ಯಶಸ್ವಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಅಂದರೆ ಮಹಿಳೆಯರು ತಮಗೆ ನೇರವಾಗಿ ಸಂಬಂಧಪಡದ ಶಿಕ್ಷಣವನ್ನು ಅಥವ ತಮ್ಮದಲ್ಲದ ಶಿಕ್ಷಣವನ್ನು ಆಯ್ಕೆ ಇಲ್ಲದೆ ಕಲಿಯುತ್ತಿದ್ದಾರೆ. ಆ ಶಿಕ್ಷಣವು ಮಹಿಳೆಯರ ಸಹಜವಾದ ಯಾವುದೇ ಸಾಮರ್ಥ್ಯವನ್ನು, ಕೌಶಲ್ಯವನ್ನು ಹೆಚ್ಚಿಸುತ್ತಿಲ್ಲ. ಅಥವ ಶಿಕ್ಷಣದ ಮೂಲಕ ಯಾವ ಸಾಮರ್ಥ್ಯವನ್ನು ಕೊಡಲಾಗುತ್ತಿದೆಯೊ ಅದಕ್ಕೆ ಸೂಕ್ತವಾದ ಅವಕಾಶಗಳು ಸಮಾಜದಲ್ಲಿ ಇಲ್ಲ. ಸರಕಾರದ ವ್ಯಾಪ್ತಿ ಕಿರಿದಾಗಿ ಹೋಗಿದೆ. ಅದು ಸಾಮ್ರಾಜ್ಯ ಶಾಹಿಯ ಏಜೆಂಟ್ ಆಗಿದೆ. ಪರಿಣಾಮ ವಾಗಿ ಶಿಕ್ಷಣ ಪಡೆದ ಹೆಣ್ಣು ಮಕ್ಕಳ ಸ್ಥಿತಿ ಬಿಕ್ಕಟ್ಟಿನಲ್ಲಿದೆ. ಅಂದರೆ ಶಿಕ್ಷಣದ ಮೂಲಕ ಮಹಿಳಾ ಸಬಲೀಕರಣ ಎಂಬುದು ಈಗಿರುವ ಸ್ಥಿತಿಯಲ್ಲಿ ಸಾಧ್ಯವಿಲ್ಲ.

ಮಹಿಳಾ ಸಬಲೀಕರಣದ ಮೂಲಕ ಮಹಿಳಾ

ಸಮಾಜದ ವಿವಿಧ ವರ್ಗಗಳಲ್ಲಿ, ವಿವಿಧ ವರ್ಗಗಳ ವಿವಿಧ ಸ್ತರಗಳಲ್ಲಿ ಮಹಿಳೆಯರು ಇದ್ದಾರೆ. ದುಡಿಮೆ, ಶಿಕ್ಷಣ, ಜಾತಿಶ್ರೇಣೀಕರಣ, ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ ಅವರೆಲ್ಲ ಒಂದೇ ಅಲ್ಲ. ಆದ್ದರಿಂದ ಅವರೆಲ್ಲರ ಬೇಕು ಬೇಡಗಳೂ ಕೂಡ ಒಂದೇ ರೀತಿ ಇಲ್ಲ. ಮಹಿಳೆಯರ ಬಗೆಗಿನ ಚಿಂತನೆಗಳು ಹಾಗೂ ಕೆಲವು ಮಹಿಳಾ ಹೋರಾಟಗಳು ಮಹಿಳೆಯರ ಪ್ರಶ್ನೆಯನ್ನು ಪುರುಷರ ವಿರೋಧಿ ನೆಲೆಯಲ್ಲಿ ಮಾತ್ರ ಗ್ರಹಿಸುತ್ತಿವೆ. ಆ ಮೂಲಕ ಸಮಾಜದ ಅಸಮಾನತೆ ಮತ್ತು ಶೋಷಣೆಯನ್ನು ಮುಚ್ಚಿಡುತ್ತಿವೆ. ಆರ್ಥಿಕ, ಸಾಮಾಜಿಕ ಅಸಮಾನತೆ ಹಾಗೂ ಶೋಷಣೆಯ ಆಧಾರದಲ್ಲಿ ಶೋಷಕ ಸಮಾಜದ ರಚನೆಯನ್ನು ಮುಖ್ಯವೆಂದು ಪರಿಗಣಿಸಲೇಬೇಕು. ಶೋಷಣೆಯ ವಿನ್ಯಾಸವು ಒಂದು ಕಡೆ ಶೋಷಕರನ್ನೂ ಮತ್ತೊಂದು ಕಡೆ ಶೋಷಿತರನ್ನೂ ಹೊಂದಿದೆ. ಮಹಿಳೆಯರು ಶೋಷಿತ ಸಮೂಹದಲ್ಲಿ ಬರುತ್ತಾರೆ ಎನ್ನುವುದಾದರೆ ಅವರ ಶೋಷಕರು ಯಾರು ಎಂಬುದನ್ನು ರಾಜಕೀಯವಾಗಿ ಸ್ಪಷ್ಟ ಮಾಡಿಕೊಳ್ಳಬೇಕು. ಪುರುಷ ಪ್ರಧಾನತೆ ಹಾಗೂ ಪುರುಷ ಯಜಮಾನಿಕೆ ಎಂಬುದು ಆರ್ಥಿಕ, ಸಾಮಾಜಿಕ ಶೋಷಣೆಯನ್ನು ಬಿಟ್ಟು ಹೊರಗಿರಲು ಸಾಧ್ಯವಿಲ್ಲ. ಇದರ ಆಧಾರದಲ್ಲೆ ಪುರುಷ ಯಜಮಾನಿಕೆ ಎಂಬುದು ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳೆಯರ ಶೋಷಕರು ಯಾರು ಎಂಬ ಪ್ರಶ್ನೆಯನ್ನು ಮಹಿಳೆಯರ ಶೋಷಣೆಯ ಮೂಲ ಯಾವುದು ಎಂದು ಬದಲಾಯಿಸಬಹುದು. ಊಳಿಗಮಾನ್ಯಶಾಹಿ ಹಾಗೂ ಅರೆ ಊಳಿಗಮಾನ್ಯಶಾಹಿಯಲ್ಲಿ ಮಹಿಳೆಯರ ಒಂದು ವರ್ಗವನ್ನು ಬಸವಿ, ಪಾತರದವರು ಈ ಹೆಸರಿನಲ್ಲಿ ಶೋಷಣೆ ಮಾಡಲಾಗುತ್ತಿತ್ತು. ಈಗ ಅದನ್ನು ನಯವಾಗಿ ಸೆಕ್ಸ್‌ಇಂಡಸ್ಟ್ರಿ ಎಂದು, ಸೆಕ್ಸ್‌ವರ್ಕರ್ಸ್ ಎಂದು ಕರೆಯಲಾಗುತ್ತಿದೆ. ಈ ರೀತಿಯಲ್ಲಿ ಮಹಿಳಾ ಶೋಷಣೆಯನ್ನು ಹೊಸ ವಿಧಾನಗಳಲ್ಲಿ ಮುಂದುವರಿಸುತ್ತಿರುವ ವರ್ಗವೇ ಮಹಿಳೆಯರ ಶೋಷಕ ವರ್ಗ. ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಲಿಂಗ ಸಂಬಂಧಿ ಅಸಮಾನತೆ ಹಾಗೂ ಶೋಷಣೆಯೇ ಮಹಿಳೆಯರ ಶೋಷಣೆಯ ಮೂಲ. ಇದನ್ನು ಗುರುತಿಸುವ ಮೂಲಕ ಹಾಗೂ ಇದರ ವಿರುದ್ಧ ವೈಚಾರಿಕವಾಗಿ ಹಾಗೂ ಸಂಘಟನಾತ್ಮಕವಾಗಿ ಹೋರಾಡುವುದರ ಮೂಲಕ ಮಹಿಳಾ ಸಬಲೀಕರಣ ಎಂಬುದು ಸಾಧ್ಯ. ಇದು ಘಟನೆಯ ರೀತಿಯಲ್ಲಿ ನಡೆಯುವಂತಹದ್ದಲ್ಲ. ಇದು ನಿರಂತರ ಪ್ರಕ್ರಿಯೆ. ಈ ಪ್ರಕ್ರಿಯೆಯಲ್ಲಿ ಈಗ ಜಾರಿಯಲ್ಲಿರುವ ಶಿಕ್ಷಣವನ್ನು ಬದಲಾಯಿಸಿ ಅದನ್ನು ಮಹಿಳಾ ಶಿಕ್ಷಣವನ್ನಾಗಿ ಮಾರ್ಪಡಿಸಲು ಸಾಧ್ಯ.

* ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ, ದೇವರಗೋನಾಲು ಊರಿನಲ್ಲಿ . ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರವು ೨೦೦೮ರ ಡಿಸೆಂಬರ್ ೭ ಮತ್ತು ೮ರಂದು ನಡೆಸಿದ 'ಮಹಿಳಾ ಸಬಲೀಕರಣ' ವಿಚಾರ ಗೋಷ್ಠಿಯಲ್ಲಿ ಸ್ವರೂಪದಲ್ಲಿ ಆಲೋಚಿಸಲು ಕಾರ ಣರಾದ ಕೇಂದ್ರದ ನಿರ್ದೇಶಕರಾದ ಡಾ. ಶಿವಾನಂದ ಎಸ್.ವಿರಕ್ತಮಠ ಅವರಿಗೆ ವಂದನೆಗಳು. □

ತಿಳಿಯಬೇಕಾದ್ದು, ತಿಳಿವವನು ಮತ್ತು ತಿಳಿವು ಇವುಗಳ ಸಂಬಂಧ ಸ್ವರೂಪ



ಡಾ. ಎಸ್. ನಟರಾಜ್ ಬೂದಾಳು

ವಸ್ತು ಪ್ರಪಂಚದ ವಿವರಣೆಗೆ ತೊಡಗುವ ಮುನ್ನ ಬೌದ್ಧ ತಾತ್ವಿಕರು ಸಾಮಾನ್ಯ ಲೋಕನಂಬಿಕೆಯನ್ನೂ, ಇತರ ಚಿಂತನಾ ಪ್ರಸ್ಥಾನಗಳ, ಪ್ರಸ್ತಾಪಗಳನ್ನು ಮುಂದಿಟ್ಟುಕೊಳ್ಳುತ್ತಾರೆ. ನಂತರ ಸಂಗತಿಯೊಂದರ ತಾನು ವಿವರಿಸಬೇಕಾಗಿರುವ ಸಂಗತಿಯ ಪೂರ್ಣ ಪ್ರಾಪಂಚಿಕ ಸಾಧ್ಯತೆಗಳನ್ನು ಗುರುತಿಸಿಕೊಳ್ಳುತ್ತಾರೆ. ಅದರ ಯಾವ ಅಂಶವೂ ಕೈತಪ್ಪಿ ಹೋಗದಂತೆ ಎಚ್ಚರ ವಹಿಸುತ್ತಾರೆ. ಉದಾಹರಣೆಗೆ ವಸ್ತುವೊಂದರ ಸೃಷ್ಟಿ-ಸ್ಥಿತಿ-ಲಯ ಈ ಮೂರೂ ಅದರ ಪೂರ್ಣ ಪ್ರಾಪಂಚಿಕ ಸಾಧ್ಯತೆ. ಇಷ್ಟನ್ನು ವಿವರಿಸಿದರೆ ಒಂದು ಸಂಗತಿಯ ಬಗೆಗೆ ಎಲ್ಲವನ್ನೂ ವಿವರಿಸಿದಂತಾಗುತ್ತದೆ. ಈ ಅಂಶಗಳನ್ನು ಒಂದೊಂದಾಗಿ ಪರಿಶೀಲನೆಗೆ ತೆಗೆದುಕೊಳ್ಳಬಹುದು. ಉಂಟಾಗುವ ಹೆಚ್ಚಿನ ಅಂಶಗಳ ಸಂಯೋಜನೆ ಯಾಗಿರುವುದರಿಂದ ಈ ಎಲ್ಲ ಸಂಬಂಧಾಂಶಗಳನ್ನು ಗುರುತಿಸಿಕೊಂಡು ಅದರ ಅಸ್ತಿತ್ವದ ಸಾಧ್ಯತೆಗಳನ್ನು ಪರಿಶೀಲಿಸುವ ಕ್ರಮವನ್ನು ಬೌದ್ಧ ದರ್ಶನದಲ್ಲಿ ಕಾಣಬಹುದು.

ವಸ್ತು ಪ್ರಪಂಚದ ವಿವರಣೆಗೆ ತೊಡಗುವ ಮುನ್ನ ಬೌದ್ಧ ತಾತ್ವಿಕರು ಸಾಮಾನ್ಯ ಲೋಕನಂಬಿಕೆಯನ್ನೂ, ಇತರ ಚಿಂತನಾ ಪ್ರಸ್ಥಾನಗಳ, ಪ್ರಸ್ತಾಪಗಳನ್ನು ಮುಂದಿಟ್ಟುಕೊಳ್ಳುತ್ತಾರೆ. ನಂತರ ಸಂಗತಿಯೊಂದರ ಅಂದರೆ ತಾನು ವಿವರಿಸಬೇಕಾಗಿರುವ ಸಂಗತಿಯ ಪೂರ್ಣಪ್ರಾಪಂಚಿಕ ಸಾಧ್ಯತೆಗಳನ್ನು ಗುರುತಿಸಿಕೊಳ್ಳುತ್ತಾರೆ. ಅದರ ಯಾವ ಅಂಶವೂ ಕೈತಪ್ಪಿ ಹೋಗದಂತೆ ಎಚ್ಚರ ವಹಿಸುತ್ತಾರೆ. ಉದಾಹರಣೆಗೆ ವಸ್ತುವೊಂದರ ಹುಟ್ಟು, ಬಾಳಿಕೆ, ಅದರ ಭಂಗ (ಸೃಷ್ಟಿ-ಸ್ಥಿತಿ-ಲಯ) ಈ ಮೂರೂ ಅದರ ಪೂರ್ಣ ಪ್ರಾಪಂಚಿಕ ಸಾಧ್ಯತೆ. ಇಷ್ಟನ್ನು ವಿವರಿಸಿದರೆ ಒಂದು ಸಂಗತಿಯ ಬಗೆಗೆ ಎಲ್ಲವನ್ನೂ ವಿವರಿಸಿದಂತಾಗುತ್ತದೆ. ಈ ಅಂಶಗಳನ್ನು ಒಂದೊಂದಾಗಿ ಪರಿಶೀಲನೆಗೆ ತೆಗೆದುಕೊಳ್ಳಬಹುದು. ಉಂಟಾಗುವ ಎಲ್ಲವೂ ಎರಡು ಅಥವಾ ಹೆಚ್ಚಿನ ಅಂಶಗಳ ಸಂಯೋಜನೆಯಾಗಿರುವುದರಿಂದ ಈ ಎಲ್ಲ ಸಂಬಂಧಾಂಶಗಳನ್ನು ಮೊದಲು ಗುರುತಿಸಿಕೊಂಡು ಅದರ ಅಸ್ತಿತ್ವದ ಸಾಧ್ಯತೆಗಳನ್ನು ಪರಿಶೀಲಿಸುವ ಕ್ರಮವನ್ನು ಬೌದ್ಧ ದರ್ಶನದಲ್ಲಿ ಕಾಣಬಹುದು.

ವಸ್ತುವೊಂದು ಉಂಟಾಗುವುದು ಹೇಗೆ?

ತನ್ನಿಂದಾಗಲೀ ಪರದಿಂದಾಗಲೀ
ತಾನು-ಅನ್ಯ ಇವೆರಡರಿಂದಾಗಲಿ
ಕಾರಣರಹಿತವಾಗಿಯಾಗಲೀ
ಯಾವುದೂ ಎಂದೂ ಎಲ್ಲಿಯೂ ಉಂಟಾಗುವುದಿಲ್ಲ.
(ಕಾರಿಕೆ ೧ ಅಧ್ಯಾಯ ೧:)

ಬೌದ್ಧಮಾಧ್ಯಮಕವಾದವು ಪದಾರ್ಥ ಪ್ರಪಂಚವನ್ನು ಈ ಕ್ರಮದಲ್ಲಿ ವಿವರಿಸುತ್ತದೆ : ಆಗಿ ಇರುವ ಸ್ವತಂತ್ರವಾದ ಪದಾರ್ಥವೆಂಬುದು ಜಗತ್ತಿನಲ್ಲಿ ಯಾವುದೂ ಇಲ್ಲ. ಸದಾ ಆಗುತ್ತಲೇ ಇರುವ ಪ್ರಕ್ರಿಯೆ ಮಾತ್ರ ಇದೆ. ಅಂದರೆ ಪರಸ್ಪರ ಸಂಬಂಧದಿಂದ ಉಂಟಾಗುವ ಚಲನಶೀಲ ಕ್ರಿಯಾಸಾಮರ್ಥ್ಯ ಮಾತ್ರ ಇದೆ. ಈ ಕ್ರಿಯಾ ಸಾಮರ್ಥ್ಯವೆನ್ನುವುದು ಪ್ರಕ್ರಿಯೆ ಮಾತ್ರವಾಗಿರುವುದರಿಂದ ಅದು ವಸ್ತುವೆಂಬ ಕಾಲ್ಪನಿಕ ಸ್ಥಿತಿಯನ್ನು ಮುಟ್ಟಲಾರದು. ಹಾಗಾಗಿ ಮೊದಲ ಹಂತದ ವಿವರಣೆ ಎಂದರೆ ಸ್ವತಂತ್ರ, ಶಾಶ್ವತ ಪದಾರ್ಥವೆಂಬುದಿಲ್ಲ ಎನ್ನುವುದು. ಮೇಲಿನ ಸೂತ್ರವನ್ನು ಅದರ ಅರ್ಥಕ್ಕೆ ಭಂಗ ಬಾರದಂತೆ ಹೀಗೆ ಕೂಡ ದಾಖಲಿಸಬಹುದು :

ಅ) ಪದಾರ್ಥವು ತನ್ನ ಕಾರಣದಿಂದ ಉಂಟಾಗುವುದಿಲ್ಲ

ಆ) ಪದಾರ್ಥವು ಅನ್ಯ ಕಾರಣದಿಂದ ಉಂಟಾಗುವುದಿಲ್ಲ

ಇ) ಪದಾರ್ಥವು ತಾನು ಮತ್ತು ಅನ್ಯ ಇವೆರಡರ ಕಾರಣದಿಂದ ಉಂಟಾಗುವುದಿಲ್ಲ

ಈ) ಪದಾರ್ಥವು ಕಾರಣರಹಿತವಾಗಿ ಉಂಟಾಗುವುದಿಲ್ಲ

ಲೋಕವೆಲ್ಲವೂ ಪ್ರಕ್ರಿಯೆಯ ನಾಟ್ಯವಿಲಾಸವೇ, ಪದಾರ್ಥವೆಂಬ ಸ್ವತಂತ್ರ ಶಾಶ್ವತ ಅಸ್ತಿತ್ವವೊಂದು ಸಿದ್ಧಗೊಳ್ಳುವುದೇ ಇಲ್ಲ ಎಂಬುದನ್ನು ನಿರೂಪಿಸುವುದು ಮೊದಲ ಹಂತ. ಕಾರಣ ಮತ್ತು ಪರಿಸ್ಥಿತಿಗಳ ಸಂಯೋಗದಿಂದ ಪರಿಣಾಮವೊಂದು ಉಂಟಾಗುತ್ತದೆ. ಈ ಪರಿಣಾಮವನ್ನು ನಾವು ಸಾಮಾನ್ಯವಾಗಿ ಶಾಶ್ವತವಾದ ವಸ್ತುವೆಂದು ಪರಿಭಾವಿಸಿ ವ್ಯವಹರಿಸುತ್ತೇವೆ. ಆದರೆ ಇದೊಂದು ನಿರಂತರವಾದ ಪ್ರಕ್ರಿಯಾ ಸರಣಿಯಾಗಿದೆ. ಕಾರಣ ಮತ್ತು ಪರಿಣಾಮದ ಸಂಬಂಧವನ್ನು ಇಲ್ಲಿ ಚರ್ಚಿಸಲಾಗಿದೆ. ಸಂಗತಿಯೊಂದು ಜರುಗಲು ನಾಲ್ಕು ಕಾರಣ ಸಾಧ್ಯತೆಗಳನ್ನು ಅಥವಾ ಕಾರಣ ಮತ್ತು ಪರಿಣಾಮದ ನಾಲ್ಕು ಸಂಬಂಧ-ಸಾಧ್ಯತೆಗಳನ್ನು ಗುರುತಿಸಿಕೊಳ್ಳಬಹುದು. ೧) ಕಾರಣ ಮತ್ತು ಪರಿಣಾಮ ಒಂದೇ. ೨) ಕಾರಣ ಮತ್ತು ಪರಿಣಾಮ ಬೇರೆಬೇರೆ ೩) ಕಾರಣ ಮತ್ತು ಪರಿಣಾಮ ಭಿನ್ನ ಮತ್ತು ಅಭಿನ್ನ ಎರಡೂ ೪) ಸಂಗತಿಗಳು ಕಾರಣವಿಲ್ಲದೆ ಜರುಗುತ್ತವೆ. ಇದರಾಚೆಗೆ ಕಾರಣ-ಪರಿಣಾಮದ ಯಾವ ಸಂಬಂಧ ಸಾಧ್ಯತೆಗಳೂ ಇರಲು ಸಾಧ್ಯವಿಲ್ಲ. ಇವಿಷ್ಟೇ ಎಂದು ಹೇಗೆ ಮಿತಗೊಳಿಸಿಕೊಳ್ಳಲಾಗಿದೆ? ಅದನ್ನು ಹೀಗೆ ವಿವರಿಸಬಹುದು, ಸಂಗತಿಯೊಂದು ಉಂಟಾಗಲು ಕಾರಣವಿರಬೇಕು ಅಥವಾ ಕಾರಣವಿಲ್ಲದಿರಬೇಕು. ಈ ಎರಡೂ ಸಾಧ್ಯತೆಗಳನ್ನು ಮೇಲಿನ ಕಾರಿಕೆ ಒಳಗೊಂಡಿದೆ. ಸೂತ್ರದ ಮೊದಲಿನ ಮೂರು ಸಾಧ್ಯತೆಗಳು ಕಾರಣ ಉಂಟು ಎಂಬ ಪ್ರಮೇಯವನ್ನು ವಿಶ್ಲೇಷಿಸಿದರೆ, ಕೊನೆಯದು 'ಕಾರಣವಿಲ್ಲ' ಎಂಬ ಪ್ರಮೇಯವನ್ನು ವಿಶ್ಲೇಷಿಸುತ್ತದೆ. ಕಾರಣವುಂಟು ಎನ್ನುವುದಾದರೆ ಎರಡು ಪರ್ಯಾಯಗಳಿವೆ: ಒಂದು : ಕಾರಣ ಮತ್ತು ಪರಿಣಾಮ ಒಂದೇ ಎನ್ನುವುದು, ಎರಡು : ಕಾರಣ ಮತ್ತು ಪರಿಣಾಮಗಳು ಬೇರೆ ಬೇರೆ ಎನ್ನುವುದು. ಮೇಲಿನ ಸೂತ್ರದ ಮೂರನೆಯ ಪ್ರಮೇಯ ಒಂದು ಮತ್ತು ಎರಡರ ಸಂಯೋಗವಷ್ಟೇ. ಈ ನಾಲ್ಕೂ ಪ್ರಮೇಯಗಳನ್ನು ನಾಗಾರ್ಜುನ ಅಸಂಗತವಾದವುಗಳೆಂದು ಸಿದ್ಧಪಡಿಸುತ್ತಾನೆ.

ಮೇಲಿನ ಕಾರಣ-ಪರಿಣಾಮ ಸಂಬಂಧದ ವಿವರಣೆಗಳು ಆಗ್ಗೆ ಪ್ರಚಲಿತವಿದ್ದ ಭಿನ್ನ ಭಿನ್ನ ಚಿಂತನಾ ಪ್ರಸ್ಥಾನಗಳು ಮುಂದಿಟ್ಟ ದೃಷ್ಟಿಕೋನಗಳಾಗಿದ್ದವು. ಕಾರಣ ಮತ್ತು ಪರಿಣಾಮ ಒಂದೇ ಎಂಬುದು ಸಾಂಖ್ಯರ ನಿಲುವು. ಬೌದ್ಧರಲ್ಲೇ ವೈಭಾಷಿಕರು ಮತ್ತು ಸೌತ್ರಾಂತಿಕರು ಹಾಗೂ ಕೆಲವು ಹಿಂದೂ ಪ್ರಸ್ಥಾನಗಳು ಕಾರಣ-ಪರಿಣಾಮಗಳು ಬೇರೆ ಬೇರೆ ಎಂದು ಪ್ರತಿಪಾದಿಸುತ್ತವೆ. ತನ್ನ ಮತ್ತು ಅನ್ಯಕಾರಣಗಳೆರಡರಿಂದಲೂ ವಸ್ತುಗಳು ಸಂಭವಿಸುತ್ತವೆಂಬುದು ಜೈನರ ನಿಲುವಾಗಿದ್ದಿತು. ಭೌತವಾದಿಗಳು ಪದಾರ್ಥದ ಉತ್ಪತ್ತಿಗೆ ಕಾರಣದ ಅಗತ್ಯವಿಲ್ಲ ಎಂದು ವಾದಿಸುತ್ತಾರೆ.

ನಾಗಾರ್ಜುನ ಈ ನಾಲ್ಕೂ ದೃಷ್ಟಿವಾದಗಳನ್ನು ತನ್ನ ಪ್ರಖ್ಯಾತವಾದ reductio ad absurdum ಎಂಬ ವಿಧಾನದಿಂದ ಪರಿಶೀಲಿಸಿ ತಿರಸ್ಕರಿಸುತ್ತಾನೆ. ಪ್ರತಿವಾದಿಯ ನಿಲುವಿನಲ್ಲಿರುವ ಮಿಥ್ಯಾದೃಷ್ಟಿಯನ್ನು ಅನಾವರಣ ಮಾಡಿ ಅದರ ಅಸಂಬದ್ಧತೆಯನ್ನು ಸಿದ್ಧಪಡಿಸುವುದು ಇಲ್ಲಿನ ಕ್ರಮ. ಉದಾಹರಣೆಗೆ ಮೊದಲನೆಯ, ಕಾರಣ-ಪರಿಣಾಮ ಒಂದೇ ಎಂಬ ಪ್ರಮೇಯವನ್ನು ವಿಶ್ಲೇಷಿಸಿ

ದರೆ, ವಸ್ತು ಅಸ್ತಿತ್ವಕ್ಕೆ ಬರಲು 'ತಾನೇ' ಕಾರಣವಾಗುವುದಾದರೆ ಹೊಸದೊಂದು ಅಸ್ತಿತ್ವಕ್ಕೆ ಬರಲು ಸಾಧ್ಯವೇ ಆಗದು. ಹೊಸದೊಂದು ಬರಲು ಸಾಧ್ಯವಾಗದಿದ್ದರೆ ಅದೊಂದು ಕ್ರಿಯಾಹೀನ ಜಡಜಗತ್ತು. ಆದರೆ ಜಗತ್ತು ಹಾಗಿಲ್ಲ. ಎರಡನೆಯದಾದ ಕಾರಣ ಮತ್ತು ಪರಿಣಾಮ ಪೂರ್ಣ ಬೇರೆ ಬೇರೆ ಎಂದಾದರೆ, ಕಾರಣ–ಪರಿಣಾಮಗಳ ನಡುವೆ ಅಂತಃಸಂಬಂಧವೇ ಇಲ್ಲವೆಂದಾಗುತ್ತದೆ. ಹಾಗಾದಾಗ ಯಾವುದು ಯಾವುದರಿಂದಲಾದರೂ ಉತ್ಪತ್ತಿಯಾಗಬಹುದಾಗುತ್ತದೆ. ಇದೂ ಅಸಂಬದ್ಧವಾಗುತ್ತದೆ. ಮೂರನೆಯ ಪ್ರಮೇಯದಲ್ಲಿ ಮೊದಲಿನ ಎರಡರ ಸಮಸ್ಯೆಗಳೂ ಮಿಳಿತಗೊಳ್ಳುತ್ತವೆ. ಜೊತೆಗೆ ವಿರುದ್ಧ ಸಂಗತಿಗಳು ಏಕಕಾಲದಲ್ಲಿ ಒಂದರಲ್ಲೇ ಸಂಭವಿಸಲು ಸಾಧ್ಯವಿಲ್ಲ. ಭಾವವೊಂದಕ್ಕೆ ಅಸ್ತಿತ್ವ ಮತ್ತು ನಾಸ್ತಿತ್ವಗಳನ್ನು ಏಕಕಾಲದಲ್ಲಿ ಆರೋಪಿಸಲಾಗದು. ಕೊನೆಯದಾದ ಕಾರಣರಹಿತ ಎಂಬ ನಿಲುವು ಅರಾಜಕತೆಯತ್ತ ಜಾರುತ್ತದೆ. ಯಾವುದಾದರೂ, ಎಲ್ಲಿಯಾದರೂ, ಯಾವಾಗಲಾದರೂ ಉಂಟಾಗಲು ಸಾಧ್ಯ ಎನ್ನುವುದಾದರೆ ಎಲ್ಲವೂ, ಎಲ್ಲಿಯೂ, ಯಾವಾಗಲೂ ಸಂಭವಿಸಲು ಸಾಧ್ಯ ಎಂಬ ನಿಲುವಿಗೆ ಬರಬೇಕಾಗುತ್ತದೆ. ಹಾಗಾಗಿ ಈ ನಾಲ್ಕೂ ನಿಲುವುಗಳು ನಿರರ್ಥಕವಾಗುತ್ತವೆ. ಹಾಗಾದರೆ ನಿಮ್ಮ ನಿಲುವೇನು? ಎಂದು ಮಾಧ್ಯಮಿಕರನ್ನು ಕೇಳಿದರೆ, 'ವಸ್ತು ಪ್ರಪಂಚವನ್ನು ಅಸ್ತಿತ್ವವಾಗಿ (ಇದೆ ಎಂದು) ಅಥವಾ ನಾಸ್ತಿತ್ವವಾಗಿ(ಇಲ್ಲ ಎಂದು) ಗ್ರಹಿಸುವವರಿಗೆ ಮಾತ್ರ ಕಾರಣ ಮತ್ತು ಪರಿಣಾಮಗಳ ಬಗೆಗೆ ನಿಲುವುಗಳು ಸಾಧ್ಯ. ವಸ್ತು ಪ್ರಪಂಚವನ್ನು ನಿರಂತರ ಚಲನೆಯಲ್ಲಿರುವ ಪ್ರವಾಹವೆಂದು ಭಾವಿಸುವವರಿಗೆ ಇಂತಹ ನಿಲುವುಗಳು ಇರಲು ಸಾಧ್ಯವಿಲ್ಲ ಎಂದು ಉತ್ತರಿಸುತ್ತಾರೆ.

ಕಾರಣ ಸಿದ್ಧಾಂತದ ವಿವರಣೆಗೆ ತೊಡಗುವಾಗ ಬೌದ್ಧ ಮಾಧ್ಯಮಿಕರು ವಿಶೇಷ ಎಚ್ಚರ ವಹಿಸುತ್ತಾರೆ. ಏಕೆಂದರೆ ಪ್ರಕ್ರಿಯಾ ಮೀಮಾಂಸೆಯ ಪ್ರಾಥಮಿಕ ಲಕ್ಷಣವೇ ಚಲನೆ ಮಾತ್ರ ಸತ್ಯ ಮತ್ತು ನಿತ್ಯವೆನ್ನುವುದು. ಉತ್ಪತ್ತಿ–ಬಾಳುವಿಕೆ–ಭಂಗಗಳ ಮೂಲಕ ಪ್ರವಹಿಸುವ ಈ ವಸ್ತು ಪ್ರವಾಹದಲ್ಲಿ, ಈ ಮೂರು ಹಂತಗಳು ಪ್ರತ್ಯೇಕ, ಸ್ವತಂತ್ರ ಘಟನೆಗಳಲ್ಲ. ಹಾಗೇನಾದರೂ ಸ್ವತಂತ್ರ ಘಟನೆಗಳೆಂದಾದರೆ ಪ್ರತಿಯೊಂದು ಘಟನೆ ಉತ್ಪತ್ತಿ–ಸ್ಥಿತಿ–ಭಂಗಗಳನ್ನು ಹೊಂದಿರಬೇಕಾಗುತ್ತದೆ. ಉದಾಹರಣೆಗೆ 'ಉತ್ಪತ್ತಿ'ಗೆ ಅದರ ಮುಂದಿನ ಕ್ಷಣದ ಸ್ಥಿತಿಗೆ ಮುನ್ನ ಉತ್ಪತ್ತಿ–ಸ್ಥಿತಿ–ಭಂಗಗಳು ಇರಬೇಕಾಗುತ್ತದೆ. ಇದೇ ಕ್ರಮ ಸ್ಥಿತಿ, ಭಂಗಗಳಿಗೂ ಅನ್ವಯವಾಗುತ್ತದೆ. ಇದು ಅನಂತ ಅನವಸ್ಥೆಗೆ ಕಾರಣವಾಗುತ್ತದೆ.

ಸಂಗತಿ ಜರುಗಲು ಕಾರಣವನ್ನೇ ನಾಗಾರ್ಜುನ ನಿರಾಕರಿಸುತ್ತಿಲ್ಲ ಎನ್ನುವ ಸಂಗತಿ ಅತ್ಯಂತ ಪ್ರಮುಖವಾದುದು. ಆದರೆ ಕಾರಣವೆನ್ನುವುದು ಒಂದು ಸ್ವತಂತ್ರ ಘಟಕವಲ್ಲ ಮತ್ತು ಕಾರಣಕ್ಕೆ ಕಾರಣದ ಸ್ಥಾನ ಸಿಗುವುದು ಪರಿಸ್ಥಿತಿ ಮತ್ತು ಪರಿಣಾಮಗಳೊಡನೆ ಸಂಬಂಧದಲ್ಲಿ ಮಾತ್ರ. ಕಾರಣ–ಪರಿಸ್ಥಿತಿ–ಪರಿಣಾಮಗಳು ಸಾಪೇಕ್ಷ ಕಲ್ಪನೆಗಳು. ವಿವರಣೆಯ ಅನುಕೂಲಕ್ಕಾಗಿ ಈ ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ. ಈ ಸಂಬಂಧದ ಕೊಂಡಿಯನ್ನು ಕಳಚಿಬಿಟ್ಟರೆ ಆಗುವ ಪರಿಣಾಮಗಳನ್ನು ನಾಗಾರ್ಜುನ ಮತ್ತೊಂದು ದಿಕ್ಕಿನಿಂದ ವಿಶ್ಲೇಷಿಸುತ್ತಾನೆ.

ಕಾರಣ ಸಿದ್ಧಾಂತದ ವಿವರಣೆಗೆ ತೊಡಗುವಾಗ ಬೌದ್ಧ ಮಾಧ್ಯಮಿಕರು ವಿಶೇಷ ಎಚ್ಚರ ವಹಿಸುತ್ತಾರೆ. ಏಕೆಂದರೆ ಪ್ರಕ್ರಿಯಾ ಮೀಮಾಂಸೆಯ ಪ್ರಾಥಮಿಕ ಲಕ್ಷಣವೇ ಚಲನೆ ಮಾತ್ರ ಸತ್ಯ ಮತ್ತು ನಿತ್ಯವೆನ್ನುವುದು. ಉತ್ಪತ್ತಿ–ಬಾಳುವಿಕೆ–ಭಂಗಗಳ ಮೂಲಕ ಪ್ರವಹಿಸುವ ಈ ವಸ್ತು ಪ್ರವಾಹದಲ್ಲಿ, ಈ ಮೂರು ಹಂತಗಳು ಪ್ರತ್ಯೇಕ, ಸ್ವತಂತ್ರ ಘಟನೆಗಳಲ್ಲ. ಹಾಗೇನಾದರೂ ಸ್ವತಂತ್ರ ಘಟನೆಗಳೆಂದಾದರೆ ಪ್ರತಿಯೊಂದು ಘಟನೆ ಉತ್ಪತ್ತಿ–ಸ್ಥಿತಿ–ಭಂಗಗಳನ್ನು ಹೊಂದಿರಬೇಕಾಗುತ್ತದೆ. ಉದಾಹರಣೆಗೆ 'ಉತ್ಪತ್ತಿ'ಗೆ ಅದರ ಮುಂದಿನ ಕ್ಷಣದ ಸ್ಥಿತಿಗೆ ಮುನ್ನ ಉತ್ಪತ್ತಿ–ಸ್ಥಿತಿ–ಭಂಗಗಳು ಇರಬೇಕಾಗುತ್ತದೆ. ಇದೇ ಕ್ರಮ ಸ್ಥಿತಿ, ಭಂಗಗಳಿಗೂ ಅನ್ವಯವಾಗುತ್ತದೆ. ಇದು ಅನಂತ ಅನವಸ್ಥೆಗೆ ಕಾರಣವಾಗುತ್ತದೆ. ಸಂಗತಿ ಜರುಗಲು ಕಾರಣವನ್ನೇ ನಾಗಾರ್ಜುನ ನಿರಾಕರಿಸುತ್ತಿಲ್ಲ ಎನ್ನುವ ಸಂಗತಿ ಅತ್ಯಂತ ಪ್ರಮುಖವಾದುದು. ಆದರೆ ಕಾರಣವೆನ್ನುವುದು ಒಂದು ಸ್ವತಂತ್ರ ಘಟಕವಲ್ಲ ಮತ್ತು ಕಾರಣಕ್ಕೆ ಕಾರಣದ ಸ್ಥಾನ ಸಿಗುವುದು ಪರಿಸ್ಥಿತಿ ಮತ್ತು ಪರಿಣಾಮಗಳೊಡನೆ ಸಂಬಂಧದಲ್ಲಿ ಮಾತ್ರ. ಕಾರಣ–ಪರಿಸ್ಥಿತಿ–ಪರಿಣಾಮಗಳು ಸಾಪೇಕ್ಷ ಕಲ್ಪನೆಗಳು. ವಿವರಣೆಯ ಅನುಕೂಲಕ್ಕಾಗಿ ಈ ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ.

ಒಂದರಿಂದ ಇನ್ನೊಂದು ಬಂದದ್ದೇ? ಎಂಬ ಪ್ರಶ್ನೆ ಕೂಡಾ ಬೌದ್ಧ ಧರ್ಮದ ಒಂದು ಪಂಥವಾದ ಸೌತ್ರಾಂತಿಕರಿಂದ ಎದುರಾಗಿದೆ. ಬೆಳಕು ಮತ್ತು ಕತ್ತಲಿನ ಉದಾಹರಣೆಯನ್ನು ಅವರೇ ಮುಂದಿಟ್ಟು 'ದೀಪ ಹೇಗೆ ಸ್ವಪ್ರಕಾಶಿ ಮತ್ತು ಅನ್ಯಪ್ರಕಾಶಿಯೋ ಹಾಗೆಯೇ ಕಾರಣವು ತನ್ನ ಮತ್ತು ಪರಿಣಾಮದ ಹುಟ್ಟಿಗೆ ಕಾರಣವಾಗುತ್ತದೆ' ಎಂದು ವಾದಿಸುತ್ತಾರೆ. ಅದಕ್ಕೆ ನಾಗಾರ್ಜುನನ ಉತ್ತರ ಇದು :

ಅಂಧಕಾರವು ದೀಪದಲ್ಲಿಯಾಗಲೀ
ದೀಪವಿರುವಲ್ಲಿಯಾಗಲೀ, ಇಲ್ಲ.
ದೀಪ ಬೆಳಗುವುದಾದರೂ ಏನನ್ನು ?
ಏಕೆಂದರೆ ಕತ್ತಲಿನ ವಿನಾಶವೇ ಬೆಳಕು. (ಕಾರಿಕೆ ೯ ಅಧ್ಯಾಯ ೭)

ಬೆಳಕು ಮತ್ತು ಕತ್ತಲೆಗಳೆರಡೂ ಸಾಪೇಕ್ಷ ಕಲ್ಪನೆಗಳು. ಇಲ್ಲಿಯ ಸಂಬಂಧ ನಿಷೇಧಾತ್ಮಕವಾದದ್ದು. ಒಂದು ಇದ್ದರೆ ಇನ್ನೊಂದು ಇರುವುದಿಲ್ಲ. ಬೆಳಕು ಮತ್ತು ಕತ್ತಲಿನ ನಾಶ ಬೇರೆ ಬೇರೆ ಘಟನೆಗಳಲ್ಲ. ಒಂದು ಇನ್ನೊಂದರಿಂದ ಬಂದದ್ದೆಂದು ಹೇಗೂ ಹೇಳಲಾಗದು. ಕತ್ತಲು–ಬೆಳಕಿನ ಉದಾಹರಣೆಯು ಎರಡು ಕ್ಷಣಿಕ ಘಟನೆಗಳ ಕಾರಣ ಸಂಬಂಧವನ್ನು ವಿವರಿಸಲು ಕೂಡ 'ಕಣ' ವಾದಿಗಳಿಂದ ಬಳಕೆಯಾಗಿದೆ. ಲೋಕಪ್ರವಾಹವನ್ನು ಸ್ವತಂತ್ರ ಕ್ಷಣಗಳ ಸರಣಿಯನ್ನಾಗಿ ಅವರು ವಿವರಿಸುತ್ತಾರೆ. ಅಂದರೆ ಒಂದು ಕಣದ ಸಂಪರ್ಕದಲ್ಲಿ ಮತ್ತೊಂದ ಕಣ ಹುಟ್ಟನ್ನು ಪಡೆಯುತ್ತದೆ ಮತ್ತು ಇದೊಂದು ಪ್ರವಾಹರೂಪದಲ್ಲಿ ಇರುತ್ತದೆ ಎಂಬ ನಿಲುವು. ಆದರೆ ನಾಗಾರ್ಜುನನಿಗೆ ಅದು ಮಾನ್ಯವಲ್ಲ.

ಬೆಳಕಿಗೆ ತನ್ನ ಹುಟ್ಟಿನ ಗಳಿಗೆಯಲ್ಲೇ
ಕತ್ತಲಿನ ಸಂಪರ್ಕವಿರುವುದಿಲ್ಲವಾದ್ದರಿಂದ
ಬೆಳಕು ತನ್ನ ಹುಟ್ಟಿನ ಗಳಿಗೆಯಲ್ಲೇ
ಹೇಗೆ ಕತ್ತಲನ್ನು ಹತ ಮಾಡುತ್ತದೆ?
(ಕಾರಿಕೆ ೧೦ ಅಧ್ಯಾಯ ೭)

ಬೆಳಕು ಮತ್ತು ಕತ್ತಲುಗಳು ಎಂದೂ ಸಂಪರ್ಕಕ್ಕೇ ಬಾರದಿರುವುದರಿಂದ ಒಂದು ಇನ್ನೊಂದನ್ನು ನಾಶಮಾಡುವ ಸಂದರ್ಭವೇ ಉಂಟಾಗುವುದಿಲ್ಲ. ಬೆಳಕು ಎನ್ನುವುದು ಒಂದು ಕ್ರಿಯಾಪ್ರವಾಹ. ಕತ್ತಲು ಏನೂ ಇಲ್ಲದ ಅವಸ್ಥೆ. ಇಲ್ಲದುದನ್ನು ನಾಶಮಾಡುವ ಅಗತ್ಯವಿದೆಯೆ?

ಕಾರಿಕೆ ೧೨ ಅಧ್ಯಾಯ ೭
ಬೆಳಕು ಸ್ವ-ಪ್ರಕಾಶಿ ಮತ್ತು ಅನ್ಯಪ್ರಕಾಶಿ
ಎಂದಾದರೆ – ಕತ್ತಲೂ ಕೂಡ ತನ್ನನ್ನು
ಆವರಿಸುವುದರ ಜೊತೆಗೆ ಉಳಿದವರನ್ನೂ ಆವರಿಸುತ್ತದೆ

ಬೆಳಕೆಂಬ 'ಕಾರಣ'ವನ್ನು ಶಾಶ್ವತ ಮತ್ತು ಸ್ವತಂತ್ರ ವಸ್ತುವೆಂದು ಗ್ರಹಿಸಿದರೆ ಕತ್ತಲನ್ನೂ ಹಾಗೆಯೇ ಗ್ರಹಿಸಬೇಕಾಗುತ್ತದೆ. ಹಾಗಾಗಿ ಈ ಉದಾಹರಣೆ ಯುಕ್ತವಲ್ಲವೆಂಬುದು ನಾಗಾರ್ಜುನನ ಇಂಗಿತ. ಉಂಟಾಗುವ ಎಲ್ಲದಕ್ಕೂ ಆದಿ ಕಾರಣವೊಂದು ಇರುತ್ತದೆ ಎಂದು ನಂಬುವ ಅನೇಕ ಧರ್ಮಗಳಿವೆ. ಅದಕ್ಕೆ ಬೌದ್ಧ ಧರ್ಮದ ಪ್ರತಿಕ್ರಿಯೆ ಸ್ಪಷ್ಟವಾಗಿದೆ.

೧ ಅಧ್ಯಾಯ ೧೧:
ಮಹಾಮುನಿಯು ಆದಿಯ ಮೊದಲು
ತಿಳಿದಿಲ್ಲವೆಂದು ನುಡಿದಿದ್ದಾನೆ
ಸಂಸಾರವು ಆದಿ ಅಂತ್ಯಗಳಿಲ್ಲದ್ದು
ಅಲ್ಲಿ ಆದಿಯೂ ಇಲ್ಲ ಅಂತ್ಯವೂ ಇಲ್ಲ

ಕಾರಿಕೆ ೨ ಅಧ್ಯಾಯ ೧೧:
ಕೊನೆ ಮೊದಲಿಲ್ಲದುದಕ್ಕೆ ಮಧ್ಯವೆಂಬುದು
ಹೇಗಿರಲು ಸಾಧ್ಯ? ಆದುದರಿಂದ
ಕೊನೆ, ಮೊದಲು ಅಥವಾ ಮಧ್ಯ
ಎಂದು ಗುರುತಿಸುವ ಕ್ರಮ ಸಲ್ಲ

ಈ ಲೋಕಕ್ಕೆ ಪ್ರಾರಂಭವೊಂದಿದೆಯೆಂದು ಎಲ್ಲ ಧರ್ಮಗಳೂ ನಂಬುತ್ತವೆ ಮತ್ತು ತಮ್ಮ ದರ್ಶನವನ್ನು ಆ ನಂಬಿಕೆಯ ತಳಹದಿಯಲ್ಲಿ ಕಟ್ಟಿಕೊಂಡಿವೆ. ಆದರೆ ಬೌದ್ಧ ಧರ್ಮ ಮತ್ತು ವಿಜ್ಞಾನಗಳು ಮಾತ್ರ ಈ ಲೋಕಕ್ಕೆ ಆದಿಯೊಂದಿರಲೇಬೇಕೆಂಬ ನಿಲುವನ್ನು ನಿರಾಕರಿಸುತ್ತವೆ. ಇದೊಂದು ನಿರಂತರವಾಗಿ ಹರಿಯುತ್ತಿರುವ ಪ್ರವಾಹ. ಹರಿಯುತ್ತಿರುವ ಪ್ರವಾಹದಲ್ಲಿ ಶಾಶ್ವತವಾಗಿ ನಿಂತಿರುವ

ಬಿಂದುವೊಂದನ್ನು ಹುಡುಕಿ ತೋರಿಸಲು ಸಾಧ್ಯವಿಲ್ಲ. ಹಾಗೆ 'ಸ್ಥಿತ'ವೆಂಬ ಒಂದು ಬಿಂದು ದೊರೆತರೂ ನಿರಂತರತೆಗೆ ಭಂಗ ಬರುತ್ತದೆ. ನಿರಂತರತೆ ಅನುಭವಗಮ್ಯವೇ ಹೊರತು ದಾಖಲಿಸಲು ದೊರೆಯುವುದಿಲ್ಲ. ದಾಖಲಿಸಲು ಸ್ಥಿತಬಿಂದು ಬೇಕೇಬೇಕು. ಅಲ್ಲಮ ಅದನ್ನು ಹೀಗೆ ನುಡಿಯುತ್ತಾನೆ :

ಅಕ್ಷರವಲಭ್ಯಾಸವ ಮಾಡಿ ಬರೆವ ತೊಡೆವ ಪರಿಯಿನ್ನೆಂತೋ?

ಸ್ವರೂಪೆಂದಾವುದು, ನಿರೂಪೆಂದಾವುದೆಂದರಿಯರಾಗಿ –

ಆದಿ ನಿರಾಳ, ಮಧ್ಯ ನಿರಾಳ, ಊರ್ಧ್ವನಿರಾಳ ಗುಹೇಶ್ವರ.

ಮಧ್ಯ ಬಿಂದುವೊಂದನ್ನು ಖಚಿತವಾಗಿ ಗುರುತಿಸಿಕೊಂಡರೆ ಉಳಿದೆರಡು ತುದಿಗಳೂ ಅಸ್ತಿತ್ವಕ್ಕೆ ಬಂದಂತೆಯೇ. ಲೋಕವನ್ನು ಸದಾ ಹರಿಯುತ್ತಿರುವ ಪ್ರವಾಹ ಎಂದು ಸ್ವೀಕರಿಸಿದಾಗ ಆದಿ–ಅಂತ್ಯಗಳ ನಿರಾಕರಣೆ ತಾನಾಗಿ ಆಗಲೇಬೇಕು. ಲೋಕವನ್ನು ಹೀಗೆ ನಿರಂತರವಾಗಿ ಹರಿಯುತ್ತಿರುವ ಪ್ರವಾಹವೆಂಬ ನಿಲುವನ್ನೇ 'ಶೂನ್ಯತೆ' ಎಂದು ಸೂಚಿಸಲಾಗಿದೆ. ಶೂನ್ಯತೆ ಎಂದರೆ ಏನೂ ಇಲ್ಲದ ಅವಸ್ಥೆಯಲ್ಲ, ಬದಲಿಗೆ ಯಾವುದೇ ಸ್ಥಗಿತ ಸ್ವತಂತ್ರ ವಸ್ತುವೆಂದು ಕರೆಯಬಹುದಾದದ್ದು ಇಲ್ಲ ಎಂಬ ವಿವರಣೆಯನ್ನು ಬೌದ್ಧ ಧರ್ಮವು ನೀಡುತ್ತದೆ.

ಶೂನ್ಯತೆಯೆಂಬುದು ಸರ್ವದೃಷ್ಟಿಗಳಿಂದ ಮುಕ್ತವಾದುದು

ಇದು ಬುದ್ಧನ ಮಾತು

'ಶೂನ್ಯತೆ'ಯೆಂಬ ದೃಷ್ಟಿಗೇ ಅಂಟಿಕೊಂಡವರು

ತಿದ್ದಲಾಗದ ಮೊಂಡರು

ಎಲ್ಲ ದೃಷ್ಟಿವಾದಗಳಿಂದ ಬಿಡುಗಡೆ ಹೊಂದಲು ಬುದ್ಧ ಸೂಚಿಸಿದ ಮಾರ್ಗವೇ ಶೂನ್ಯತೆ ಅಥವಾ ನೈರಾತ್ಮ್ಯ. ಆದರೆ ಈ ಶೂನ್ಯತೆಯೇ ಒಂದು ದೃಷ್ಟಿಯಾಗುವ ಸಾಧ್ಯತೆ ಯನ್ನರಿತಿದ್ದ ಬುದ್ಧ–ನಾಗಾರ್ಜುನರು ಸ್ಪಷ್ಟವಾದ ಎಚ್ಚರಿಕೆ ನೀಡಿದ್ದಾರೆ. ಅಂತಹ 'ಶೂನ್ಯತೆಯ ಅಸ್ತಿತ್ವವಾದಕ್ಕೆ' ಪರಿಹಾರವಿಲ್ಲ. ಶಾಶ್ವತ ವಸ್ತುವೆನ್ನುವುದು ಇಲ್ಲವೆಂದು ವಿವರಿಸಿಕೊಟ್ಟ ಬೌದ್ಧ ಮಾಧ್ಯಮಕರು ಮುಂದಿನ ಹಂತದಲ್ಲಿ ಶಾಶ್ವತ ಕ್ರಿಯೆಯೆನ್ನುವುದೂ ಇಲ್ಲವೆಂದು ಸಾಧಿಸಿ ತೋರಿಸಿದ್ದಾರೆ.

ಕ್ರಿಯಾ ಶೂನ್ಯತೆ

ಪದಾರ್ಥ ಶೂನ್ಯತೆಯನ್ನು ಅದರ ನಾಲ್ಕೂ ಪ್ರತ್ಯಯ ಸಾಧ್ಯತೆಗಳಲ್ಲಿ ವಿಶ್ಲೇಷಿಸಿದ ನಾಗಾರ್ಜುನ ಕ್ರಿಯಾ ಶೂನ್ಯತೆಯನ್ನು ಸಿದ್ಧಪಡಿಸಲು ಅದರ ವಿಶ್ಲೇಷಣೆಗೆ ತೊಡಗುತ್ತಾನೆ. ಕ್ರಿಯೆಯೊಂದನ್ನು ವಿಶ್ಲೇಷಿಸಿ ಅದೂ ಸ್ವತಂತ್ರ ಅಸ್ತಿತ್ವವಿಲ್ಲದ್ದೆಂದು ಶ್ರುತಪಡಿಸುತ್ತಾನೆ. ವಸ್ತು ಪ್ರಪಂಚದ ವಿವರಣೆಯು 'ಇರುವಿಕೆ'ಯದ್ದಾದರೆ ಕ್ರಿಯಾ ಪ್ರಪಂಚದ ವಿವರಣೆಯು 'ಆಗುವಿಕೆ'ಯನ್ನು ಕುರಿತದ್ದು. ಸ್ಥಿತ ವಸ್ತು ಪ್ರಪಂಚದ ಬದಲಿಗೆ 'ಗತಿ' ಪ್ರಪಂಚಕ್ಕೆ ಪ್ರತೀತ್ಯ ಸಮುತ್ಪಾದವು ಅನ್ವಯಗೊಂಡಾಗ ಅಂದರೆ ನಾಮಪದಗಳಿಗೆ ಬದಲು ಕ್ರಿಯಾ ಪದಗಳು ಬಳಕೆಗೊಂಡಾಗ ಅದರ ಸ್ವರೂಪ ಹೇಗಿರಬಹುದು? ವಸ್ತು ಪ್ರಪಂಚ ಚಲನಶೀಲವಾಗಿರುವಂತೆಯೇ, ಚಲನೆಯಲ್ಲಿರುವುದೂ ಚಲನಶೀಲವಾದುದೇ ಆಗಿದೆ. ಚಲನೆ ಮತ್ತು ಸ್ಥಗಿತದ ಉದಾಹರಣೆಗಳೊಂದಿಗೆ ನಾಗಾರ್ಜುನ ಬದಲಾವಣೆಯ ಪರಿಕಲ್ಪನೆಯನ್ನು ವಿಶ್ಲೇಷಿಸಿದ್ದಾನೆ. ಈ ಕ್ರಿಯೆಯಲ್ಲಿರುವ ಮೂರು ಘಟಕಗಳನ್ನು ಮೊದಲು ಪ್ರತ್ಯೇಕಿಸಿಕೊಳ್ಳುತ್ತಾನೆ. (೧) ಒಟ್ಟು ಪ್ರಕ್ರಿಯೆಯಲ್ಲಿನ ಕ್ರಿಯಾಪದ (ಅಂದರೆ ಚಲನೆ) (೨) ಎರಡನೆಯದಾಗಿ ನಾಮಪದ ಅಂದರೆ ಚಲಿಸುತ್ತಿರುವ ವ್ಯಕ್ತಿ (೩) ಮತ್ತು ಕ್ರಿಯೆ ನಡೆಯುವ ಕ್ಷೇತ್ರ.

ಈಗ ಒಂದನ್ನು ಗಮನಿಸುವುದಾದರೆ:

ಕಾರಿಕೆ ೧ ಅಧ್ಯಾಯ ೨:

ಈಗಾಗಲೇ ಚಲಿಸಿರುವುದರಲ್ಲಿ ಚಲನೆ ಇಲ್ಲ

ಚಲಿಸಬೇಕಾಗಿರುವುದರಲ್ಲಿಯೂ ಚಲನೆ ಇಲ್ಲ

ಚಲಿಸಿರುವುದು ಮತ್ತು ಚಲಿಸಬೇಕಾಗಿರುವುದರ

ಹೊರತಾಗಿ ಚಲನೆಯನ್ನು ಗುರುತಿಸಲಾಗುವುದಿಲ್ಲ.

ವರ್ತಮಾನದ ಚಲನೆಯನ್ನು ಗುರುತಿಸಲು ವರ್ತಮಾನದ ಕ್ಷಣವೊಂದನ್ನು ಬೇರ್ಪಡಿಸಬೇಕಾಗುತ್ತದೆ. ಭೂತದ ಚಲನೆಯಾಗಲೀ ಭವಿಷ್ಯದ ಚಲನೆಯಾಗಲೀ ವರ್ತಮಾನದ ಚಲನೆಯಾಗದು. ಭೂತದ ಚಲನೆ ಮತ್ತು ಭವಿಷ್ಯದ ಚಲನೆ ಚಲನೆಯ ಪೂರ್ಣ ಪ್ರಾಪಂಚಿಕ ಸಾಧ್ಯತೆಯಾಗುತ್ತದೆ. ವರ್ತಮಾನದ ಕ್ಷಣವನ್ನು ಬೇರ್ಪಡಿಸಿ ಗ್ರಹಿಸಲು ಸಾಧ್ಯವಾಗದು. ಅಂದರೆ ಚಲನೆಯ ಕ್ಷೇತ್ರದಲ್ಲಿ 'ಚಲನೆ' ಎಂಬ ಸ್ವತಂತ್ರ ಕ್ರಿಯೆಯೊಂದು ಇಲ್ಲವೆಂದಾಯಿತು.

> **ಯಾವುದೇ ಕ್ರಿಯೆಯು ಭೌತಿಕ ಬದಲಾವಣೆ ಅಥವಾ ಲಕ್ಷಣಾ ತ್ಮಕ ಬದಲಾವಣೆಗೆ ಕಾರಣವಾಗುವ ಪ್ರಕ್ರಿಯೆಯಾಗಿರುತ್ತದೆ. ಅದಕ್ಕೆ ಕಾಲದ ವಿಸ್ತರಣೆಯೊಂದು ಅತ್ಯಗತ್ಯ. ಕಾಲದ ವಿಸ್ತರಣೆ ಇಲ್ಲದ ತಾಕ್ಷಣಿಕ ಬದಲಾವಣೆ ಎಂದರೆ ವಸ್ತುವು ಅದೃಶ್ಯವಾಗುವುದೋ ಹೊಸದೊಂದು ಅವಿರ್ಭವಿಸುವುದೋ ಆಗಿರುತ್ತದೆ. ನಾಗಾರ್ಜುನನ ಪ್ರಕಾರ ವರ್ತಮಾನ ಕಾಲದ ಬಿಡಿಗ್ರಹಿಕೆ ಸಾಧ್ಯವಿಲ್ಲ. ಆದುದರಿಂದ ವರ್ತಮಾನದ ಚಲನೆಯೂ ಸಾಧ್ಯವಿಲ್ಲ. ಮಾಧ್ಯಮಿಕರಿಗೆ ಶುದ್ಧ ಕಾಲವಿಲ್ಲ. ಭೂತದಲ್ಲಿ ನಡೆದ ಪಯಣ, ಭವಿಷ್ಯದಲ್ಲಿ ನಡೆವ ಪಯಣ ವರ್ತಮಾನದ ಪಯಣವಾಗಲಾರವು ; ಪಯಣಿಸಿದ್ದಾಗಲೀ ಪಯಣಿಸಬೇಕಾದ್ದಾಗಲೀ ಪಯಣವಾಗಲಾರವು; ಈಗಾಗಲೇ ಪಯಣಿಗನಾಗಿರುವವನಲ್ಲಿ ಇನ್ನೊಂದು ಪಯಣ ಉಂಟಾಗದು ; ಪಯಣಿಗನಲ್ಲದವನಲ್ಲಿ ಪಯಣದ ಸಾಧ್ಯತೆಯೇ ಇಲ್ಲ. ಇವರಿಬ್ಬರ ಹೊರತಾಗಿ ಅನ್ಯನೊಬ್ಬನಿಲ್ಲ. ಹಾಗಾದರೆ ಪಯಣವೆನ್ನುವುದು ಎಲ್ಲಿದೆ? ಈಗ ನಡೆಯುತ್ತಿರುವ ಪಯಣ ಆರಂಭಗೊಂಡದ್ದು ಯಾವಾಗ? ಇಲ್ಲಿ ಕ್ರಿಯೆಯು ಆಗಲೇ ಆರಂಭವಾಗಿಬಿಟ್ಟಿದೆ. ಕ್ರಿಯೆಯೊಂದು ನಡೆಯುತ್ತಿರುವ ಜಾಗದಲ್ಲಿ ಮತ್ತೆ ಹೊಸದಾಗಿ ಕ್ರಿಯೆ ಪ್ರಾರಂಭವಾಗಲು ಸಾಧ್ಯವಿಲ್ಲ.**

ಚಲನೆ, ಕ್ಷೇತ್ರ ಮತ್ತು ನಡೆಯುವ ವ್ಯಕ್ತಿ ಈ ಮೂರು ಈ ಪ್ರಕ್ರಿಯೆಯ ಸಂಬಂಧದಲ್ಲಿ ಉಂಟಾಗಿ ವಿಸರ್ಜನೆಗೊಳ್ಳುತ್ತವೆಯೇ ಹೊರತು ಯಾವುದಕ್ಕೂ ಸ್ವತಂತ್ರ ಅಸ್ತಿತ್ವವಾಗಲೀ, ಘಟನಾಪೂರ್ವ ಅಸ್ತಿತ್ವವಾಗಲೀ ಘಟನೋತ್ತರ ಅಸ್ತಿತ್ವವಾಗಲೀ ಇಲ್ಲ. ಘಟಕಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲದಿರುವುದರಿಂದ ಒಟ್ಟು ಪ್ರಕ್ರಿಯೆಯಲ್ಲಿಯೂ ಸ್ವತಂತ್ರ 'ಭಾವ'ವೊಂದು ಇಲ್ಲ. ಜತೆಗೆ ಪ್ರಕ್ರಿಯೆ ಸಂಭವಿಸುವುದೇ ಪರಾವಲಂಬನೆಯಿಂದಾದುದರಿಂದ ಪರಾವಲಂಬಿಯಾಗಿ ಉಂಟಾದುದಕ್ಕೆ ತನ್ನದೇ ಆದ 'ಅಸ್ತಿತ್ವ'ವಿಲ್ಲ. ಪಯಣಿಗ ಮತ್ತು ಪಯಣದ ಕ್ಷೇತ್ರ–ಇವುಗಳನ್ನು ಹೀಗೆ ಬೇರ್ಪಡಿಸಿಕೊಂಡು ವಿಶ್ಲೇಷಿಸಿದರೆ ಅದೇ ಫಲಿತಾಂಶವೇ ದೊರೆಯುತ್ತದೆ. ಹಾಗೆಯೇ 'ನಿಶ್ಚಲ' ಸ್ಥಿತಿಯೂ ಏಕಾಕಿಯಾಗಿ ಉಂಟಾಗಲಾರದು. ಉದಾಹರಣೆಗೆ:

ಕಾರಿಕ ೧೫ ಅಧ್ಯಾಯ ೨:

ಪಯಣಿಗ ನಿಲ್ಲಲಾರ (ನಿಂತರೆ ಅವನು ಪಯಣಿಗನಲ್ಲ)

ಪಯಣಿಗನಲ್ಲದವನು ನಿಲ್ಲಲಾರ

(ಪಯಣಿಗನಲ್ಲದವನಿಗೆ ಈ ಸಂಭವವಿಲ್ಲ)

ಪಯಣಿಗ ಮತ್ತು ಪಯಣಿಗನಲ್ಲದವರ ಹೊರತಾಗಿ

ಅನ್ಯನೊಬ್ಬ ನಿಲ್ಲಲು ಸಾಧ್ಯವೆ?

ಪಯಣವಿಲ್ಲದೆ ಪಯಣಿಗನೆಂಬುದು ಸಾಧ್ಯವಿಲ್ಲದಿರುವಾಗ 'ಪಯಣಿಗ ನಿಂತಿದ್ದಾನೆ' ಎನ್ನಲು ಸಾಧ್ಯವೆ?

ಈ ಕ್ರಿಯೆಯ ಮೂರು ಅಂಶಗಳನ್ನು ಮೊದಲಲ್ಲಿಯೇ ಗುರುತಿಸಿಕೊಳ್ಳಲಾಗಿದೆ.

(೧) ಒಟ್ಟರ್ಥದಲ್ಲಿ ನಡೆಯುವ ಕ್ರಿಯೆ

(೨) ಅದಕ್ಕೆ ಸಂಬಂಧಿಸಿದ ನಾಮಪದ

(೩) ಕಾರ್ಯ ನಡೆಯುವ ಕ್ಷೇತ್ರ

ನಿರ್ವಿವಾದವಾಗಿ ಇಲ್ಲಿ ಕ್ರಿಯೆಯೊಂದು ಜುರುಗಿದೆ. ಯಾವುದೇ ಕ್ರಿಯೆಯು ಭೌತಿಕ ಬದಲಾವಣೆ ಅಥವಾ ಲಕ್ಷಣಾತ್ಮಕ ಬದಲಾವಣೆಗೆ ಕಾರಣವಾಗುವ ಪ್ರಕ್ರಿಯೆಯಾಗಿರುತ್ತದೆ. ಅದಕ್ಕೆ ಕಾಲದ ವಿಸ್ತರಣೆಯೊಂದು ಅತ್ಯಗತ್ಯ. ಕಾಲದ ವಿಸ್ತರಣೆ ಇಲ್ಲದ ತಾಕ್ಷಣಿಕ ಬದಲಾವಣೆ ಎಂದರೆ ವಸ್ತುವು ಅದೃಶ್ಯವಾಗುವುದೋ ಹೊಸದೊಂದು ಅವಿರ್ಭವಿಸುವುದೋ ಆಗಿರುತ್ತದೆ. ನಾಗಾರ್ಜುನನ ಪ್ರಕಾರ ವರ್ತಮಾನ ಕಾಲದ ಬಿಡಿಗ್ರಹಿಕೆ ಸಾಧ್ಯವಿಲ್ಲ. ಆದುದರಿಂದ ವರ್ತಮಾನದ ಚಲನೆಯೂ ಸಾಧ್ಯವಿಲ್ಲ. ಮಾಧ್ಯಮಿಕರಿಗೆ ಶುದ್ಧ ಕಾಲವಿಲ್ಲ. ಭೂತದಲ್ಲಿ ನಡೆದ ಪಯಣ, ಭವಿಷ್ಯದಲ್ಲಿ ನಡೆವ ಪಯಣ ವರ್ತಮಾನದ ಪಯಣವಾಗಲಾರವು ; ಪಯಣಿಸಿದ್ದಾಗಲೀ ಪಯಣಿಸಬೇಕಾದ್ದಾಗಲೀ ಪಯಣವಾಗಲಾರವು; ಈಗಾಗಲೇ ಪಯಣಿಗನಾಗಿರುವವನಲ್ಲಿ ಇನ್ನೊಂದು ಪಯಣ ಉಂಟಾಗದು ; ಪಯಣಿಗನಲ್ಲದವನಲ್ಲಿ ಪಯಣದ ಸಾಧ್ಯತೆಯೇ ಇಲ್ಲ. ಇವರಿಬ್ಬರ ಹೊರತಾಗಿ ಅನ್ಯನೊಬ್ಬನಿಲ್ಲ. ಹಾಗಾದರೆ ಪಯಣವೆನ್ನುವುದು ಎಲ್ಲಿದೆ?

ಈಗ . ನಡೆಯುತ್ತಿರುವ ಪಯಣ ಆರಂಭ

ಗೊಂಡದ್ದು ಯಾವಾಗ? ಇಲ್ಲಿ ಕ್ರಿಯೆಯು ಆಗಲೇ ಆರಂಭವಾಗಿಬಿಟ್ಟಿದೆ. ಕ್ರಿಯೆಯೊಂದು ನಡೆಯುತ್ತಿರುವ ಜಾಗದಲ್ಲಿ ಮತ್ತೆ ಹೊಸದಾಗಿ ಕ್ರಿಯೆ ಪ್ರಾರಂಭವಾಗಲು ಸಾಧ್ಯವಿಲ್ಲ. ಇಲ್ಲಿನ ಸಮಸ್ಯೆ ಕಾಲಸಂಬಂಧಿಯಾದದ್ದು. ಕಾಲವನ್ನು ಅತ್ಯಂತ ಸೂಕ್ಷ್ಮವಾಗಿ ವಿಭಜಿಸುತ್ತಾ ಹೋದ ಹಾಗೆ ಪಯಣವಿನ್ನೂ ಪ್ರಾರಂಭವಾಗದ ಕಾಲದ ಘಟಕ ವೊಂದು ಸಿಗುತ್ತಲೇ ಹೋಗುತ್ತದೆ. ಪಯಣದ ಆರಂಭ ವನ್ನು ಗ್ರಹಿಸದೇ ಇದ್ದಾಗ, ಪಯಣಿಸಿರುವುದು, ಪಯಣಿ ಸುತ್ತಿರುವುದು ಮತ್ತು ಪಯಣಿಸಬೇಕಾದ್ದನ್ನು ಏನೆಂದು ಗ್ರಹಿಸುವುದು?

ಚಲನೆ ಎಂಬುದು ಅನೇಕ ಬಿಂದುಗಳ ಪಥದಲ್ಲಿ ವರ್ಗಾವಣೆಗೊಂಡಾಗ ನಿರ್ದಿಷ್ಟ ಬಿಂದುವಿನ ಕಾಲ ದೊಂದಿಗೆ ಮಾತ್ರ ಗ್ರಹಿಸಲು ಸಾಧ್ಯ. ಅಂದರೆ ಪಯಣಿಗ, ಪಯಣದ ಕ್ಷೇತ್ರ ಮತ್ತು ಕಾಲದ ಸಂಬಂಧವನ್ನಾಗಿ ಪಯಣವನ್ನು ಗ್ರಹಿಸಬಹುದೇ ಹೊರತು, ಕಾಲ, ದೇಶ ಮತ್ತು ಕರ್ತೃವಿನ ನೆರವಿಲ್ಲದೆ ಸಿದ್ಧಪಡಿಸಬಲ್ಲ ಸ್ವತಂತ್ರ ಪ್ರಕ್ರಿಯೆಯಲ್ಲ. ನಾಗಾರ್ಜುನ ತರ್ಕದ ಮೂಲಕವೂ ಇದನ್ನು ಸಿದ್ಧಪಡಿಸುತ್ತಿದ್ದಾನೆ. ಇಲ್ಲಿ ಸಂಬಂಧದಿಂದಾದ ಸೃಷ್ಟಿ, ನಿರಸನ ಪುನಾರಚನೆ. . ಹೀಗೆ ನಿರಂತರ ಕ್ರಿಯಾ ಸರಣಿಯೊಂದು ಇದೆಯೇ ಹೊರತು ಪಯಣವೆಂಬ ಸ್ವತಂತ್ರ ಕ್ರಿಯೆ ಇಲ್ಲ. ಇದೊಂದು ಕೂದಲು ಸೀಳುವ ಉದ್ಯೋಗದಂತೆ ಕಾಣಿಸುತ್ತದೆಯಲ್ಲವೆ? ಲೋಕ ವಿವರ ಣೆಯ ಸೂಕ್ಷ್ಮ ಸ್ತರಗಳಿಗೆ ಹೋದಾಗ ಕಾಲ, ದೇಶ ಇತ್ಯಾದಿಗಳು ತಟಸ್ಥವಾಗಿಬಿಡುತ್ತವೆ. ಅವುಗಳಿಲ್ಲದ ಕಡೆ ವ್ಯವಹರಿಸಿ ಅಭ್ಯಾಸವಿಲ್ಲದವರಿಗೆ ಇದು ತುಂಬಾ ಆಯಾ ಸದ್ಧ ಕೆಲಸ. ಆದರೆ ಇದು ಕ್ರಮಿಸಲೇಬೇಕಾದ ದಾರಿ. ಕೆಲ ವರು ಇದನ್ನು ದಾಟಲು ಧ್ಯಾನದ ಊರುಗೋಲನ್ನು ಬಳಸುತ್ತಾರೆ.

ಈ ವಾದದ ಸಾರಾಂಶವನ್ನು ಹೀಗೆ ಸಂಗ್ರಹಿಸಬ ಹುದು.

೧. ಈಗಾಗಲೇ ಕ್ರಮಿಸಿರುವುದರಲ್ಲಿ ಪಯಣ ವೆಂಬುದು ನಡೆಯುತ್ತಿಲ್ಲ. ಪಯಣವೆಂಬುದು ಇಲ್ಲಿ ಮುಗಿದು ಹೋಗಿದೆ.

೨. ಇನ್ನೂ ಕ್ರಮಿಸಬೇಕಾಗಿರುವುದರಲ್ಲಿ ಪಯಣ ವಿನ್ನೂ ಪ್ರಾರಂಭವಾಗಿಲ್ಲದಿರುವುದರಿಂದ ಅಲ್ಲಿಯೂ ಪಯಣವೆಂಬುದು ಇಲ್ಲ.

೩. ಮೇಲಿನ (೧) ಮತ್ತು (೨) ಪಯಣವೆಂಬ ಕ್ರಿಯೆಯ ಪೂರ್ಣ ಮೊತ್ತವಾಗಿರುವುದರಿಂದ ಇದರ ಹೊರತಾಗಿ ಮತ್ತೊಂದು ಮೂರನೆಯ ಬಿಂದುವೊಂದ ರಲ್ಲಿ ಪಯಣವೆಂಬುದು ಇರಲು ಸಾಧ್ಯವಿಲ್ಲ.

೪. ಪಯಣ ಎನ್ನುವುದು ಸ್ವತಂತ್ರ ಪ್ರಕ್ರಿಯೆ ಎಂಬ ಸಾಮಾನ್ಯ ತಿಳುವಳಿಕೆ ಇಲ್ಲಿ ನಿರಾಕರಣೆಗೊಳ್ಳುತ್ತಿ ದೆಯೇ ಹೊರತು ಅದರ ಕ್ರಿಯಾ ಸಾಮರ್ಥ್ಯವಲ್ಲ. ಈ ಕ್ರಿಯಾ ಸಾಮರ್ಥ್ಯವು ಕಾಲ, ದೇಶ ಮತ್ತು ಕರ್ತೃವಿನೊ ಡನೆ ಏರ್ಪಡುವ ಸಂಬಂಧ, ಅದರ ನಿರಸನ, ಪುನರ್ ರಚನೆ. . . . ಹೀಗೆ ಸಂಬಂಧ ಸರಣಿಯ ಫಲವಾಗಿದೆ.

೫. ಈ ಘಟಕಗಳಿಗೆ ಸ್ವಯಂ ಅಸ್ತಿತ್ವವಿಲ್ಲ. ಸ್ವ-ಭಾವ ಇಲ್ಲದಿರುವುದರಿಂದ ಸಂಬಂಧಗಳು ಸಾಧ್ಯ. ಈ ಅಸ್ತಿತ್ವ ಸಂಬಂಧಗಳಿಂದುಟಾದುದರಿಂದ ಅವುಗಳನ್ನು ಮುರಿದು ಕಟ್ಟುವುದು ಸಾಧ್ಯ. ಹೀಗೆ ಮುರಿವ–ಕಟ್ಟುವ, ಬರುವ–ಹೋಗುವ ಲೋಕಸತ್ಯವನ್ನೇ 'ಪ್ರತೀತ್ಯ ಸಮು ತ್ಪಾದ' ಎನ್ನಲಾಗಿದೆ. □

ಹಕ್ಕಿಯ ಕೂಗು

'...ಕನ್ನವನಿಕ್ಕಿ; ಉದಕವ ತಂದು
ಲಿಂಗಕ್ಕೆ ಮಜ್ಜನವಕ್ಕೆರೆವ ಹಗಲುಗಳ್ಳರ
ಮೆಚ್ಚುವನೇ ಚನ್ನ ಮಲ್ಲಿಕಾರ್ಜುನ'– ಅಕ್ಕಮ.

–೧–

ಸೀಮೆ ಎಣ್ಣೆ–ಸಿಲಿಂಡರಿಗೆ ನಿಂತ
ಕ್ಯೂನಲ್ಲಿ 'ನೋಸ್ಟಾಕ್' ಬೋರ್ಡ್
ಹಂಗಿಸುತ್ತದೆ.
ಹೊಟ್ಟೆ ಮೇಲೆ ಹೊಡೆಯುವ
'ಅಭಾವ' ಸೃಷ್ಟಿಸುವ ತಂತ್ರ
ಪ್ರಜಾ ಪ್ರಭುಗಳ ದರ್ಬಾರಿನ ಸೂತ್ರ!

–೨–

ಹಗಲು ದರೋಡೆಯ ಲೀಸ್ಟಿನಲಿ
ರಸೀದಿಕೊಡದ ಡೊನೇಷನ್ನು
ಅಂತಸ್ತುಗಳಲಿ ಶಿಕ್ಷಣ ದೀಕ್ಷೆ
ಪ್ರಜಾ ತಂತ್ರದ ಪ್ರನಾಳ ಶಿಶು!

–೩–

ಬ್ಯಾಂಕಿನ ಸಾಲಕೆ ಹೊತ್ತೆಯಿಟ್ಟ
ಕಣ್ಣೊಳಗೆ ನಿಂತ ನೀರು
ಕವಿತೆ ಸತ್ತ ಮನೆಯಲಿ
ಬಾಲ ಮುದುರಿ ಮೂಲೆಯಲಿ
ನಾಯಿಯ ಮುಗಿಲು ಮುಟ್ಟುವ ಅಳಲು!

–೪–

ಕರಗುವುದಿಲ್ಲ ಕಲ್ಲು
ಕೂಗುವುದಿಲ್ಲ ಕೋಡಿ ಬಿದ್ದ ಕೆರೆಯ ಮೇಲೆ
'ಬಸವ'
ಮುಚ್ಚುವುದಿಲ್ಲ ಬಟ್ಟೆ ಸತ್ಯದ ಬೆತ್ತಲಿಗೆ
'ನ್ಯಾಯ'
ಏನೆಲ್ಲಾ ಕೂಗುತಿವೆ ಹಕ್ಕಿ
ದಿಕ್ಕಾರ ಎದೆಯಲಿ

○ ಟಿ.ಎಸ್. ರಾಜೇಂದ್ರ ಪ್ರಸಾದ್

ಕರ್ನಾಟಕದ ಬಜೆಟ್ಟು-ಬಡವರಿಗೆ ರಪಟ್ಟು!



ಡಾ. ಟಿ.ಆರ್. ಚಂದ್ರಶೇಖರ್

ಕರ್ನಾಟಕದ ೨೦೦೯-೧೦ನೆಯ ಸಾಲಿನ ಬಜೆಟ್ಟನ್ನು ಹಣಕಾಸು ಮಂತ್ರಿಗಳೂ ಆಗಿರುವ ಶ್ರೀಬಿ.ಎಸ್.ಯಡಿಯೂರಪ್ಪ ಅವರು ಫೆಬ್ರವರಿ ೨೦ ರಂದು ಮಂಡಿಸಿದ್ದಾರೆ. ಅದರ ಬಗ್ಗೆ ಆಳುವ ಪಕ್ಷಕ್ಕೆ ಬಹಳ ನಿರೀಕ್ಷೆಗಳಿದ್ದಂತೆ ಕಾಣಲಿಲ್ಲ. ಬಹಳ ಉತ್ಸಾಹಿತರಾಗಿ ಅವರು ಅದರ ಬಗ್ಗೆ ಮಾತನಾಡುತ್ತಿಲ್ಲ. ಈ ಬಜೆಟ್ಟಿನ ವಿಶೇಷತೆಯೆಂದರೆ ಇದು ಯಾವುದೇ ಅರ್ಥಶಾಸ್ತ್ರದ ಅಥವಾ ರಾಜ್ಯಶಾಸ್ತ್ರದ ನಿಯಮಗಳಿಗೆ ದಕ್ಕುವುದಿಲ್ಲ. ಅವುಗಳನೆಲ್ಲ ಮೀರಿದ ಬಜೆಟ್ಟು ಇದಾಗಿದೆ. ಈ ಹಣಕಾಸು ಮಂತ್ರಿಗಳ ಹಿಂದಿನ ಬಜೆಟ್ಟುಗಳ ಬಗ್ಗೆ ಹೇಳಿದಂತೆ ಇದರ ಬಗ್ಗೆಯೂ ಹಣಕಾಸನ್ನು ಸಂಘಟಿತ ರೂಪದಲ್ಲಿ ಬಳಸುವುದಕ್ಕೆ ಪ್ರತಿಯಾಗಿ ಅಸಂಖ್ಯಾತ ಕಾರ್ಯಕ್ರಮಗಳ ಮೇಲೆ ಹಂಚಲಾಗಿದೆ ಎಂಬುದನ್ನು ಹೇಳಲೇಬೇಕಾಗಿದೆ. ಈ ಬಜೆಟ್ಟಿನ ಸಂದರ್ಭದಲ್ಲಿ ಹೂಡಿದ ಬಂಡವಾಳಕ್ಕೆ ಪ್ರತಿಫಲವೇನು ಎಂಬುದರ ಬಗ್ಗೆಯು ಸರ್ಕಾರಕ್ಕೆ ಕಾಳಜಿ ಇದ್ದಂತಿಲ್ಲ.

ಕರ್ನಾಟಕದ 2009-10ನೆಯ ಸಾಲಿನ ಬಜೆಟ್ಟನ್ನು ಹಣಕಾಸು ಮಂತ್ರಿಗಳೂ ಆಗಿರುವ ಶ್ರೀಬಿ.ಎಸ್.ಯಡಿಯೂರಪ್ಪ ಅವರು ಫೆಬ್ರವರಿ 20 ರಂದು ಮಂಡಿಸಿದ್ದಾರೆ. ಅದರ ಬಗ್ಗೆ ಆಳುವ ಪಕ್ಷಕ್ಕೆ ಬಹಳ ನಿರೀಕ್ಷೆಗಳಿದ್ದಂತೆ ಕಾಣಲಿಲ್ಲ. ಬಹಳ ಉತ್ಸಾಹಿತರಾಗಿ ಅವರು ಅದರ ಬಗ್ಗೆ ಮಾತನಾಡುತ್ತಿಲ್ಲ. ಈ ಬಜೆಟ್ಟಿನ ವಿಶೇಷತೆಯೆಂದರೆ ಇದು ಯಾವುದೇ ಅರ್ಥಶಾಸ್ತ್ರದ ಅಥವಾ ರಾಜ್ಯಶಾಸ್ತ್ರದ ನಿಯಮಗಳಿಗೆ ದಕ್ಕುವುದಿಲ್ಲ. ಅವುಗಳನೆಲ್ಲ ಮೀರಿದ ಬಜೆಟ್ಟು ಇದಾಗಿದೆ. ಈ ಹಣಕಾಸು ಮಂತ್ರಿಗಳ ಹಿಂದಿನ ಬಜೆಟ್ಟುಗಳ ಬಗ್ಗೆ ಹೇಳಿದಂತೆ ಇದರ ಬಗ್ಗೆಯೂ ಹಣಕಾಸನ್ನು ಸಂಘಟಿತ ರೂಪದಲ್ಲಿ ಬಳಸುವುದಕ್ಕೆ ಪ್ರತಿಯಾಗಿ ಅಸಂಖ್ಯಾತ ಕಾರ್ಯಕ್ರಮಗಳ ಮೇಲೆ ಹಂಚಲಾಗಿದೆ ಎಂಬುದನ್ನು ಹೇಳಲೇ ಬೇಕಾಗಿದೆ. ಈ ಬಜೆಟ್ಟಿನ ಸಂದರ್ಭದಲ್ಲಿ ಹೂಡಿದ ಬಂಡವಾಳಕ್ಕೆ ಪ್ರತಿಫಲವೇನು ಎಂಬುದರ ಬಗ್ಗೆಯು ಸರ್ಕಾರಕ್ಕೆ ಕಾಳಜಿ ಇದ್ದಂತಿಲ್ಲ. ಅಲ್ಲಿ ಒಂದು ಕೋಟಿ, ಇಲ್ಲಿ ಎರಡು ಕೋಟಿ, ಇನ್ನೆಲ್ಲೋ ಐದು ಕೋಟಿ. ಹೀಗೆ ಹಣವನ್ನು ಎಲ್ಲ ಕಡೆಗೂ ಹಂಚಲಾಗಿದೆ. ಇಡೀ ಬಜೆಟ್ಟಿನ ಸಮಗ್ರ ಪರಿಣಾಮ ಇಂತಹ ಹಂಚಿಕೆಯಿಂದಾಗಿ ಅಭಿವೃದ್ಧಿಯ ಮೇಲೆ, ಬಡತನದ ಮೇಲೆ, ಲಿಂಗ ಸಮಾನತೆಯ ಮೇಲೆ ದಟ್ಟವಾಗಿರಲು ಸಾಧ್ಯವಿಲ್ಲ. ಈ ಬಜೆಟ್ಟಿನ ಆದ್ಯತೆಗಳೇನು ಎಂಬುದಕ್ಕೆ ಹಣಕಾಸು ಮಂತ್ರಿಗಳು ದೊಡ್ಡ ಪಟ್ಟಿಯನ್ನೆ ಕೊಟ್ಟಿದ್ದಾರೆ. ಅವರಿಗೆ ಎಲ್ಲವು ಆದ್ಯತೆಯೇ! ಕರ್ನಾಟಕವು 2008-09ರಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬಜೆಟ್ಟಿನಲ್ಲಿ ನೀಡಲಾಗಿದ್ದ ಹಣಕಾಸನ್ನು ಬಳಸಿಕೊಳ್ಳಲಾಗಿಲ್ಲ. ಯೋಜನಾ ವೆಚ್ಚಕ್ಕೆ ಮೀಸಲಿಟ್ಟ ಹಣವನ್ನು ಅದಕ್ಕೆ ಪೂರ್ಣವಾಗಿ ವ್ಯಯಿಸಲು ಸಾಧ್ಯವಾಗಿಲ್ಲ. ಸರ್ಕಾರವು ರಾಜ್ಯದ ಅಭಿವೃದ್ಧಿ 2020ರಲ್ಲಿ ಹೇಗಿರಬೇಕು ಎಂಬುದರ ಬಗ್ಗೆ ಮುನ್ನೋಟ ವರದಿಯೊಂದನ್ನು ಸಿದ್ಧಪಡಿಸಿದೆ. ಆದರೆ ಅಂತಹ ವರದಿಯ ಪ್ರಭಾವ ನಮ್ಮ ಬಜೆಟ್ಟಿನ ಮೇಲೆ ಬಿದ್ದಂತೆ ಕಾಣುವುದಿಲ್ಲ. ಲಿಂಗ ಸಮಾನತೆ ಬಗ್ಗೆ ಬಜೆಟ್ಟಿನಲ್ಲಿ ಯಾವುದೇ ಮಹತ್ವಾಕಾಂಕ್ಷೆಯ ಗುರಿಗಳಿಲ್ಲ. ಅದು ಪ್ರಸ್ತುತ ಸರ್ಕಾರಕ್ಕೆ ಅಗತ್ಯವಾದ ಸಂಗತಿಯಾಗಿರಲಿಕ್ಕಿಲ್ಲ.

ಕರ್ನಾಟಕದ ಹಣಕಾಸು ಮಂತ್ರಿಗಳೂ ಆಗಿರುವ ಮುಖ್ಯಮಂತ್ರಿ ಶ್ರೀಬಿ.ಎಸ್.ಯಡಿಯೂರಪ್ಪ ಅವರು 2009-10ನೆಯ ಸಾಲಿನ ರೂ 58031.36 ಕೋಟಿ ಗಾತ್ರದ ಬಜೆಟ್ಟನ್ನು(ಬ.ಅಂ) ಮಂಡಿಸಿದ್ದಾರೆ. ಇದು ಕಳೆದ ವರ್ಷದ ಬಜೆಟ್ಟಿನ ಗಾತ್ರವಾದ ರೂ 55273.94 ಕೋಟಿಗಿಂತ(ಬ.ಅಂ)ಶೇ 5 ರಷ್ಟು ಅಧಿಕವಾಗಿದೆ. ಕಳೆದ ವರ್ಷ 2008-09ರ ಬಜೆಟ್ಟಿನಲ್ಲಿ ನಿಗದಿ ಪಡಿಸಿದ್ದ ಯೋಜನಾ ವೆಚ್ಚ ರೂ 25952.84 ಕೋಟಿ. ಅದನ್ನು 2009-10ನೆಯ ಸಾಲಿನಲ್ಲಿ ರೂ29,500 ಕೋಟಿಗೆ ಹೆಚ್ಚಿಸಲಾಗಿದೆ. ಯೋಜನಾವೆಚ್ಚದ ಏರಿಕೆಯು 2008-09ರಿಂದ 200910ರ ಅವಧಿಯಲ್ಲಿ ಶೇ13.67 ರಷ್ಟಾಗುತ್ತದೆ. ಆದರೆ ಹಣಕಾಸು ಮಂತ್ರಿಗಳು ತಮ್ಮ ಬಜೆಟ್ಟಿನಲ್ಲಿ ಯೋಜನಾ ಗಾತ್ರವನ್ನು ಬಹಳ ಏರಿಸಿಬಿಟ್ಟಿದ್ದೇವೆಂಬುದನ್ನು ತೋರಿಸಲು ಪ್ರಸ್ತುತ ಸಾಲಿನ ಯೋಜನಾ ವೆಚ್ಚವಾದ ರೂ29500 ಕೋಟಿಯನ್ನು ಹಿಂದಿನ ಸಾಲಿನ ಅಂದರೆ 2008-09ನೆಯ ಸಾಲಿನ ಯೋಜನಾ ವೆಚ್ಚವಾದ ರೂ 25952 ಕೋಟಿಗೆ ಹೋಲಿಸುವುದಕ್ಕೆ ಪ್ರತಿಯಾಗಿ 2007-08ನೆಯ ಸಾಲಿನ ಯೋಜನಾ ವೆಚ್ಚವಾದ ರೂ 17227 ಕೋಟಿಗೆ ಹೋಲಿಸಿ ಅದು ಶೇ 71.24ರಷ್ಟು ಅಧಿಕಗೊಂಡಿದೆ ಎಂಬುದನ್ನು ತಮ್ಮ ಸರ್ಕಾರದ ಬೃಹತ್ ಸಾಧನೆಯನ್ನುವಂತೆ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿಕೊಂಡಿದ್ದಾರೆ(ನೋಡಿ-ಬಜೆಟ್ ಭಾಷಣದ ಕಂಡಿಕೆ ಸಂಖ್ಯೆ: 41). ಕಳೆದ ವರ್ಷ 2008-09ರಲ್ಲಿ ನಿಗದಿ ಪಡಿಸಿದ್ದ ಬಜೆಟ್ಟಿನ ಗಾತ್ರ ರೂ 55273.94 ಕೋಟಿ. ಆದರೆ ಈಗ ಗೊತ್ತಾಗಿರುವಂತೆ 2008-09ನೆಯ ಬಜೆಟ್ಟಿನ ಪರಿಷ್ಕೃತ ಗಾತ್ರ ರೂ 53096 ಕೋಟಿ ಮಾತ್ರ, ಅಂದರೆ ಇಲ್ಲಿ ರೂ2177.94 (ಶೇ4)ಕುಸಿತ ಉಂಟಾಗಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ 2008-09ರ ಬಜೆಟ್ಟಿನಲ್ಲಿ ನಿಗದಿ ಪಡಿಸಿದ್ದ ಕಂದಾಯ ಸಂಗ್ರಹ ಗುರಿ ರೂ 47240 ಕೋಟಿ. ಆದರೆ ಪರಿಷ್ಕೃತ ಅಂದಾಜಿನ ಪ್ರಕಾರ ಸರ್ಕಾರವು 2008-09ರಲ್ಲಿ ಸಂಗ್ರಹಿಸಿರುವ ಕಂದಾಯ ಮೊತ್ತ ಕೇವಲ ರೂ 42818 ಕೋಟಿ ಮಾತ್ರ, ಇಲ್ಲಿ ಕಂದಾಯ ಸಂಗ್ರಹ ಶೇ 9.36ರಷ್ಟು ಕಡಿಮೆಯಾಗಿದೆ. ಇದು ಸರ್ಕಾರದ ವೈಫಲ್ಯವಲ್ಲವೆ? ಬಜೆಟ್ಟಿನಲ್ಲಿ 2009-10 ಸಾಲಿನ ಕಂದಾಯ ಸಂಗ್ರಹದ ಗುರಿ ರೂ48389 ಕೋಟಿಯೆಂದು ನಿಗದಿ ಪಡಿಸಲಾಗಿದೆ. ಕಳೆದ ವರ್ಷ ಕಂದಾಯ ಸಂಗ್ರಹವು ಶೇ9.36ರಷ್ಟು ಕುಸಿದಿರುವ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷ ಅದು ಶೇ13.01ರಷ್ಟು ಅಧಿಕವಾಗುತ್ತದೆಯೆಂದು ಆರ್ಥಿಕ ಮುಗ್ಗಟ್ಟಿನ ಸಂದರ್ಭದಲ್ಲಿ ನಿರೀಕ್ಷಿಸುವುದು ಅವಾಸ್ತವಿಕವಾಗುತ್ತದೆ. ಬಂಡವಾಳ ವೆಚ್ಚದಲ್ಲೂ ಶೇ2 ರಷ್ಟು ಕಡಿತ ಉಂಟಾಗಿದೆ.

ಸರ್ಕಾರವು 2008-09ನೆಯ ಸಾಲಿನ ಯೋಜನಾ ವೆಚ್ಚವಾದ ರೂ25952.94 ಕೋಟಿಯಲ್ಲಿ 2008ರ ಡಿಸೆಂಬರ್ ವರೆಗೆ ವ್ಯಯಿಸಿರುವ ಮೊತ್ತ ಕೇವಲ ರೂ 15 ರಿಂದ 16 ಸಾವಿರ ಕೋಟಿಯೆಂದು ಹೇಳಲಾಗಿದೆ. ಉಳಿದಿದ್ದನ್ನು ಮೂರು ತಿಂಗಳಲ್ಲಿ ಸರ್ಕಾರವು ಖರ್ಚು ಮಾಡಬಲ್ಲುದೆ?. ಯೋಜನೆಯ ಗಾತ್ರವನ್ನು ಹೆಚ್ಚಿಸಿಬಿಟ್ಟರೆ ಮುಗಿಯಲಿಲ್ಲ. ಅದನ್ನು ಅರಗಿಸಿಕೊಳ್ಳುವ ಸಾಮರ್ಥ್ಯ ಆರ್ಥಿಕತೆಗಿರಬೇಕು. ಆದರೆ ನಮ್ಮ ಬಜೆಟ್ಟುಗಳು ಸಮಾಜದ ಮಧ್ಯಮ ವರ್ಗವನ್ನು ಮಾತ್ರ ಅಂದರೆ ಎಲೈಟು ವರ್ಗವನ್ನು ಮಾತ್ರ ಒಳಗೊಳ್ಳುತ್ತವೆ. ಈ ಮಧ್ಯಮ ವರ್ಗದ ಗಾತ್ರವು ಜಾಗತೀಕರಣದ ಸಂದರ್ಭದಲ್ಲಿ ವಿಸ್ತೃತಗೊಳ್ಳುತ್ತಿಲ್ಲ. ಅದರ ಗಾತ್ರ ಇಂದಿಗೂ ಕರ್ನಾಟಕದಲ್ಲಿ 100 ಲಕ್ಷ ಮೀರುವುದಿಲ್ಲ. ಅಲ್ಲಿ ಮಾತ್ರವೆ ಹಣವನ್ನು ಖರ್ಚು ಮಾಡಬೇಕೆಂದರೆ ಅಷ್ಟು ಮೊತ್ತವನ್ನು ಖರ್ಚು ಮಾಡುವುದು ಸಾಧ್ಯವಾಗುವುದಿಲ್ಲ. ನಮ್ಮ ರಾಜ್ಯದ ಯೋಜನಾ ಪ್ರಭೃತಿಗಳಿಗೆ ಬಡವರನ್ನು, ಕೂಲಿಕಾರರನ್ನು, ವಂಚಿತರನ್ನು, ಮಹಿಳೆಯರನ್ನು ಒಟ್ಟಾರೆ ಜನರನ್ನು ಒಳಗೊಳ್ಳುವಂತೆ ಯೋಜನೆ ಸಿದ್ಧಪಡಿಸುವುದೇ ಗೊತ್ತಿಲ್ಲ. ಬಡವರನ್ನು, ಅನಕ್ಷರಸ್ಥರನ್ನು, ಮಹಿಳೆಯರನ್ನು, ವಂಚಿತರನ್ನು ಒಳಗೊಳ್ಳದೆ ಬೃಹತ್ ಪ್ರಮಾಣದಲ್ಲಿ ಯೋಜನಾ ಮೊತ್ತವನ್ನು ವ್ಯಯಿಸುವುದು ಸಾಧ್ಯವಾಗುವುದಿಲ್ಲ. ಆದರೆ ಜನರನ್ನು ಒಳಗೊಳ್ಳುವಂತೆ ಯೋಜನೆ ಸಿದ್ಧಪಡಿಸು

ವುದು ಸುಲಭದ ಸಂಗತಿಯೂ ಅಲ್ಲ. ಇದು ನಮ್ಮ ಮುಂದಿರುವ ಮುಖ್ಯ ದೊಡ್ಡ ಸಮಸ್ಯೆ.

ಜಾತಿವಾದಿ ಬಜೆಟ್ಟು!

ಈ ಪ್ರಬಂಧದ ಸಂದರ್ಭದಲ್ಲಿ 'ಜಾತಿವಾದಿ' ಎಂಬುದನ್ನು ವಿಶಿಷ್ಟವಾದ ಮತ್ತು ವಿಸ್ತೃತವಾದ ಅರ್ಥದಲ್ಲಿ ಬಳಸಲಾಗಿದೆ. ಸಾಮಾನ್ಯವಾಗಿ ದೈನಂದಿನ ವ್ಯವಹಾರದಲ್ಲಿ ಬಳಸುವ ಅರ್ಥದಲ್ಲಿ ಅದನ್ನು ಇಲ್ಲಿ ಬಳಸುತ್ತಿಲ್ಲ. ಯಾವುದೋ ಒಂದು ಜಾತಿಗೆ ಪರವಾದ ವಿಚಾರ-ಆಚಾರವನ್ನು ಇಲ್ಲಿ ಜಾತಿವಾದಿಯೆಂದು ಬಳಸುತ್ತಿಲ್ಲ. ಸರ್ಕಾರವು ಒಂದು ಜಾತಿಯ ಪರವಾಗಿ ರಾಜರೋಷವಾಗಿ ನಡೆದುಕೊಳ್ಳಲು ಬರುವುದಿಲ್ಲವೆಂಬುದೇನೋ ನಿಜ. ಆದರೆ ಅದು ಒಳಗೊಳಗೆ ಜಾತಿಯೊಂದರ ಪರವಾಗಿ ತಂತ್ರ-ಕುತಂತ್ರವನ್ನು ನಡೆಸಬಹುದು. ಆದರೆ ಅದು ಗೋಪ್ಯವಾಗಿರಬೇಕಾಗುತ್ತದೆ.ಅಷ್ಟೇ! ಬಹಿರಂಗವಾಗಿ ಸರ್ಕಾರವು ಒಂದು ಜಾತಿಯ ಪರವಾಗಿ ಬಜೆಟ್ಟಿನಲ್ಲಿ ಅನುದಾನ ಮೀಸಲಿಡಲು ಸಾಧ್ಯವಿಲ್ಲ. ಮಾನ್ಯ ಯಡಿಯೂರಪ್ಪ ಅವರು ಮಂಡಿಸಿರುವ ಬಜೆಟ್ಟಿನಲ್ಲಿ ಸರ್ಕಾರದ, ಅಂದರೆ ಸರಿಸುಮಾರು ಆರು ಕೋಟಿ ಜನರ ಬೆವರಿನ ಫಲವಾದ ತೆರಿಗೆ ಹಣವನ್ನು ಆಯ್ದ ಜಾತಿಗಳ ಮಠಗಳಿಗೆ-ಸ್ವಾಮಿಗಳಿಗೆ ಹುಂಡಿಯನ್ನು ಹಂಚಿದಂತೆ ಹಂಚಿರುವುದನ್ನು ಇಲ್ಲಿ 'ಜಾತಿವಾದಿ'ಯೆಂದು ವಿವರಿಸಿಕೊಳ್ಳಲಾಗಿದೆ. ಇಲ್ಲಿ ಬಜೆಟ್ಟನ್ನು ಜಾತಿವಾದಿಯೆಂದು ಕರೆಯಲಾಗಿದೆ ವಿನಾ ವ್ಯಕ್ತಿಗಳನ್ನಲ್ಲ. ಜಾತಿಗಳನ್ನು ಆಧಾರವಾಗಿಟ್ಟುಕೊಂಡು ಸರ್ಕಾರವೊಂದು ಬಹಿರಂಗವಾಗಿ ಬಜೆಟ್ಟಿನಲ್ಲಿ ಅನುದಾನವನ್ನು ಮಠಗಳಿಗೆ ಮೀಸಲಿಡುವುದು ಜನತಂತ್ರ ವಿರೋಧಿ ಮಾತ್ರವಲ್ಲ ಅದು ಸಾಮಾಜಿಕವಾಗಿಯೂ ಅಸಮರ್ಥನೀಯ. ಇದೊಂದು ತಾರತಮ್ಯವಾದಿ ಬಜೆಟ್ಟಾಗಿದೆ. ಇದನ್ನು ಅರ್ಥಶಾಸ್ತ್ರದ ಅಥವಾ ರಾಜ್ಯಶಾಸ್ತ್ರದ ನಿಯಮಗಳ ಆಧಾರದ ಮೇಲೆ ಸಮರ್ಥಿಸಿಕೊಳ್ಳುವುದು ಮತ್ತು ಚರ್ಚಿಸುವುದು ಸಾಧ್ಯವಿಲ್ಲ. 'ಧರ್ಮಸಿಂಧು'ವಿಗೆ ಪ್ರತಿಯಾಗಿ ಇಂದಿನ ದಿನಮಾನದಲ್ಲಿ ಪ್ರಚುರದಲ್ಲಿರುವ ಪಾರಮಾರ್ಥಿಕ ಪರಿಭಾಷೆಯಾದ 'ಅನುಕೂಲಸಿಂಧು'ವಿನ ಅಡಿಯಲ್ಲಿ ಹುಂಡಿಗೆ ಬಜೆಟ್ಟನ್ನು ಸಮರ್ಥಿಸಿಕೊಳ್ಳಬಹುದಾಗಿದೆ(ಪ್ರಜಾವಾಣಿಯು ತನ್ನ 21.02-09ರ ಸಂಪಾದಕೀಯದಲ್ಲಿ ಇದನ್ನು 'ಹುಂಡಿ ಬಜೆಟ್ಟು' ಎಂದು ಕರೆದಿದೆ)

ಈ ಬಜೆಟ್ಟನ್ನು ಏನೆಂದು ಕರೆಯಬೇಕೆಂಬುದೇ ತಿಳಿಯುತ್ತಿಲ್ಲ. ಅದನ್ನು ಜಾತಿವಾದಿ ಬಜೆಟ್ಟೆಂದು ಕರೆಯಬೇಕೊ ಅಥವಾ ತಾರತಮ್ಯವಾದಿ ಬಜೆಟ್ಟೆಂದೊ ಅಥವಾ ಪಾರಮಾರ್ಥಿಕವಾದಿಯೆಂದೋ ಅಥವಾ ಪ್ರಾದೇಶಿಕ ಅಸಮಾನತೆಯನ್ನು ಪೋಷಿಸುವ ಬಜೆಟ್ಟೆಂದು ಕರೆಯಬೇಕೋ ಗೊಂದಲವಾಗಿ ಬಿಟ್ಟಿದೆ. ಅದು ಈ ಎಲ್ಲ ವಿಶೇಷಣಗಳಿಗೂ ಅರ್ಹವಾದ ಬಜೆಟ್ಟಾಗಿರುವುದು ಸಮಸ್ಯೆಯಾಗಿ ಬಿಟ್ಟಿದೆ.

ಈ ಬಜೆಟ್ಟಿನಲ್ಲಿ ಅನುದಾನ ಪಡೆದಿರುವ ಮಠಗಳಿಗೆ ತಾವು ಪಡೆದ ಅನುದಾನ ಬಳಸುವುದಕ್ಕೆ ಸಂಬಂಧಿಸಿದಂತೆ ಏನಾದರೂ ಮಾರ್ಗಸೂಚಿಗಳನ್ನು ಸರ್ಕಾರವು ನಿಯಮಿಸಿದೆಯೇ? ಅನುದಾನದಲ್ಲಿ ಇಂತಿಷ್ಟನ್ನು ಸಂವಿಧಾನದ ಕಟ್ಟಳೆಯಂತೆ ಪ.ಜಾ.ಮತ್ತು ಪ.ಪಂಗಳಿಗೆ ಮೀಸಲಿಡಬೇಕೆಂಬ ನಿಯಮವನ್ನು ಸರ್ಕಾರವು ಮಠಗಳಿಗೆ ವಿಧಿಸಿದೆಯೇ? ಇಲ್ಲದಿದ್ದರೆ ಸರ್ಕಾರವು ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ಬಿಟ್ಟದೆಯೆಂದು ತಿಳಿಯಬಹುದೇ? ಮಠಗಳಿಗೆ ನೀಡಿರುವ ಅನುದಾನಕ್ಕೆ ಸಂಬಂಧಿಸಿದಂತೆ ಎಷ್ಟು ಭಾಗ ಸದರಿ ಜಾತಿಗಳೊಳಗಿರುವ ಬಡವರಿಗೆ ಒದಗಬೇಕು ಎಂಬುದಕ್ಕೆ ಸರ್ಕಾರವು ಏನು ನಿರ್ಬಂಧವನ್ನು ಹಾಕಿದೆ? ಈ ಮಠಗಳು ತಾವು ಪಡೆದ ಅನುದಾನವನ್ನು ಹೇಗೆ ಬಳಸುತ್ತವೆ ಎಂಬುದರ ಉಸ್ತುವಾರಿ ನೋಡಿಕೊಳ್ಳಲು ಸರ್ಕಾರವು ಏನಾದರೂ ವ್ಯವಸ್ಥೆಯನ್ನು ಮಾಡಿದೆಯೇ?

ಈ ಬಜೆಟ್ಟಿನಲ್ಲಿ ಅನುದಾನ ಪಡೆದಿರುವ ಮಠಗಳಿಗೆ ತಾವು ಪಡೆದ ಅನುದಾನ ಬಳಸುವುದಕ್ಕೆ ಸಂಬಂಧಿಸಿದಂತೆ ಏನಾದರೂ ಮಾರ್ಗಸೂಚಿಗಳನ್ನು ಸರ್ಕಾರವು ನಿಯಮಿಸಿದೆಯೇ? ಅನುದಾನದಲ್ಲಿ ಇಂತಿಷ್ಟನ್ನು ಸಂವಿಧಾನದ ಕಟ್ಟಳೆಯಂತೆ ಪ.ಜಾ.ಮತ್ತು ಪ.ಪಂಗಳಿಗೆ ಮೀಸಲಿಡಬೇಕೆಂಬ ನಿಯಮವನ್ನು ಸರ್ಕಾರವು ಮಠಗಳಿಗೆ ವಿಧಿಸಿದೆಯೇ? ಇಲ್ಲದಿದ್ದರೆ ಸರ್ಕಾರವು ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ ಬಿಟ್ಟದೆಯೆಂದು ತಿಳಿಯಬಹುದೇ? ಮಠಗಳಿಗೆ ನೀಡಿರುವ ಅನುದಾನಕ್ಕೆ ಸಂಬಂಧಿಸಿದಂತೆ ಎಷ್ಟು ಭಾಗ ಸದರಿ ಜಾತಿಗಳೊಳಗಿರುವ ಬಡವರಿಗೆ ಒದಗಬೇಕು ಎಂಬುದಕ್ಕೆ ಸರ್ಕಾರವು ಏನು ನಿರ್ಬಂಧವನ್ನು ಹಾಕಿದೆ?

ಮಠಗಳಿಲ್ಲದ-ಸ್ವಾಮಿಗಳಿಲ್ಲದ ಜಾತಿಗಳ ಪಾಡೇನು!

ಜಾತಿಯನ್ನು ಆಧರಿಸಿದ ಮಠಗಳಿಗೆ-ಸ್ವಾಮಿಗಳಿಗೆ ಅನುದಾನವನ್ನೇನೋ ಸರ್ಕಾರವು ಪ್ರಕಟಿಸಿ ಬಿಟ್ಟಿದೆ. ಈಗ ಪ್ರಶ್ನೆ ಮಠಗಳಿಲ್ಲದ-ಸ್ವಾಮಿಗಳಿಲ್ಲದ ಜಾತಿಗಳ ಗತಿಯೇನು? ಅವು ಸರ್ಕಾರದ ಅನುದಾನದ ಆಮಿಷಕ್ಕೆ ಕಟ್ಟುಬಿದ್ದು ರಾತ್ರೋರಾತ್ರಿ ಮಠಗಳನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ. ಅವುಗಳಿಗೆ 2009-10ನೆಯ ಸಾಲಿನ ಅನುದಾನವನ್ನು ಮೀಸಲಿಟ್ಟು ಮುಂದಿನ ವರ್ಷಕ್ಕೆ ಹೊಸ ಮಠಗಳು ಅಸ್ತಿತ್ವಕ್ಕೆ ಬಂದಾಗ ಅವುಗಳ ಖಾತೆಗೆ ಅದನ್ನು ಜಮಾ ಮಾಡಲಾಗುವುದೆ? ಮಠಗಳಿಲ್ಲದ ಜಾತಿಗಳಿಗೆ ಸರ್ಕಾರ ಏನು ಮಾಡುತ್ತದೆ? ಅವರಿಗೆ ಅದು ರಾಜರೋಷವಾಗಿ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ? ಆದ್ದರಿಂದ ಈ ಬಜೆಟ್ಟನ್ನು ತಾರತಮ್ಯವಾದಿ ಬಜೆಟ್ಟೆಂದು ಕರೆಯಬಹುದಲ್ಲವೆ!

ಈ ಬಜೆಟ್ಟಿನಿಂದ ಮಠಗಳಿಲ್ಲದ ಜಾತಿಗಳು ಈಗ ಮಠಗಳನ್ನು ಕಟ್ಟಿಕೊಳ್ಳಲು ಮತ್ತು ಸ್ವಾಮಿಗಳನ್ನು ನೇಮಿಸಿಕೊಳ್ಳಲು ಬಂಡವಾಳ ಹೂಡಬೇಕಾಗುತ್ತದೆ. ಅವು ಬಂಡವಾಳವನ್ನು ಎಲ್ಲಿಂದ ತರಬೇಕು? ಮಠ ಕಟ್ಟಿಕೊಳ್ಳಲು ಸರ್ಕಾರವು ಪೂರಕವಾಗಿ ಅನುದಾನ ನೀಡುವುದರ ಮೂಲಕ ಈಗ ಸಂಭವಿಸಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳಬಹುದಾಗಿದೆ. ಅದಕ್ಕಾಗಿ ಸರ್ಕಾರವು ತಕ್ಷಣ ಹೊಸ ಮಠಗಳನ್ನು ಕಟ್ಟಿಕೊಳ್ಳಲು ಹಣ ನೀಡುವುದಕ್ಕಾಗಿ ಪೂರಕ ಬಜೆಟ್ಟನ್ನು ಮಂಡಿಸಬಹುದು. ಬಜೆಟ್ಟನ್ನು ಆರ್ಥಿಕವಾದ ಅಥವಾ ರಾಜಕೀಯವಾದ ಅಸ್ತ್ರವನ್ನಾಗಿ ಮಾಡಿಕೊಳ್ಳುವುದಕ್ಕೆ ಪ್ರತಿಯಾಗಿ ಸರ್ಕಾರವು ಅದನ್ನು ಪಾರಮಾರ್ಥಿಕ ಸಿಂಧುವನ್ನಾಗಿ ಮಾಡಿಕೊಂಡಿರುವುದು ವಿಚಿತ್ರವಾಗಿ ಕಾಣುತ್ತದೆ.

ಅರ್ಥಶಾಸ್ತ್ರದ ಪಾರಮಾರ್ಥೀಕರಣ

ನಾವು ಇನ್ನು ಮುಂದೆ ಅರ್ಥಶಾಸ್ತ್ರದ ಪಾಠ ಮಾಡಬೇಕಾದರೆ ಬಜೆಟ್ಟಿನಲ್ಲಿ ಹೇಗೆ ಪಾರಮಾರ್ಥಿಕ ಸಂಗತಿಗಳಿಗೆ ಕೊರತೆಯಿಂದ ಕೂಡಿರುವ ಸಂಪನ್ಮೂಲಗಳನ್ನು ಮೀಸಲಿಡಬೇಕು ಎಂಬುದನ್ನು ಚರ್ಚಿಸಬೇಕಾಗುತ್ತದೆ. ಅರ್ಥಶಾಸ್ತ್ರಕ್ಕೆ ಹೊಸ ಆಯಾಮವನ್ನು ಕೊಟ್ಟ ಕೀರ್ತಿಗೆ ಪ್ರಸ್ತುತ ಬಜೆಟ್ಟು ಭಾಜನವಾಗಿದೆ. 'ಪಾರಮಾರ್ಥಿಕ ಅರ್ಥಶಾಸ್ತ್ರ'ವೆನ್ನುವ ಪಠ್ಯ ಕ್ರಮವನ್ನು ಮತ್ತು ಪಠ್ಯವನ್ನು ಸಿದ್ಧ ಮಾಡಲು ಸರ್ಕಾರವು ವಿಶ್ವವಿದ್ಯಾಲಯಗಳಿಗೆ ಸೂಚನೆ ನೀಡಬಹುದು!. ಯಾಕೆಂದರೆ ಈಗಿರುವ ಅರ್ಥಶಾಸ್ತ್ರದ ಪಾಠ-ಪ್ರವಚನಗಳೆಲ್ಲವು ಪಶ್ಚಿಮದ ಅನುಕರಣೆಯಾಗಿರುವುದರಿಂದ ಅಂತಹ ಸಂಗತಿಗಳನ್ನು ತೆಗೆದು ಹಾಕಿ ಅಲ್ಲಿ ಪಾರಮಾರ್ಥಿಕ ಅರ್ಥಶಾಸ್ತ್ರವನ್ನು ನಿಯಮಿಸಬಹುದು. ಈ ಕಾರಣಕ್ಕೆ ಇರಬೇಕು ಹಣಕಾಸು ಮಂತ್ರಿಗಳು ತಮ್ಮ ಬಜೆಟ್ಟು ಭಾಷಣದ ಆರಂಭದಲ್ಲೇ ಕೌಟಿಲ್ಯನ ಸಂಸ್ಕೃತದ ಶ್ಲೋಕವೊಂದನ್ನು ಉಲ್ಲೇಖಿಸಿದ್ದಾರೆ. ಈ ಬಜೆಟ್ಟಿಗೆ ಪ್ರೇರಣೆಯು ಅರ್ಥಶಾಸ್ತ್ರದಿಂದ ಬಂದಿಲ್ಲವೆಂಬುದು ಅದರ ಸೂಕ್ಷ್ಮ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಪ್ರೇರಣೆಯು ಮಠಗಳಿಂದ, ಸ್ವಾಮಿಗಳಿಂದ, ಕೌಟಿಲ್ಯನಿಂದ, ಪರಮಾರ್ಥ ಬೋಧೆಯಿಂದ ಬಂದಿರುವಂತೆ ಕಾಣುತ್ತದೆ. ಅಂಬೇಡ್ಕರ್, ಗಾಂಧಿ, ಲೋಹಿಯಾ, ಬಸವಣ್ಣ, ಅಕ್ಕಮಹಾದೇವಿ ಅವರು ಇದಕ್ಕೆ ಪ್ರೇರಣೆಯಾಗಿಲ್ಲ. ನಮ್ಮ ಮಕ್ಕಳು ಅರ್ಥಶಾಸ್ತ್ರದಲ್ಲಿ ಕೇವಲ ಪಾಶ್ಚಿಮಾತ್ಯ ಸಿದ್ಧಾಂತಗಳನ್ನು ಓದುವುದರಿಂದ ಅವರಿಗೆ ರಾಷ್ಟ್ರೀಯತೆ ಗುಣ ಪ್ರಾಪ್ತವಾಗುವುದಿಲ್ಲ. ಆದ್ದರಿಂದ ಅರ್ಥಶಾಸ್ತ್ರದ ವಿದ್ಯಾರ್ಥಿಗಳು ಇನ್ನು ಮುಂದೆ ಕೌಟಿಲ್ಯನ ಅರ್ಥಶಾಸ್ತ್ರವನ್ನು ಮತ್ತು ಸಮಾಜಶಾಸ್ತ್ರದ ಮಕ್ಕಳು ಇನ್ನು ಮುಂದೆ ಮನುವಿನ ಧರ್ಮಶಾಸ್ತ್ರವನ್ನು ಓದುವಂತೆ ಮಾಡಬೇಕಾಗುತ್ತದೆ. ಈ ಕ್ರಮಗಳಿಂದ ನಮ್ಮ ಮಕ್ಕಳು ಪವಿತ್ರರಾಗಬಹುದು (ಈ ದಿಶೆಯಲ್ಲಿ ಪ್ರಾಥಮಿಕ ಶಿಕ್ಷಣದ ಸಚಿವರು ದೊಡ್ಡ ಹೆಜ್ಜೆಯಲ್ಲಿ ಈಗಾಗಲೆ ಮುಂದುವರಿದಿರುವುದು ಇಲ್ಲಿ ಉಲ್ಲೇಖನೀಯ. ವಿದೇಶಿಯರು ನಮ್ಮ ಮೇಲೆ ಮಾಡಿದ ಆಕ್ರಮಣಗಳನ್ನು ಶಾಲೆಗಳಲ್ಲಿ ನಮ್ಮ ಮಕ್ಕಳು ಓದುವುದಕ್ಕೆ ಪ್ರತಿಯಾಗಿ ನಮ್ಮ ನಾಡಿನ ಶೂರಾಧಿಶೂರರು ವೀರರು ನಡೆಸಿದ ಹೋರಾಟವನ್ನು ಮಾತ್ರ ಚರಿತ್ರೆ ಪಠ್ಯಗಳಲ್ಲಿ ಇರುವಂತೆ ಮಾಡುವ ಬಗ್ಗೆ ಶ್ರಿ ಕಾಗೇರಿ ಅವರು ಯೋಚನೆ ಮಾಡುತ್ತಿದ್ದಾರೆ)

ಲಿಂಗ ಸಮಾನತೆಯು ರಾಜ್ಯದಲ್ಲಿ ದಿಕ್ಕಾರಕ್ಕೊಳಗಾಗುತ್ತಿರುವ ಸಂದರ್ಭದಲ್ಲಿ, ಅದಕ್ಕೆ ದಕ್ಕೆ ಬಂದಿರುವ ಸಂದರ್ಭದಲ್ಲಿ ಅದರ ಬಗ್ಗೆ ಬಜೆಟ್ಟಿನಲ್ಲಿ ಪ್ರಜ್ಞಾ ಪೂರ್ವಕ ಚರ್ಚೆ ಇರಬೇಕಾಗಿತ್ತು. ಆದರೆ ಲಿಂಗ ಸಂಬಂಧಗಳ ಸಂಗತಿಗಳನ್ನು ಇಲ್ಲಿ ಬಜೆಟ್ಟಿನ ಒಟ್ಟು ಚೌಕಟ್ಟಿನಲ್ಲಿ ವಿಲೀನಗೊಳಿಸಲಾಗಿದೆ. ಅದರ ಬಗ್ಗೆ ಪ್ರತ್ಯೇಕ ಕಾರ್ಯಕ್ರಮಗಳಾಗಲಿ ಅಥವಾ ರಾಜ್ಯದಲ್ಲಿ ಉಂಟಾಗುತ್ತಿರುವ ಮಹಿಳೆಯರ ಮೇಲಿನ ಉದ್ದೇಶ ಪೂರಿತ ಆಕ್ರಮಣಗಳ ಬಗ್ಗೆಯಾಗಲಿ ಬಜೆಟ್ಟಿನಲ್ಲಿ ಚಕಾರವೂ ಇಲ್ಲದಿರುವುದು ಆಶ್ಚರ್ಯ ಉಂಟುಮಾಡಬೇಕು. ಆದರೆ ಅದು ಆಶ್ಚರ್ಯ ಉಂಟು ಮಾಡುವುದಿಲ್ಲ. ಏಕೆಂದರೆ ಬಜೆಟ್ಟಿನ ಮೂಲದಲ್ಲಿ ಲಿಂಗ ಸಮಾನತೆಯು ಒಂದು ಮೌಲ್ಯವಾಗಿ ಕೆಲಸ ಮಾಡಿಲ್ಲ. ಈ ಸರ್ಕಾರದ ಅಜೆಂಡಾದಲ್ಲಿ ಅದು ಇಲ್ಲ.

ಪ್ರಾದೇಶಿಕ ಅಸಮಾನತೆ ಬಗ್ಗೆ ದಿವ್ಯ ನಿರ್ಲಕ್ಷ್ಯ!

ಸರ್ಕಾರವು ಮಂಡಿಸಿರುವ 2009-10ನೆಯ ಸಾಲಿನ ರೂ29500 ಕೋಟಿ ಯೋಜನಾ ವೆಚ್ಚದ ಬಜೆಟ್ಟಿನಲ್ಲಿ ಎಂಟು ವರ್ಷದ ವಿಶೇಷ ಯೋಜನೆ ಬಾಬ್ತು ರೂ 2574 ಕೋಟಿಗೆ ಸಂಬಂಧಿಸಿದಂತೆ ನಾಲ್ಕು ಸಾಲು ಹೇಳಿರುವುದನ್ನು ಬಿಟ್ಟರೆ ಈ ಬಜೆಟ್ಟಿನಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಇದು ಅನಿರೀಕ್ಷಿತವೇನಲ್ಲ. ಡಾ.ಡಿ.ಎಮ್ ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸಿನಂತೆ ಎಂಟು ವರ್ಷದ ಯೋಜನೆಗೆ ಹಣತೆಗೆ ದಿಟ್ಟು ಬಿಟ್ಟರೆ ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದಂತೆ ಎಲ್ಲ ಮುಗಿದುಹೋಯಿತೆಂದು ಸರ್ಕಾರ ತಿಳಿದುಕೊಂಡಿರುವಂತೆ ಕಾಣುತ್ತದೆ. ವಾಸ್ತವವಾಗಿ ಡಾ.ಡಿ.ಎಮ್. ನಂಜುಂಡಪ್ಪ ಸಮಿತಿ ವರದಿಯಲ್ಲಿ ಎಂಟು ವರ್ಷದ ವಿಶೇಷ ಯೋಜನೆ ಬಿಟ್ಟು ಅನೇಕ ಇತರೆ ಮುಖ್ಯವಾದ ಶಿಫಾರಸ್ಸುಗಳಿವೆ. ಅವುಗಳ ಬಗ್ಗೆ ಸರ್ಕಾರವು ದಿವ್ಯ ನಿರ್ಲಕ್ಷ್ಯ ತಳೆದಂತೆ ಕಾಣುತ್ತದೆ. ಸಾವಿರ ಪುಟಗಳನ್ನು ಮೀರಿದ ಡಾ.ಡಿ.ಎಮ್. ನಂಜುಂಡಪ್ಪ ವರದಿಯನ್ನು ಪ್ರಸ್ತುತ ಸರ್ಕಾರವು 'ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆ'ಗೆ ಸೀಮಿತಗೊಳಿಸಿಬಿಟ್ಟಿದೆ. ಉದಾಹರಣೆಗೆ ಅದರ ಮೊಟ್ಟಮೊದಲ ಶಿಫಾರಸ್ಸೆಂದರೆ ಸರ್ಕಾರವು ಮೊದಲು ತನ್ನ 'ಪ್ರಾದೇಶಿಕ ಅಭಿವೃದ್ಧಿ ನೀತಿ'ಯನ್ನು ಪ್ರಕಟಿಸಬೇಕು ಎಂಬುದಾಗಿದೆ. ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟು(2002) ಎಂಟು ವರ್ಷಗಳಾದರೂ ಸರ್ಕಾರಗಳಿಗೆ ಅಂತಹ ಒಂದು ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಇಡೀ ಬಜೆಟ್ಟಿನಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯದ ಕಟ್ಟಕಡೆಯ ಸ್ಥಾನದಲ್ಲಿರುವ ಗುಲಬರ್ಗಾ ವಿಭಾಗದ ಜಿಲ್ಲೆಗಳ ಬಗ್ಗೆ, ಅವುಗಳಷ್ಟೆ ಹಿಂದುಳಿದಿರುವ ಬೆಳಗಾವಿ ವಿಭಾಗದ ವಿಜಾಪುರ ಜಿಲ್ಲೆಯ ಬಗ್ಗೆ ಕಾಟಾಚಾರಕ್ಕಾದರೂ ಬಜೆಟ್ಟಿನಲ್ಲಿ ಉಲ್ಲೇಖವಿಲ್ಲ. ಇನ್ನು ಎಂಟು ವರ್ಷದ ವಿಶೇಷ ಯೋಜನೆ! ಅದರ ಬಗ್ಗೆ ಏನನ್ನು ಹೇಳದಿರುವುದೆ ಒಳ್ಳೆಯದೆಂದು ಕಾಣುತ್ತದೆ. ಉದಾಹರಣೆಗೆ ಈ ಯೋಜನೆಯ ಮೊದಲ ವರ್ಷ 2007-08ರ ಬಜೆಟ್ಟಿನಲ್ಲಿ ಮೀಸಲಿಟ್ಟ ರೂ 1571 ಕೋಟಿಯಲ್ಲಿ ಆ ವರ್ಷ ಖರ್ಚು ಮಾಡಿದ್ದು ಕೇವಲ ರೂ 976.32 ಕೋಟಿ. ಆದರೆ ಅದನ್ನು ಹೇಗೆ ಖರ್ಚು ಮಾಡಲಾಗಿದೆ, ಅದರಲ್ಲಿ ಹಿಂದುಳಿದ 114 ತಾಲ್ಲೂಕುಗಳಲ್ಲಿ ಯಾವ ಯಾವುದಕ್ಕೆ ಎಷ್ಟೆಷ್ಟು ಅನುದಾನ ನೀಡಲಾಗಿದೆ ಎಂಬುದಕ್ಕೆ ಸರ್ಕಾರ ಬಳಿ ಮಾಹಿತಿಯಿಲ್ಲ. ಏಕೆಂದರೆ ಅದನ್ನು ತಾಲ್ಲೂಕುವಾರು ವಿತರಣೆ ಮಾಡಿಲ್ಲ. ಎರಡನೆಯ ವರ್ಷವೂ ಸಹ ಬಜೆಟ್ಟಿನಲ್ಲಿ ಮೀಸಲಿಟ್ಟ ರೂ2547 ಕೋಟಿಯಲ್ಲಿ ಎಷ್ಟು ಖರ್ಚು ಮಾಡಲಾಗಿದೆ ಎಂಬುದರ ಬಗ್ಗೆ ಮಾಹಿತಿಯಿಲ್ಲ. ಅದರಲ್ಲಿ ತಾಲ್ಲೂಕು ವಾರು ಅನುದಾನ ನೀಡಲಾಗಿದೆಯೆ ಎಂಬುದರ ಬಗ್ಗೆ ಮಾಹಿತಿಯಿಲ್ಲ. ಕನಿಷ್ಠ 114 ಹಿಂದುಳಿದಿರುವ ತಾಲ್ಲೂಕುಗಳಲ್ಲಿ ಕಟ್ಟಕಡೆಯ ಸ್ಥಾನದಲ್ಲಿರುವ ದೇವದುರ್ಗ ತಾಲ್ಲೂಕ್ಕಿಗಾದರೂ ಅನುದಾನ ನೀಡಲಾಗಿದೆಯೇ ಎಂದರೆ ಅದರ ಬಗ್ಗೆ ಮಾಹಿತಿಯಿಲ್ಲ. ಏಕೆಂದರೆ ಅನುದಾನವನ್ನು ತಾಲ್ಲೂ ಕುವಾರು ಸರ್ಕಾರವು ನೀಡಿಲ್ಲ.

ಹಾಗೆ ನೋಡಿದರೆ ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ಸರ್ಕಾರವು ತಾಲ್ಲೂಕುಗಳಿಗೆ ಹೋಗಲಿ, ಜಿಲ್ಲೆಗಳಿಗೆ-ಜಿಲ್ಲಾ ಪಂಚಾಯಿತಿಗಳಿಗೆ ಅದರ ಬಾಬ್ತು ಅನುದಾನ ನೀಡಿಲ್ಲ. ಅದಕ್ಕೆ ಸಂಬಂಧಿಸಿದ ಕ್ರಿಯಾಯೋಜನೆಯನ್ನು ರೂಪಿಸುವ ಅಧಿಕಾರವನ್ನು ಸಂಬಂಧಿಸಿದ ಇಲಾಖೆಗಳ ರಾಜ್ಯ ಮಟ್ಟದ ಅಧಿಕಾರಿಗಳಿಗೆ ವಹಿಸಿಕೊಟ್ಟಿದೆ. ಒಂದು ನೀತಿಯನ್ನು, ಕಾರ್ಯತಂತ್ರವನ್ನು, ಒಂದು ವ್ಯವಸ್ಥೆಯನ್ನು ಹೇಗೆ ವಿಕಾರಗೊಳಿಸಬಹುದು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಈ ಎಂಟು ವರ್ಷಗಳ ವಿಶೇಷ ಯೋಜನೆಯಡಿಯಲ್ಲಿ ಅನುದಾನವನ್ನು ತಾಲ್ಲೂಕುವಾರು ಹೇಗೆ ನೀಡುವುದು ಎಂಬುದರ ಬಗ್ಗೆ ಡಾ.ಡಿ.ಎಮ್ ನಂಜುಂಡಪ್ಪ ಸಮಿತಿ ಶಿಫಾರಸ್ಸುಗಳ ಅನುಷ್ಠಾನದ ಉನ್ನತಾಧಿಕಾರ ಸಮಿತಿಯು ಇನ್ನು ತೀರ್ಮಾನ ತೆಗೆದುಕೊಳ್ಳುವುದರಲ್ಲಿದೆ! ಇಷ್ಟೊಂದು ಔದಾಸೀನ್ಯ ಪ್ರಾದೇಶಿಕ ಅಸಮಾನತೆ ಬಗ್ಗೆ ಸರ್ಕಾರದ ಮಟ್ಟದಲ್ಲಿ ಯಾಕಿದೆ ಎಂಬುದು ಅರ್ಥವಾಗುತ್ತಿಲ್ಲ.

ಸರ್ಕಾರವು ಮಂಡಿಸಿರುವ 2009-10ನೆಯ ಸಾಲಿನ ಬಜೆಟ್ಟಿನಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಎಲ್ಲಿಯೂ ವಿಶೇಷ ಕಾಳಜಿ ವ್ಯಕ್ತವಾಗಿಲ್ಲ. ಪ್ರಜ್ಞಾಪೂರ್ವಕವಾಗಿ ಬಜೆಟ್ಟನ್ನು ಪ್ರಾದೇಶಿಕ ಉಪಚಾರಕ್ಕೆ ಒಳಪಡಿಸಿಲ್ಲ. ರೂಢಿಗತವಾಗಿ ನಾಲ್ಕು ಮಾತಾಡಬೇಕೆಂದು ಅದರ ಬಗ್ಗೆ ಮಾತನಾಡಲಾಗಿದೆಯೆ ಹೊರತು ಸರ್ಕಾರಕ್ಕೆ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ನಿರ್ದಿಷ್ಟವಾದ ದೃಷ್ಟಿಕೋನವಿಲ್ಲ. ಅದರ ಬಗ್ಗೆ ಒಂದು ನೀತಿಯಿಲ್ಲ. ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ಸರ್ಕಾರವು ಪ್ರಕಟಿಸಬೇಕೆಂದು ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆ. ಆದರೆ ಅದನ್ನು ಸರ್ಕಾರವು ಅರ್ಥ ಮಾಡಿಕೊಂಡಂತೆ ಕಾಣುತ್ತಿಲ್ಲ.

ಈ ಬಗ್ಗೆ ಸರ್ಕಾರವು ತಕ್ಷಣ ಮಾಡಬೇಕಾಗಿರುವ ಸಂಗತಿಯೆಂದರೆ ಎಂಟು ವರ್ಷಗಳ ವಿಶೇಷ ಯೋಜನೆ ಬಾಬ್ತು ಅನುದಾನವನ್ನು ಡಾ ಡಿ.ಎಮ್.ನಂಜುಂಡಪ್ಪ ಸಮಿತಿಯು ನೀಡಿರುವ ಸೂತ್ರದಂತೆ ಹಂಚಬೇಕು. ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ರೂಪಿಸಿರುವ ಅನುದಾನ ಹಂಚಿಕೆ ಸೂತ್ರದ ಬಗ್ಗೆ ಸರ್ಕಾರಕ್ಕೆ ಅನುಮಾನ ಯಾಕೆ ಬಂದಿದೆ ಎಂಬುದು ಅರ್ಥವಾಗುತ್ತಿಲ್ಲ. ಅದನ್ನು ಬದಲಾಯಿಸಲು ಅದು ಇನ್ನಿಲ್ಲದಂತೆ ಪ್ರಯತ್ನಿಸುತ್ತಿದೆ. ಆದರೆ ಅದು ಬಹಳ ಸರಳವಾದ ಸೂತ್ರವಾಗಿದೆ. ಉದಾಹರಣೆಗೆ 2009-10ನೆಯ ಸಾಲಿನಲ್ಲಿ ಎಂಟು ವರ್ಷದ ವಿಶೇಷ ಯೋಜನೆ ಬಾಬ್ತು ಬಜೆಟ್ಟಿನಲ್ಲಿ ತೆಗೆದಿಟ್ಟಿರುವ ರೂ2574 ಕೋಟಿಯಲ್ಲಿ ಸಮಿತಿ ಸೂತ್ರದ ಪ್ರಕಾರ ಅತ್ಯಂತ ಹಿಂದುಳಿದ(175ನೆಯ ಸ್ಥಾನ)ದೇವದುರ್ಗ ತಾಲ್ಲೂಕಿಗೆ ನೀಡಬೇಕಾದ ಅನುದಾನ ರೂ 59.72 ಕೋಟಿ. ರಾಜ್ಯದ 114 ಹಿಂದುಳಿದ ತಾಲ್ಲೂಕುಗಳ ಒಟ್ಟು ಸಂಚಯಿತ ದುಸ್ಥಿತಿ ಸೂಚ್ಯಂಕ 20.26. ದೇವದುರ್ಗ ತಾಲ್ಲೂಕಿನ ದುಸ್ಥಿತಿ ಸೂಚ್ಯಂಕ 0.47. ರಾಜ್ಯದ ಒಟ್ಟು ದುಸ್ಥಿತಿ ಸೂಚ್ಯಂಕದಲ್ಲಿ (20.26) ದೇವದುರ್ಗದ(0.47) ಪಾಲು ಶೇ2.32. ಅಂದರೆ 2009-10ನೆಯ ಸಾಲಿನಲ್ಲಿ ಸರ್ಕಾರವು ಅದಕ್ಕೆ ನೀಡಬೇಕಾದ ಅನುದಾನ ರೂ.59.72ಕೋಟಿ. ಇಷ್ಟೊಂದು ಸರಳವಾಗಿರುವ ಸೂತ್ರವನ್ನು ಬದಲಾಯಿಸುವ ಬಗ್ಗೆ ಸರ್ಕಾರವು ಯಾಕೆ ಮುಂದಾಗಿದೆಯೆಂಬುದು ಅರ್ಥವಾಗುತ್ತಿಲ್ಲ.

ಪ್ರಾದೇಶಿಕ ಅಸಮಾನತೆಯೆಂಬುದನ್ನು ಸರ್ಕಾರ ಮತ್ತು ಅಭಿವೃದ್ಧಿ ಕುರಿತಂತೆ ಅದಕ್ಕೆ ಸಲಹೆ-ಮಾರ್ಗದರ್ಶನ ನೀಡುತ್ತಿರುವ ತಜ್ಞರ ತಂಡ ಕೇವಲ ನಿರ್ಜೀವವಾದ ಮೂಲಭೂತ ಸೌಲಭ್ಯಗಳು, ಕೈಗಾರಿಕೆಗಳು, ಕಟ್ಟಡಗಳು, ನೀರಾವರಿ ಅಣೆಕಟ್ಟುಗಳು, ವಿಮಾನ ನಿಲ್ದಾಣಗಳು ಮುಂತಾದವುಗಳ ಚೌಕಟ್ಟಿನಲ್ಲಿ ಪರಿಭಾವಿಸಿಕೊಂಡಿರುವಂತೆ ಕಾಣುತ್ತದೆ. ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಅವೆಲ್ಲವೂ ಬೇಕು, ನಿಜ. ಆದರೆ ಅವುಗಳೇ ಅಭಿವೃದ್ಧಿಯಲ್ಲ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಅದು ಮಹಿಳೆಯರನ್ನು ಸೇರಿಸಿಕೊಂಡು, ಜನರನ್ನು ಒಳಗೊಳ್ಳುವಂತೆ ಪರಿಭಾವಿಸಿಕೊಳ್ಳಬೇಕು. ಅಭಿವೃದ್ಧಿಯೆಂಬುದು ವರಮಾನ, ಉತ್ಪಾದನೆ, ಅನುಭೋಗ, ಬಂಡವಾಳ ಮುಂತಾದವುಗಳನ್ನು ಒಳಗೊಂಡ ಪ್ರಕ್ರಿಯೆ ಮಾತ್ರವಾಗಬಾರದು. ಅದು ಜನರ ಭಾವನೆಗಳನ್ನು, ಅವರ ಮನಸ್ಸನ್ನು, ಜನರ ವಿದ್ವತ್ತನ್ನು, ಜನರ ಕುಶಲತೆಯನ್ನು, ಜನರ ಕರ್ತೃತ್ವವನ್ನು ಒಳಗೊಂಡ ಪ್ರಕ್ರಿಯೆಯಾಗಬೇಕು. ಕರ್ನಾಟಕದ 2009-10ನೆಯ ಸಾಲಿನ ಬಜೆಟ್ಟಿನಲ್ಲಿ ಜನರನ್ನು ಒಳಗೊಳ್ಳುವಂತೆ ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಿರುವುದು ಕಂಡು ಬರುವುದಿಲ್ಲ.

ಡಾ.ಡಿ.ಎಮ್ ನಂಜುಂಡಪ್ಪ ಸಮಿತಿ ವರದಿಯಲ್ಲಿ ಹಿಂದುಳಿದ 114 ತಾಲ್ಲೂಕುಗಳ ಅಭಿವೃದ್ಧಿಗೆ ಎಂಟು ವರ್ಷಗಳ ಅವಧಿಯಲ್ಲಿ ನಿಯಮಿತವಾಗಿ ವಾರ್ಷಿಕ ಹರಿದು ಬರುವ ಅನುದಾನ ರೂ15000ಕೋಟಿಯಲ್ಲದೆ ಹೆಚ್ಚುವರಿಯಾಗಿ ಅದೇ ಅವಧಿಯಲ್ಲಿ ರೂ16,000 ಕೋಟಿಯನ್ನು ಸರ್ಕಾರವು ಅನುದಾನ ನೀಡಬೇಕೆಂದು ಡಾ.ಡಿ.ಎಮ್. ನಂಜುಂಡಪ್ಪ ಸಮಿತಿಯು ಶಿಫಾರಸ್ಸು ಮಾಡಿದೆ. ಆದರೆ ಸರ್ಕಾರವು ಎಂಟು ವರ್ಷಗಳ ವಿಶೇಷ ಅಭಿವೃದ್ಧಿ ಯೋಜನೆಗೆ ಬಜೆಟ್ಟಿನಲ್ಲಿ ಹೆಚ್ಚುವರಿಯಾಗಿ ಅನುದಾನ ಮೀಸಲಿಟ್ಟಿರುವಂತೆ ಕಾಣುವುದಿಲ್ಲ. ಈ ಯೋಜನೆ ಬಾಬ್ತು ಸರ್ಕಾರವು ನೀಡುತ್ತಿರುವ ಮೊತ್ತವು ಹೆಚ್ಚುವರಿಯೋ ಅಥವಾ ನಿಯಮಿತವಾದ ಮೊತ್ತವೋ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ.

ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಗೆ 2009-10ನೆಯ ಸಾಲಿನಲ್ಲಿ ನೀಡಿರುವ ಮೊತ್ತ ರೂ2574 ಕೋಟಿಯು ಸರ್ಕಾರದ ಯೋಜನಾ ವೆಚ್ಚವಾಗಿದೆಯೇ

ಸರ್ಕಾರವು ಮಂಡಿಸಿರುವ 2009-10ನೆಯ ಸಾಲಿನ ಬಜೆಟ್ಟಿನಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಎಲ್ಲಿಯೂ ವಿಶೇಷ ಕಾಳಜಿ ವ್ಯಕ್ತವಾಗಿಲ್ಲ. ಪ್ರಜ್ಞಾಪೂರ್ವಕವಾಗಿ ಬಜೆಟ್ಟನ್ನು ಪ್ರಾದೇಶಿಕ ಉಪಚಾರಕ್ಕೆ ಒಳ ಪಡಿಸಿಲ್ಲ. ರೂಢಿಗತವಾಗಿ ನಾಲ್ಕು ಮಾತಾಡಬೇಕೆಂದು ಅದರ ಬಗ್ಗೆ ಮಾತನಾಡಲಾಗಿದೆಯೆ ಹೊರತು ಸರ್ಕಾರಕ್ಕೆ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ನಿರ್ದಿಷ್ಟವಾದ ದೃಷ್ಟಿಕೋನವಿಲ್ಲ. ಪ್ರಾದೇಶಿಕ ಅಭಿವೃದ್ಧಿ ನೀತಿಯನ್ನು ಸರ್ಕಾರವು ಪ್ರಕಟಿಸಬೇಕೆಂದು ಡಾ.ಡಿ.ಎಮ್. ನಂಜುಂಡಪ್ಪ ಸಮಿತಿ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಆದರೆ ಅದನ್ನು ಸರ್ಕಾರವು ಅರ್ಥ ಮಾಡಿಕೊಂಡಂತೆ ಕಾಣುತ್ತಿಲ್ಲ.

ವಿನಾ ಯೋಜನೇತರ ವೆಚ್ಚವಲ್ಲ. ಮುಖ್ಯಮಂತ್ರಿ ಅವರ ಬಜೆಟ್ ಭಾಷಣದ ಪ್ರತಿಯಲ್ಲಿ 2009-10ನೆಯ ಸಾಲಿನ ಯೋಜನಾ ವೆಚ್ಚದ ವಲಯವಾರು ವಿವರಗಳನ್ನು ನೀಡಲಾಗಿದೆ. ಅದರಲ್ಲಿ ಒಟ್ಟು ಯೋಜನಾ ವೆಚ್ಚದ ಶೇ0.49 ರಷ್ಟನ್ನು ಪಡೆಯುತ್ತಿರುವ ವಿಶೇಷ ಪ್ರದೇಶಾಭಿವೃದ್ಧಿ ಮಂಡಳಿಗಳ ವೆಚ್ಚವನ್ನು ಮತ್ತು 0.05ರಷ್ಟು ಪಾಲನ್ನು ಪಡೆಯುತ್ತಿರುವ ಮಾಹಿತಿ ಮತ್ತು ಪ್ರಸಾರ ಇಲಾಖೆಯ ಪಾಲನ್ನು ತೋರಿಸಲಾಗಿದೆ. ಆದರೆ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯ ಬಾಬ್ತು ರೂ2574 ಕೋಟಿ ಬಗ್ಗೆ ಯಾವುದೇ ಬಜೆಟ್ಟು ಕೋಷ್ಟಕಗಳಲ್ಲಿ ನಮೂದು ಇಲ್ಲ. ಯೋಜನಾ ವೆಚ್ಚದ ಶೇ8.3ರಷ್ಟನ್ನು ಪಡೆಯುತ್ತಿರುವ ಬಾಬ್ತಿನ ಬಗ್ಗೆ ಉಲ್ಲೇಖವಿಲ್ಲವೆಂದರೆ ಏನು ಅರ್ಥ! ಈ ರೂ2574 ಕೋಟಿಯು ಹೆಚ್ಚುವರಿ ಮೊತ್ತವೋ ಅಥವಾ ನಿಯಮಿತ ವಾರ್ಷಿಕ ಯೋಜನಾ ವೆಚ್ಚವೋ?. ಹಣಕಾಸು ಮಂತ್ರಿಗಳ ಬಜೆಟ್ ಭಾಷಣದ ಪ್ರತಿಯನ್ನು ನೋಡಿದರೆ ರೂ2574 ಕೋಟಿಯು ಹೆಚ್ಚುವರಿ ವೆಚ್ಚದಂತೆ ಕಾಣುವುದಿಲ್ಲ. ಒಂದು ವೇಳೆ ಅದು ಹೆಚ್ಚುವರಿ ವೆಚ್ಚವಾಗಿದ್ದಿದ್ದರೆ ಅದರ ಬಗ್ಗೆ ಬಜೆಟ್ಟಿನ ಯೋಜನಾ ವೆಚ್ಚದ ಖಾತೆಯಲ್ಲಿ ಉಲ್ಲೇಖ ಇರಬೇಕಾಗಿತ್ತು. ಕೇವಲ ರೂ15.60ಕೋಟಿಯ ವಿವರವನ್ನು ಬಜೆಟ್ಟಿನ ಖಾತೆಯಲ್ಲಿ ತೋರಿ ಸಬೇಕಾದರೆ ರೂ2574 ಕೊಟಿಯ ಬಾಬ್ತನ್ನು ಯಾಕೆ ತೋರಿಸಿಲ್ಲ?

ಎಲ್ಲದಕ್ಕೂ ಮಿಷನ್ನು !

ತಮ್ಮ ಬಜೆಟ್ ಭಾಷಣದಲ್ಲಿ ಹಣಕಾಸು ಮಂತ್ರಿಗಳು ಅಭಿವೃದ್ಧಿ ತಜ್ಞರ ಸೇವೆಯ ಬಗ್ಗೆ ಮಾತನಾಡಿದ್ದಾರೆ. ಕರ್ನಾಟಕದ ಅಭಿವೃದ್ಧಿ ಮುನ್ನೋಟ-2020, ಕರ್ನಾಟಕ ಜ್ಞಾನ ಆಯೋಗ, ವಿಜ್ಞಾನ-ತಂತ್ರಜ್ಞಾನ ಮುನ್ನೋಟ ಮಿಷನ್, ಕುಶಲತೆ ಅಭಿವೃದ್ಧಿ ಮಿಷನ್, ಕೈಗಾರಿಕಾಭಿವೃದ್ಧಿ ಮುನ್ನೋಟ ಕಾರ್ಯತಂಡ, ಕರ್ನಾಟಕ ಕೃಷಿ ಮಿಷನ್ ಮುಂತಾದವುಗಳಲ್ಲಿರುವ ತಜ್ಞರ ತಂಡ ನೀಡುತ್ತಿರುವ ಸಲಹೆ ಬಗ್ಗೆ ಅವರು ತುಂಬಾ ಉತ್ಸಾಹದಿಂದ ಮಾತನಾಡಿದ್ದಾರೆ. ಈ ಪಟ್ಟಿಯಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಣೆ ಕುರಿತಂತೆ ಯಾವುದೇ ಮಿಷನ್ ಇಲ್ಲ. ಈಗಿರುವ ಡಾ.ಡಿ.ಎಮ್.ನಂಜುಡಪ್ಪ ವರದಿ ಅನುಷ್ಠಾನ ಉನ್ನತಾಧಿಕಾರ ಸಮಿತಿ ಅದಕ್ಕಾಗಿಯೆ ಇದೆಯಲ್ಲ ಎಂದು ಹೇಳಬಹುದು. ಆದರೆ ನನ್ನ ಸರಳವಾದ ಪ್ರಶ್ನೆಯೆಂದರೆ ಅದು 2008-09ನೆಯ ಸಾಲಿನಲ್ಲಿ ಗುಲಬರ್ಗಾ ವಿಭಾಗಕ್ಕೆ ಸಂಬಂಧಿಸಿದ 21 ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ, ಐದು ಅತಿ ಹಿಂದುಳಿದ ತಾಲ್ಲೂಕುಗಳಿಗೆ ಮತ್ತು ಎರಡು ಹಿಂದುಳಿದ ತಾಲ್ಲೂಕುಗಳಿಗೆ ರೂ2547 ಕೋಟಿಯಲ್ಲಿ ಯಾವ ತಾಲ್ಲೂಕಿಗೆ ಎಷ್ಟೆಷ್ಟು ಅನುದಾನ ಅದು ಕೊಡಿಸಿದೆಯೆಂಬುದನ್ನು ಹೇಳಲಿ! ಇದಕ್ಕೆ ಅದರ ಬಳಿ ಉತ್ತರವಿರಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ತಾಲ್ಲೂಕುವಾರು ಅನುದಾನವನ್ನು ಹಂಚಿಲ್ಲ ಮತ್ತು ಅದಕ್ಕೆ ಮೀಸಲಿಟ್ಟ ಅನುದಾನವನ್ನು ಪೂರ್ಣವಾಗಿ ಬಳಸಿಕೊಂಡೂ ಇಲ್ಲ. ಉನ್ನತಾಧಿಕಾರ ಸಮಿತಿಯು ಇದುವರೆವಿಗೂ ಹಿಂದುಳಿದ ಎಲ್ಲ ಜಿಲ್ಲೆಗಳಲ್ಲೂ ಪೂರ್ಣ ಪ್ರಮಾಣದಲ್ಲಿ ಪ್ರವಾಸ ಮಾಡಿ ಅಲ್ಲಿನ ಸ್ಥಿತಿಗತಿ ತಿಳಿದುಕೊಂಡಿಲ್ಲ. ಅತ್ಯಂತ ಹಿಂದುಳಿದ ತಾಲ್ಲೂಕುಗಳಿಗೆ ಸರ್ಕಾರದಿಂದ ಉಂಟಾಗುತ್ತಿರುವ ವಿಕೃತಿಗಳನ್ನು ಸರಿಪಡಿಸಿಕೊಡುವುದು ಅದಕ್ಕೆ ಸಾಧ್ಯವಾಗುತ್ತಿಲ್ಲ.

ಒಂದು ಉದಾಹರಣೆ

> ಸರ್ಕಾರವು 2008-09ರಲ್ಲಿ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ಹಡಗಲಿಗೆ ಎಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಿತ್ತು. ಅದು ಕಾರ್ಯಾರಂಭ ಮಾಡುವ ಹಂತದಲ್ಲಿತ್ತು. ಆದರೆ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಕಿಂಚಿತ್ತು ಪರಿಜ್ಞಾನವಿಲ್ಲದ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಪ್ರಭಾವ ಮತ್ತು ಗತ್ತನ್ನು ಬಳಸಿ ರಾಜ್ಯದಲ್ಲಿ ಸಾಪೇಕ್ಷವಾಗಿ ಮುಂದುವರಿದ ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ನಗರಕ್ಕೆ ಅದನ್ನು ವರ್ಗಾಯಿಸುವಂತೆ ಮಾಡುವಲ್ಲಿ ಯಶಸ್ವಿಯಾದವು. ಈ ಬಗೆಯ ತೀರ್ಮಾನವನ್ನು ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆಯೆಂದರೆ ಸರ್ಕಾರಕ್ಕೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದರ ಬಗ್ಗೆ ಎಷ್ಟೊಂದು ಕಾಳಜಿಯಿದೆ ಯೆಂಬುದು ಇದರಿಂದ ತಿಳಿದು ಬರುತ್ತದೆ.

ಸರ್ಕಾರವು 2008-09ರಲ್ಲಿ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಒಂದಾದ ಹಡಗಲಿಗೆ ಎಂಜಿನಿಯರಿಂಗ್ ಕಾಲೇಜನ್ನು ಮಂಜೂರು ಮಾಡಿತ್ತು. ಅದು ಕಾರ್ಯಾರಂಭ ಮಾಡುವ ಹಂತದಲ್ಲಿತ್ತು. ಆದರೆ ಪ್ರಾದೇಶಿಕ ಅಸಮಾನತೆ ನಿವಾರಣೆ ಬಗ್ಗೆ ಕಿಂಚಿತ್ತು ಪರಿಜ್ಞಾನವಿಲ್ಲದ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಪ್ರಭಾವ ಮತ್ತು ಗತ್ತನ್ನು ಬಳಸಿ ರಾಜ್ಯದಲ್ಲಿ ಸಾಪೇಕ್ಷವಾಗಿ ಮುಂದುವರಿದ ಬಳ್ಳಾರಿ ತಾಲ್ಲೂಕಿನ ಬಳ್ಳಾರಿ ನಗರಕ್ಕೆ ಅದನ್ನು ವರ್ಗಾಯಿಸುವಂತೆ ಮಾಡುವಲ್ಲಿ ಯಶಸ್ವಿಯಾದವು. ಈ ಬಗೆಯ ತೀರ್ಮಾನವನ್ನು ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಗಿದೆಯೆಂದರೆ ಸರ್ಕಾರಕ್ಕೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದರ ಬಗ್ಗೆ ಎಷ್ಟೊಂದು ಕಾಳಜಿಯಿದೆಯೆಂಬುದು ಇದರಿಂದ ತಿಳಿದು ಬರುತ್ತದೆ. ಈ ಬಗೆಯ ವಿಕೃತಿ ಬಗ್ಗೆ ಡಾ.ಡಿ.ಎಮ್.ನಂಜುಂಡಪ್ಪ ವರದಿ ಶಿಫಾರಸ್ಸು ಅನುಷ್ಠಾನ ಉನ್ನತಾಧಿಕಾರ ಸಮಿತಿ ಬಾಯಿ ಬಿಟ್ಟಿಲ್ಲ. ಈ ಸಮಿತಿಗೆ ಕೇವಲ ದೇಹವಿದೆ. ಅದಕ್ಕೆ ಹಲ್ಲುಗಳಾಲಿ ಅಥವಾ ನಾಲಗೆಯಾಗಲಿ ಇದ್ದಂತೆ ಕಾಣುವುದಿಲ್ಲ.

ಕೂಲಿಕಾರರ ಪಡಿತರಕ್ಕೆ ತಲಾ ರೂ1250.

ಈ ಬಜೆಟ್ಟಿನಲ್ಲಿ ಸಾರ್ವಜನಿಕ ವಿತರಣೆ ವ್ಯವಸ್ಥೆಯ ಆಹಾರ ಪಡಿತರ ಸೇವೆಗಾಗಿ ಸರ್ಕಾರವು 2009-10ನೆಯ ಸಾಲಿಗಾಗಿ ರೂ750 ಕೋಟಿಯನ್ನು ತೆಗೆದಿಟ್ಟಿದೆ. ಬಡವರಿಗೆ, ವಂಚಿತರಿಗೆ, ಕೂಲಿಕಾರರಿಗೆ, ಮಹಿಳೆಯರಿಗೆ, ಹಿಂದುಳಿದ ಪ್ರದೇಶದಲ್ಲಿ ದುಸ್ಥಿತಿಯಲ್ಲಿರುವವರಿಗೆ ಅನುಕೂಲ ಒದಗಿಸಬೇಕೆಂದರೆ ಸರ್ಕಾರವು ಹೇಗೆ ಕುಬ್ಜವಾಗಿ ಬಿಡುತ್ತದೆ ಎಂಬುದಕ್ಕೆ ಪಡಿತರ ವ್ಯವಸ್ಥೆಗೆ ನೀಡಿರುವ ಹಣದ ಮೊತ್ತವೇ ಸಾಕ್ಷಿ. ರಾಜ್ಯದಲ್ಲಿ ಇಂದು ಸರಿಸುಮಾರು 60 ಲಕ್ಷಕ್ಕೂ ಮೀರಿ ದಿನಗೂಲಿ ದುಡಿಮೆಗಾರರಿದ್ದಾರೆ. ಅವರು ಸದಾ ಆಹಾರ ಅಭದ್ರತೆಯನ್ನು ಎದುರಿಸುತ್ತಿರುತ್ತಾರೆ. ಅವರೆಲ್ಲರಿಗೂ ಪಡಿತರ ವ್ಯವಸ್ಥೆಯಡಿಯಲ್ಲಿ ಆಹಾರ ಬೇಕಾಗುತ್ತದೆ. ಈ 60 ಲಕ್ಷ ಕೂಲಿಕಾರರಿಗೆ ರೂ750 ಕೋಟಿಯನ್ನು ಹಂಚಿದರೆ ಒಬ್ಬೊಬ್ಬರಿಗೆ ದೊರೆಯುವ ಮೊತ್ತ ಕೇವಲ ವಾರ್ಷಿಕ ರೂ 1250 ಮಾತ್ರ (ದಿನಕ್ಕೆ ರೂ3.45 ಮಾತ್ರ). ದಂಡಿ ದಂಡಿಯಾಗಿ ಮಠ-ಮಾನ್ಯಗಳಿಗೆ ಅನುದಾನ ನೀಡುವ ಸರ್ಕಾರವು ದುಡಿಯುವ ವರ್ಗಕ್ಕೆ ಮಾತ್ರ ಅನುದಾನ ನೀಡಲು ಹಿಂದೆ ಮುಂದೆ ನೋಡುತ್ತದೆ. ಡಾ.ಎಲ್.ಬಿ ಅವರಿಗೆ ಸವಾಲು ಹಾಕುವಂತೆ ಸ್ವಾಮಿಗಳನ್ನು ಓಲೈಸುವ ಸರ್ಕಾರವು ಬಡವರ, ವಂಚಿತರ, ಕೂಲಿಕಾರರ, ಮಹಿಳೆಯರ ಆಕ್ರಂದನಕ್ಕೆ ಸ್ಪಂದಿಸುವುದಿಲ್ಲ. ಕೂಲಿಕಾರ ವರ್ಗವೊಂದಿದೆ ಎಂಬುದನ್ನು ಸರ್ಕಾರವು ಒಪ್ಪಿಕೊಳ್ಳ ಸಿದ್ಧವಿರುವಂತೆ ಕಾಣುವುದಿಲ್ಲ. ಬಡವರನ್ನು ಕೇವಲ 'ಜಾತಿ' ಚೌಕಟ್ಟಿನಲ್ಲಿ ಮಾತ್ರ ಗುರುತಿಸಲ್ಪಡುವ ಕ್ರಮವು ಜನತಂತ್ರ ವಿರೋಧಿಯಾದುದಾಗಿದೆ. ಜಾತಿಯಾಧಾರದ ಮೇಲೆ, ಮಠಗಳ ಆಧಾರದ ಮೇಲೆ, ಅನುದಾನ ಹಂಚುವ ಕ್ರಮ ಜನರ ಸಂಘರ್ಷಣಾತ್ಮಕ ಮತ್ತು ಸಂಘಟನಾತ್ಮಕ ನೆಲೆಗಳನ್ನು ಹತ್ತಿಕ್ಕುವ ಉದ್ದೇಶ ಹೊಂದಿರುವಂತೆ ಕಾಣುತ್ತದೆ. ಈ ಸರ್ಕಾರಕ್ಕೆ ಜನರು ಕೂಲಿಕಾರರಾಗಿ ವರ್ಗ ಸಂಬಂಧದ ನೆಲೆಯಲ್ಲಿ ಸಂಘಟಿತರಾಗುವುದು ಬೇಕಾಗಿಲ್ಲ. ಈ ಬಗೆಯ ಬಜೆಟ್ಟಿನ ಮೂಲದಲ್ಲಿ ದುಡಿಯುವ ವರ್ಗದ ಹಿತಾಸಕ್ತಿಯನ್ನು ಕಡೆಗಣಿಸುವ ನೀತಿಯು ಕೆಲಸ ಮಾಡುತ್ತಿರುವಂತೆ ಕಂಡು ಬರುತ್ತದೆ. ಅಭಿವೃದ್ಧಿಯನ್ನು ಇಲ್ಲಿ ಹಂಗಿನ ಸಂಗತಿಯಾಗಿ ನೋಡುವ ಕ್ರಮವಿದೆ ವಿನಾ ಅದನ್ನು ಹಕ್ಕಿನ ಸಂಗತಿಯನ್ನಾಗಿ ನೋಡುವ ಕ್ರಮವಿಲ್ಲ. ಮಠಮಾನ್ಯಗಳಿಗೆ, ಸ್ವಾಮಿಗಳಿಗೆ ನೀಡುತ್ತಿರುವ ಅನುದಾನವು ರಾಜ್ಯದಲ್ಲಿ ಹಂಗಿನ ಅಭಿವೃದ್ಧಿಯನ್ನು, ಹಂಗಿನ ಸಂಸ್ಕೃತಿಯನ್ನು ಪೋಷಿಸಬಹುದೇ ವಿನಾ ಹಕ್ಕಿನ-ಘನತೆಯಿಂದ ಕೂಡಿದ ಮತ್ತು ಅಭಿಮಾನದ ಬದುಕನ್ನು ಅದು ಬೆಳೆಸುವುದು ಸಾಧ್ಯವಿಲ್ಲ. ಅಭಿವೃದ್ಧಿಯನ್ನು ಕೂಲಿಕಾರರು ತಮ್ಮ ಹಕ್ಕನ್ನಾಗಿ ಒತ್ತಾಯಿಸುವುದು ಸರ್ಕಾರಕ್ಕೆ ಬೇಕಾಗಿಲ್ಲ. ಅದಕ್ಕೆ ಅದು ಬಡವರ ಸಿಟ್ಟನ್ನು, ಅವರ ಹೋರಾಟವನ್ನು ತಣ್ಣಗೆ ಮಾಡಿ ಜಾತಿಯ ಹೆಸರಿನಲ್ಲಿ ಮಾತ್ರ ಕೂಲಿಕಾರರು ಸಂಘಟಿತರಾಗುವುದನ್ನು ಅದು ಬಯಸುತ್ತಿರುವಂತೆ ಭಾಸವಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಮಠ-ಮಾನ್ಯಗಳಿಗೆ ನೀಡುತ್ತಿರುವ ಅನುದಾನವನ್ನು ಪರಿಭಾವಿಸಿಕೊಳ್ಳ ಬೇಕಾಗುತ್ತದೆ. ಮುಖ್ಯಮಂತ್ರಿಗಳು ತಮ್ಮ ಅಧಿಕಾರಾವಧಿ ಮಠ-ಮಾನ್ಯಗಳ ಸಮಾವೇಶಗಳಲ್ಲಿ ಕಂಡು ಬರುತ್ತಾರೆ ವಿನಾ ಕೂಲಿಕಾರರ ಸಮಾವೇಶಗಳಲ್ಲಿ ಕಂಡು ಬರುವುದಿಲ್ಲ. ಏಕೆಂದರೆ ಕೂಲಿಕಾರರು ಒಂದು ವರ್ಗವಾಗಿ ಸಂಘಟಿತರಾಗುವುದು ಅವರಿಗೆ ಬೇಕಾಗಿಲ್ಲ. ಆಧುನಿಕ ಪರಿಭಾವನೆಗಳ ಬಗ್ಗೆ ಇವರಿಗೆ ವಿರೋಧವಿರುವಂತೆ ಕಾಣುತ್ತದೆ. ಸಾಂಪ್ರದಾಯಿಕವಾದ ಪರಿಭಾವನೆಗಳ ಬಗ್ಗೆ ಅವರಿಗೆ ಅತಿಯಾದ ವಿಶ್ವಾಸ- ವ್ಯಾಮೋಹವಿರುವುದು ಕಂಡು ಬರುತ್ತದೆ.

ನಗರಾಭಿವೃದ್ಧಿಯು ಆದ್ಯತೆಯಾಗಿದೆ!

ಮುಖ್ಯಮಂತ್ರಿ ಅವರು 2009-10ನೆಯ ಸಾಲಿನ ಬಜೆಟ್ಟು ಭಾಷಣದ ಕಂಡಿಕೆ 41ರಲ್ಲಿ ತಮ್ಮ ಸರ್ಕಾರದ ಆದ್ಯತೆಯ ವಲಯಗಳಾವುವು ಎಂಬುದನ್ನು ತಿಳಿಸುತ್ತಾ ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು, ಗ್ರಾಮೀಣಾಭಿ

(49ನೇ ಪುಟಕ್ಕೆ)

ದಲಿತರ ಹಕ್ಕುಗಳ ಹಗಲು ದರೋಡೆ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಶತಮಾನಗಳಿಂದಲೂ ದಲಿತರು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುತ್ತಾ ಬಂದಿದ್ದಾರೆ. ಆದರೆ ಇತ್ತೀಚೆಗೆ ಉತ್ತರಪ್ರದೇಶದಲ್ಲಿ ದಲಿತರು ಕಾಂಗ್ರೆಸ್‌ನ ಬಿಗಿಹಿಡಿತದಿಂದ ಹೊರಬಂದಿದ್ದಾರೆ. ಉತ್ತರ ಪ್ರದೇಶದಾಚೆಗೂ ಕಾಂಗ್ರೆಸ್‌ನ ಬಗ್ಗೆ ಭ್ರಮನಿರಸನಗೊಂಡಿದ್ದರೂ, ದಲಿತರು ಈಗಲೂ ಕೂಡ ಕಾಂಗ್ರೆಸ್ ನಿಷ್ಠರಾಗಿದ್ದಾರೆ. ಆದರೆ ಅದೇಕೋ, ಕಾಂಗ್ರೆಸ್ ದಲಿತರನ್ನು ಶಿಕ್ಷಿಸಲು ನಿರ್ಧರಿಸಿದಂತಿದೆ. ಈ ಕೆಳಗಿನ ಅಂಶಗಳ ಆಧಾರದ ಮೇಲೆ ನಾನು ಈ ಹೇಳಿಕೆ ನೀಡುತ್ತಿದ್ದೇನೆ.

ಕಳೆದ ಲೋಕಸಭಾ ಚುನಾವಣೆಯ ವೇಳೆ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ದಲಿತರು ಮತ್ತು ಆದಿವಾಸಿಗಳ ಪರವಾಗಿ ಎರಡು ಪ್ರಮುಖ ಭರವಸೆಗಳನ್ನು ನೀಡಿತ್ತು:

೧. ಖಾಸಗಿ ಕ್ಷೇತ್ರದಲ್ಲಿ ದಲಿತರು ಮತ್ತು ಆದಿವಾಸಿಗಳಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ರಾಷ್ಟ್ರಮಟ್ಟದಲ್ಲಿ ಸಹಮತ ನಿರ್ಮಿಸುವುದು. ದೇಶದ ಕೆಳವರ್ಗಗಳ ಯುವಜನತೆಯ ಕನಸುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಭಾರತೀಯ ಉದ್ದಿಮೆಗಳ ಜೊತೆಗೆ ಮಾತುಕತೆ ಆರಂಭಿಸುವುದು.

೨. ಉದ್ದಿಮೆಗಳನ್ನು ಆರಂಭಿಸುವ ಆಸಕ್ತಿ ಹೊಂದಿರುವ ದಲಿತರು ಮತ್ತು ಆದಿವಾಸಿಗಳಿಗೆ ಬ್ಯಾಂಕ್‌ಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸುವ ಮೂಲಕ ವಿಶೇಷ ಆದ್ಯತೆ ನೀಡುವುದು.

ಈ ವಿಚಾರಗಳನ್ನು ಗಮನಿಸಿ ಸಂತಸಗೊಂಡವರಲ್ಲಿ ನಾನೂ ಒಬ್ಬ. ಆರ್ಥಿಕ ಸುಧಾರಣೆ ಮತ್ತು ಜಾಗತೀಕರಣದ ನೀತಿಗಳ ಪರಿಣಾಮವಾಗಿ ಖಾಸಗೀಕರಣ ಮತ್ತು ಸರ್ಕಾರದ ಉದ್ಯೋಗದ ಕಡಿತವುಂಟಾಗಿ, ದಲಿತರು ಮತ್ತು ಆದಿವಾಸಿಗಳ ಮಧ್ಯಮವರ್ಗ ಕೂಡ ಕ್ಷೀಣಿಸುತ್ತಾ ಬಂದಿದೆ. ಇದು ಆರ್ಥಿಕ ಸುಧಾರಣೆ ಬೀರಿದ ಬಹು ದೊಡ್ಡ ಕೆಟ್ಟ ಪರಿಣಾಮ. ಸದೃಢವಾದ ಮಧ್ಯಮವರ್ಗವನ್ನು ಹೊಂದಿಲ್ಲದ ಯಾವುದೇ ದೇಶ ಅಥವಾ ಸಮುದಾಯ ಬೆಳವಣಿಗೆ ಕಾಣಲು ಸಾಧ್ಯವಿಲ್ಲ.

ಆರ್ಥಿಕ ಸುಧಾರಣೆ ಮತ್ತು ಜಾಗತೀಕರಣ, ಹಣಗಳಿಕೆಯ ಹೊಸ ಪ್ರಕ್ರಿಯೆಗೆ ನಾಂದಿ ಹಾಡಿತು. ಬಂಡವಾಳಶಾಹಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಮೇಲೆ"ಸಾವಿರಾರು ದಲಿತರು ಬಂಡವಾಳಶಾಹಿಗಳಾಗಿರಬಹುದು" ಎಂದು ನಾನು ತಿಳಿದಿದ್ದೆ. ಆದರೆ ಆರ್‌ಎಸ್‌ಎಸ್, ಎಡಪಕ್ಷಗಳು, ಧರ್ಮನಿರಪೇಕ್ಷ ಮತ್ತು ಸಂಪ್ರದಾಯವಾದಿ ದಲಿತ ಬುದ್ಧಿಜೀವಿಗಳು 'ದಲಿತ ಬಂಡವಾಳಶಾಹಿ ವ್ಯವಸ್ಥೆ'ಯ ನನ್ನ ಪರಿಕಲ್ಪನೆಯನ್ನು ಸ್ವೀಕರಿಸಲಿಲ್ಲ. ದಲಿತನೋರ್ವ ಉದ್ಯೋಗ ನೀಡುವ ಧಣಿಯಾಗದ ಹೊರತು ಈ ದೇಶ ಜಾತಿವ್ಯವಸ್ಥೆಯ ಬಿಗಿಹಿಡಿತದಿಂದ ಹೊರಬರಲು ಸಾಧ್ಯವಿಲ್ಲ ಎಂಬುದು ನನ್ನ ದೃಢವಾದ ನಂಬಿಕೆ.

ಶತಮಾನಗಳಿಂದಲೂ ಜಾತಿಯಾಧಾರಿತ ಸಮಾಜದಲ್ಲಿ ದಲಿತರು ಜೀತಮಾಡುತ್ತಾ ಬಂದಿದ್ದಾರೆ. ಒಂದು ವೇಳೆ ದಲಿತರು ಮಾಲೀಕರಾಗಿ ಅಥವಾ ಬಂಡವಾಳಶಾಹಿಗಳಾಗಿ, ಬ್ರಾಹ್ಮಣ, ಠಾಕೂರ್, ಭೂಮಿಹಾರ್, ಜಾಟ್, ಯಾದವ್, ಪಟೇಲ್, ಮರಾಠಾ, ಕಮ್ಮ, ಒಕ್ಕಲಿಗ, ತೇವರ್, ನಾಯರ್ ಮತ್ತಿತರ ಜಾತಿಗಳ ಜನರಿಗೆ ಉದ್ಯೋಗ ನೀಡುವ ಸಂದರ್ಭ ಒದಗಿ ಬಂದರೆ, ತೊಂದರೆಯಾಗುವುದು ಯಾರಿಗೆ?

ಅಧಿಕಾರಕ್ಕೆ ಬಂದರೆ, ಖಾಸಗಿ ಉದ್ದಿಮೆಗಳಲ್ಲಿ ದಲಿತರಿಗೆ ಉದ್ಯೋಗ ಕಲ್ಪಿಸುವುದು ಮತ್ತು ದಲಿತ ಹಾಗೂ ಆದಿವಾಸಿ ಉದ್ದಿಮೆದಾರರಿಂದ ಉತ್ಪನ್ನಗಳನ್ನು ಖರೀದಿಸುವ ಮೂಲಕ ಅವರಿಗೆ ಉತ್ತೇಜನ ನೀಡುವುದರ ಬಗ್ಗೆ ಕಾಂಗ್ರೆಸ್ ಸರ್ಕಾರ ಮಾತನಾಡಿದಾಗ, ಆರ್ಥಿಕ ಸುಧಾರಣೆ ಸೃಷ್ಟಿಸಿದ ಸಮಸ್ಯೆಗಳನ್ನು ಬಗೆಹರಿಸುವ ಇರಾದೆ ಪಕ್ಷಕ್ಕಿದೆ ಎಂದು ನನಗನ್ನಿಸಿತ್ತು.

ಆದರೆ ಅಧಿಕಾರಕ್ಕೆ ಬಂದ ನಂತರ ಯುಪಿಎ ಮಾಡಿದ್ದೇನು? "ದಲಿತರು ಮತ್ತು ಆದಿವಾಸಿ ಸಮುದಾಯಗಳಲ್ಲಿ ಉದ್ದಿಮೆ ಸ್ಥಾಪಿಸುವ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಸರ್ವಪ್ರಯತ್ನ ನಡೆಸಲು ಬದ್ಧ" ಎಂಬ ಕಾಂಗ್ರೆಸ್ ಪಕ್ಷದ ಭರವಸೆಯನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಪಟ್ಟಿಯಿಂದ ತೆಗೆದುಹಾಕಲಾಯಿತು.

ಚುನಾವಣೆಯ ಸಂದರ್ಭದಲ್ಲಿ ನೀಡಿದ ಭರವಸೆಯನ್ನು ಈಡೇರಿಸದಿರುವುದು ಪ್ರಜಾತಂತ್ರ ವ್ಯವಸ್ಥೆಯ ಸೈದ್ಧಾಂತಿಕ ಅಪರಾಧವಲ್ಲವೇ? ಹೀಗಿದ್ದರೂ ಕಾಂಗ್ರೆಸ್ ಪಕ್ಷ ಈ ಕ್ರಮ ಕೈಗೊಂಡುದುದೇಕೆ? ಹೀಗೆ ಮಾಡುವಾಗ, ಖಾಸಗಿ ವಲಯದಲ್ಲಿ ದಲಿತರ ಪರವಾಗಿ 'ರಾಷ್ಟ್ರೀಯ ಸಹಮತ' ನಿರ್ಮಿಸುವ ಮಾತನಾಡಿದ ಕಾಂಗ್ರೆಸ್ ಪಕ್ಷದ ಅಂತಃಕರಣ ಕಲಕಲಿಲ್ಲವೇ?

ಕಾಂಗ್ರೆಸ್ ಇಂತಹ ಆಟಗಳನ್ನು ಆಡುತ್ತಲೇ ಬಂದಿದೆ. ಈಗ ಕಾಂಗ್ರೆಸ್ ಸರ್ಕಾರ 'ದಲಿತರನ್ನು ಜ್ಞಾನಶಾಖೆಯಿಂದ ಹೊರಡೂಡುವ' ಹೊಸ ಯೋಜನೆಯೊಂದನ್ನು ತಂದಿದೆ. ರಾಷ್ಟ್ರೀಯ ಪ್ರಾಮುಖ್ಯತೆ ಹೊಂದಿರುವ ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಾತಿಯಲ್ಲಿ ಮೀಸಲಾತಿಯನ್ನು ನಿಲ್ಲಿಸುವ ಹುನ್ನಾರ ಒಳಗೊಂಡಿರುವ "೨೦೦೮ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಸೂದೆ'ಯನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಮಂತ್ರಿಮಂಡಲದಲ್ಲಿ ಅಂಗೀಕರಿಸಿದೆ.

ಇದರರ್ಥ ಏನು? ಏಮ್ಸ್, ಐಐಟಿ ಮತ್ತು ಐಐಎಂನಂತಹ ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ದಲಿತರು ನೇಮಕಾತಿ ಪ್ರಕ್ರಿಯೆಯಲ್ಲಿ ಮೀಸಲಾತಿಯನ್ನು ಹೊಂದಿರುವುದಿಲ್ಲ. ಇದರ ಪರಿಣಾಮವಾಗಿ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತೊಮ್ಮೆ ಜ್ಞಾನಶಾಖೆಯಿಂದ ಬಹಿಷ್ಕೃತಗೊಳ್ಳುತ್ತವೆ.

ಲೋಕಸಭೆಯಲ್ಲಿ ಮಸೂದೆ ಅಂಗೀಕೃತವಾದರೆ, ಮತ್ತೊಮ್ಮೆ ಜಾತಿಯಾಧಾರಿತ ತಾರತಮ್ಯ ಅಸ್ತಿತ್ವಕ್ಕೆ ಬರುವುದರಲ್ಲಿ ಸಂಶಯವೇ ಇಲ್ಲ. ಅಂದರೆ ದಲಿತರು ವಿದ್ಯಾರ್ಥಿಗಳಾಗಿರಲು ಮಾತ್ರ ಲಾಯಕ್ಕು, ಶಿಕ್ಷಕರಾಗಲು ಲಾಯಕ್ಕಿಲ್ಲ ಎಂಬ ಧೋರಣೆ ಇದರ ಹಿಂದಿದೆ.

ಯುಪಿಎ ಸರ್ಕಾರ ಇಂತಹ ಕೆಲಸ ಯಾಕೆ ಮಾಡುತ್ತಿದೆ? ಮಸೂದೆ ಮಂತ್ರಿಮಂಡಲದಲ್ಲಿ ಅಂಗೀಕೃತವಾದಾಗ ಪಾಸ್ವಾನ್ ಮತ್ತು ಶಿಂಧೆ ಏನು ಮಾಡುತ್ತಿದ್ದರು? ಈ ವಿಚಾರದ ಬಗ್ಗೆ ಅರ್ಜುನ್‌ಸಿಂಗ್ ಯಾಕೆ ಮೌನ ವಹಿಸಿದ್ದಾರೆ?

ಬಹುಶಃ, ಬಿಎಸ್‌ಪಿಯ ಯಶಸ್ಸಿನಿಂದ ಕಾಂಗ್ರೆಸ್ ಪಕ್ಷ ಅಸಮಧಾನಗೊಂಡಿರಬಹುದು. ದಲಿತರು ತಮ್ಮ ಸ್ವತ್ತೆಂದು ತಿಳಿದುಕೊಂಡಿದ್ದ ಕಾಂಗ್ರೆಸ್ ಮಡಿಲಿನಿಂದ ದಲಿತರನ್ನು ಮಾಯಾವತಿ ಕಸಿದುಕೊಂಡಿದ್ದಾರೆ. ಒಂದು ವೇಳೆ ಮಸೂದೆ ಅಂಗೀಕಾರಕ್ಕೆ

ನಾವು ಕಾಲೇಜಿನ ಕ್ಯಾಂಪಸ್ ಪ್ರವೇಶಿಸಿದಂತೆ ಸುಮಾರು ೮,೦೦೦ ವಿದ್ಯಾರ್ಥಿಗಳು ಜಾಧವ್ ಅವರನ್ನು ಕಿವಿಗಡಚಿಕ್ಕುವ ಕರತಾಡನದೊಂದಿಗೆ ಸ್ವಾಗತಿಸಿದರು. ಚಪ್ಪಾಳೆಗಳ ಸದ್ದಿನ ನಡುವೆ ಡಾ. ಜಾಧವ್ ರಾಕ್ ಸ್ಟಾರ್‌ನಂತೆ ವೇದಿಕೆ ಪ್ರವೇಶಿಸಿದರು. ಭಾರತೀಯ ಒಬಾಮಾ ಎಂದೇ ಖ್ಯಾತರಾಗಿರುವ ಜಾಧವ್ ಅವರು ಕುಲಪತಿಗಳ ರೀತಿಯಲ್ಲದೆ ಪ್ರೇರಣಾತ್ಮಕವಾಗಿ ಮಾತನಾಡಿದರು. ಕಾರ್ಯಕ್ರಮ ಮುಗಿದ ನಂತರ ಜಾಧವ್ ತಮ್ಮ ಕಾರಿನ ಬಳಿ ತಲುಪುವವರೆಗೂ ನೂರಾರು ವಿದ್ಯಾರ್ಥಿಗಳು ಅವರಿಗೆ ಜೈಕಾರ ಹಾಕುತ್ತಾ ಹಿಂಬಾಲಿಸುತ್ತಿದ್ದರು. ಅಹಮದ್‌ನಗರದಂತಹ ಸಣ್ಣ ಪಟ್ಟಣದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕಿಡಿ ಹೊತ್ತಿಸಿರುವ ಜಾಧವ್ ಅವರಿಗೆ ಈ ಜೈಕಾರಗಳು ಸಲ್ಲಲೇಬೇಕಿತ್ತು.

ಕನ್ನಡಕ್ಕೆ: ಸತ್ಯಪ್ರಕಾಶ್ ಎಂ ಆರ್

ಇದೇ ಕಾರಣವಾದರೆ, ಬಿಎಸ್‌ಪಿ ವಿರುದ್ಧ ಕಾಂಗ್ರೆಸ್ ಪಕ್ಷ ಹೋರಾಡಿ ದಲಿತರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಬೇಕು. ಆದರೆ ಈ ಮಸೂದೆ, ದಲಿತರ ಹಕ್ಕುಗಳ ಹಗಲು ದರೋಡೆಯೇ ಸರಿ.

ಜಾಧವ್ ಮಾದರಿ

ಆರ್ಥಿಕ ಕುಸಿತದ ಈ ದಿನಗಳಲ್ಲಿ, ವಾಡುಲೆ ಎಂಬ ಗ್ರಾಮ ಆಶಾವಾದದ ಬುಗ್ಗೆಯಾಗಿ ಹೊರಹೊಮ್ಮಿದೆ. ಮಹಾರಾಷ್ಟ್ರದ ಅಹಮದ್‌ನಗರ್ ಜಿಲ್ಲೆಯ ವ್ಯಾಪ್ತಿಗೆ ಬರುವ ಈ ಗ್ರಾಮ ಪುಣೆ ನಗರದಿಂದ ೭೫ ಕಿ. ಮೀ ದೂರದಲ್ಲಿದೆ. ಕ್ಷಾಮದಿಂದ ತತ್ತರಿಸುತ್ತಿದ್ದ ಈ ಗ್ರಾಮದಲ್ಲಿ ೯೮ ಕುಟುಂಬಗಳು ವಾಸ ಮಾಡುತ್ತಿವೆ. ೧೫ ವರ್ಷಗಳ ಹಿಂದೆ ವಾಡುಲೆಗೆ ಸಂಪರ್ಕ ಕಲ್ಪಿಸುವ ರಸ್ತೆಯೇ ಇರಲಿಲ್ಲ. ಆದರೆ ಇಂದು ಇಲ್ಲಿನ ಎಲ್ಲ ೯೮ ಕುಟುಂಬಗಳು ವಾಸಿಸುವ ಮನೆಗಳಲ್ಲಿ ಅತ್ಯಾಧುನಿಕ ಶೌಚಾಲಯಗಳಿವೆ. ಫೆಬ್ರವರಿ ೧೫ಕ್ಕೂ ಮುಂಚೆ ಶೌಚಾಲಯಗಳನ್ನು ಹೊಂದಿರುವ ಹಳ್ಳಿಯನ್ನು ನಾನು ಭಾರತದಲ್ಲಿ ನೋಡಿರಲೇ ಇಲ್ಲ. ಈ ಮಾಂತ್ರಿಕ ಬದಲಾವಣೆಗೆ ಕಾರಣರಾದವರು ಮತ್ಯಾರೂ ಅಲ್ಲ, ಪ್ರಸ್ತುತ ಪುಣೆ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುವ, "ಅನ್‌ಟಚಬಲ್ಸ್: ಮೈ ಫ್ಯಾಮಿಲೀಸ್ ಟ್ರಯಂಪಂಟ್ ಎಸ್ಕೇಪ್ ಫ್ರಂ ಇಂಡಿಯಾಸ್ ಕ್ಯಾಸ್ಟ್ ಸಿಸ್ಟಂ" (ಅಸ್ಪೃಶ್ಯತೆ: ಭಾರತೀಯ ಜಾತಿವ್ಯವಸ್ಥೆಯ ಹಿಡಿತದಿಂದ ನನ್ನ ಕುಟುಂಬದ ಯಶಸ್ವಿ ಫಲಾಯನ) ಕೃತಿಯ ಕರ್ತೃ, ಖ್ಯಾತ ಅರ್ಥಶಾಸ್ತ್ರಜ್ಞ ನರೇಂದ್ರ ಜಾಧವ್.

ದಲಿತರಿಗೆ ಸಂಬಂಧಿಸಿದ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಭಾಗವಹಿಸಲು ನಾನು ಪುಣೆ ವಿಶ್ವವಿದ್ಯಾನಿಲಯಕ್ಕೆ ಇತ್ತೀಚೆಗೆ (ಫೆಬ್ರವರಿ ೧೪-೧೭) ಭೇಟಿ ನೀಡಿದ್ದೆ. ವಿಚಾರಸಂಕಿರಣದ ಮೊದಲ ದಿನವೇ ಎಲ್ಲರೂ 'ಸಮರ್ಥ ಭಾರತ ಅಭಿಯಾನ'ದ ಬಗ್ಗೆ ಮಾತನಾಡುತ್ತಿದ್ದು ದನ್ನು ಗಮನಿಸಿದೆ.

ಡಾ. ನರೇಂದ್ರ ಜಾಧವ್ ಅವರ ಯೋಜನೆಗಳ ಬಗ್ಗೆ ತಿಳಿದುಕೊಳ್ಳುವ ನಮ್ಮ ಉತ್ಸಾಹವನ್ನು ಗಮನಿಸಿದ ವಿಚಾರಸಂಕಿರಣದ ಆಯೋಜಕರಾದ ಡಾ. ವಿಜಯ್ ಖರೆ, ಜಾಧವ್ ಅವರೊಂದಿಗೆ ನಮ್ಮ ಸಭೆಗೆ ಏರ್ಪಾಟು ಮಾಡಿದರು. ಮಾರನೆಯ ದಿನ ಅಹಮದ್‌ನಗರ ಜಿಲ್ಲೆಯ 'ನ್ಯೂ ಕಲೆ ಮತ್ತು ವಿಜ್ಞಾನ ಕಾಲೇಜ್'ನಲ್ಲಿ ವೃತ್ತಿಮಹೋತ್ಸವವನ್ನು ಉದ್ಘಾಟಿಸಲು ಹೊರಟಿದ್ದ ಜಾಧವ್ ನಮ್ಮನ್ನೂ ಕರೆದುಕೊಂಡು ಹೋದರು.

ಹೀಗಾಗಿ, ಡಿ. ಶ್ಯಾಂ ಬಾಬು, ಡಾ. ರಾಜೇಶ್ ಪಾಸ್ವಾನ್ ಮತ್ತು ನಾನು, ಕುಲಪತಿಗಳ ಕಾರಿನಲ್ಲಿ ಕುಳಿತು ಬೆಳಿಗ್ಗೆ ೮ ಗಂಟೆಗೆ ಪ್ರಯಾಣ ಬೆಳೆಸಿದೆವು. ಕುಲಪತಿಗಳ ರಕ್ಷಣೆಗೆ ಓರ್ವ ವ್ಯಕ್ತಿ ಮಾತ್ರ ಇದ್ದುದನ್ನು ಕಂಡು ನನಗೆ ಕೊಂಚ ಆತಂಕವಾಯಿತು. ಸಾಮಾನ್ಯವಾಗಿ ಕುಲಪತಿಗಳು ಭಾಷಣ ಮಾಡುವಾಗ ಉದ್ರೇಕಗೊಂಡ ವಿದ್ಯಾರ್ಥಿಗಳಿಂದ ರಕ್ಷಿಸಲು ಹತ್ತರಿಂದ ಹನ್ನೆರಡು ಶಸ್ತ್ರಸಜ್ಜಿತ ಅಂಗರಕ್ಷಕರಿರುತ್ತಾರೆ. "ಕುಲಪತಿಗಳು ಅಹಮದ್‌ನಗರ ತಲುಪಿದ ಮೇಲೆ ಹೆಚ್ಚುವರಿ ಅಂಗರಕ್ಷಕರು ಸೇರಿಕೊಳ್ಳಬಹುದು" ಎಂದು ಭಾವಿಸಿದೆ. ಆದರೆ ಅಂತಹುದೇನೂ ನಡೆಯಲಿಲ್ಲ.

ನಾವು ಕಾಲೇಜಿನ ಕ್ಯಾಂಪಸ್ ಪ್ರವೇಶಿಸಿದಂತೆ ಸುಮಾರು ೮,೦೦೦ ವಿದ್ಯಾರ್ಥಿಗಳು ಜಾಧವ್ ಅವರನ್ನು ಕಿವಿಗಡಚಿಕ್ಕುವ ಕರತಾಡನದೊಂದಿಗೆ ಸ್ವಾಗತಿಸಿದರು. ಚಪ್ಪಾಳೆಗಳ ಸದ್ದಿನ ನಡುವೆ ಡಾ. ಜಾಧವ್ ರಾಕ್‌ಸ್ಟಾರ್‌ನಂತೆ ವೇದಿಕೆ ಪ್ರವೇಶಿಸಿದರು. ಭಾರತೀಯ ಒಬಾಮಾ ಎಂದೇ ಖ್ಯಾತರಾಗಿರುವ ಜಾಧವ್ ಅವರು ಕುಲಪತಿಗಳ ರೀತಿಯಲ್ಲದೆ ಪ್ರೇರಣಾತ್ಮಕವಾಗಿ ಮಾತನಾಡಿದರು. ಕಾರ್ಯಕ್ರಮ ಮುಗಿದ ನಂತರ ಜಾಧವ್ ತಮ್ಮ ಕಾರಿನ ಬಳಿ ತಲುಪುವವರೆಗೂ ನೂರಾರು ವಿದ್ಯಾರ್ಥಿಗಳು ಅವರಿಗೆ ಜೈಕಾರ ಹಾಕುತ್ತಾ ಹಿಂಬಾಲಿಸುತ್ತಿದ್ದರು. ಅಹಮದ್‌ನಗರದಂತಹ ಸಣ್ಣ ಪಟ್ಟಣದ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಕಿಡಿ ಹೊತ್ತಿಸಿರುವ ಜಾಧವ್ ಅವರಿಗೆ ಈ ಜೈಕಾರಗಳು ಸಲ್ಲಲೇಬೇಕಿತ್ತು.

ಮಹಾನಗರಗಳ ವಿದ್ಯಾರ್ಥಿಗಳಿಗೆ ಹೋಲಿಸಿದರೆ, ಸಣ್ಣ ಪಟ್ಟಣಗಳ ವಿದ್ಯಾರ್ಥಿಗಳು ಹಲವಾರು ರೀತಿಯಲ್ಲಿ ಹಿಂದುಳಿದಿರುತ್ತಾರೆ. ಈ ಅಂತರವನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಕಷ್ಟವಾದರೂ, ಹೊಸ ರೀತಿಯ ಚಿಂತನೆಯಿಂದ ಅಂತರವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು. ಜಾಧವ್ ಅವರ 'ಸಮರ್ಥ ಭಾರತ ಮಿಷನ್' ನಡಿ ಸುಮಾರು ೮೭ ಸಂಸ್ಥೆಗಳು ಕಾಲೇಜು ಕ್ಯಾಂಪಸ್‌ಗಳಲ್ಲಿ ತಮ್ಮ ಮಳಿಗೆಗಳನ್ನು ತೆರೆದಿದ್ದವು. ಪ್ರತಿ ಮಳಿಗೆಯ ಬಳಿ ಗುಂಪುಗಳಲ್ಲಿ ಪ್ರೊಫೆಸರ್‌ಗಳು ನಿಂತು ವಿದ್ಯಾರ್ಥಿಗಳಿಗೆ ವಿಷಯದ ಆಯ್ಕೆ, ಶಿಕ್ಷಣ ಮತ್ತು ಕಲಿಕೆಯ ಬಗ್ಗೆ ಮಾಹಿತಿ ನೀಡುತ್ತಿದ್ದುದು ಕಂಡುಬಂತು. ಪ್ರಾಂಶುಪಾಲರಾದ ಯು ಆರ್ ಘುಲೆ ಅವರ ನೇತೃತ್ವದಲ್ಲಿ ಈ ಸಮಾರಂಭವನ್ನು ಕಾಲೇಜಿನ ಆಡಳಿತವರ್ಗ ಅದ್ಭುತವಾಗಿ ಆಯೋಜಿಸಿತ್ತು. ಕೆಲವು ಕೇಂದ್ರೀಯ ವಿಶ್ವವಿದ್ಯಾನಿಲಯಗಳು ಕೂಡ ಈ ಮಟ್ಟದ ಕಾರ್ಯಕ್ರಮ ಆಯೋಜಿಸುವುದಿಲ್ಲ. ಕಾಲೇಜಿನ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕರಾದ ಡಾ. ಸಂಭಾಜಿ ಅಣ್ಣಾಸಾಹೇಬ್ ಪಥಾರೆ ಅವರ ಪ್ರಕಾರ ಫೆಬ್ರವರಿ ೧೪-೧೭ರವರೆಗೆ ಸುಮಾರು ೫೨.೦೦೦ ವಿದ್ಯಾರ್ಥಿಗಳು ಮತ್ತು ಪೋಷಕರು ಕೌನ್ಸೆಲಿಂಗ್‌ಗೆ ನೊಂದಾಯಿಸಿಕೊಂಡರು. ಸುಮಾರು ೮೦,೦೦೦ ವಿದ್ಯಾರ್ಥಿಗಳನ್ನೊಳಗೊಂಡ ೧೦೬ ಕಾಲೇಜುಗಳು ಅಹಮದ್‌ನಗರ ಜಿಲ್ಲೆಯಲ್ಲಿ ಪುಣೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತದೆ.

ಆರ್ಥಿಕ ಕುಸಿತದ ಈ ದಿನಗಳಲ್ಲಿ, ವಾಡುಲೆ ಎಂಬ ಗ್ರಾಮ ಆಶಾವಾದದ ಬುಗ್ಗೆಯಾಗಿ ಹೊರಹೊಮ್ಮಿದೆ. ಮಹಾರಾಷ್ಟ್ರದ ಅಹಮದ್‌ನಗರ್ ಜಿಲ್ಲೆಯ ವ್ಯಾಪ್ತಿಗೆ ಬರುವ ಈ ಗ್ರಾಮ ಪುಣೆ ನಗರದಿಂದ ೭೫ ಕಿ. ಮೀ ದೂರದಲ್ಲಿದೆ. ಕ್ಷಾಮದಿಂದ ತತ್ತರಿಸುತ್ತಿದ್ದ ಈ ಗ್ರಾಮದಲ್ಲಿ ೯೮ ಕುಟುಂಬಗಳು ವಾಸ ಮಾಡುತ್ತಿವೆ. ೧೫ ವರ್ಷಗಳ ಹಿಂದೆ ವಾಡುಲೆಗೆ ಸಂಪರ್ಕ ಕಲ್ಪಿಸುವ ರಸ್ತೆಯೇ ಇರಲಿಲ್ಲ. ಆದರೆ ಇಂದು ಇಲ್ಲಿನ ಎಲ್ಲ ೯೮ ಕುಟುಂಬಗಳು ವಾಸಿಸುವ ಮನೆಗಳಲ್ಲಿ ಅತ್ಯಾಧುನಿಕ ಶೌಚಾಲಯಗಳಿವೆ. ಫೆಬ್ರವರಿ ೧೫ಕ್ಕೂ ಮುಂಚೆ ಶೌಚಾಲಯಗಳನ್ನು ಹೊಂದಿರುವ ಹಳ್ಳಿಯನ್ನು ನಾನು ಭಾರತದಲ್ಲಿ ನೋಡಿರಲೇ ಇಲ್ಲ. ಈ ಮಾಂತ್ರಿಕ ಬದಲಾವಣೆಗೆ ಕಾರಣರಾದವರು ಮತ್ಯಾರೂ ಅಲ್ಲ, ಪ್ರಸ್ತುತ ಪುಣೆ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುವ, "ಅನ್‌ಟಚಬಲ್ಸ್: ಮೈ ಫ್ಯಾಮಿಲೀಸ್ ಟ್ರಯಂಪಂಟ್ ಎಸ್ಕೇಪ್ ಫ್ರಂ ಇಂಡಿಯಾಸ್ ಕ್ಯಾಸ್ಟ್ ಸಿಸ್ಟಂ" (ಅಸ್ಪೃಶ್ಯತೆ: ಭಾರತೀಯ ಜಾತಿವ್ಯವಸ್ಥೆಯ ಹಿಡಿತದಿಂದ ನನ್ನ ಕುಟುಂಬದ ಯಶಸ್ವಿ ಫಲಾಯನ) ಕೃತಿಯ ಕರ್ತೃ, ಖ್ಯಾತ ಅರ್ಥಶಾಸ್ತ್ರಜ್ಞ ನರೇಂದ್ರ ಜಾಧವ್.

ಜಾಧವ್ ಅವರದು ಸರಳವಾದ ಸಿದ್ಧಾಂತ– ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳ ಮೂಲಕ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವುದು. ಇನ್ನು ಕಾಲೇಜುಗಳು ಮತ್ತು ಅಲ್ಲಿನ ವಿದ್ಯಾರ್ಥಿಗಳು ಗ್ರಾಮಸ್ಥರಿಗೆ ಪ್ರೇರಣೆ ನೀಡುವುದು. ಈ ನಿಟ್ಟಿನಲ್ಲಿ ಪ್ರತಿ ಕಾಲೇಜು ಒಂದು ಹಳ್ಳಿಯನ್ನು 'ದತ್ತು' ತೆಗೆದುಕೊಳ್ಳುವುದು.

೫೩೬ ಹಳ್ಳಿಗಳಲ್ಲಿ ಸುಮಾರು ೪೭೨ ಕಾಲೇಜುಗಳು ಒಂದೊಂದು ಹಳ್ಳಿಗಳನ್ನು ದತ್ತು ತೆಗೆದುಕೊಂಡಿವೆ. ಶಿಕ್ಷಕರ ನೇತೃತ್ವದಲ್ಲಿ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಹತ್ತು ದಿವಸಗಳ ಕಾಲ ಉಳಿದುಕೊಳ್ಳುತ್ತಾರೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಅತ್ಯಾಧುನಿಕ ಶೌಚಾಲಯಗಳನ್ನು ನಿರ್ಮಿಸಲು ಸಹಾಯ ಮಾಡುವುದಷ್ಟೇ ಅಲ್ಲದೆ, ಆರೋಗ್ಯಕ್ಕೆ ಸಂಬಂಧಿಸಿದ ವಿಚಾರಗಳು, ಕೃಷಿ ಮತ್ತು ಮಣ್ಣಿನ ಗುಣಮಟ್ಟದ ಬಗ್ಗೆ ಮಾಹಿತಿ ನೀಡುತ್ತಾರೆ. ಇಲ್ಲಿಯವರೆಗೆ ೧೯೫ ಹಳ್ಳಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವಲ್ಲಿ ಕಾಲೇಜುಗಳು ಗ್ರಾಮಸ್ಥರಿಗೆ ನೆರವು ನೀಡಿವೆ. ನಾವು ವಾಡುಲೆ ಗ್ರಾಮಕ್ಕೆ ಭೇಟಿ ನೀಡಿದಾಗ ೯೨ ಮಂದಿ ಕಾಲೇಜು ವಿದ್ಯಾರ್ಥಿಗಳು ಮತ್ತು ೩೨ ಮಂದಿ ವಿದ್ಯಾರ್ಥಿನಿಯರು ಮಳೆನೀರು ಮರುಬಳಕೆ ವ್ಯವಸ್ಥೆಯ ನಿರ್ಮಾಣ ಕಾರ್ಯದಲ್ಲಿ ನಿರತರಾಗಿದ್ದರು. ಇಲ್ಲಿ ಕೂಡ ಜಾಧವ್ ಅವರಿಗೆ ಹೀರೋ ಮಾದರಿಯ ಸ್ವಾಗತ ನೀಡಲಾಯಿತು. "ಅವರು ನಮ್ಮ ಬದುಕುಗಳನ್ನು ಬದಲಾಯಿಸುತ್ತಿದ್ದಾರೆ" ಎಂದು ಕೆಲವು ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದರು.

ಜಾಧವ್ ಅವರ ಮಾದರಿ ಎಲ್ಲರನ್ನೂ ಸಬಲರನ್ನಾಗಿಸುಂತಹ ಮಾದರಿ. ಸಂಯೋಜನೆಗೆ ಒಳಗೊಂಡಿರುವ ಕಾಲೇಜುಗಳಲ್ಲಿ ವಿಶ್ವವಿದ್ಯಾನಿಲಯ ಕೂಡ ಹೆಚ್ಚಿನ ಸೌಕರ್ಯ ಕಲ್ಪಿಸಬೇಕು. ಯಾಕೆಂದರೆ ತನ್ನೆಲ್ಲ ಚಟುವಟಿಕೆಗಳಿಗೆ ಈ ಕಾಲೇಜುಗಳಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಈ ಪ್ರಕ್ರಿಯೆ ಒಟ್ಟಾರೆ ವಿಶ್ವವಿದ್ಯಾನಿಲಯದ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಕೆಲವು ಹಳ್ಳಿಗಳನ್ನು ಕಾಲೇಜುಗಳು ಮಾದರಿ ಗ್ರಾಮಗಳಾಗಿ ಪರಿವರ್ತಿಸಿದರೆ, ಉಳಿದ ಗ್ರಾಮಗಳು ಸ್ವಯಂಪ್ರೇರಣೆಯಿಂದ ಅದೇ ಹಾದಿಯಲ್ಲಿ ಸಾಗುತ್ತವೆ. "ನಮ್ಮಲ್ಲಿ ಎಲ್ಲರ ಮನೆಗಳಲ್ಲಿಯೂ ಶೌಚಾಲಯಗಳು ಇರುವುದರಿಂದ, ಇಲ್ಲಿನ ವರಗಳಿಗೆ ಹೆಚ್ಚಿನ ಬೇಡಿಕೆಯಿದೆ," ಎನ್ನುತ್ತಾರೆ ವಾಡುಲೆಯ ಗ್ರಾಮಸ್ಥರೊಬ್ಬರು.

ಮನ್ವಂತರ ಕಾಲದಲ್ಲಿರುವ ಎಲ್ಲ ಸಮಾಜಗಳು

ವೈಟ್‌ಡಾಗ್ ಬಿಲಿಯನೇರ್‌ಗಳು

ಅತ್ಯುತ್ತಮವಾದ ಕಲೆ ಮತ್ತು ಸಾಹಿತ್ಯವನ್ನು ಸೃಷ್ಟಿಸುತ್ತದೆ ಎಂಬುದು ಸಾರ್ವತ್ರಿಕವಾಗಿ ಒಪ್ಪಿತವಾಗಿರುವ ಅಂಶ. ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯಾಗುವ ಮುನ್ನ ಪುನರುತ್ಥಾನದ ಅವಧಿಯಲ್ಲಿ ಸಾಹಿತ್ಯ, ಕಲೆ ವಿಜೃಂಭಿಸಿ, ೧೭ನೆಯ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು. ೧೭ನೆಯ ಶತಮಾನದ ಆರಂಭದಲ್ಲಿ ಷೇಕ್ಸ್‌ಪಿಯರ್ 'ಹ್ಯಾಮ್ಲೆಟ್' ಮತ್ತು 'ಮ್ಯಾಕ್‌ಬೆತ್' ನಾಟಕಗಳನ್ನು ರಚಿಸಿದ ಎನ್ನಲಾಗಿದೆ. ಊಳಿಗಮಾನ್ಯ ವ್ಯವಸ್ಥೆಯಿಂದ ಮುಕ್ತವಾಗಿ ಆಧುನಿಕ ಯುಗವನ್ನು ಬ್ರಿಟನ್ ಪ್ರವೇಶಿಸುತ್ತಿದ್ದ ಕಾಲ ಅದು.

ಭಾರತ ಕೂಡ ಇತಿಹಾಸದ ಈ ಯುಗಪರಿವರ್ತನೆಯ ಕಾಲಘಟ್ಟದಲ್ಲಿ ನರಕಸದೃಶ ಕೃಷಿಸಮಾಜದಿಂದ, ಬಂಡವಾಳಶಾಹಿವ್ಯವಸ್ಥೆಯನ್ನು ಒಳಗೊಂಡ ಆಧುನಿಕ ಯುಗವನ್ನು ಪ್ರವೇಶಿಸುತ್ತಿದೆ. ವಿಶ್ವದ ಮುಂದುವರೆದ ರಾಷ್ಟ್ರಗಳು ಭಾರತದಂತಹ ದೇಶಗಳನ್ನು 'ಪರಿವರ್ತನೆಯ ಪ್ರಕ್ರಿಯೆಯಲ್ಲಿರುವ ರಾಷ್ಟ್ರಗಳು' ಎಂದು ಗುರುತಿಸುತ್ತವೆ. ಇನ್ನು ಭಾರತದಲ್ಲಿ ಒಂದು ರೀತಿಯ ಸಾಮಾಜಿಕ ಸುನಾಮಿ ಘಟಿಸುತ್ತಿದೆ. ಇದರ ಪರಿಣಾಮವಾಗಿ ತೀರದಲ್ಲಿರುವವರು ತತ್ತರಿಸುತ್ತಿದ್ದರೆ, ಎತ್ತರದ ಅಲೆಗಳ ಮೇಲೆ ಸವಾರಿ ಮಾಡುವವರು ಮೋಜು ಮಾಡುತ್ತಿದ್ದಾರೆ. ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಠಾಕೂರ್ ಸಮುದಾಯದವರು ದಲಿತರ ಕೈಕೆಳಗೆ ಕೆಲಸ ಮಾಡುವುದಕ್ಕಿಂತ ಇನ್ನಾವ ಕ್ರಾಂತಿಕಾರಿ ಬದಲಾವಣೆ ಕಾಣಬೇಕಿದೆ ಭಾರತ? ದಶಕದ ಹಿಂದೆ ಠಾಕೂರರ ಬೇಕು-ಬೇಡಗಳನ್ನಾಧರಿಸಿದ ಆಸ್ಕರ್ ವಿಜೇತ ಚಲನಚಿತ್ರ ನಿರ್ಮಿಸಬಹುದಿತ್ತು. ಆದರೆ ಈಗ ಠಾಕೂರರ ಸಮಸ್ಯೆಗಳ ಬಗ್ಗೆ ಅಂತಹುದೇ ಚಲನಚಿತ್ರ ನಿರ್ಮಿಸಬಹುದು.

ಬದಲಾವಣೆಯ ಕಾಲಘಟ್ಟದಲ್ಲಿ ಅತ್ಯುತ್ತಮವಾದ ಕಲೆ ಸೃಷ್ಟಿಯಾಗುತ್ತದೆ. ಯಾಕೆಂದರೆ, ಕಲಾವಿದರು ಬದಲಾವಣೆಯ ರೂವಾರಿಗಳಾಗಿರುತ್ತಾರೆ. ಈ ಅವಧಿಯಲ್ಲಿ ಭಾರತ ಅತ್ಯುತ್ತಮವಾದ ಕಲೆ ಮತ್ತು ಸಾಹಿತ್ಯ ಸೃಷ್ಟಿಸಬೇಕಿದೆ. ಭಾರತ ಜಾಗತಿಕ ಮಟ್ಟದ ಕಲೆ ಅಥವಾ ಚಲನಚಿತ್ರಗಳನ್ನು ಯಾಕೆ ನಿರ್ಮಿಸಲು ಸಾಧ್ಯವಿಲ್ಲವೆಂದರೆ, ಭಾರತೀಯ ಕಲೆ, ಸಾಹಿತ್ಯ ಮತ್ತು ಸಿನಿಮಾ 'ಠಾಕೂರ'ರ ಹಿಡಿತದಲ್ಲಿದೆ. ಇವರಲ್ಲಿ ಬಹುತೇಕ ಮಂದಿ ಕಲೆ, ಸಾಹಿತ್ಯ ಮತ್ತು ಸಿನಿಮಾ ನಿರ್ಮಾಣದ ವಲಯವನ್ನು ಪಿತ್ರಾರ್ಜಿತವಾಗಿ ಪಡೆದಿರುವುದರಿಂದ ಬದಲಾವಣೆ ಸುಲಭವಾಗಿ ಸಾಧ್ಯವಾಗುವುದಿಲ್ಲ. ಹೀಗಾಗಿ ಭಾರತೀಯ ಕಲೆ'ಜಾಗತಿಕ' ಎನಿಸಿಕೊಳ್ಳುವುದಿಲ್ಲ. ಆದರೆ ಆಸ್ಕರ್ ಜಾಗತಿಕ ಪ್ರಶಸ್ತಿ.

ಈ ಸಂದರ್ಭದಲ್ಲಿ ಎರಡು ನಿದರ್ಶನಗಳನ್ನು ದಾಖಲಿಸಬೇಕಿದೆ. ಆಸ್ಕರ್ ಪ್ರಶಸ್ತಿಯ ಆಯೋಜಕರಾದ 'ಚಲನಚಿತ್ರ ಕಲೆ ಮತ್ತು ವಿಜ್ಞಾನಗಳ ಅಕಾಡೆಮಿ' ರೆಹಮಾನ್ ಅವರ ಮಹತ್ಸಾಧನೆಯ ಸಂತಸ ಹಂಚಿಕೊಳ್ಳಲು ಕೆಂಪು ಬಟ್ಟೆ ಧರಿಸಿದ ಕಲಾವಿದರನ್ನು ಪೂರೈಸಿತ್ತು. ರೆಹಮಾನ್ ಹಾಡಿಗೆ ಕುಣಿದ ಈ ನೃತ್ಯ ತಂಡದಲ್ಲಿ ಬಿಳಿಯರು, ಕರಿಯರು ಮತ್ತು ಕಂದು ಬಣ್ಣದವರು ಎಲ್ಲರೂ ಇದ್ದರು. ಆದರೆ ರೆಹಮಾನ್ ಅವರ ಬ್ಯಾಂಡ್‌ನಲ್ಲಿ ಒಂದೇ ವರ್ಣದವರಿದ್ದರು. ಅಮೆರಿಕಾದ ಕಲಾವಿದರು ಒಟ್ಟಾರೆ ಅಮೆರಿಕಾವನ್ನು ಪ್ರತಿನಿಧಿಸುತ್ತಿದ್ದರೆ, ರೆಹಮಾನ್ ಅವರ ತಂಡದಲ್ಲಿ ಭಾರತದ ಕೆಲಭಾಗ ಮಾತ್ರ ಕಾಣುತ್ತಿತ್ತು.

ಇನ್ನು ಭಾರತೀಯ ಸಿನಿಮಾಗಳ ವಿಷಯಕ್ಕೆ ಬರುವುದಾದರೆ, ಬಾಲಿವುಡ್ ಚಲನಚಿತ್ರಗಳಲ್ಲಿ ಕಂದು ಅಥವಾ ಕಪ್ಪು ಬಣ್ಣದ ಪಾತ್ರಗಳನ್ನು ಕಾಣುವುದು ವಿರಳ. ಒಂದು ವೇಳೆ ಕಾಣಿಸಿಕೊಂಡರೆ ಆತ ಅಥವಾ ಆಕೆ ಖಳನಟರಾಗಿರುತ್ತಾರೆ. ಆದರೆ ವಾಸ್ತವ ಸಂಗತಿ ಏನೆಂದರೆ, ಭಾರತದಲ್ಲಿ ಬಹುಸಂಖ್ಯಾತ ಜನರು ಕಂದು ಅಥವಾ ಕಪ್ಪು ಬಣ್ಣದವ'ರಾಗಿದ್ದಾರೆ. ಬಿಳಿಯ ವರ್ಣದವರ ಹಿಡಿತದಲ್ಲಿರುವ ಬಾಲಿವುಡ್ ಚಿತ್ರರಂಗದಲ್ಲಿ ಕಂದು ಅಥವಾ ಕಪ್ಪು ಬಣ್ಣದ ಕಲಾವಿದರಿಗೆ ಸುಲಭವಾಗಿ ಪ್ರವೇಶ ಸಿಗುವುದಿಲ್ಲ. ಹೀಗಾಗಿ ಬಾಲಿವುಡ್‌ಗೆ ಬದಲಾವಣೆಗೆ ನಾಂದಿ ಹಾಡುವ ಚಲನಚಿತ್ರಗಳನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಆದರೂ ಕೂಡ ಆಸ್ಕರ್ ಕನಸನ್ನು ಬಿಟ್ಟಿಲ್ಲ.

ಭಾರತೀಯ ಸಿನಿಮಾಗಳ ವಿಷಯಕ್ಕೆ ಬರುವುದಾದರೆ, ಬಾಲಿವುಡ್ ಚಲನಚಿತ್ರಗಳಲ್ಲಿ ಕಂದು ಅಥವಾ ಕಪ್ಪು ಬಣ್ಣದ ಪಾತ್ರಗಳನ್ನು ಕಾಣುವುದು ವಿರಳ. ಒಂದು ವೇಳೆ ಕಾಣಿಸಿಕೊಂಡರೆ ಆತ ಅಥವಾ ಆಕೆ ಖಳನಟರಾಗಿರುತ್ತಾರೆ. ಆದರೆ ವಾಸ್ತವ ಸಂಗತಿ ಏನೆಂದರೆ, ಭಾರತದಲ್ಲಿ ಬಹುಸಂಖ್ಯಾತ ಜನರು ಕಂದು ಅಥವಾ ಕಪ್ಪು ಬಣ್ಣದವರಾಗಿದ್ದಾರೆ. ಬಿಳಿಯ ವರ್ಣದವರ ಹಿಡಿತದಲ್ಲಿರುವ ಬಾಲಿವುಡ್ ಚಿತ್ರರಂಗದಲ್ಲಿ ಕಂದು ಅಥವಾ ಕಪ್ಪು ಬಣ್ಣದ ಕಲಾವಿದರಿಗೆ ಸುಲಭವಾಗಿ ಪ್ರವೇಶ ಸಿಗುವುದಿಲ್ಲ. ಹೀಗಾಗಿ ಬಾಲಿವುಡ್‌ಗೆ ಬದಲಾವಣೆಗೆ ನಾಂದಿ ಹಾಡುವ ಚಲನಚಿತ್ರಗಳನ್ನು ನಿರ್ಮಿಸಲು ಸಾಧ್ಯವಾಗಿಲ್ಲ. ಆದರೂ ಕೂಡ ಆಸ್ಕರ್ ಕನಸನ್ನು ಬಿಟ್ಟಿಲ್ಲ.

ಇಡೀ ಭಾರತವೇ 'ಸ್ಲಂಡಾಗ್ ಮಿಲಿಯನೇರ್' ಚಲನಚಿತ್ರದ ಸಾಧನೆಯನ್ನು ಕೊಂಡಾಡುತ್ತಿದ್ದರೆ, ಬಾಲಿವುಡ್ ಬಾದ್‌ಷಾಗಳು ತಲೆಮರೆಸಿಕೊಳ್ಳುತ್ತಿದ್ದಾರೆ. ಭಾರತೀಯರು 'ಹಾಲಿವುಡ್' ಮೇಲಿನ ಗೆಲುವಿನ ಮಾನದಂಡವಾಗಿ 'ಸ್ಲಂಡಾಗ್ ಮಿಲಿಯನೇರ್'ನ ಯಶಸ್ಸನ್ನು ನೋಡುತ್ತಿದ್ದಾರೆಯೇ ವಿನಃ, ಇದು ವಿಶ್ವದ ಅತ್ಯುತ್ತಮ ಚಲನಚಿತ್ರ ಎಂಬ ಹಿನ್ನೆಲೆಯಲ್ಲಿ ಅಲ್ಲ.

ಎರಡನೆಯ ಉದಾಹರಣೆ ಭಾರತೀಯ ಚಲನಚಿತ್ರ ವಿಮರ್ಶಕರ ತಾರತಮ್ಯ ಧೋರಣೆಗೆ ಸಂಬಂಧಪಟ್ಟಿದ್ದು. ಇವರಲ್ಲಿ ಬಹುತೇಕ ಮಂದಿ ಬಿಳಿಯ ವರ್ಣದವರು. ಟಿ.ವಿ ವಾಹಿನಿಗಳಲ್ಲಿ ಸ್ಲಂಡಾಗ್‌ನ ಕೆಲವು ದೃಶ್ಯಗಳನ್ನು ತೋರಿಸುತ್ತಾ, ವಿಮರ್ಶಕರು ತಮ್ಮದೇ ಆದ ವಿಶ್ಲೇಷಣೆ ಮಾಡುತ್ತಿದ್ದರು. ಚಿತ್ರದ ಒಂದು ದೃಶ್ಯದಲ್ಲಿ ಅಂಬೇಡ್ಕರ್ ಭಾವಚಿತ್ರ ಹಿನ್ನೆಲೆಯಲ್ಲಿ ಮೂಡಿಬರುತ್ತದೆ ಎಂಬ ವಿಷಯವನ್ನು ನನ್ನ ಸ್ನೇಹಿತರೊಬ್ಬರು ತಿಳಿಸಿದರು. ನಾನೂ ಕೂಡ ಚಿತ್ರ ನೋಡಿ ಈ ಅಂಶವನ್ನು ದೃಢಪಡಿಸಿಕೊಂಡೆ. ಅಂಬೇಡ್ಕರ್ ಅವರ ಭಾವಚಿತ್ರ ಬದಲಾವಣೆಯನ್ನು ಸೂಚಿಸುತ್ತದೆ. ಆದರೆ, ಈ ಅಂಶ ಸಹಜವಾಗಿ ನಮ್ಮ ಬಿಳಿಯ ವರ್ಣದ ಭಾರತೀಯ ಚಲನಚಿತ್ರ ವಿಮರ್ಶಕರ ಗಮನಸೆಳೆದಿಲ್ಲ.

'ಸ್ಲಂಡಾಗ್ ಮಿಲಿಯನೇರ್' ಚಿತ್ರ ಎಂಟು ಆಸ್ಕರ್ ಪ್ರಶಸ್ತಿಗಳನ್ನು ಪಡೆದುಕೊಂಡಿತು. ವಿದೇಶದವರಾದ ನಿರ್ದೇಶಕ ಡ್ಯಾನಿ ಬೋಯ್ಲ್ ಅವರಿಗೆ ಬದಲಾವಣೆಯ ಸಂದೇಶದ ಬಗ್ಗೆ ವಿರೋಧವಿಲ್ಲ. ಹೀಗಾಗಿ ಅವರ ಚಿತ್ರ ಒಂದು ಮಹಾನ್ ಪ್ರೇರಣಾತ್ಮಕ ಚಿತ್ರವಾಗಿ ಹೊರಹೊಮ್ಮಿ ಆಸ್ಕರ್ ಮೆಟ್ಟಿಲನೇರಿತು. ಈ ಚಿತ್ರದಲ್ಲಿ ಎಲ್ಲ ನಟರು ನಿರ್ದೇಶಕರ ವಸ್ತುನಿಷ್ಠ, ಹಾಗೂ ಬದಲಾವಣೆಯ ಪರವಾದ ನಿಲುವಿನ ಪರವಾಗಿ ನಟಿಸಬೇಕಾಗಿ ಬಂದದ್ದು ಕೂಡ ವಿಶೇಷ.

'ಸ್ಲಂಡಾಗ್ ಮಿಲಿಯನೇರ್' ಚಿತ್ರ ಎಂಟು ಆಸ್ಕರ್ ಪ್ರಶಸ್ತಿಗಳನ್ನು ಪಡೆದುಕೊಂಡಿತು. ವಿದೇಶದವರಾದ ನಿರ್ದೇಶಕ ಡ್ಯಾನಿ ಬೋಯ್ಲ್ ಅವರಿಗೆ ಬದಲಾವಣೆಯ ಸಂದೇಶದ ಬಗ್ಗೆ ವಿರೋಧವಿಲ್ಲ. ಹೀಗಾಗಿ ಅವರ ಚಿತ್ರ ಒಂದು ಮಹಾನ್ ಪ್ರೇರಣಾತ್ಮಕ ಚಿತ್ರವಾಗಿ ಹೊರಹೊಮ್ಮಿ ಆಸ್ಕರ್ ಮೆಟ್ಟಿಲನೇರಿತು. ಈ ಚಿತ್ರದಲ್ಲಿ ಎಲ್ಲ ನಟರು ನಿರ್ದೇಶಕರ ವಸ್ತುನಿಷ್ಠ, ಹಾಗೂ ಬದಲಾವಣೆಯ ಪರವಾದ ನಿಲುವಿನ ಪರವಾಗಿ ನಟಿಸಬೇಕಾಗಿ ಬಂದದ್ದು ಕೂಡ ವಿಶೇಷ.

ಈ ಹಿಂದೆ ಆಸ್ಕರ್ ಪ್ರಶಸ್ತಿ ನಿರೀಕ್ಷಿಸುತ್ತಿದ್ದ ಭಾರತೀಯ ನಿರ್ಮಿತ 'ಲಗಾನ್' ಚಲನಚಿತ್ರ ಬದಲಾವಣೆಯ ಪರವಾಗಿ ನಿಲ್ಲದ ಪರಿಣಾಮವಾಗಿ ನಿರಾಶೆ ಅನುಭವಿಸಬೇಕಾಯಿತು.

ವಿಶ್ವದಾದ್ಯಂತ ಪ್ರೇರಣೆ ಮತ್ತು ಆಶಾವಾದವಿರುವ ಕಲೆ ಅತ್ಯುತ್ತಮ ಎಂದು ಪರಿಗಣಿಸಲ್ಪಡುತ್ತದೆ. ಆದರೆ ಬಾಲಿವುಡ್‌ನ ವೈಟ್‌ಡಾಗ್ ಬಿಲಿಯನೇರ್‌ಗಳಿಗೆ ಪ್ರೇರಣೆ ಮತ್ತು ಆಶಾವಾದದ ಬಗ್ಗೆ ಕಿಂಚಿತ್ತೂ ಚಿಂತೆಯಿಲ್ಲ. ಆಸ್ಕರ್ ಪ್ರಶಸ್ತಿಯ ಬೆನ್ನತ್ತಿರುವ ಬಾಲಿವುಡ್ ಬಿಲಿಯನೇರ್‌ಗಳು ಈ ಅಂಶವನ್ನು ಮನಗಾಣದ ಹೊರತು ಆಸ್ಕರ್ ದಕ್ಕುವುದಿಲ್ಲ. □

(45ನೇ ಪುಟದಿಂದ)

ವೃದ್ಧಿ, ನೀರಾವರಿ, ಇಂಧನ, ರಸ್ತೆ, ನಗರಾಭಿವೃದ್ಧಿ ಮತ್ತು ಶಿಕ್ಷಣವೆಂದು ದೊಡ್ಡ ಪಟ್ಟಿಯೆನ್ನೆ ನೀಡಿದ್ದಾರೆ. ಇವಿಷ್ಟು ಆದ್ಯತೆಯೆಂದಾದರೆ ಆದ್ಯತೆಯೆಂಬುದಕ್ಕೆ ಅರ್ಥವೆ ಇಲ್ಲ ದಂತಾಗುತ್ತದೆ. ಆದರೆ ಈ ವಲಯಗಳಿಗೆ 2009-10 ನೆಯ ಸಾಲಿನಲ್ಲಿ ನೀಡಿರುವ ಯೋಜನಾ ವೆಚ್ಚವೆಷ್ಟು ಎಂಬುದನ್ನು ಬಜೆಟ್ಟು ಪ್ರತಿಯಲ್ಲಿ ನೋಡಿದರೆ ನಮಗೆ ಸರ್ಕಾರವು ನಿಜವಾಗಲೂ ಯಾವುದಕ್ಕೆ 'ಆದ್ಯತೆ' ನೀಡಿದೆ ಎಂಬುದು ತಿಳಿಯುತ್ತದೆ. ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳು ಹಾಗೂ ಗ್ರಾಮಿಣಾಭಿವೃದ್ಧಿಗೆ ಯೋಜನಾ ವೆಚ್ಚದಲ್ಲಿ ನೀಡಿರುವ ಪ್ರಮಾಣ ಶೇ12.28, ನೀರಾವರಿಗೆ ಶೇ 13.50, ಇಂಧನಕ್ಕೆ ಶೇ12.27, ಸಾರಿಗೆಗೆ ಶೇ12.90, ಶಿಕ್ಷಣಕ್ಕೆ ಶೇ 7.79ರಷ್ಟು ಮೀಸಲಿಟ್ಟಿದ್ದರೆ ನಗರಾಭಿವೃದ್ಧಿಗೆ ಮೀಸಲಿಟ್ಟಿರುವ ಪ್ರಮಾಣ ಶೇ15.54. ನಮ್ಮ ರಾಜ್ಯದ ಶೇ36 ರಷ್ಟಿರುವ ನಗರವಾಸಿಗಳಿಗೆ ಯೋಜನಾ ವೆಚ್ಚದಲ್ಲಿ ಶೇ15.54 ರಷ್ಟನ್ನು ಮೀಸಲಿಟ್ಟಿದ್ದರೆ ಶೇ64ರಷ್ಟಿರುವ ಗ್ರಾಮಿಣವಾಸಿಗಳಿಗೆ ಮೀಸಲಿಟ್ಟಿರುವ ಪ್ರಮಾಣ ಶೇ 12.28. ಈ ಸರ್ಕಾರವು ತನ್ನ ಬಜೆಟ್ಟಿನಲ್ಲಿ 2009-10 ನೆಯ ಸಾಲಿನಲ್ಲಿ ಯಾವುದಕ್ಕೆ ಆದ್ಯತೆ ನೀಡಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇದನ್ನು ಹೇಗೆ ಸಮರ್ಥಿಸಿಕೊಳ್ಳುವುದು?

ಮಾನ್ಯ ಹಣಕಾಸು ಮಂತ್ರಿಗಳು ತಮ್ಮ ಆದ್ಯತೆಗಳಾವುವು ಎಂಬುದಕ್ಕೆ ನೀಡಿರುವ ಪಟ್ಟಿಯಲ್ಲಿ ಅತಿ ಹೆಚ್ಚಿನ ಪ್ರಮಾಣ (ಶೆ15.54) ನಗರಾಭಿವೃದ್ಧಿಗೆ ಮೀಸಲಾಗಿದೆ. ಅದು ಸರ್ಕಾರದ ಆದ್ಯತೆ. ಇದನ್ನು ಒಪ್ಪಿಕೊಳ್ಳದೆ ಸುಮ್ಮ ಸುಮ್ಮನೆ ರೈತರು ನಮ್ಮ ಆದ್ಯತೆಯೆಂದು ಸರ್ಕಾರವು ಸುಳ್ಳು ಸುಳ್ಳೇ ಹೇಳಿಕೊಳ್ಳುತ್ತಿದೆ.

ಈ ಬಜೆಟ್ಟಿನಲ್ಲಿ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವಲಯವೆಂದರೆ ಆರೋಗ್ಯ. ಲಿಂಗ ಸಮಾನತೆ ಬಗ್ಗೆ ಸರ್ಕಾರವು ತಳೆದಿರುವ ಪುರುಷಶಾಹಿ ಮನೋಭಾವಕ್ಕೂ ಮತ್ತು ಬಜೆಟ್ಟಿನಲ್ಲಿ ಆರೋಗ್ಯದ ಬಗ್ಗೆ ತೋರಿಸುತ್ತಿರುವ ನಿರ್ಲಕ್ಷ್ಯಕ್ಕೂ ಸಂಬಂಧವಿದೆ. ರಾಷ್ಟ್ರೀಯ ಗ್ರಾಮೀಣ ಕೌಟುಂಬಿಕ ಸಮೀಕ್ಷೆಯ ಮೂರನೆಯ ಸುತ್ತಿನ ವರದಿ ಪ್ರಕಾರ ಕರ್ನಾಟಕದಲ್ಲಿ ಮಹಿಳೆಯರ ಪೌಷ್ಟಿಕತೆಗೆ ಸಂಬಂಧಿಸಿದಂತೆ ಮತ್ತು ಮಕ್ಕಳ ತೂಕಕ್ಕೆ ಸಂಬಂಧಿಸಿದಂತೆ ಸಾಧನೆಯಲ್ಲಿ ಹಿಂದೆ ಸರಿಯುತ್ತಿದೆಯೆಂಬುದನ್ನು ತೋರಿಸಿಕೊಟ್ಟಿದೆ. ಉದಾಹರಣೆಗೆ ರಾಜ್ಯದ ಬಳ್ಳಾರಿ ಜಿಲ್ಲೆಯಲ್ಲಿ ಐದು ವರ್ಷಗಳಿಗೆ ಕಡಿಮೆ ವಯೋಮಾನದ ಮಕ್ಕಳ ಮರಣ ಪ್ರಮಾಣವು ಇಂದು 116 ರಷ್ಟಿದೆ. ಇದು ಅತ್ಯಂತ ಹೆಚ್ಚಿನ ಪ್ರಮಾಣವಾಗಿದೆ. ರಾಜ್ಯದ ಎರಡೂವರೆ ಕೋಟಿ ಮಹಿಳೆಯರ ಬಗ್ಗೆ ಮತ್ತು 70 ರಿಂದ 80 ಲಕ್ಷದಷ್ಟಿರುವ ಮಕ್ಕಳ ಆರೋಗ್ಯದ ಬಗ್ಗೆ ಪ್ರಸ್ತುತ ಬಜೆಟ್ಟಿನಲ್ಲಿ ಹೇಳಿಕೊಳ್ಳಬಹುದಾದಂತಹ ಸಂಗತಿ ಯಾವುದೂ ಇಲ್ಲ. ರಾಜ್ಯದ ಯೋಜನಾ ವೆಚ್ಚದಲ್ಲಿ ಆರೋಗ್ಯಕ್ಕೆ ನೀಡಿರುವ ಪ್ರಮಾಣ ಕೇವಲ ಶೇ3.04 (ರೂ897.50 ಕೋಟಿ).

ಒಂದು ಕಾಲಕ್ಕೆ ಬಜೆಟ್ಟಿನ ಒಂದು ಭಾಗ ಮಾತ್ರ ಜನಲೋಲುಪತೆಯ ಕಾರ್ಯಕ್ರಮಗಳಿಂದ ಕೂಡಿರುತ್ತಿತ್ತು. ಆದರೆ ಇಂದು ದೂರದೃಷ್ಟಿಯುಳ್ಳ ಅಭಿವೃದ್ಧಿಯನ್ನು, ಮತ್ತು ಅದನ್ನು ಸುಸ್ಥಿರಗೊಳಿಸಬಲ್ಲಂತಹ ಜನರನ್ನು ಒಳಗೊಳ್ಳುವಂತಹ ಯೋಜನೆಗಳು ಅತ್ಯಂತ ಕ್ವಚಿತ್ತಾಗಿ ಬಿಟ್ಟಿವೆ. ಇದು ಆರೋಗ್ಯಕಾರಿ ಬೆಳವಣಿಗೆಯಲ್ಲ. ರಾಜ್ಯದ ದೀರ್ಘಾವಧಿ ಹಿತಗಳನ್ನು ಗಮನದಲ್ಲಿಟ್ಟುಕೊಂಡು ಬಜೆಟ್ಟು ರೂಪಿಸಬೇಕು. ಅಂತಹ ಮುತ್ಸದ್ದಿತನ ಹಾಗೂ ದೂರದೃಷ್ಟಿ ಬಜೆಟ್ಟಿನಲ್ಲಿ ಕಂಡು ಬರುವುದಿಲ್ಲ. ಈ ದಿಶೆಯಲ್ಲಿ ಯೋಚಿಸುವ ಅಗತ್ಯವಿದೆ. □

STATEMENT ABOUT OWNERSHIP AND OTHER PARTICULARS ABOUT NEWSPAPER

FORM IV

1.	Place of Publication :	Bangalore
2.	Periodicity of its publication :	Monthly
3.	Printer's Name :	**S.R. Govindu**
	Nationality	Indian
	Address	63, Anjananagar, Vishwaneedam Post, Bangalore-560 091
4.	Publisher's Name :	**S.R. Govindu**
	Nationality	Indian
	Address	63, Anjananagar, Vishwaneedam Post, Bangalore-560 091
5.	Editor's Name :	**Indudhara Honnapura**
	Nationality	Indian
	Address	402,1st main,2nd Block, HBR Layout, Bangalore-560 043
6.	Name and address of individuals who own the newspaper and partners and share holders holding more than one percent of the total capital :	Spoorthidhama, 63, Anjananagar, Vishwaneedam Post, Bangalore-560 091 (Sole proprietors)

I, **S.R. Govindu,** hereby declare that the particulars given above are true to the best of my knowledge and belief.

Sd/-
S.R. Govindu
Publisher

Date: 28-02-2009

ಸರಿದು ಹೋಯ್ತು

ಎದುರಿಗೆ ಹೆಡೆ ಎತ್ತಿದ ವಿಷದ ಹಾವು ಏಕೋ ಸರಿದು ಹೋಯ್ತು
ಭಯ ತುಂಬಿದ ಎದೆಗೆ ತಲ್ಲಣವಿರದೆ ಬರೀ ಪಿಚ್ಚೆನಿಸಿತು.

ಬಾಗಿಲು ದಡದಡ ಬಡಿದಂತೆನಿಸಿ ಧಾವಿಸಿ ಬಂದು ಕದ ತೆರೆದೆ
ಖಾಲಿ ಜಾಗದ ತುಂಬ ಯಾರಿರದೇ ಬೀಸಿದ್ದ ಗಾಳಿ ಒಮ್ಮೆ ದಿಟ್ಟಿಸಿದೆ.

ಉರಿಯುವ ಬೆಂಕಿಗೆ ಎದುರಾಗಲು ಗಂಡೆದೆಗೂ ಭಯವಿತ್ತು
ಭೋರ್ಗರೆವ 'ನೀರೇ' ನಿರಾಯಾಸದಿ ಅಂದು ಬಾಯಿ ತೆರೆದಿತ್ತು.

ಸುಳಿಯುವ ಗಾಳಿ ಕಾಣದೇ ಹೀಗೆ ನುಸುಳುತ್ತಲೆ ಇರಬಹುದು
ನಿರಂತರವಾಗಿ ಕೊರೆದ ಆ ಕಂದಕ ಎಂದಿಗೂ ಸುಳ್ಳಾಗಲಾರದು.

ನೆರಳಾಗಿ ಹಿಂಬಾಲಿಸುತ್ತಲೇ ಇದೆ ಅಸತ್ಯ ಬೆಂಬಿಡದೆ ಜೀವದೊಂದಿಗೆ
ಸತ್ಯ ನಕ್ಷತ್ರ, ಮಿನುಗುತಿದೆ ಅದು ದುರ್ಗಮದ ಇರುಳಿನೊಂದಿಗೆ.

○ ಶಾರದಾ ಮಳ್ಳೂರ

ಬುದ್ಧಾಯಣ

ಆಶಿ

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಸಾವತ್ಥಿಯ ಜೇತವನದಲ್ಲಿ ವಿಹಾರ ಮಾಡುತ್ತಿದ್ದರು. ಆ ಸಮಯದಲ್ಲಿ ಒಬ್ಬ ಭಿಕ್ಷುವು ಬುದ್ಧರನ್ನು ಸಂಧಿಸಿ ಅವರಿಗೆ ವಂದಿಸಿದ, ಬಳಿಕ ತನ್ನ ಮನದಲ್ಲಿ ಬಹುದಿನಗಳಿಂದಲೂ ಕಾಡುತ್ತಿದ್ದ ಪ್ರಶ್ನೆಯೊಂದನ್ನು ಹೀಗೆ ಕೇಳಿದ:

"ಗುರುದೇವಾ, ಇಲ್ಲಿ ಪ್ರತಿಯೊಬ್ಬರ ನಿಜವಾದ ಬಂಧು ಯಾರು? ಮತ್ತು ನಿಜವಾದ ಬಂಧು ಯಾರು? ಮತ್ತು ನಿಜವಾದ ಮಿತ್ರ ಯಾರು? ಯಾವ ಮಾರ್ಗವನ್ನು ಅನುಸರಿಸುವುದರಿಂದ ಬದುಕಿನಲ್ಲಿ ಉನ್ನತಿಯನ್ನು ಪಡೆಯಬಹುದು? ಯವುದನ್ನು ಅನುಸರಿಸುವುದರಿಂದ ನಮ್ಮ ಅವತಿಯುಂಟಾಗುತ್ತದೆ? ಯಾವುದು ಸರಿಧರ್ಮ? ಯಾವುದು ನಿಬ್ಬಾಣದ ಮಾರ್ಗ?" ಎಂದು ಪ್ರಶ್ನಿಸಲು, ನಸುನಕ್ಕು ಬುದ್ಧರು ಮಾರ್ಗದ ಬಲ ಪಕ್ಕಕ್ಕೆ ಹೊರಳಿ ಬೋಧಿವೃಕ್ಷವೊಂದರ ಬುಡದಲ್ಲಿ ಪದ್ಮಾಸನ ಹಾಕಿ ಕುಳಿತು:

"ಗೆಳೆಯ, ಪ್ರತಿಯೊಬ್ಬರಿಗೂ ಇಲ್ಲಿ ಕರ್ಮವೇ ಬಂಧು ಮತ್ತು ಕರ್ಮವೇ ಮಿತ್ರ. ಇಲ್ಲಿ ಕರ್ಮ ಫಲದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಶೀಲವೇ ಮೊದಲು. ನಾವು ಮಾಡುವ ಕುಶಲ ಕರ್ಮವೇ ನಮ್ಮನ್ನು ಉನ್ನತಿಯತ್ತ ಕರೆದ್ಯೊಯುತ್ತದೆ. ನಾವು ಅಕುಶಲ ಕರ್ಮವನ್ನು ಅನುಸರಿಸಿದ್ದೆ ಆದರೆ ನಮ್ಮನ್ನು ಅವನತಿಯತ್ತ ಕರೆದ್ಯೊಯುತ್ತದೆ. ಆದುದರಿಂದ ದಿನ ನಿತ್ಯದ ಜಂಜಾಟದಲ್ಲಿ ಸಂಭವಿಸುವ ಪ್ರತಿ ಸಮಸ್ಯೆಯನ್ನು ನಾವು ಹೇಗೆ ಪರಿಹರಿಸಿಕೊಳ್ಳಬೇಕೆಂದರೆ: ಮೊದಲು ಸಮಸ್ಯೆಗೆ ದಿಡೀರನೆ ಪ್ರತಿಕ್ರಿಯಿಸದೆ ಕ್ಷಣ ಕಾಲ ತಟಸ್ಥನಾಗಬೇಕು. ಬಳಿಕ ಶಾಂತಚಿತ್ತನಾಗಿ ಸಮಚಿತ್ತನಾಗಿ ಹೀಗೆ ಯೋಚಿಸಬೇಕು: ಈ ಕೆಲಸವನ್ನು ಅಥವಾ ಸಮಸ್ಯೆಯನ್ನು ಕೈಗೆತ್ತಿಕೊಂಡು ನಿರ್ವಹಿಸಿದ್ದೆ ಆದರೆ ಇದರಿಂದ ವರ್ತಮಾನ ಮತ್ತು ಭವಿಷ್ಯದ ಕಾಲದಲ್ಲಿ ನನಗೆ ಒಳಿತಾಗುವುದೆ? ನನ್ನ ಕೀರ್ತಿ ಮತ್ತು ಶ್ರೇಯಸ್ಸು ಹೆಚ್ಚುವುದೆ? ಎಂದು ಪರಿ ಪರಿಯಾಗಿ ಚಿಂತಿಸಿ ಇದರಿಂದ ನನ್ನ ಉನ್ನತಿ ಸಾಧ್ಯ ಎಂಬ ಉತ್ತರವನ್ನು ನೀನೇ ಕಂಡುಕೊಂಡಾಗ ಆ ಕರ್ಮವನ್ನು ಮಾಡು. ಇದೇ ಕುಶಲ ಕರ್ಮ."

"ಗೆಳೆಯ, ಯಾವ ಕರ್ಮವನ್ನು ಮಾಡುವುದರಿಂದ ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ನಿನಗೆ ಕೆಡುಕಾಗುತ್ತದೆಯೇ, ನಿನ್ನ ಕೀರ್ತಿ ಮತ್ತು ಶ್ರೇಯಸ್ಸಿಗೆ ಕುಂದು ಬರುತ್ತದೋ ಅದನ್ನು ಮಾಡಬೇಡ. ಅದರಿಂದ ನೀನು ಅವನತಿಯನ್ನು ಹೊಂದುವೆ ಎಂಬುದನ್ನು ಅರಿತುಕೋ. ಇದೇ ಅಕುಶಲ ಕರ್ಮ."

"ಗೆಳೆಯ, ಆದುದರಿಂದ ಇಲ್ಲಿ ಎಲ್ಲಕ್ಕೂ ಮೊದಲು ಶೀಲವೇ ಮುಖ್ಯವಾಗಿದೆ. ಆ ಶೀಲವು ನಮ್ಮ ವರ್ತಮಾನ ಜೀವಿತ ಕಾಲವನ್ನೇ ಅವಲಂಭಿಸಿದೆ. ಯಾರ ವರ್ತಮಾನವು ಶೀಲ ಸಚ್ಚಾರಿತ್ರ್ಯದಿಂದ ಕೂಡಿರುತ್ತದೋ ಆತನ ಭವಿಷ್ಯ ಮತ್ತು ಭೂತಕಾಲವು ಉಜ್ವಲವಾಗಿರುತ್ತದೆ. ಆತ ಉನ್ನತ ಸ್ಥಿತಿಗೆ ಏರುತ್ತಾನೆ. ಯಾರ ವರ್ತಮಾನವು ಶೀಲಸಚ್ಚಾರಿತ್ರ್ಯದಿಂದ ಕೂಡಿರುವುದಿಲ್ಲವೋ. ಆತನ ಭವಿಷ್ಯ ಮತ್ತು ಭೂತಕಾಲವು ಅಧೋಗತಿಗೆ ಇಳಿಯುತ್ತದೆ. ಹೀಗೆ ಸ್ವಯಂ ನಾವೇ ನಮ್ಮ ತ್ರಿಕಾಲದ ಉನ್ನತಿಯನ್ನೂ ಮತ್ತು ಅವನತಿಯನ್ನು ಬರೆದುಕೊಳ್ಳುವವರಾಗಿರುತ್ತೇವೆ. ಹಾಗಾಗಿ ಇಲ್ಲಿ ನಮಗೆ ನಾವೇ."

"ಗೆಳೆಯ, ಪ್ರಕೃತಿಯ ನಿಯಮವನ್ನು ಅರಿತು ನೆಡೆಯುವುದೆ ಸರಿಧರ್ಮ. ಯಾವುದು ಬಹುಜನರ ಹಿತವನ್ನು ಮತ್ತು ಸುಖವನ್ನು ರಕ್ಷಿಸುತ್ತದೋ ಅದೇ ಸರಿಧರ್ಮ. ಯಾವಾತ ಸ್ವಯಂ ತಾನೇ ಸ್ವಪ್ರಯತ್ನದಿಂದ ಶೀಲ. ಏಕಾಗ್ರತೆ ಮತ್ತು ಪ್ರಜ್ಞೆಯನ್ನು ಸಾಧಿಸಿ ಪಡೆದುಕೊಳ್ಳುತ್ತಾನೋ, ಆಗಲೆ ಆತನ ಬದುಕಿನಲ್ಲಿ ಜ್ಞಾನಜ್ಯೋತಿಯು ಮೂಡುತ್ತದೆ. ಆ ಮೂಲಕ ಆತ ಸ್ವಯಂ ತಾನೇ ತನ್ನ ಸಂಕೋಲೆಗಳಿಂದ ಬಿಡುಗಡೆ ಹೊಂದುತ್ತಾನೆ. ಇದೇ ನಿಬ್ಬಾಣ ಅಥವಾ ಮುಕ್ತಿಯ ಮಾರ್ಗ!" ಎಂದ



ಅಂದಿನ ಮುಸ್ಸಂಜೆಯ ಮುಗಿಲು ದಟ್ಟ ಮೋಡಗಳಿಂದ ಕವಿದಿತ್ತು. ಗುಡುಗು ಮಿಂಚಿನ ಆರ್ಭಟ ಭೂಮಿ ಆಕಾಶವನ್ನು ಆವರಿಸಿತ್ತು. ಅಂದು ಬೆಳಗ್ಗಿನಿಂದ ಹಸಿದಿದ್ದ ಆ ಕುರಿಯು ಸಮೀಪದ ಬಂಡೆಯ ಸಂದಿಯಲ್ಲಿ ಹುಲುಸಾಗಿ ಬೆಳೆದು ನಿಂತಿದ್ದ ಹುಲ್ಲಿನ ಪೊದೆಗೆ ಬಾಯಿ ಹಾಕಿತು. ಅದೇ ಕ್ಷಣಕ್ಕೆ ಸರಿಯಾಗಿ ಆ ಬಂಡೆಗೆ ಸಿಡಿಲು ಬಡಿಯಿತು. ಆದರಿಂದ ಕಲ್ಲಿನ ಚೂರೊಂದು ರಭಸವಾಗಿ ಬಂದು ಕುರಿಯ ಕುತ್ತಿಗೆಗೆ ಬಡಿಯಿತು. ಆ ಭಾರಿ ಬಡಿತಕ್ಕೆ ಕುರಿಯ ತಲೆಯು ಕತ್ತರಿಸಿ ನೆಲ ಕುರುಳಿತು! ಆಗ ಆಚಾರ್ಯನು: ಹೌದು, ಇಲ್ಲಿ ನಮಗೆ ನಾವೇ ! ನಿಜಕ್ಕೂ ಕರ್ಮವೆ ನಮ್ಮ ಬಂಧು ಮತ್ತು ಮಿತ್ರ !!" ಎನ್ನುತ್ತಾ ಮುನ್ನಡೆದ.

ಸಿ.ಎಚ್. ರಾಜಶೇಖರ್

ಕುರಿಯೇ ನೀನೇಕೆ ನಕ್ಕೆ ! ನೀನೇಕೆ ಅತ್ತೆ...?

ಬುದ್ಧ ಬಳಿಕ ತನ್ನ ಈ ಸತ್ಯದ ಹಿಂದಿನ ಸತ್ಯವನ್ನು ನಿರೂಪಿಸುವ ಸಲುವಾಗಿ ಕಥೆಯನ್ನು ಹೀಗೆ ಪ್ರಾರಂಭಿಸಿದರು.

ಹಿಂದೆ ವಾರಾಣಸಿಯಲ್ಲಿ ಬ್ರಹ್ಮದತ್ತ ರಾಜನು ರಾಜ್ಯಭಾರ ಮಾಡುತ್ತಿದ್ದನು. ಅಲ್ಲಿ– ಒಬ್ಬ ಮೂರು ವೇದಗಳನ್ನು ಕಂಠಪಾಠ ಮಾಡಿದ ಪ್ರಸಿದ್ಧ ಆಚಾರ್ಯ ಬ್ರಾಹ್ಮಣ ಒಬ್ಬರಿದ್ದರು. ಅವರು ತನ್ನ ಮೃತ ತಂದೆ ತಾಯಿಗಳಿಗೆ ಶ್ರಾದ್ಧ ಮಾಡಬೇಕೆಂದು ನಿರ್ಧರಿಸಿದರು. ಆ ಸಮಯದಲ್ಲಿ ಯಜ್ಞಕುಂಡಕ್ಕೆ ಬಲಿ ಕೊಡುವ ಸಲುವಾಗಿ ಕುರಿಯೊಂದನ್ನು ತರಿಸಿದರು. ತನ್ನ ಶಿಷ್ಯರನ್ನು ಕುರಿತು:

“ಎಲೈ ಶಿಷ್ಯರೇ, ಈ ಕುರಿಯನ್ನು ನದಿಯ ಬಳಿಗೆ ಕರೆದ್ಯೊಯ್ದು ಚನ್ನಾಗಿ ಸ್ನಾನ ಮಾಡಿಸಿ. ಕೊರಳಿಗೆ ಹೂವಿನ ಮಾಲೆ ತೊಡಿಸಿ. ಅದರ ಹಣೆಗೆ ಪಂಚಾಂಗುಲಿ ಮುದ್ರೆಯನ್ನು ಒತ್ತಿ. ಹೀಗೆ ಅಲಂಕಾರ ಮಾಡಿಕೊಂಡು ಮೆರವಣಿಗೆಯಲ್ಲಿ ಈ ಕುರಿಯನ್ನು ಯಜ್ಞ ಕುಂಡದ ಬಳಿಗೆ ಕರೆ ತನ್ನಿ!” ಎಂದು. ಶಿಷ್ಯರು:

“ಗುರುವೇ, ಒಳ್ಳೆಯದು!” ಎಂದು ಆ ಕುರಿಯನ್ನು ನದಿಗೆ ಕರೆದ್ಯೊಯ್ದು ಸ್ನಾನ ಮಾಡಿಸಿ ದಂಡ ಮೇಲೆ ಅಲಂಕಾರ ಮಾಡಲು ನಿಲ್ಲಿಸಿದರು. ಆ ಸಂದರ್ಭದಲ್ಲಿ ಕುರಿಗೆ ತನ್ನ ಪೂರ್ವ ಜನ್ಮದ ಕರ್ಮವು ನೆನಪಾಗಿ:

“ನಾನು ಹಿಂದೆ ಮಾಡಿದ ಇಂಥ ಪಾಪ ಕರ್ಮದ ಫಲವನ್ನು ಅನುಭವಿಸಿ ದುಃಖದಿಂದ ಇಂದು ಮುಕ್ತನಾಗುತ್ತಿರುವೆ!” ಎಂಬುದನ್ನು ನೆನೆದು ಸಂತೋಷಗೊಂಡಿತು. ಆ ಸಂತೋಷವನ್ನು ತಡೆಯಲಾಗದೆ ಒಮ್ಮೆ ಜೋರಾಗಿ ನಕ್ಕಿತು. ಆನಂತರ ಸ್ವಲ್ಪ ಸಮಯದ ನಂತರ:

“ಮೂರು ವೇದಗಳನ್ನು ಕಂಠಪಾಠ ಮಾಡಿ ಆಚಾರ್ಯನೆಂಬ ಬಿರುದು ಪಡೆದ ಈ ಪಂಡಿತ ನನ್ನನ್ನು ಬಲಿ ಕೊಟ್ಟು ನಾನು ನೂರಾರು ಜನ್ಮಗಳಲ್ಲಿ ಅನುಭವಿಸಿದ ದುಃಖ ಸ್ಥಿತಿಯನ್ನು ಆತ ಅನುಭವಿಸಲು ಸಂಭ್ರಮಿಸುತ್ತಿದಾನಲ್ಲ!” ಎಂದು ಆತನ ಅಜ್ಞಾನವನ್ನು ನೆನೆದು ಆತನ ಬಗ್ಗೆ ಕರುಣಾಭಾವವನ್ನು ತೋರಿ ಜೋರಾಗಿ ಅತ್ತಿತ್ತು.

ಈ ಸೋಜಿಗವನ್ನು ಕಂಡು ಬೆರಗಾದ ಅವರು ಆ ಕುರಿಯನ್ನು ಕುರಿತು:

“ಎಲೈ ಕುರಿಯೇ, ನೀನೇಕೆ ಜೋರಾಗಿ ನಕ್ಕೆ? ಮರುಕ್ಷಣವೆ ನೀನೇಕೆ ಜೋರಾಗಿ ಅತ್ತೆ?” ಎನ್ನಲು, ಆ ಕುರಿಯು:

“ಮಿತ್ರರೇ, ನನ್ನನ್ನು ನಿಮ್ಮ ಆಚಾರ್ಯರ ಬಳಿಗೆ ಕರೆದ್ಯೊಯ್ದು ನಿಲ್ಲಿಸಿದ ಬಳಿಕ ಅವರು ನನಗೆ ಈ ಪ್ರಶ್ನೆಯನ್ನು ಕೇಳಲಿ. ಅಗ ನಾನು ಸಮರ್ಥವಾಗಿ ಉತ್ತರವನ್ನು ಹೇಳುತ್ತೇನೆ” ಎಂದಿತು.

ಅವರು ಆ ಕುರಿಯನ್ನು ತನ್ನ ಆಚಾರ್ಯರ ಬಳಿ ಕರೆದ್ಯೊಯ್ದು ಈ ವಿಷಯವನ್ನು ತಿಳಿಸಿದರು. ಆಶ್ಚರ್ಯಗೊಂಡ ಅವರು:

“ಎಲೈ ಕುರಿಯೇ, ನೀನು ಏತಕ್ಕಾಗಿ ನಕ್ಕೆ? ಏತಕ್ಕಾಗಿ ಅತ್ತೆ?

“ಎಲೈ ಆಚಾರ್ಯನಾದ ಪಂಡಿತನೇ, ಪೂರ್ವಜನ್ಮದಲ್ಲಿ ನಾನು ಕೂಡ ನಿನ್ನಂತೆಯೇ ಮಂತ್ರವನ್ನು ಪಠಿಸುವ ಬ್ರಾಹ್ಮಣನಾಗಿದ್ದೆ. ನನ್ನ ಪೂರ್ವಿಕರ ಶ್ರಾದ್ಧ ಮಾಡುವ ಸಲುವಾಗಿ ಒಂದು ಕುರಿಯನ್ನು ಕೊಂದು ಪಿಂಡವನ್ನು ಅರ್ಪಿಸಿದೆ. ನಾನು ಆ ಕುರಿಯನ್ನು ಕೊಂದ ಪಾಪಕರ್ಮಕ್ಕಾಗಿ ನಾನೂರ ತೊಂಬತ್ತೊಂಬತ್ತು ಜನ್ಮಗಳಲ್ಲಿ ಪಶುಯೋನಿಯಲ್ಲಿ ಹುಟ್ಟಿ ನನ್ನ ತಲೆಯನ್ನು ಕಡಿಸಿಕೊಂಡೆ. ಇದು ನನ್ನ ಐದು ನೂರನೆಯ ಕೊನೆಯ ಜನ್ಮ. ಇಂದು ನೀನು ನನ್ನ ತಲೆಯನ್ನು ಕತ್ತರಿಸುವ ಮೂಲಕ ನಾನು ಮುಕ್ತನಾಗಿ ಬಿಡುವೆನೆಂದು ಭಾವಿಸಿ ಸಂತೋಷಗೊಂಡು ನಕ್ಕೆ!”

“ಎಲೈ ಪಂಡಿತನೇ, ನಾನು ಅತ್ತದ್ದು ಏಕೆಂದರೆ: ಲೋಕದಲ್ಲಿ ಪಂಡಿನೆಂದು ಪ್ರಸಿದ್ಧನಾದ ನೀನೂ ಕೂಡ ನನ್ನಂತೆಯೆ ಅಜ್ಞಾನಿಯಾದೆಯಲ್ಲ ಎಂದು. ನನ್ನಂತೆ ನೀನೂ ಕೂಡ ಮುಂದಿನ ಐನೂರು ಜನ್ಮಗಳಲ್ಲಿ ತಲೆಯನ್ನು ಕತ್ತರಿಸಿಕೊಳ್ಳುವ ಕಡು ದುಃಖಕ್ಕೆ ಒಳಗಾಗಬೇಕಲ್ಲ ಎಂದು, ನಿನ್ನ ಬಗ್ಗೆ ಕರುಣೆ ಉಂಟಾಗಿ ಅತ್ತೆ!”

ಎಂದಿತು. ಆಗ ಆ ಪಂಡಿತನಿಗೆ ತನ್ನ ಅಜ್ಞಾನ ಮತ್ತು ಅವಿವೇಕದ ಬಗ್ಗೆ ಅರಿವು ಮೂಡಲು:

“ಎಲೈ ಕುರಿಯೇ, ನೀನು ರೂಪ ಮಾತ್ರದಿಂದ ಮಾತ್ರ ಕುರಿಯಾಗಿರುವೆ. ಆದರೆ ನಾವೋ ನಿಜರಪದಲ್ಲಿ ಕುರಿಯಾಗಿರುವವರು. ನಿನ್ನ ಜ್ಞಾನದ ಬೆಳಕಿನಿಂದ ನಾನು ಎಚ್ಚರಗೊಂಡೆ. ಹೆದರ ಬೇಡ ನಾನು ನಿನ್ನನ್ನು ಕೊಲ್ಲದೆ ಇರುವ ಮೂಲಕ ನಿನ್ನ ಋಣವನ್ನು ತೀರಿಸುತ್ತೇನೆ. ನಾನು ನಿನ್ನ ರಕ್ಷಣೆ ಮಾಡುತ್ತೇನೆ. ನಿನಗೆ ಯಾವುದೇ ಆಪತ್ತು ಬರದಂತೆ ಜೊತೆ ಜೊತೆಯಲ್ಲಿಯೇ ತಿರುಗುತ್ತೇನೆ!”

“ಎಲೈ ಆಚಾರ್ಯ ಇದು ನೀನು ಮಾಡುತ್ತಿರುವ ಎರಡನೆಯ ಮಹಾಪರಾಧ. ಏಕೆಂದರೆ: ನಿನ್ನ ರಕ್ಷಣೆ ಅಲ್ಪ ಮಾತ್ರ . ಅದು ನನ್ನ ತಲೆಯನ್ನು ಕಾಯುವುದಿಲ್ಲ. ನಾನು ಮಾಡಿರುವ ಪಾಪವು ತುಂಬ ಭಾರವಾಗಿದೆ. ನನ್ನ ಪಾಪವನ್ನು ನಾನೇ ನೀಗಿಕೊಳ್ಳಬೇಕು. ಇಲ್ಲಿ ಕರ್ಮವೆ ನಿಶ್ಚಿತವಾಗಿ ನಮ್ಮ ಬಂಧು ಮತ್ತು ಮಿತ್ರ, ಆದುದರಿಂದ ನೀನು ನನ್ನನ್ನು ಕೊಲ್ಲು ಅಥವಾ ಬಿಡು ಇಂದಿಗೆ ನನ್ನ ಕರ್ಮವು ತೀರಿತು. ಹಾಗಾಗಿ ನನ್ನನ್ನು ಮರಣ ದುಃಖದಿಂದ ಯಾರೂ ಮುಕ್ತ ಗೊಳಿಸಲು ಸಾಧ್ಯವಿಲ್ಲ!” ಎಂದಿತು.

ಆದರೂ ಕೂಡ ಆಚಾರ್ಯರು ಆ ಕುರಿಯನ್ನು ಬಂಧನದಿಂದ ಮುಕ್ತಗೊಳಿಸುತ್ತಾ:

“ಈ ಕುರಿಯನ್ನು ಕೊಲ್ಲಲ್ಲು ಯಾರಿಗೂ ಅವಕಾಶ ಕೊಡುವುದಿಲ್ಲ. ಇದಕ್ಕೆ ಮರಣ ಸಂಭವಿಸದಂತೆ ರಕ್ಷಿಸುವುದೇ ನನ್ನ ಮುಂದಿನ ಕರ್ತವ್ಯ!” ಎಂದು ಘೋಷಿಸಿ ಅದರ ಹಿಂದೆ ಹಿಂದೆಯೆ ಬೆಂಗಾವಲಾಗಿ ಮುನ್ನೆಡೆದ. ಅಂದಿನ ಮುಸ್ಸಂಜೆಯ ಮುಗಿಲು ದಟ್ಟ ಮೋಡಗಳಿಂದ ಕವಿದಿತ್ತು. ಗುಡುಗು ಮಿಂಚಿನ ಆರ್ಭಟ ಭೂಮಿ ಆಕಾಶವನ್ನು ಆವರಿಸಿತ್ತು. ಅಂದು ಬೆಳಗ್ಗಿನಿಂದ ಹಸಿದಿದ್ದ ಆ ಕುರಿಯು ಸಮೀಪದ ಬಂಡೆಯ ಸಂದಿಯಲ್ಲಿ ಹುಲುಸಾಗಿ ಬೆಳೆದು ನಿಂತಿದ್ದ ಹುಲ್ಲಿನ ಮೊದೆಗೆ ಬಾಯಿ ಹಾಕಿತು.

ಅದೇ ಕ್ಷಣಕ್ಕೆ ಸರಿಯಾಗಿ ಆ ಬಂಡೆಗೆ ಸಿಡಿಲು ಬಡಿಯಿತು. ಆದರಿಂದ ಕಲ್ಲಿನ ಚೂರೊಂದು ರಭಸವಾಗಿ ಬಂದು ಕುರಿಯ ಕುತ್ತಿಗೆಗೆ ಬಡಿಯಿತು. ಆ ಭಾರಿ ಬಡಿತಕ್ಕೆ ಕುರಿಯ ತಲೆಯು ಕತ್ತರಿಸಿ ನೆಲಕುರುಳಿತು!

ಆಗ ಆಚಾರ್ಯನು:

“ಹೌದು, ಇಲ್ಲಿ ನಮಗೆ ನಾವೇ ! ನಿಜಕ್ಕೂ ಕರ್ಮವೆ ನಮ್ಮ ಬಂಧು ಮತ್ತು ಮಿತ್ರ !!” ಎನ್ನುತ್ತಾ ಮುನ್ನೆಡೆದ. □

ಪ್ರತಿಯೊಬ್ಬರಿಗೂ ಇಲ್ಲಿ ಕರ್ಮವೇ ಬಂಧು ಮತ್ತು ಕರ್ಮವೇ ಮಿತ್ರ, ಇಲ್ಲಿ ಕರ್ಮ ಫಲದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಶೀಲವೇ ಮೊದಲು. ನಾವು ಮಾಡುವ ಕುಶಲ ಕರ್ಮವೇ ನಮ್ಮನ್ನು ಉನ್ನತಿಯತ್ತ ಕರೆದ್ಯೊಯುತ್ತದೆ. ನಾವು ಅಕುಶಲ ಕರ್ಮವನ್ನು ಅನುಸರಿಸಿದ್ದೆ ಆದರೆ ನಮ್ಮನ್ನು ಅವನತಿಯತ್ತ ಕರೆದ್ಯೊಯುತ್ತದೆ. ಆದುದರಿಂದ ದಿನ ನಿತ್ಯದ ಜಂಜಾಟದಲ್ಲಿ ಸಂಭವಿಸುವ ಪ್ರತಿ ಸಮಸ್ಯೆಯನ್ನು ನಾವು ಹೇಗೆ ಪರಿಹರಿಸಿಕೊಳ್ಳಬೇಕೆಂದರೆ: ಮೊದಲು ಸಮಸ್ಯೆಗೆ ದಿಡೀರನೆ ಪ್ರತಿಕ್ರಿಯಿಸದೆ ಕ್ಷಣ ಕಾಲ ತಟಸ್ಥನಾಗಬೇಕು. ಬಳಿಕ ಶಾಂತಚಿತ್ತನಾಗಿ ಸಮಚಿತ್ತನಾಗಿ ಹೀಗೆ ಯೋಚಿಸಬೇಕು: ಈ ಕೆಲಸವನ್ನು ಅಥವಾ ಸಮಸ್ಯೆಯನ್ನು ಕೈಗೆತ್ತಿಕೊಂಡು ನಿರ್ವಹಿಸಿದ್ದೆ ಆದರೆ ಇದರಿಂದ ವರ್ತಮಾನ ಮತ್ತು ಭವಿಷ್ಯದ ಕಾಲದಲ್ಲಿ ನನಗೆ ಒಳಿತಾಗುವುದೆ? ನನ್ನ ಕೀರ್ತಿ ಮತ್ತು ಶ್ರೇಯಸ್ಸು ಹೆಚ್ಚುವುದೆ? ಎಂದು ಪರಿ ಪರಿಯಾಗಿ ಚಿಂತಿಸಿ ಇದರಿಂದ ನನ್ನ ಉನ್ನತಿ ಸಾಧ್ಯ ಎಂಬ ಉತ್ತರವನ್ನು ನೀನೇ ಕಂಡುಕೊಂಡಾಗ ಆ ಕರ್ಮವನ್ನು ಮಡು. ಇದೇ ಕುಶಲ ಕರ್ಮ.” “ಗೆಳೆಯ, ಯಾವ ಕರ್ಮವನ್ನು ಮಾಡುವುದರಿಂದ ವರ್ತಮಾನದಲ್ಲಿ ಮತ್ತು ಭವಿಷ್ಯದಲ್ಲಿ ನಿನಗೆ ಕೆಡುಕಾಗುತ್ತದೆಯೇ, ನಿನ್ನ ಶ್ರೇಯಸ್ಸಿಗೆ ಕುಂದು ಬರುತ್ತದೋ ಅದನ್ನು ಮಾಡಬೇಡ. ಅದರಿಂದ ನೀನು ಅವನತಿಯನ್ನು ಹೊಂದುವೆ ಎಂಬುದನ್ನು ಅರಿತುಕೋ. ಇದೇ ಅಕುಶಲ ಕರ್ಮ.” “ಗೆಳೆಯ, ಆದುದರಿಂದ ಇಲ್ಲಿ ಎಲ್ಲಕ್ಕೂ ಮೊದಲು ಶೀಲವೇ ಮುಖ್ಯವಾಗಿದೆ. ಆ ಶೀಲವು ನಮ್ಮ ವರ್ತಮಾನ ಜೀವಿತ ಕಾಲವನ್ನೇ ಅವಲಂಭಿಸಿದೆ. ಯಾರ ವರ್ತಮಾನವು ಶೀಲ ಸಚ್ಚಾರಿತ್ರ್ಯದಿಂದ ಕೂಡಿರುತ್ತದೋ ಆತನ ಭವಿಷ್ಯ ಮತ್ತು ಭೂತಕಾಲವು ಉಜ್ವಲವಾಗಿರುತ್ತದೆ.

'SAMVADA' Kannada Monthly, Apr. 2009 RNI-KAR KAN/2002/9246 CPMG/KA/BGW-706/2009-11
Office of Posting: RAJAJINAGAR HO, Date of Posting: 27-28 of Every Month

ಬೆಂಗಳೂರಿನ 'ಸ್ಫೂರ್ತಿಧಾಮ'ದಲ್ಲಿ

ಎಲ್ಲರಿಗೂ ಸ್ವಾಗತ

ಎಲ್ಲರಿಗೂ ಸ್ವಾಗತ

ಅಂಬೇಡ್ಕರ್
ಹಬ್ಬ 2009

ಏಪ್ರಿಲ್ 14, 2009 ಬೆಳಗ್ಗೆ 9 ರಿಂದ ರಾತ್ರಿ 9

ಕಾರ್ಯಕ್ರಮಗಳು:

- ಬುದ್ಧ ವಂದನೆ
- ಮಿಲಿಂದ್ ಪಬ್ಲಿಕ್ ಶಾಲೆಯ ಉದ್ಘಾಟನೆ
- ಅಂಬೇಡ್ಕರ್ ಸ್ಮಾರಕ ರಾಷ್ಟ್ರೀಯ ಉಪನ್ಯಾಸ
- ತಳ ಸಮುದಾಯಗಳ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಮಹನೀಯರಿಗೆ ಪ್ರಶಸ್ತಿ
- ದಿನವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು

ಜ್ಞಾನ ಮತ್ತು ಮನರಂಜನೆಯ ಸುಗ್ಗಿ !